**ಕರ್ನಾಟಕ ವಿಧಾನ ಪರಿಷತ್ತು**

***ಗುರುವಾರ, 03ನೇ ಮಾರ್ಚ್ 2016***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

unedited copy

**( ಈ ಹಂತದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಸದಸ್ಯರು ಬಾವಿಗೆ ಬಂದು ಧರಣಿಯನ್ನು ಮುಂದುವರೆಸಿದರು)**

**ಸಭಾಪತಿಯವರು:-** ಗೌರವಾನ್ವಿತ ಸದಸ್ಯರಲ್ಲಿ ನಾನು ಮತ್ತೆ ಮನವಿ ಮಾಡುವುದೇನೆಂದರೆ, ಸದನ ನಡೆಸಲು ಅನುವು ಮಾಡಿಕೊಡುವ ದೃಷ್ಟಿಯಿಂದ ಎಲ್ಲರೂ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಬೇಕು. ವಿರೋಧ ಪಕ್ಷದ ನಾಯಕರು ತಮ್ಮ ಪಕ್ಷದ ಸದಸ್ಯರನ್ನು ಧರಣಿಯಿಂದ ವಾಪಸ್ ಕೆರೆಯಬೇಕು. ಮತ್ತು ಜೆಡಿಎಸ್ ಮುಖಂಡರಾದ ಮಾನ್ಯ ಬಸವರಾಜ ಹೊರಟ್ಟಿಯವರಲ್ಲಿ ನನ್ನ ವಿನಂತಿ ಏನೆಂದರೆ, ನಿಮ್ಮ ಪಕ್ಷದ ಸದಸ್ಯರನ್ನು ಧರಣಿಯಿಂದ ವಾಪಸ್ ಕರೆಯಿಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಇವತ್ತು ಮುಖ್ಯಮಂತ್ರಿಗಳಿಗೆ ಸಿಕ್ಕಿರುವ ಉಡುಗರೆ ವಾಚ್ ಬಗ್ಗೆ ಇವತ್ತು ರಾಜ್ಯದೆಲ್ಲಡೆ ಚರ್ಚೆಯಾಗುತ್ತಿದೆ. ಆದರೆ ಕರ್ನಾಟಕ ರಾಜ್ಯದ ಜನಪ್ರತಿನಿಧಿಗಳಿಗೆ ಈ ವಿಚಾರವನ್ನು ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಚರ್ಚೆ ಮಾಡಲು ಅವಕಾಶ ಸಿಗದೆ ಇರುವುದು ದುರದೃಷ್ಟ. ವಿಧಾನ ಮಂಡಲದಲ್ಲದೆ ಬೇರೆ ಎಲ್ಲಿ ಈ ವಿಚಾರವನ್ನು ಚರ್ಚೆ ಮಾಡಬೇಕು ಎನ್ನುವುದು ನನಗೆ ಗೊತ್ತಿಲ್ಲ. ರಾಜ್ಯದಲ್ಲಿ ಇವತ್ತು ಅನೇಕ ಸಮಸ್ಯೆಗಳು ಇವೆ. ಬರಗಾಲ ತುಂಬಾ ಇದೆ, ಕುಡಿಯುವ ನೀರಿನ ತೊಂದರೆ ಇದೆ. ಇದರ ಬಗ್ಗೆ ಚರ್ಚೆ ಮಾಡಿ ಎಂದು ಆಡಳಿತ ಪಕ್ಷದ ಸದಸ್ಯರು ಹೇಳಿದರು. ಅದರ ಬಗ್ಗೆ ಚರ್ಚೆ ಮಾಡಲು ನಾವು ತಯಾರಿದ್ದೇವೆ. ಆದರೆ ಇವತ್ತು ಇಡೀ ರಾಜ್ಯದಲ್ಲಿರುವ ಗೊಂದಲ ಹಾಗೆ ಉಳಿದು ಹೋಗಿದೆ. ಮುಖ್ಯಮಂತ್ರಿಗಳ ಹತ್ತಿರ ವಾಚ್ ಎಲ್ಲಿಂದ ಬಂತು, ಹೇಗೆ ಬಂತು, ಏಕೆ ಬಂತು ಎನ್ನುವುದನ್ನು ಚರ್ಚೆ ಮಾಡಲು ಅವಕಾಶವಿಲ್ಲ ಎಂದಾಗ ಇದನ್ನು ನಾವು ಜನರ ಮಧ್ಯ ತೆಗೆದುಕೊಂಡು ಹೋಗಬೇಕಾಗುತ್ತದೆ. ಈಗಾಗಲೇ ಎರಡು ದಿನ ಕಳೆದು ಹೋಯಿತು. ಇನ್ನು ಉಳಿದಿರುವುದು ಮೂರು ದಿನಗಳು ಮಾತ್ರ. ಇದನ್ನು ನೋಡಿ ಭಂಡತನ ಎಂದರೆ ಅವರಿಗೆ ಸಿಟ್ಟು ಬರುತ್ತದೆ, ಆದರೆ ಇದಕ್ಕೆ ಯಾವ ಪದವನ್ನು ಬಳಸಬೇಕು ಎನ್ನುವುದು ಗೊತ್ತಾಗುತ್ತಿಲ್ಲ. ಈ ರೀತಿ ಭಂಡತನವನ್ನು ಪ್ರದರ್ಶನ ಮಾಡುತ್ತಿರುವ ಸಂದರ್ಭದಲ್ಲಿ ರಾಜ್ಯದ ಜನತೆಯ ಸಮಸ್ಯೆಗಳನ್ನು ಚರ್ಚೆ ಮಾಡಬೇಕಾಗಿರುವುದರಿಂದ ವಿಧಿ ಇಲ್ಲದೆ ಈ ಸಮಸ್ಯೆಯನ್ನು ನಾವು ಜನರ ಮಧ್ಯ ತೆಗೆದುಕೊಂಡು ಹೋಗುತ್ತೇವೆ. ಉಡುಗರೆಯಾಗಿ ಬಂದಿರುವ ವಾಚ್ ಪ್ರಕರಣವನ್ನು ಜನರ ಮುಂದೆ ಇಡುತ್ತೇವೆ. ಜನರೆ ತೀರ್ಮಾನ ಮಾಡಲು ಅವಕಾಶ ಕೊಡುತ್ತೇವೆಂದು ಹೇಳುತ್ತಿದ್ದೆನೆ. ಭಾರತೀಯ ಜನತಾ ಪಕ್ಷ ಮತ್ತು

unedited copy

ಜೆಡಿಎಸ್ ಎರಡು ಪಕ್ಷಗಳು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಒಟ್ಟಿಗೆ ಹೋರಾಟ ಮಾಡಿದರೂ ಕೂಡಾ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದಂತಹ ನಡವಳಿಕೆಯಿಂದ ಈ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಮಾನವಾಗಿದೆ. ಚರ್ಚೆ ಮಾಡಲು ಅವಕಾಶ ಕೊಡದೆ ಯಾವ ರೂಪಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ ಎನ್ನುವುದು ನನಗೆ ಆಶ್ಚರ್ಯ ಮತ್ತು ದು:ಖವು ಆಗುತ್ತದೆ.

**( ಈ ಹಂತದಲ್ಲಿ ಬಾವಿಯಲ್ಲಿ ನಿಂತಿರುವ ಸದಸ್ಯರು ಮಾತನಾಡಿದರು)**

**ಸಭಾಪತಿಯವರು:-** ನಾನು ಇಲ್ಲಿ ಸದನ ನಡೆಸಬೇಕಾಗಿದೆ. ನಾನು ನೋಡುತ್ತಿದ್ದೇನೆ, ನನ್ನ ತಾಳ್ಮೆಗೂ ಒಂದು ಮಿತಿ ಇದೆ. ಧರಣಿ ನಿರತರು ಯಾರಾದರು ಮಾತನಾಡಿದರೆ I will not tolerate. ನೀವು ಮಾತನಾಡಬೇಕೆಂದರೆ ಎಂದರೆ ನಿಮ್ಮ ಸ್ಥಾನಕ್ಕೆ ಹೋಗಿ ಕುಳುತುಕೊಂಡು ಕೈ ಎತ್ತಿ ನಾನು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಧರಣಿಯಲ್ಲಿ ಇರುವವರು ಮಾತನಾಡಲು ನೀವು ಬಿಡುವುದಿಲ್ಲ, ಸದಸ್ಯರು ತಮ್ಮ ಸ್ಥಾನದಿಂದ ಹೊರಗಡೆಯವರು ಮಾತನಾಡಲು ಸರ್ಕಾರ ಬಿಡುವುದಿಲ್ಲ. ಇಡೀ ದೇಶದಲ್ಲಿಯೇ ಚರ್ಚೆಯಾಗುತ್ತಿರುವಂತಹ ವಿಚಾರವನ್ನು ನಾವು ಇಲ್ಲಿ ಚರ್ಚೆ ಮಾಡಬೇಕೆಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವು. ಆದರೆ ಆ ವಿಷಯವನ್ನು ಬೇರೆ ನಿಯಮಕ್ಕೆ conversion ಕೂಡಾ ಆಗಲಿಲ್ಲ, ಯಾವ ನಿಯಮದಲ್ಲಿ ಮಾತನಾಡಬೇಕೆನ್ನುವುದು ಗೊತ್ತಿಲ್ಲ. ರಾಜ್ಯದ ಜನರಿಗೆ ನಾವು ಏನು ಉತ್ತರ ಕೊಡಬೇಕೆನ್ನುವುದು ನನಗಂತೂ ತೋಚುತ್ತಿಲ್ಲ. ಆದರೂ ಕೂಡಾ ರಾಜ್ಯದಲ್ಲಿರುವ ಇರುವ ಅನೇಕ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ವಾಚ್‌ನ್ನು ಸಭಾಧ್ಯಕ್ಷರಿಗೆ ಕೊಟ್ಟಿರುವುದು ಕರ್ನಾಟಕದ ಇತಿಹಾಸ ಬೇಡ, ದೇಶದ ಇತಿಹಾಸದಲ್ಲಿ ಎಲ್ಲಿಯು ಇಲ್ಲ. ಏಕೆ ಮುಖ್ಯಮಂತ್ರಿಗಳ ಹತ್ತಿರ ವಾಚ್ ಬಂತು, ಆ ವಾಚನ್ನು ಸಭಾಧ್ಯಕ್ಷರ ಕೈಗೆ ಏಕೆ ಕೊಟ್ಟರು? ಇದು ನನಗೆ ಅರ್ಥವಾಗುತ್ತಿಲ್ಲ. ದೇಶದ ಗಮನ ಸೆಳೆಯುವಲ್ಲಿ ಇಂದು ನಾವು ಯಶಸ್ವಿಯಾಗಿದ್ದೇವೆ. ಮುಂದೆ ಈ ಸರ್ಕಾರ ಮಾಡುತ್ತಿರುವ ಅವ್ಯವಹಾರಗಳ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ರಾಜ್ಯದ ಜನತೆಯ ಮುಂದೆ ಇಡುತ್ತೇವೆಂದು ಹೇಳಿ, ಜೆಡಿಎಸ್ ನಾಯಕರಾದ ಮಾನ್ಯ ಬಸವರಾಜ ಹೊರಟ್ಟಿಯವರು ಎರಡು ಮಾತುಗಳನ್ನು ಹೇಳಿದ ಮೇಲೆ ಎಲ್ಲ ಸದಸ್ಯರು ತಮ್ಮ ಸ್ಥಾನಗಳಿಗೆ ಬರುತ್ತಾರೆ. ಮುಂದೆ ಈ ರಾಜ್ಯದ ಸಮಸ್ಯೆಗಳಾದ ಬರಗಾಲ, ಕುಡಿಯುವ ನೀರನ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತೇವೆ. ನಿನ್ನೆ ನಮ್ಮ ಮಾನ್ಯ ವೀರಣ್ಣ ಮತ್ತೀಕಟ್ಟಿಯವರು ನೀರಿನ ಬಗ್ಗೆ ಮಾತನಾಡಿ ಎಂದು ಬಹಳ ಆಸಕ್ತಿಯಿಂದ ಹೇಳಿದರು. ನೀರನ ಬಗ್ಗೆಯೇ ನಾನು

unedited copy

ಮಾತನಾಡುತ್ತೇನೆ. ನೀವು ಜನತೆಗೆ ಹೇಗೆ ನೀರು ಕುಡಿಸಿದ್ದೀರಿ ಎನ್ನುವುದನ್ನೇ ಮಾತನಾಡುತ್ತೇನೆ. ಆಗ ನೀವು ಉತ್ತರ ಕೊಡಿ. ಇನ್ನು ಮುಂದೆ ರಾಜ್ಯದಲ್ಲಿರುವ ಅನೇಕ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವ ದಿಕ್ಕಿನಲ್ಲಿ ಚರ್ಚೆ ಮಾಡುತ್ತೇವೆ. ಜನರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಕೆಲಸ ಮಾಡುತ್ತೇವೆ. ಅದಕ್ಕಾಗಿ ಮುಂದೆ ಸದನದಲ್ಲಿ ಕಲಾಪ ನಡೆಯಲು ಅವಕಶ ಮಾಡಿಕೊಡುತ್ತೇವೆ. ಮಾನ್ಯ ಬಸವರಾಜ ಹೊರಟ್ಟಿಯವರು ಮಾತನಾಡಿದ ನಂತರ ನಮ್ಮ ಶಾಸಕರು ಮುಂದೆ ಕಲಾಪವನ್ನು ನಡೆಸಲು ಅನುಕೂಲವಾಗುವಂತೆ ತಮ್ಮ-ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ತಾವು ಕೂಡಾ ಎರಡು ದಿನಗಳಿಂದ ನಮಗೆ ಸಾಕಷ್ಟು ಸಹಕಾರವನ್ನು ಕೊಟ್ಟಿದ್ದೀರಿ. ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸಿ, ಮುಂದಿನ ಕಾರ್ಯಕಲಾಪಗಳು ನಡೆಯಲು ಅನುವು ಮಾಡಿಕೊಡುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಸವಿಸ್ತಾರವಾಗಿ ಸರ್ಕಾರದ ಬಗ್ಗೆ ನಮ್ಮ ನಿಲುವು ಏನು ಎನ್ನುವುದರ ಬಗ್ಗೆ ಮಾತನಾಡಿದ್ದಾರೆ. ವಿಧಾನ ಮಂಡಲದಲ್ಲಿ ಸರ್ಕಾರದ ಮತ್ತು ವಿರೋಧ ಪಕ್ಷದ ಮಧ್ಯ ಏನು ನಡೆಯುತ್ತಿದೆ ಎನ್ನುವುದನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ. ತೆರಿಗೆದಾತರ ಹಣವನ್ನು ವಿನಾಕಾರಣ ವ್ಯಯ ಮಾಡಬಾರದು ಎನ್ನುವ ಸದ್ದುದೇಶದಿಂದ ಮತ್ತು ನಮ್ಮ ಮುಖ್ಯವಾದ ಹಿನ್ನಲೆ ಏನು ಎನ್ನುವುದರ ಬಗ್ಗೆ ಮಾತನಾಡಿದ್ದಾರೆ. ಈ ಸದನದಲ್ಲಿ ಹೊಸದಾಗಿ ಅನೇಕ ಶಾಸಕರು ಆಯ್ಕೆಯಾಗಿ ಬಂದಿದ್ದಾರೆ. ಅವರು ಎಲ್ಲರೂ ಒಳ್ಳೆಯ ಚರ್ಚೆಯಲ್ಲಿ ಭಾಗಿಗಳಾಗಿ ರಾಜ್ಯದ ಜನತೆಗೆ ಒಳ್ಳೆಯ ಸಂದೇಶವನ್ನು ಕೊಡಬೇಕು. ಆಡಳಿತ ಮತ್ತು ವಿರೋಧ ಪಕ್ಷದ ಮಧ್ಯೆ ಗಲಾಟೆಯಾಗಬಾರದು. ವಿಧಾನ ಪರಿಷತ್ತು ಮಾದರಿಯಾಗುವಂತೆ ನಡೆದುಕೊಳ್ಳುತ್ತೇವೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ. ಆ ತೀರ್ಮಾನದಂತೆ ಕಲಾಪಗಳನ್ನು ಸುಸೂತ್ರವಾಗಿ ನಡೆಸಬೇಕು. ಸರ್ಕಾರ ಯಾವುದೇ ವಿಷಯದಲ್ಲಿ ಪ್ರತಿಷ್ಠೆ ಮಾಡಬಾರದು. ವಿರೋಧ ಪಕ್ಷದವರು ಕೂಡಾ ಪ್ರತಿಷ್ಠೆಗೆ ನಿಲ್ಲಬಾರದು. ರಾಜ್ಯದಲ್ಲಿ ಉತ್ತಮವಾದ ವಾತಾವರಣ ನಿರ್ಮಾಣ ಮಾಡಲು ವಿಧಾನ ಪರಿಷತ್ತು ಮಾದರಿಯಾದ ಸಭೆಯಾಗಲಿ. ಇದರಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲರೂ ಭಾಗಿಗಳಾಗಬೇಕು. ಈಗ ಕಲಾಪವನ್ನು ನಡೆಸಲು ಅನುಕೂಲವಾಗುವಂತೆ ನಾವು ಮಾಡುತ್ತಿರುವ ಧರಣಿಯನ್ನು ಹಿಂದಕ್ಕೆ ತೆಗೆದುಕೊಂಡು, ಮಾನ್ಯ ಧರಣಿಯಲ್ಲಿ ನಿರತರಾದ ಸದಸಗಳು ತಮ್ಮ-ತಮ್ಮ ಸ್ಥಾನಗಳಿಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಧರಣಿಯಲ್ಲಿದ್ದ ಸದಸ್ಯರುಗಳು ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು)**

unedited copy

## ಪ್ರಕಟಣೆಗಳು

**ಸಭಾಪತಿಯವರು:-**

**ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:-**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 2-3-2016ರಂದು **"ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ( ಎರಡನೇ ತಿದ್ದುಪಡಿ) ವಿಧೇಯಕ, 2015"**ನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

(ಮುಂದು)

unedited copy

*ಪ್ರಕಟಣೆ*

## *ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ*

**ಸಭಾಪತಿಯವರು:–** ದಿನಾಂಕ 2/3/16ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ದಿನಾಂಕ 3/3/16ರಿಂದ 5/3/16ರವರೆಗೆ ಕಾರ್ಯಕಲಾಪವನ್ನು ಈ ಕೆಳಕಂಡಂತೆ ನಡೆಸಲು ತೀರ್ಮಾನಿಸಲಾಯಿತು.

ದಿನಾಂಕ 3/3/16 ಹಾಗೂ 4/3/16ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಹಾಗೂ ದಿನಾಂಕ 5/3/16ರಂದು ಸರ್ಕಾರದಿಂದ ಉತ್ತರ.

ದಿನಾಂಕ 3/3/16 ಹಾಗೂ 4/3/16ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆಯ ನಂತರ ಪ್ರಶ್ನೋತ್ತರ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

ಶೂನ್ಯವೇಳೆ, ಗಮನ ಸೆಳೆಯುವ ಸೂಚನೆ ಹಾಗೂ ನಿಯಮ 330ರ ಮೇರೆಗೆ ಚರ್ಚೆಗಳನ್ನು ನಿರ್ಧರಿಸಿದಂತೆ ಮುಂದುವರೆಸುವುದು.

ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ, ಈ ರೀತಿ ಚರ್ಚೆಯಾಗಿದೆ. ಈ ವರದಿಗೆ ಸದನದ ಅಂಗೀಕಾರವಿದೆ ಎಂದು ನಾನು ಭಾವಿಸುತ್ತೇನೆ.

unedited copy

***<u>ಕಾರ್ಯದರ್ಶಿಯವರ ವರದಿ</u>***

**ಕಾರ್ಯದರ್ಶಿ:–** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

unedited copy

***<u>ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ</u>***

**ಡಾ: ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

**"** 2016ನೇ ಫೆಬ್ರವರಿ 29ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ**"**.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವವನ್ನು ಮಂಡಿಸಲಾಯಿತು.

unedited copy

***ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ***

**ಡಾ: ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು 2016ನೇ ಫೆಬ್ರವರಿ, 29ರಂದು ಜಂಟಿ ಅಧಿವೇಶನದಲ್ಲಿ ಎರಡೂ ಸದನಗಳ ಗೌರವಾನ್ವಿತ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿದ್ದು, ಈ ಸರ್ಕಾರದ ಸಾಧನೆ ಹಾಗೂ ಮೂರನೆಯ ವರ್ಷದ ಮಹತ್ತರವಾದ, ಅಭಿವೃದ್ಧಿಪರವಾದ ವಿಚಾರಗಳನ್ನು ಪ್ರತಿಪಾದನೆ ಮಾಡಿದ್ದಾರೆ. ಸಂವಿಧಾನದತ್ತವಾಗಿ ಪಾರಂಭದಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವುದು ಪರಂಪರೆಯಾಗಿದೆ. ಆ ಪ್ರಕಾರ ರಾಜ್ಯಪಾಲರು ಸರ್ಕಾರದ ಹಿರಿಯರಾಗಿ ಮತ್ತು ಸಂವಿಧಾನದತ್ತವಾದ ಅಧಿಕಾರದಂತೆ ಸರ್ಕಾರದ ಸಾಧನೆಗಳನ್ನು ನಾಡಿನ ಜನತೆಗೆ ಜಂಟಿ ಅಧಿವೇಶನದ ಮೂಲಕ ತಿಳಿಸಿದ್ದಾರೆ. ಇದು ನಮ್ಮೆಲ್ಲರ ಆದ್ಯ ಕರ್ತವ್ಯ. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ತಮ್ಮ ಮೂಲಕ ಅರ್ಪಿಸುವುದು ನಮ್ಮ ಕರ್ತವ್ಯ. ವಂದನಾ ನಿರ್ಣಯ ಮಂಡಿಸುವುದಕ್ಕೆ ನನಗೆ ಅವಕಾಶ ಕಲ್ಪಿಸಿದ್ದಕ್ಕೆ ತಮಗೆ ಕೃತಜ್ಞತೆ ಅರ್ಪಿಸುತ್ತೇನೆ. ಅದೇ ರೀತಿ ನನ್ನ ಪಕ್ಷದ ಎಲ್ಲಾ ಹಿರಿಯರಿಗೆ, ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಹಾಗೂ ಜೆಡಿ(ಎಸ್) ಪಕ್ಷದ ನಾಯಕರು ಹಾಗೂ ಸದಸ್ಯರುಗಳಿಗೆ ನನ್ನ ಅಭಿನಂದನೆಯನ್ನು ತಿಳಿಸುತ್ತಿದ್ದೇನೆ.

ಈ ವಿಶಿಷ್ಟವಾದ ಸಂಪ್ರದಾಯದಲ್ಲಿ ಕರ್ನಾಟಕದ ವಿಧಾನ ಪರಿಷತ್ತಿಗೆ ತನ್ನದೇ ಆದ ಸ್ಥಾನ ಮತ್ತು ಘನತೆ–ಗೌರವ ಇದೆ. ಇವತ್ತು ಸದನ ಪ್ರಾರಂಭವಾದಾಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಈಶ್ವರಪ್ಪನವರು ಹಾಗೂ ಜೆಡಿ(ಎಸ್) ಪಕ್ಷದ ನಾಯಕರಾದ ಬಸವರಾಜ ಹೊರಟ್ಟಿಯವರು ನಡೆದುಕೊಂಡ ರೀತಿ ಇಡೀ ರಾಜ್ಯಕ್ಕೆ ಒಳ್ಳೆಯ ಸಂದೇಶ ಕೊಟ್ಟಿದೆ ಎಂದು ನಾನು ತಿಳಿಸಿದಿದ್ದೇನೆ. ಈ ಸದನ ಬಹಳ ಮಹತ್ವಪೂರ್ಣವಾಗಿದ್ದು, ರಾಜ್ಯದಲ್ಲಿ ಗೌರವಾನ್ವಿತ ಜನಪ್ರತಿನಿಧಿಗಳು ಪ್ರತಿನಿಧಿಸುವ ಮೇಲ್ತೆರೆಯಾಗಿದೆ. ಅಂದರೆ cream of the society ಆಗಿದ್ದು, ಅಂತಹ ಸದಸ್ಯರು ಹಾಗೂ ಹಿರಿಯರನ್ನು ಒಳಗೊಂಡ ಈ ಸದನದಲ್ಲಿ ಒಳ್ಳೆಯ ವಿಚಾರಗಳು ಚರ್ಚೆಯಾಗಬೇಕು. ಆದರೆ ದುರ್ದೈವವೆಂದರೆ ಎರಡು ದಿನಗಳ ಕಾಲ ನಾವುಗಳು ಕೆಲವೊಂದು ಸಮಸ್ಯೆಯಿಂದ ತತ್ತರಿಸಿ ಹೋಗಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ನಾವು ವಿನಂತಿ ಮಾಡಿಕೊಂಡಿದ್ದೇವೆ. ಜನರು ನಮ್ಮನ್ನು ಬಹಳಷ್ಟು ಬಯಸುತ್ತಾರೆ. ಇಲ್ಲಿ ನಾವು ನಮ್ಮ ವೈಯಕ್ತಿಕ ವಿಚಾರಗಳಿಗಿಂತ ಹೆಚ್ಚು ಜನರ ಸಮಸ್ಯೆಗಳಿಗೆ ಸ್ಪಂದಿಸಿ, ನಾಡಿನ

unedited copy

ಜನತೆಯ ಮೂಲ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದು, ಸರ್ಕಾರಕ್ಕೆ ಮಾರ್ಗದರ್ಶನ ಮಾಡಿ, ಆ ದಿಸೆಯಲ್ಲಿ ವ್ಯವಸ್ಥಿತವಾಗಿ ಕ್ರಮ ಕೈಗೊಳ್ಳು ನಾವು ಅಣಿಯಾಗಬೇಕು ಹಾಗೂ ಆ ರೀತಿ ನಡೆದುಕೊಳ್ಳಬೇಕಾದ್ದು ಬಹಳ ಮುಖ್ಯ. ಆ ದಿಸೆಯಲ್ಲಿ ಈ ಕೆಲಸವು ನಾವು ತಿಳಿದಮಟ್ಟಿಗೆ ಆಗಿಲ್ಲ. ಜನರು ನಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ತಕ್ಕಂತೆ ಆಗಿಲ್ಲ ಎಂದು ಹೇಳಬಯಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಜನರಿಂದ ಚುನಾಯಿತರಾಗಿ ಬಂದ ಸರ್ಕಾರವಾಗಿ, ತಮಗೆಲ್ಲರಿಗೂ ಗೊತ್ತಿದ್ದ ಹಾಗೆ 2013ರಲ್ಲಿ ಕರ್ನಾಟಕದಲ್ಲಿ ಹೊಸ ಬದಲಾವಣೆಯ ಗಾಳಿ ಬೀಸಿತು. ತಮಗೆಲ್ಲರಿಗೂ ತಿಳಿದಂತೆ ಕರ್ನಾಟಕ ಏಕೀಕರಣಗೊಂಡು 60 ವರ್ಷಗಳನ್ನು ದಾಟಿದ್ದೇವೆ. ಇಂತಹದ್ದರಲ್ಲಿ ಕರ್ನಾಟಕ ಸುವರ್ಣ ಕರ್ನಾಟಕ ಆಗಬೇಕಾದುದು ನ್ಯಾಯವಾದುದಾಗಿದೆ. ಇದು ಕರ್ನಾಟಕದ ಜನತೆಯ ಆಕಾಂಕ್ಷೆಯಾಗಿದೆ. ಕರ್ನಾಟಕದ ಎಲ್ಲಾ ಭಾಗ ಮತ್ತು ಜನಾಂಗಗಳ ಅಭಿವೃದ್ಧಿಯಾಗಬೇಕಾದ್ದು ನ್ಯಾಯವಾಗಿದೆ. ಆಗ ಮಾತ್ರ ಸುವರ್ಣ ಕರ್ನಾಟಕ, ಸಮೃದ್ಧ ಕರ್ನಾಟಕ ಮತ್ತು ಸಶಕ್ತ ಕರ್ನಾಟಕವನ್ನು ಅಭಿವೃದ್ಧಿಪರವಾದ ನಾಡನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ನಾನು ಒಂದು ಮಾತನ್ನು ಹೇಳುವುದೇನೆಂದರೆ, ಒಬ್ಬ ಮನುಷ್ಯ ಪರಿಪೂರ್ಣ ಮನುಷ್ಯನಾಗಬೇಕೆಂದರೆ ಆತನ ಎಲ್ಲಾ ಆವಯವಗಳು ಸರಿಯಾಗಿರಬೇಕು. ಆತನ ತಲೆ, ಬಾಯಿ, ಮೂಗು, ಕೈ-ಕಾಲು ಎಲ್ಲವೂ ಸರಿಯಾಗಿದ್ದರೆ ಪರಿಪೂರ್ಣ ಮನುಷ್ಯ ಎಂದು ಹೇಳುತ್ತೇವೆ. ಯಾವುದೇ ಒಂದು ಆವಯವ ಊನವಾದರೂ ಅಂಗವಿಕಲ ಎಂದು ಕರೆಯುತ್ತೇವೆ. ಆ ರೀತಿ ಈ ರಾಜ್ಯದ ಯಾವುದೇ ಭಾಗ ಮತ್ತು ಜನಾಂಗ ಅಥವಾ ವರ್ಗವು ಅಶಕ್ತವಾಗಿ, ಅಭಿವೃದ್ಧಿಯಾಗದೇ ಶೋಷಣೆಗೊಳಗಾಗಿದ್ದರೆ ಆ ರಾಜ್ಯ ಸಶಕ್ತ, ಸಮೃದ್ಧ ರಾಜ್ಯ ಆಗಲು ಶಕ್ತವಾಗುವುದಿಲ್ಲ. ಈ ತತ್ವದ ಆಧಾರದ ಮೇಲೆ ಕೆಲಸ ಮಾಡಿದ ಹಿಂದಿನ ಎಲ್ಲಾ ಮುಖ್ಯಮಂತ್ರಿಗಳಲ್ಲಿ ಅದರಲ್ಲಿ ಮಾನ್ಯ ದೇವರಾಜ್ ಅರಸ್‌ರವರು 70ರ ದಶಕದಲ್ಲಿ ಹೊಸ ಬದಲಾವಣೆಯನ್ನು ರಾಜ್ಯದಲ್ಲಿ ತಂದರು. ದೊಡ್ಡ ದೊಡ್ಡ ಜಮೀನ್ದಾರರು ಹಾಗೂ ಆರ್ಥಿಕವಾಗಿ ಒಂದು ವರ್ಗಕ್ಕೆ ಸೀಮಿತವಾದ ಪ್ರಜಾಪ್ರಭುತ್ವದ base ಅನ್ನು ವಿಸ್ತಾರಗೊಳಿಸಿ ಸರ್ವ ಜನಾಂಗಕ್ಕೂ ಅವಕಾಶ ಮತ್ತು ಶಕ್ತಿಯನ್ನು ಕೊಟ್ಟ ಮಹಾಪುರುಷರಾಗಿದ್ದಾರೆ ಎಂಬುದನ್ನು ನೆನಸಿಕೊಳ್ಳುತ್ತೇನೆ. ಈ ವರ್ಷ ಅವರ centenary ಅನ್ನು ಆಚರಿಸುತ್ತಿದ್ದೇವೆ. ಮಾನ್ಯ ದೇವರಾಜ ಅರಸ್‌ರವರ centenary ಅಂದರೆ ರಾಜ್ಯದ ದೀನದಲಿತರ, ಹಿಂದುಳಿದ ವರ್ಗದವರ ಮತ್ತು ಎಲ್ಲಾ ವರ್ಗದ ಜನಾಂಗಕ್ಕೆ ಮಹತ್ವವಾಗಿದೆ. ಅವರು ಸಮಾಜದಲ್ಲಿದ್ದ

unedited copy

ಯೋಗ್ಯರನ್ನು ನಿರ್ಲಕ್ಷ್ಯ ಮಾಡಿಲ್ಲ, ಯೋಗ್ಯತೆಗೆ ಎಂದೂ ಧಕ್ಕೆ ತರದೇ ಅವರ ಮನಸ್ಸನ್ನು ಪರಿವರ್ತನೆಗೊಳಿಸಿ ರಾಜ್ಯದ ಅಭಿವೃದ್ಧಿಯಲ್ಲಿ ಎಲ್ಲರ ಪಾಲು ಇದೆ ಎಂದು ಮೊಟ್ಟಮೊದಲ ಬಾರಿಗೆ ಸಾಭೀತು ಮಾಡಿದರು. ಆ ಕೆಲಸ ನಿರಂತರವಾಗಿ ನಡೆದು ಬಂದಿದೆ. ರಿಲೇ ಓಟದಲ್ಲಿ ಓಡುವಂತೆ ಸರ್ಕಾರ ಬದಲಾವಣೆ ಕೋಲನ್ನು ಮತ್ತೊಬ್ಬರಿಗೆ ಕೊಟ್ಟಂತೆ ಇವತ್ತಿಗೂ ಓಟದ ಮುಂಚೂಣಿಯ ಸಾರಥ್ಯವನ್ನು ನಮ್ಮೆಲ್ಲರ ಅಧಿನಾಯಕ, ಸಾಮಾಜಿಕ ತಳಹದಿಯ ಹೋರಾಟಗಾರರಾದ ಶ್ರೀ ಸಿದ್ದರಾಮಯ್ಯನವರು ವಹಿಸಿದ್ದಾರೆ ಮತ್ತು ಆ ಕೆಲಸ ಮುಂದುವರೆಸಿದ್ದಾರೆ ಎಂದು ಅಭಿಮಾನದಿಂದ ಹೇಳುತ್ತೇನೆ. ಸಮಾಜದ ಎಲ್ಲಾ ವರ್ಗಗಳ ಏಳಿಗೆಯನ್ನು ಸುನಿಶ್ಚಿತಗೊಳಿಸಲು ಬದ್ಧವಾದ ಮತ್ತು ಕಳೆದ 3 ವರ್ಷಗಳಲ್ಲಿ ರಾಜ್ಯದ ಸಮಸ್ತ ನಾಗರಿಕರಿಗೆ ಪಾರದರ್ಶಕ, ಸ್ಪಂದನಾತ್ಮಕ ಹಾಗೂ ಉದಾರ ದಾಹಿತ್ಯವುಳ್ಳ ಆಡಳಿತವನ್ನು ಕರ್ನಾಟಕದಲ್ಲಿ ಮಾನ್ಯ ಸಿದ್ದರಾಮಯ್ಯನವರ ನಾಯಕತ್ವದ ಸರ್ಕಾರ ಕೊಟ್ಟದೆ ಎಂದು ರಾಜ್ಯಪಾಲರು ಹೇಳಿದ್ದಾರೆ ಮತ್ತು ನಾವೆಲ್ಲರೂ ಅತೀ ಅಭಿಮಾನದಿಂದ ಹೇಳುತ್ತಿದ್ದೇವೆ.

(ಮುಂದು)

unedited copy

(ಸಭಾಪತಿಯವರ ಉಪಸ್ಥಿತಿ)

**ಶ್ರೀ ವೀರಣ್ಣಮತ್ತಿಕಟ್ಟಿ(ಮುಂದುವರಿದದ್ದು):–**

ಸನ್ಮಾನ್ಯ ಸಭಾಪತಿಯವರೇ, ತಮ್ಮೆಲ್ಲರಿಗೂ ಗೊತ್ತಿರುವಂತೆ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ನಿಶ್ಚಿತ. ಜನರ ಅಭಿಪ್ರಾಯವನ್ನು ಮತದಾನದ ಮೂಲಕ ಪಡೆದವರು ಅಧಿಕಾರಕ್ಕೆ ಬರುತ್ತಾರೆ. 2013ನೇ ಇಸವಿಯಲ್ಲಿ ಮಾನ್ಯ ಸಿದ್ದರಾಮಯ್ಯನವರು ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಮಾನ್ಯ ಜಿ.ಪರಮೇಶ್ವರ್‌ರವರು ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಇವರಿಬ್ಬರ ನಾಯಕತ್ವದಲ್ಲಿ ಹಾಗೂ ನಮ್ಮ ಕಾಂಗ್ರೆಸ್ ಪಕ್ಷದ ಎಲ್ಲ ಹಿರಿಯ ನಾಯಕರ ನಾಯಕತ್ವದಲ್ಲಿ ನಾವೊಂದು ಪ್ರಣಾಳಿಕೆಯನ್ನು ತಯಾರು ಮಾಡಿದ್ದೆವು. ಆಗ ಪ್ರಚಾರ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡುವ ಅವಕಾಶವನ್ನು ನಮ್ಮ ಪಕ್ಷ ನನಗೆ ನೀಡಿತ್ತು. ಆ ಚುನಾವಣೆಯಲ್ಲಿ ನಮ್ಮ ಪಕ್ಷ ಸುಮಾರು 165ಕ್ಕೂ ಹೆಚ್ಚು ಪ್ರಣಾಳಿಕೆಗಳನ್ನು ರಾಜ್ಯದ ಜನತೆಯ ಮುಂದಿಟ್ಟಿತ್ತು. ನಮ್ಮ ಪಕ್ಷದಲ್ಲಿ 'ಪ್ರಣಾಳಿಕೆ' ಎನ್ನುವುದು ಕೇವಲ ಪ್ರಣಾಳಿಕೆ ಅಲ್ಲ. 'ಪ್ರಣಾಳಿಕೆ' ಎನ್ನುವುದು ನಮ್ಮ ಬದ್ಧತೆ, ನಮಗೆ ಅದೊಂದು ಭಗವದ್ಗೀತೆ ಇದ್ದಂತೆ.

ಸನ್ಮಾನ್ಯ ಸಭಾಪತಿಯವರೇ, 2008ರಲ್ಲಿ ರಾಜ್ಯದ ಜನತೆ ಈಗ ವಿರೋಧ ಪಕ್ಷದಲ್ಲಿರುವವರಿಗೆ ಸಂಪೂರ್ಣವಾಗಿರುವ ಬಹುಮತವನ್ನು ನೀಡಿರಲಿಲ್ಲ. ಆದರೆ, 2013ರ ಚುನಾವಣೆಯಲ್ಲಿ ಕರ್ನಾಟಕದ ಜನತೆ ನಮ್ಮನ್ನು ನಂಬಿ 122 ಸ್ಥಾನಗಳಿಗೆ ಕಾಂಗ್ರೆಸ್ ಶಾಸಕರನ್ನು ಆರಿಸಿ ಕಳುಹಿಸುವ ಮೂಲಕ ಸಂಪೂರ್ಣ ಬಹುಮತವನ್ನು ನೀಡಿ, 'ನಿಮ್ಮ ಪ್ರಣಾಳಿಕೆಯನ್ನು ನಾವು ನಂಬಿದ್ದೇವೆ, ಅದಕ್ಕೆ ನಮ್ಮ ಆಶೀರ್ವಾದವಿದೆ. ನೀವು ಆ ನಿಟ್ಟಿನಲ್ಲಿ ಕೆಲಸ ಮಾಡಿ' ಎನ್ನುವ ಸಂದೇಶವನ್ನು ನೀಡಿದ್ದರು. ಜನರು ನೀಡಿದ ಜವಾಬ್ದಾರಿ, ಬದ್ಧತೆ ಮತ್ತು ನಿಷ್ಠೆಯನ್ನು ಸರ್ಕಾರ ವಹಿಸಿಕೊಂಡ ಒಂದು ಗಂಟೆಯೊಳಗಾಗಿ ಅಂದರೆ, ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣವಚನವನ್ನು ಸ್ವೀಕಾರ ಮಾಡಿದ ನಂತರ ನೇರವಾಗಿ ಕ್ಯಾಬಿನೆಟ್ ಹಾಲ್‌ಗೆ ಹೋಗಿ ಸಂವಿಧಾನಬದ್ಧವಾಗಿರುವ ಅಧಿಕಾರವನ್ನು ತೆಗೆದುಕೊಂಡ ನಂತರ ಹಲವಾರು ಮಹತ್ವಪೂರ್ಣ ಮತ್ತು ಜನಪರವಾದ ನಿರ್ಧಾರಗಳನ್ನು ತೆಗೆದುಕೊಂಡರು. ಅವುಗಳಲ್ಲಿ ಪ್ರಮುಖವಾಗಿರುವುದು ಅನ್ನಭಾಗ್ಯ ಯೋಜನೆ. ಈ ರಾಜ್ಯದಲ್ಲಿ ಹಸಿವಿನಿಂದ ಯಾರೂ ಸಾಯಬಾರದು, ಈ ಯೋಜನೆ

unedited copy

ಒಂದು ಜಾತಿ ಒಂದು ವರ್ಗಕ್ಕೆ ಸೀಮಿತವಾಗಬಾರದು, ಕೂಲಿ ಕಾರ್ಮಿಕರು ಯಾರು ಹಸಿವಿನಿಂದ ಸಾಯಬಾರದು ಎನ್ನುವ ನಿರ್ಧಾರವನ್ನು ತೆಗೆದುಕೊಂಡು 'ಅನ್ನಭಾಗ್ಯ' ಯೋಜನೆಯನ್ನು ಜಾರಿಗೆ ತರಲಾಯಿತು.

ಸನ್ಮಾನ್ಯ ಸಭಾಪತಿಯವರೇ, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಕೊಟ್ಟಂಥ ಸಾಲಗಳು ಅಂದರೆ, ಹಿಂದುಳಿದ ವರ್ಗಗಳ ನಿಗಮ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನಿಗಮಗಳ ವತಿಯಿಂದ ನೀಡಲಾದ ಸಾಲಗಳು, ಮನೆ ಇಲ್ಲದವರಿಗೆ ಮನೆ ಕೊಟ್ಟಂಥ ಕಾರ್ಯಕ್ರಮದಲ್ಲಿ ನೀಡಲಾದ ಸಾಲಗಳಲ್ಲಿ ಯಾರು ಸುಸ್ತಿದಾರರಾಗಿದ್ದರು ಅವರ ಸಾಲಗಳನ್ನು ಮನ್ನಾ ಮಾಡಲಾಯಿತು. ಇದನ್ನು ನೋಡಿದರೆ ಈ ಸರ್ಕಾರ ತಾನು ಜನರಿಗೆ ಕೊಟ್ಟಂಥ ಆಶ್ವಾಸನೆಗಳಿಗೆ ಸಂಪೂರ್ಣ ಬದ್ಧವಾಗಿದೆ ಎನ್ನುವುದನ್ನು ತನ್ನ ಕೃತಿಯಿಂದ ಮತ್ತು ತನ್ನ ನಡತೆಯಿಂದ ತೋರಿಸಿ ಕೊಟ್ಟಿದೆ ಅದಕ್ಕಾಗಿ ತಮ್ಮ ಮೂಲಕ ನಾನು ಈ ಸರ್ಕಾರದ ಎಲ್ಲ ಸಚಿವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷಗಳ ಅಧಿಕಾರದ ನಂತರ ಜನ ಅವರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ನಮ್ಮನ್ನು ಬೆಂಬಲಿಸಿದ್ದಾರೆ. ಈ ಸದನದ 25 ಸ್ಥಳೀಯ ಸಂಸ್ಥೆಗಳ ಸ್ಥಾನಗಳಿಗೆ ಮೊನ್ನೆ ನಡೆದಂತಹ ಚುನಾವಣೆಯಲ್ಲಿ ಮೊದಲು ಸದಸ್ಯರಾಗಿದ್ದ 12 ಜನ ಸದಸ್ಯರು ಪುನಃ ಆರಿಸಿ ಬಂದಿದ್ದಾರೆ. ಶ್ರೀಯುತರುಗಳಾದ ರಘು ಆಚಾರಿ, ಮಹಂತೇಶ್ ಕವಟಗಿಮಠ್‌ನಂತಹವರು ಪುನಃ ಆರಿಸಿ ಬಂದಿದ್ದಾರೆ. ಬಹಳ ಹಿಂದೆ ಸದಸ್ಯರಾಗಿದ್ದವರು ಕಳೆದ ಬಾರಿ ಸದಸ್ಯರಲ್ಲದೇ ಇದ್ದ 4 ಜನ ಸದಸ್ಯರು ಈ ಬಾರಿ ಆರಿಸಿ ಬಂದಿದ್ದಾರೆ. ಒಟ್ಟು 13 ಜನರು ಕಾಂಗ್ರೆಸ್ ಪಕ್ಷದಿಂದ ಆರಿಸಿ ಬಂದಿದ್ದಾರೆ. ಉಳಿದ 12 ಜನ ಸದಸ್ಯರು ಭಾರತೀಯ ಜನತಾ ಪಕ್ಷದಿಂದ ಮತ್ತು ಜಾತ್ಯಾತೀತ ಜನತಾ ಪಕ್ಷದಿಂದ ಹಾಗೂ ಪಕ್ಷೇತರರಾಗಿ ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್‌ರವರು ಆರಿಸಿ ಬಂದಿದ್ದಾರೆ. ಇವರೆಲ್ಲರಿಗೂ ಹಾಗೂ ಹೊಸದಾಗಿ ಚುನಾಯಿತರಾಗಿ ಬಂದಿರುವವರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

unedited copy

ಸನ್ಮಾನ್ಯ ಸಭಾಪತಿಯವರೇ, ಇವತ್ತು ವಿರೋಧ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರು ಯಾವ ರೀತಿ ನಡೆದುಕೊಂಡಿದ್ದಾರೆ ಅದು ಎಲ್ಲರಿಗೂ ಆದರ್ಶವಾಗಿದೆ. ರಾಜಕೀಯವಾಗಿ ಭಿನ್ನಾಭಿಪ್ರಾಯಗಳು ಇರುತ್ತವೆ. ಈ ಸಂದರ್ಭದಲ್ಲಿ ಒಂದು ಘಟನೆಯನ್ನು ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಸಮಾಜವಾದದ ಹಿನ್ನೆಲೆಯಿಂದ ಬಂದಂತಹ ಮಾನ್ಯ ಗೋಪಾಲಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು. ಸದನದಲ್ಲಿ ಯಾವುದೋ ವಿಚಾರವಾಗಿ ಸ್ವಲ್ಪ ಬಿರುಸಿನಿಂದ ಚರ್ಚೆಯಾಗುತ್ತದೆ. ಸದನ ಮುಗಿದ ನಂತರ ಮಾನ್ಯ ಗೋಪಾಲಗೌಡರ ಮನಸ್ಸಿಗೆ ಸ್ವಲ್ಪ ನೋವಾಗುತ್ತದೆ. ಆಗ ಅವರು 'ನಾನು ಬಂದು ತಮ್ಮನ್ನು ಕಾಣುತ್ತೇನೆ' ಎಂದು ಮಾನ್ಯ ನಿಜಲಿಂಗಪ್ಪನವರಿಗೆ ಹೇಳಿಕಳುಹಿಸುತ್ತಾರೆ. ಆಗ ಮಾನ್ಯ ನಿಜಲಿಂಗಪ್ಪನವರು ತಮ್ಮ ಮನೆಯ ಬಾಗಿಲಿನಲ್ಲಿ ಅವರಿಗಾಗಿ ಕಾದು ನಿಂತು ಮಾನ್ಯ ಗೋಪಾಲಗೌಡರು ಬಂದ ಕೂಡಲೇ ಅವರನ್ನು ಕರೆದುಕೊಂಡು ಒಳಗೆ ಹೋದರು. ಆಗ ಮಾನ್ಯ ಗೋಪಾಲಗೌಡರು 'ನಾನು ಆ ರೀತಿ ಮಾತನಾಡಬಾರದಾಗಿತ್ತು. ತಾವು ಮುಖ್ಯಮಂತ್ರಿಗಳಾಗಿ ತೆಗೆದುಕೊಂಡ ಕೆಲವು ನಿರ್ಧಾರಗಳು ನಮಗೆ ನೋವನ್ನುಂಟು ಮಾಡಿವೆ. ಆದಕಾರಣ ನಾನು ಲಕ್ಷ್ಮಣರೇಖೆ ದಾಟಿ ಹೋದೆ' ಎಂದು ಸೌಜನ್ಯದಿಂದ ಹೇಳಿದರು. ಆಗ ಮಾನ್ಯ ನಿಜಲಿಂಗಪ್ಪನವರು 'ಗೌಡರೇ, ತಾವು ಆ ರೀತಿ ಮಾತನಾಡಿದ್ದರಿಂದ ನನಗೆ ತಿಳಿ ಹೇಳಿದಂತಾಯಿತು' ಎಂದು ಹೇಳಿದರು. ಇಂತಹ ಭಾವನೆಗಳು ನಮ್ಮಲ್ಲಿ ಇರಬೇಕೆನ್ನುವ ಕಾರಣಕ್ಕಾಗಿ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ವೈಯಕ್ತಿಕ ದ್ವೇಷ ಅಸೂಯೆಗಳಿಗಿಂತ ಹೆಚ್ಚಾಗಿ ಸಮಾಜ ಮತ್ತು ರಾಜ್ಯದ ಹಿತದೃಷ್ಟಿಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಕೆಲವು ಪದಗಳು ಅಥವಾ ಶಬ್ದಗಳು ಸಂವಿಧಾನದ ಲಕ್ಷ್ಮಣರೇಖೆಯನ್ನು ದಾಟಿ ಹೋಗಬಾರದೆನ್ನುವುದು ಎಲ್ಲ ಹಿರಿಯರ ಅಭಿಪ್ರಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಈ ರಾಜ್ಯದ ಸಂಸದೀಯಪಟುಗಳು, ಶಿಕ್ಷಣ ತಜ್ಞರು ಮತ್ತು ಹಿರಿಯ ನಾಯಕರುಗಳ ಜೊತೆಗೆ ಮಾತನಾಡಿದ ಸಂದರ್ಭದಲ್ಲಿ ಅವರೆಲ್ಲರೂ ಬಹಳ ನೋವಿನಿಂದ ಲಕ್ಷ್ಮಣರೇಖೆಯನ್ನು ದಾಟುತ್ತಿರುವ ಮಾತಿನ ದಾಟಿಯ ಬಗ್ಗೆ ಹೇಳಿದರು. ನಾನು ಯಾವುದೇ ಪಕ್ಷಕ್ಕೆ ಸೀಮಿತವಾಗಿ ಈ ಮಾತನ್ನು ಹೇಳುತ್ತಿಲ್ಲ, ನಮ್ಮೆಲ್ಲರಲ್ಲಿ

unedited copy

ಬದಲಾವಣೆಯಾಗಬೇಕಾಗಿದೆ. ನಮ್ಮ ಬದ್ಧತೆಯ ಮೂಲ ಉದ್ದೇಶವೇನಿದೆ ಅದರಂತೆ ಇರಬೇಕೆನ್ನುವ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಸ್ಥಾನಿಕ ಸಂಸ್ಥೆಗಳಿಗೆ ಹೆಚ್ಚು ಶಕ್ತಿಯನ್ನು ನೀಡುವ ಕೆಲಸ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಸನ್ಮಾನ್ಯ ನಜೀರ್ ಸಾಬ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾದ ನಂತರ ಬದಲಾವಣೆಗೆ ದಾರಿ ದೀಪವಾದರು. ನಮ್ಮ ಪಕ್ಷದಿಂದ ಬಂದಂತಹ ಹಿರಿಯ ನಾಯಕರಾದ ಮಾನ್ಯ ಘೋರ್ಪಡೆಯವರು ಮಹಾರಾಜರಾಗಿದ್ದರೂ ಸಹ ಜನ ಸಾಮಾನ್ಯರ ಬಗ್ಗೆ ಮತ್ತು ಗ್ರಾಮೀಣ ವ್ಯವಸ್ಥೆಯ ಬಗ್ಗೆ ಹಾಗೂ ಪಂಚಾಯತ್‌ರಾಜ್ಯದ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸಿದ್ದರು. ಪಂಚಾಯತ್ ವ್ಯವಸ್ಥೆಯಲ್ಲಿ ಮೀಸಲಾತಿ ತರುವುದರಲ್ಲಿ ಅವರ ಪಾತ್ರ ಬಹಳ ದೊಡ್ಡದಾಗಿದೆ. ಆ ಕಾರಣದಿಂದಾಗಿ ಇವತ್ತು ಎಲ್ಲರೂ ಅವರನ್ನು ನೆನಪು ಮಾಡಿಕೊಳ್ಳುತ್ತಾರೆ. ಅದೇ ಹಾದಿಯಲ್ಲಿ ಈಗಿನ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಗಳಾಗಿರುವ ಶ್ರೀ ಹೆಚ್.ಕೆ.ಪಾಟೀಲ್‌ರವರು ಮಾನ್ಯ ಸಿದ್ದರಾಮಯ್ಯನವರ ನಾಯಕತ್ವದಲ್ಲಿ ಮುಂದುವರೆಯುತ್ತಿದ್ದಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇತ್ತೀಚೆಗೆ ನಡೆದಂತಹ ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದವರ ಸೋತವರ ಅಂಕಿಸಂಖ್ಯೆಗಳನ್ನು ಲೆಕ್ಕಾಚಾರ ಹಾಕಿ ನೋಡಿದರೆ ಕಾಂಗ್ರೆಸ್ ಪಕ್ಷ ಹೆಚ್ಚು ಸ್ಥಾನಗಳನ್ನು ಪಡೆದುಕೊಂಡಿದೆ. ನಾವು ಮಾಡಿದ ಅಭಿವೃದ್ಧಿ ಕೆಲಸಗಳು ಮತ್ತು ನಮ್ಮ ನಾಯಕರಾದ ಮಾನ್ಯ ಸಿದ್ದರಾಮಯ್ಯನವರಲ್ಲಿ ಜನಸಾಮಾನ್ಯರ ಬಗ್ಗೆ ಇರುವ ಬದ್ಧತೆಯಿಂದಾಗಿ ಇನ್ನೂ ಹೆಚ್ಚಿನ ಸ್ಥಾನಗಳನ್ನು ಪಡೆದುಕೊಳ್ಳಬಹುದೆಂಬ ಆಕಾಂಕ್ಷೆ ನಮಗಿತ್ತು. ಆದರೆ, ಆ ರೀತಿ ಆಗಲಿಲ್ಲ.

(ಮುಂದುವರಿದಿದೆ)

unedited copy

(21) 03-03-2016 11.40 MD-VK

(ಸಭಾಪತಿಯವರ ಉಪಸ್ಥಿತಿ)

**ಡಾ॥ ಮತ್ತಿಕಟ್ಟಿ ವೀರಣ್ಣ (ಮುಂದು):-**

ಅದು ಆಗಬೇಕು. ಆ ದೃಷ್ಟಿಯಿಂದ ನಮ್ಮಲ್ಲಿ ಕೆಲವು ನ್ಯೂನತೆಗಳಿರಬಹುದು, ಪ್ರಚಾರದ ಕೊರತೆ ಇರಬಹುದು. ಸರ್ಕಾರ ಮಾಡಿದಂಥ ಸಾಧನೆಗಳನ್ನು ಜನರ ಮುಂದೆ ಇಡುವುದರಲ್ಲಿ ನಾವು ಎಡವಿರಬಹುದು. ಆದಾಗ್ಯೂ ಸಹಿತ ಕಾಂಗ್ರೆಸ್ ಪಕ್ಷಕ್ಕೆ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಶೇಕಡ 46ರಷ್ಟು ಮತಗಳು ಬಂದಿವೆ ಎಂದು ಮಾನ್ಯ ಈಶ್ವರಪ್ಪನವರಿಗೆ ತಿಳಿಸಲು ಬಯಸುತ್ತೇನೆ. ಅದೇ ರೀತಿ ಬಿಜೆಪಿ ಪಕ್ಷಕ್ಕೆ ಶೇಕಡ 34ರಷ್ಟು ಮತ್ತು ಜೆಡಿ(ಎಸ್) ಪಕ್ಷಕ್ಕೆ ಶೇಕಡ 16.8 ಅಂದರೆ ಶೇಕಡ 17ರಷ್ಟು ಮತಗಳು ಬಂದಿವೆ. ಅವು ಬಹಳ negligible. ಮಾನ್ಯ ಅಶ್ವಥ್‌ನಾರಾಯಣರವರ ಬಗ್ಗೆ ಹೇಳಿದರೆ ಅವರು ಜಗಳ ಮಾಡುತ್ತಿದ್ದರು. ಈ ಮೂರು ಪಕ್ಷಗಳು ರಾಜ್ಯದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ ಎಂಬುದಕ್ಕೆ ನಾನಿದನ್ನು ಹೇಳಿದೆ. ಹಾಗಾಗಿ ಯಾರೂ ಸಹ ನಾನು-ನಾನು ಎಂದು ಎದೆ ತಟ್ಟಿಕೊಳ್ಳುವಂಥ ಕಾಲ ಇಲ್ಲ. ನಾವೆಲ್ಲರೂ ನಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಮ್ಮ ಸಾಧನೆ ಬಗ್ಗೆ ಹೇಳುವುದಾದರೆ, ನಾವು ಎಷ್ಟು ಕೆಲಸ ಮಾಡಿದ್ದೇವೆಂಬುದನ್ನು ಸಹ ನೋಡಬೇಕು. ದುಡಿಯುವಾಗ ನಮಗೆಲ್ಲಾ ಒಂದು ಆಸೆ ಇರುತ್ತದೆ. ತಾನೇನು ಕೆಲಸವನ್ನು ಮಾಡಿದ್ದಾನೆ, ತಾನೇನು ದುಡಿಮೆ ಮಾಡಿದ್ದಾನೆ ಅದಕ್ಕೆ ಯೋಗ್ಯವಾದ ಪ್ರತಿಫಲ ದೊರೆಯಬೇಕು ಎನ್ನುವ ಆಸೆ ಇರುತ್ತದೆ. ಆ ಆಸೆ ಈಡೇರಿಲ್ಲ. ಅದಕ್ಕೇ ಕಾರಣವೆಂದರೆ, ನನ್ನ ದುಡಿಮೆಯನ್ನು ನನ್ನ ಮಾಲೀಕರು ಎಂದರೆ ಈ ರಾಜ್ಯದ ಜನತೆಗೆ ನಾವು ತಿಳಿಸಿಲ್ಲ. ಆ ದೃಷ್ಟಿಯಿಂದ ನಾವು ಪ್ರತಿಶತ 60ರಷ್ಟು ಮತಗಳನ್ನು ಪಡೆಯಬೇಕಾಗಿತ್ತು. ಆ ದಿಸೆಯಲ್ಲಿ ನಮ್ಮ ಸರ್ಕಾರ ಸಾಧನೆಯನ್ನು ಮಾಡಿದೆ. ಆದರೆ ಅದನ್ನು ನಾವು ಜನರಿಗೆ ಮುಟ್ಟಿಸಿಲ್ಲ. ಆ ಕೆಲಸವನ್ನು ನಾವು ಎರಡು ವರ್ಷಗಳ ಕಾಲ ಮಾಡೋಣ ಎನ್ನುವ ಮಾತನ್ನು ಹೇಳುತ್ತೇನೆ.

**(ಈ ಹಂತದಲ್ಲಿ ಶ್ರೀ ಬಸವರಾಜ ಹೊರಟ್ಟಿಯವರು ಸಭಾ ಪೀಠದಲ್ಲಿ ಉಪಸ್ಥಿತರಾದರು)**

ಮಾನ್ಯ ಈಶ್ವರಪ್ಪನವರು ಒಂದು ಮಾತನ್ನು ಹೇಳಿದರು. ಈ ಸದನ ಪ್ರಾರಂಭವಾದೊಡನೆ ನಾನು ಒಂದು ವಿನಂತಿಯನ್ನು ಮಾಡಿಕೊಂಡಿದ್ದೆ. ಅದನ್ನು ಅವರು ಇದೀಗ ನೆನಪು ಮಾಡಿದರು. ಇಡೀ ರಾಜ್ಯದಲ್ಲಿ ಈಗ 40 ವರ್ಷಗಳಲ್ಲಿ ಅಂದರೆ ಹಿಂದೊಮ್ಮೆ 1971-72ರಲ್ಲಿ ದಿವಂಗತ ದೇವರಾಜ ಅರುಸುರವರು ಮುಖ್ಯಮಂತ್ರಿಗಳಾದೊಡನೆ ಈ ರಾಜ್ಯ ಅತ್ಯಂತ ಭೀಕರವಾದಂಥ ಬರಗಾಲಕ್ಕೆ ಒಳಗಾಗಿತ್ತು. 112

unedited copy

ತಾಲ್ಲೂಕುಗಳಲ್ಲಿ ಬರ ತೀಕ್ಷ್ಣವಾಗಿತ್ತು. ಕುಡಿಯುವ ನೀರು ಮತ್ತು ದನಕರುಗಳಿಗೆ ನೀರನ್ನು ಒದಗಿಸುವಲ್ಲಿ ಬಹಳಷ್ಟು ತೊಂದರೆ ಇತ್ತು. ಹಳ್ಳ, ಹೊಳೆ, ಝರಿಗಳೆಲ್ಲಾ ಬತ್ತಿ ಹೋಗಿದ್ದವು. ಜಲಶಾಯಗಳಲ್ಲಿ ನೀರಿಲ್ಲದಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿತ್ತು. ಜನರು ಉದ್ಯೋಗವನ್ನರಿಸಿ ಬೇರೆ ಬೇರೆ ಕಡೆಗೆ ನೂರಾರು ಮೈಲಿಗಳು ಗುಳೇ ಹೋಗಿ ಹೊಟ್ಟೆಯ ಹಸಿವನ್ನು ಇಂಗಿಸಿಕೊಳ್ಳಲು ಕೆಲಸವನ್ನು ಮಾಡತಕ್ಕಂಥ ಪರಿಸ್ಥಿತಿ ಈ ರಾಜ್ಯದಲ್ಲಿತ್ತು. ಅಂದಿನ ಪರಿಸ್ಥಿತಿಗೆ ಅನುಗುಣವಾಗಿ ನಮ್ಮಲ್ಲಿರತಕ್ಕಂಥ ಸಂಪನ್ಮೂಲಗಳು ಕಡಿಮೆ ಇದ್ದರೂ ಸಹಿತ ಅವರುಗಳು ಪ್ರಮಾಣಿಕವಾಗಿ ಕೆಲಸವನ್ನು ಮಾಡಿದ್ದರು. ಅದೇ ರೀತಿ ಇವತ್ತು 135ಕ್ಕಿಂತಲೂ ಹೆಚ್ಚು ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲವಿದೆ, ಕುಡಿಯುವ ನೀರಿನ ತೊಂದರೆ ಇದೆ ಮತ್ತು ಬೆಳೆ ಯಾವುದೂ ಬಂದಿಲ್ಲ. ನಿಮಗೆಲ್ಲಾ ಗೊತ್ತಿರುವ ಹಾಗೆ ಪ್ರಾರಂಭದಲ್ಲಿ ಅಂದರೆ ಮೇ ಮತ್ತು ಜೂನ್ ತಿಂಗಳಿನಲ್ಲಿ ಮಳೆ ಸ್ವಲ್ಪ ಹೆಚ್ಚಾಗಿ ಬಂತು. ಆಗ ರೈತರು ಆಸೆಯಿಂದ ಶೇಕಡ 80ರಷ್ಟು ಬಿತ್ತನೆ ಕಾರ್ಯಗಳನ್ನು ಮಾಡಿದರು. ಆದರೆ ತದನಂತರ ಮಳೆ ಬರಲಿಲ್ಲ. ರೈತರು ಉಳುಮೆ ಮಾಡಿ ಬೀಜವನ್ನು ಬಿತ್ತನೆ ಮಾಡಲು ಹಾಕಿದ ಶ್ರಮ, ಬೀಜ, ಗೊಬ್ಬರ, ಅವರ ದುಡಿಮೆ ಮತ್ತು ಸಹಕಾರಿ ಸಂಘಗಳಲ್ಲಿ, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬೇರೆ ಬೇರೆ ಜನ ಏನು ಸಾಲವನ್ನು ಕೊಡುತ್ತಿದ್ದರು, ಅಂತಹವರು ಅಲ್ಲಿಗೆ ಹಣವನ್ನು ತಂದು ಹಾಕಿದ್ದರು. ಅವರ ದುಡಿಮೆ ಮತ್ತು ಪರಿಶ್ರಮ ವ್ಯಯ ಆಗುವುದರ ಜೊತೆಗೆ ಆ ಹಣವೂ ಸಹ ನೀರಿನಲ್ಲಿ ಚೆಲ್ಲಿದ ಹಾಗಾಯಿತು. ಆದ್ದರಿಂದ ಅವರು ಇವತ್ತು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅದನ್ನು ಹೋಗಲಾಡಿಸಬೇಕು. ಇವತ್ತು ಇಡೀ ದೇಶದಲ್ಲಿ ಸಾವಿರಾರು ಜನ ರೈತರು ಸಂಕಷ್ಟದಿಂದ ತಮ್ಮ ಸ್ವಾಭಿಮಾನದ ಬದುಕಿಗಾಗಿ ನಾನಿಷ್ಟು ನಿರ್ವೀರ್ಯನಾದೆನಲ್ಲಾ, ನಾನು ತಂದಂಥ ಸಾಲವನ್ನು ಮರಳಿ ಕೊಡದೇ ಇರುವುದು ಹೋಗಲಿ, ನನ್ನ ಹೆಂಡತಿ–ಮಕ್ಕಳು, ದನ–ಕರುಗಳು, ಪಶುಗಳನ್ನು ಸಂರಕ್ಷಿಸಿಲು ಆಗದೇ ಇರತಕ್ಕಂಥ ಸಂಕಷ್ಟದ ಪರಿಸ್ಥಿಯಲ್ಲಿದ್ದೇನೆಂದು ರೈತರು ನಿಶ್ಚಿತವಾದ ಮನೋಧೈರ್ಯವಿಲ್ಲದೇ ಆತ್ಮಹತ್ಯೆಯನ್ನು ಮಾಡಿಕೊಂಡರು. ಈ ರೀತಿ ಆಗಬಾರದು. ಒಂದು ಸುಸಂಸ್ಕೃತವಾದ ಸಮಾಜದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪರವಾದ ಸರ್ಕಾರಗಳು ಇರುವಲ್ಲಿ ಈ ರೀತಿ ಆಗಬಾರದು. ಅದಕ್ಕಾಗಿಯೇ ಸನ್ಮಾನ್ಯ ಸಿದ್ದರಾಮಯ್ಯನವರ ನಾಯಕತ್ವದ ಕಾಂಗ್ರೆಸ್ ಸರ್ಕಾರ ತಕ್ಷಣವೇ ನೊಂದು ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದವರಿಗೆ 2 ಲಕ್ಷ ರೂಪಾಯಿ ಪರಿಹಾರ ಇರುವುದನ್ನು 5 ಲಕ್ಷ ರೂಪಾಯಿಗಳಿಗೆ ಏರಿಕೆ ಮಾಡಿದರು. ವಿಧವಾ ವೇತನ ಮೊದಲು 2,000 ರೂಪಾಯಿ ಇತ್ತು, ಈಗ 5,000 ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದರು. ಇದು ಮನು ಕಳಕಳಿ. ರಾಜ್ಯವನ್ನು ಆಳತಕ್ಕಂಥವನಿಗೆ ತನ್ನ ಪ್ರಜೆಗಳ ಮೇಲೆ, ಜನಗಳ ಮೇಲೆ ಇರತಕ್ಕಂಥ ಕಳಕಳಿಯ ಧ್ಯೋತಕ ಇದು ಎಂದು ಹೇಳುತ್ತೇನೆ. ಈ ಕೆಲಸ

unedited copy

ಮೊದಲು ಆಗಬೇಕು. ಇವತ್ತು ನಮ್ಮ ಜನ ಬಹಳ ಸಂಕಷ್ಟದಲ್ಲಿದ್ದಾರೆ. ಮಾನ್ಯ ಈಶ್ವರಪ್ಪ ವಿರೋಧ ಪಕ್ಷದ ನಾಯಕರಾಗಿ ಉತ್ತರ ಕರ್ನಾಟಕದ ಭಾಗಗಳಲ್ಲಿ ಪ್ರವಾಸ ಮಾಡಿದ್ದರ ಬಗ್ಗೆ ಅವರು ಹೇಳಿದರು. ಅದೇ ರೀತಿ ನಮ್ಮ ಸಚಿವರು ಸಹ ಪ್ರವಾಸವನ್ನು ಮಾಡಿದ್ದಾರೆ. ನಾವುಗಳು ಸಹ ಹಲವಾರು ಬಾರಿ ಪಕ್ಷದ ಪರವಾಗಿ ಎಲ್ಲಾ ಕಡೆ ಪ್ರವಾಸ ಮಾಡಿದ್ದೇವೆ. ಕುಡಿಯುವ ನೀರಿಲ್ಲದೇ ಜನ ಕಂಗಾಲಾಗಿದ್ದಾರೆ. ಉತ್ತರ ಕರ್ನಾಟಕದ ಭಾಗಗಳಲ್ಲಿ ಕಾರಿನಲ್ಲಿ ಹೋಗುವಾಗ ಕಾರಿನ ಗಾಜನ್ನು ಇಳಿಸಿದರೆ ಅಲ್ಲಿ ಬಿಸಿ ಗಾಳಿ ಬಡಿಯುತ್ತದೆ. ಅಷ್ಟು ಭೀಕರವಾದ ಬರಗಾಲ ಅಲ್ಲಿದೆ ಮತ್ತು ಅಲ್ಲಿ ಎಷ್ಟು ಕಷ್ಟವಿದೆ ಎಂದರೆ ಅದನ್ನು ಹೇಳತೀರದು. ಉತ್ತರ ಕರ್ನಾಟಕ ಭಾಗದಲ್ಲಿ ಮೇಲ್ಮೈ ನೀರು ಎಂದರೆ ಅಂದರೆ ನಾವು ಮಳೆಯಿಂದ ಬಿದ್ದಂಥ ನೀರನ್ನು ಕೆರೆಗಳಲ್ಲಿ ಶೇಖರಿಸಿ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡುತ್ತೇವೆ. ಇದು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಒಂದು ಪದ್ಧತಿ. ಇವತ್ತು ಆ ಕೆರೆಗಳೆಲ್ಲಾ ಬತ್ತಿ ಹೋಗಿವೆ. ಕೆರೆಗೆ ನೀರು ಬರುತ್ತಿಲ್ಲ. ಕೆರೆಗೆ ನೀರು ಹರಿದು ಬರುವ ಜಾಗವೂ ಸಹ ಮುಳ್ಳು-ಕಂಠಿ ಬೆಳೆದು ಅವು ಸಹ ಸರಿಯಾಗಿಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ಈಗ ಮಲಪ್ರಭಾ ಜಲಾಶಯದಲ್ಲಿಯೂ ಸಹ ನೀರಿಲ್ಲ. ನದಿ ದಂಡೆಗೆ ಹೋದರೆ ಅದು ಸಹ ಒಣಗಿ ಹೋಗಿದೆ. ಎಲ್ಲಿಯೂ ಸಹ ನೀರಿಲ್ಲ. ಇಂತಹ ಧಾರುಣವಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇದರ ಬಗ್ಗೆ ಚರ್ಚೆಯಾಗಬೇಕು. ಪಕ್ಷಾತೀತವಾಗಿ ಇಂತಹ ಮೂಲ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾದುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂಬ ವಿಚಾರವನ್ನು ನಾನು ಹೇಳಿದ್ದೇನೆ. ಇವತ್ತು ಸಹಿತ ನಮ್ಮ ಮನಸ್ಸಿನಲ್ಲಿ ಧಾರುಣವಾದ ನೋವಿದೆ.

ನಾವು ಯಾವ ವರ್ಗದಿಂದ ಬಂದಿದ್ದೇವೆ, ಹಳ್ಳಿಗಾಡಿನಿಂದ ಬಂದಂಥ ರೈತರ ಮಕ್ಕಳು, ರೈತ ಕೂಲಿಕಾರ್ಮಿಕರ ಜೊತೆಗೆ ಬೆಳೆದಂಥ ನಮ್ಮ ಜನ ಎಷ್ಟು ಸಂಕಷ್ಟದಲ್ಲಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮೊದಲು ಶೇಕಡ 78ರಷ್ಟು ಜನಸಂಖ್ಯೆ ಇತ್ತು. ಈಗ ಶೇಕಡ 68ರಷ್ಟು ಜನಸಂಖ್ಯೆ ಇದೆ. ನಗರೀಕರಣದಿಂದಾಗಿ, ನಗರಗಳಲ್ಲಿ ಸೌಲಭ್ಯಗಳು ಹೆಚ್ಚಾಗುತ್ತಿದ್ದ ಹಾಗೆ ಜನರು ಗ್ರಾಮೀಣ ಪ್ರದೇಶಗಳಿಂದ ವಲಸೆ ಹೋಗಿ ಗ್ರಾಮಗಳು ನಿಕ್ಷೀಣಕ್ಕೆ ಬರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಶೇಕಡ 68ರಷ್ಟು ಜನ ಅಂದರೆ ಶೇಕಡ 50ಕ್ಕಿಂತಲೂ ಹೆಚ್ಚಿನ ಜನ ಇವತ್ತೂ ಸಹ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಆ ಹಳ್ಳಿಗಾಡಿನ ಜನಗಳನ್ನು ನಾವು ಯಾವ ರೀತಿಯಾಗಿ ನೋಡಬೇಕು, ಅವರ ಸಮಸ್ಯೆಗಳನ್ನು ಯಾವ ರೀತಿಯಾಗಿ ಪರಿಹರಿಸಬೇಕು, ಅವರಿಗೆ ಮೂಲಭೂತ ಸೌಕರ್ಯಗಳನ್ನು ಯಾವ ರೀತಿಯಾಗಿ ಒದಗಿಸಬೇಕು ಎಂಬುದನ್ನು ಯೋಚಿಸಬೇಕು. ಶುದ್ಧ ಕುಡಿಯುವ ನೀರನ್ನು ಒದಗಿಸದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎನ್ನುವ ವಿಚಾರ ನಮಗೆಲ್ಲಾ ನೋವನ್ನುಂಟು ಮಾಡುತ್ತದೆ. ಇವತ್ತು ಆ ಕೆಲಸವಾಗಬೇಕು.

unedited copy

(21) 03-03-2016 11.40 MD-VK

ಅದರ ಜೊತೆಗೆ ಗ್ರಾಮ ಸ್ವರಾಜ್ಯದ ಬಗ್ಗೆ ಮಾತನಾಡುತ್ತಾರೆ. ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಈ ಭಾರತದ ಜೀವನಾಡಿ, ಹೃದಯ ಎಲ್ಲಿದೆ ಎಂದರೆ ಅದು ಹಳ್ಳಿಗಳಲ್ಲಿದೆ ಎಂದು ಹೇಳಿದ್ದರು. ಅವರದನ್ನು ತಿಳಿದುಕೊಂಡು ಹೇಳಿದ್ದರು. ಆವತ್ತು ಆ ಜನರಿಗಾಗಿಯೇ ನಾವು ಗ್ರಾಮವನ್ನು ಸಮೃದ್ಧ ಹಾಗೂ ಸಮರ್ಥ ಗ್ರಾಮವಾಗಿ, ಸ್ವಯಂ ಅವರ ಕಾಲ ಮೇಲೆ ಅವರು ನಿಲ್ಲತಕ್ಕಂಥ ಅನುಕೂಲತೆಗಳನ್ನು ಕಲ್ಪಿಸಬೇಕು. ತಮಗೆಲ್ಲಾ ಗೊತ್ತಿರುವ ಹಾಗೆ ಜನಸಾಮಾನ್ಯರ ರಾಷ್ಟ್ರಪತಿ ಎಂದು ಹೇಳುವ ದಿವಂಗತ ಶ್ರೀ ಅಬ್ದುಲ್ ಕಲಾಂರವರು ಈ ದೇಶ ಕಂಡಂಥ, ಅತ್ಯಂತ ಮೆಚ್ಚುಗೆಗೆ ಪಾತ್ರರಾದಂಥ ವಿಜ್ಞಾನಿ, ವಿಶ್ವದಲ್ಲಿಯೇ ಮಾನ್ಯತೆಯನ್ನು ಪಡೆದಂಥ ವಿಜ್ಞಾನಿ, ಅವರಿಗೆ ಹಳ್ಳಿಗಳ ಬಗ್ಗೆ, ಜನಸಾಮಾನ್ಯರ ಬಗ್ಗೆ ಇದ್ದಂಥ ಕಳಕಳಿಯನ್ನು ನಾವೆಲ್ಲರೂ ಮೆಚ್ಚತಕ್ಕಂಥಾದ್ದಾಗಿದೆ. ಅವರು ನಮ್ಮನ್ನೆಲ್ಲಾ ಉದ್ದೇಶಿಸಿ ಮಾತನಾಡುವಾಗ PURA (Provision of Urban Amenities in Rural Areas) ಕಲ್ಪನೆಯನ್ನು ಕೊಟ್ಟರು. PURA ಎಂದರೆ ಪಟ್ಟದಲ್ಲಿರತಕ್ಕಂಥ ಸೌಲಭ್ಯಗಳನ್ನು ಹಳ್ಳಿ ಜನರಿಗೂ ಸಹ ಕೊಡಬೇಕು. ಆ ದೃಷ್ಟಿಯಿಂದ ನಾವು ಕೆಲಸ ಮಾಡಬೇಕು. ಆ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ಸಿದ್ದರಾಮಯ್ಯನವರ ನಾಯಕತ್ವದ ಸರ್ಕಾರದಲ್ಲಿ ಸನ್ಮಾನ್ಯ ಹೆಚ್.ಕೆ.ಪಾಟೀಲರು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಮಾಡುತ್ತಿದ್ದಾರೆ.

(ಮುಂದು)

unedited copy

(ಪೀಠದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರ ಉಪಸ್ಥಿತಿ)

**ಡಾ:ಮತ್ತಿಕಟ್ಟಿ ವೀರಣ(ಮುಂದುವರೆದಿದೆ)**

ಆ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ, ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದಲ್ಲಿ, ಸನ್ಮಾನ್ಯ ಹೆಚ್.ಕೆ.ಪಾಟೀಲರು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಇಡೀ ಕಾನೂನಿಗೆ ಬದಲಾವಣೆ ತಂದು ಇವತ್ತು ಜನಪರವಾದಂತಹ, ಗ್ರಾಮ ಸ್ವರಾಜ್ಯದ ಕಲ್ಪನೆಯೊಂದಿಗೆ, ಯಾವ ಆಕಾಂಕ್ಷೆಗಳನ್ನು ಮಹಾತ್ಮ ಗಾಂಧೀಯವರು ಪ್ರತಿಪಾದನೆ ಮಾಡಿದರೋ, ಯಾವುದನ್ನು ಅಬ್ದುಲ್ ಕಲಾಂರವರು ಹೇಳಿದರು, ಯಾವ ಕನಸನ್ನು ಮಾನ್ಯ ಜವಾಹರಲ್‌ಲಾಲ್ ನೆಹೆರುರವರು ಹೊಂದಿದರೋ ಅವುಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ನಮ್ಮ ಪಂಚಾಯತ್ ರಾಜ್ ಮಸೂದೆಗೆ ಬದಲಾವಣೆ ತರುವ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಗ್ರಾಮೀಣ ಮಟ್ಟದಲ್ಲಿ ಬದಲಾವಣೆ ಆಗುತ್ತಿದೆ. 14ನೇ ಹಣಕಾಸು ಆಯೋಗದಿಂದ ರಾಜ್ಯಗಳಿಗೆ ಬರುವ ಅನುದಾನದ ಹಣ ಸ್ವಲ್ಪ ಹೆಚ್ಚಾಗಿದೆ. ಆದರೆ ಮೂಲಭೂತವಾಗಿ ಇರುವಂತಹ ಹಲವಾರು ಕೇಂದ್ರ ಅನುದಾನದೊಂದಿಗೆ ನಡೆಯತಕ್ಕಂಥ ಯೋಜನೆಗಳು, ಜನಸಾಮಾನ್ಯರ ಯೋಜನೆಗಳು ಇವತ್ತು ನಿಂತು ಹೋಗಿವೆ, ಕಡಿಮೆಯಾಗಿವೆ. ಈ ಸತ್ಯವನ್ನು ನಾವು ತಿಳಿದುಕೊಳ್ಳಬೇಕು. ಒಟ್ಟು ಸುಮಾರು 4 ಸಾವಿರ ಕೋಟಿ ರೂಪಾಯಿಗಳನ್ನು 14ನೇ ಹಣಕಾಸಿನ ಆಯೋಗದಿಂದ ನಮಗೆ ಹೆಚ್ಚು ಅನುದಾನ ಬಂದಿದ್ದರೆ ಕನಿಷ್ಠ 11 ರಿಂದ 12 ಸಾವಿರ ಕೋಟಿ ರೂಪಾಯಿಗಳು ವಿವಿಧ ಕೇಂದ್ರ ಪೋಷಿತ ನರೇಗಾ ಇರಬಹುದು, ಅಥವಾ ಬೇರೆ ಯೋಜನೆಗಳಿರಬಹುದು, ಇವುಗಳಿಗೆ ಬರಬೇಕಾದ ಅನುದಾನ ಕಡಿಮೆಯಾಗಿದೆ. ಇದನ್ನು ಯಾರು ಅನುಭವಿಸುತ್ತಿದ್ದರೋ ಅದು ಕಡಿಮೆಯಾಗದಂತೆ, ನಮ್ಮದೇ ಆದ ಸಂಪನ್ಮೂಲಗಳ ವ್ಯಾಪ್ತಿಯಲ್ಲಿ ಕರ್ನಾಟಕ ಸರ್ಕಾರ ಅವುಗಳನ್ನು ಹಿಂಪಡೆಯದೇ ಜನಸಾಮಾನ್ಯರಿಗಾಗಿ, ಗ್ರಾಮೀಣ ಜನತೆಗಾಗಿ ತನ್ನದೇ ಆದ ಕೊಡುಗೆಯನ್ನು ಕೊಡುತ್ತಿದೆ.

ಇವತ್ತು ಕರ್ನಾಟಕ ಬರಗಾಲ ಎದುರಿಸುತ್ತಿದೆ. ಬರಗಾಲವನ್ನೆದುರಿಸುವ ನಿಟ್ಟಿನಲ್ಲಿ ಸದನದ ಎಲ್ಲಾ ಸದಸ್ಯರು ಸಲಹೆಗಳನ್ನು ಕೊಡಬಹುದು. ಆ ಕೆಲಸವನ್ನು ಧನಾತ್ಮಕವಾಗಿ ಮಾಡಬೇಕು, ಕ್ರಿಯಾತ್ಮಕವಾಗಿ ಸ್ಪಂದಿಸುವಂತಹ, ಎಲ್ಲರನ್ನೂ ಪ್ರೀತಿ–ವಿಶ್ವಾಸದಿಂದ ಗೆದ್ದು ಸಾಧನೆಯತ್ತ ನಡೆಯುವ ಹಾಗೆ ಕಾರ್ಯಪ್ರವೃತ್ತರಾಗಬೇಕು. ನನಗೂ ಕೆಲವು ಸಲ ನೋವಾಗುತ್ತದೆ, ಮಾನ್ಯ ಹೊರಟ್ಟಿಯವರು ಮತ್ತು ಇತರ

ಸದಸ್ಯರು ನನ್ನನ್ನು, ಏನ್ರಿ ಮತ್ತಿಕಟ್ಟಿಯವರೇ ನೀವೂ ಒಮ್ಮೊಮ್ಮೆ ಸಿಟ್ಟಿಗೇಳುತ್ತೀರಿ ಎಂದು ಕೇಳುತ್ತಾರೆ. ದೇಶಕ್ಕಾಗಿ ಶೂದ್ರ ರಾಜಕೀಯದಿಂದ ಬಂದವನಾಗಿ, ಸಮಾಜದ ಸಾಮಾನ್ಯ ಜನತೆಯ ಬಗ್ಗೆ ಕಳಕಳಿ ಇದ್ದವನಾಗಿ, ಪ್ರಗತಿಪರ ವಿಚಾರಧಾರೆ ಹೊಂದಿದವನಿಗೆ ಸ್ವಲ್ಪ ಸಿಟ್ಟಿರುತ್ತದೆ. ಆ ಸಿಟ್ಟು ಒಮ್ಮೊಮ್ಮೆ ನನ್ನಲ್ಲೂ ಹೊರಹೊಮ್ಮುತ್ತದೆ. . . .

**ವೈಸ್ ಚೇರ್ಮನ್:–** ಅದನ್ನು ಮಾನ್ಯ ಈಶ್ವರಪ್ಪನವರಿಗೆ ಹೇಳಿ, ಏಕೆ ಸಿಟ್ಟು ಮಾಡಿಕೊಳ್ಳುತ್ತೀರಿ ಎಂದು ಅವರನ್ನು ಕೇಳಿ . . .

**ಡಾ: ಮತ್ತಿಕಟ್ಟಿ ವೀರಣ್ಣ:–** ನನ್ನ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಅವರದನ್ನು ಅವರು ಹೇಳುತ್ತಾರೆ. ನಾನು ನನ್ನ ಡೊಂಕನ್ನು ತಿದ್ದಿಕೊಂಡರೆ . . .

**ಶ್ರೀ ವಿ.ಎಸ್.ಉಗ್ರಪ್ಪ:–ಶೂದ್ರ** ರಾಜಕಾರಣ ಎಂದು ಹೇಳಿದಿರಿ. ಮಿಕ್ಕಿದ್ದು ಯಾವ ರಾಜಕಾರಣ ಎಂದು ಹೇಳಿಬಿಟ್ಟರೆ ಒಳ್ಳೆಯದಾಗುತ್ತದೆ . . .

**ಡಾ: ಮತ್ತಿಕಟ್ಟಿ ವೀರಣ್ಣ:–** ಎಲ್ಲವನ್ನೂ ನಾನೇ ಹೇಳಿಬಿಟ್ಟರೆ ಮಾನ್ಯ ಉಗ್ರಪ್ಪನವರು ಏನು ಮಾತನಾಡಬೇಕು? ಮಾನ್ಯ ಉಗ್ರಪ್ಪನವರು ಮನುವಾದದ ಬಗ್ಗೆ, ಪುರೋಹಿತಶಾಹಿ ಬಗ್ಗೆ ನನಗಿಂತ ಹೆಚ್ಚು ಸಶಕ್ತವಾಗಿ ಹೇಳುವಂತಹ ಶಕ್ತಿ ಹೊಂದಿದ್ದಾರೆ. ಅದಕ್ಕೋಸ್ಕರ ಆ ವಿಷಯವನ್ನು ನಾನು ನಿಮಗೆ ಬಿಡುತ್ತೇನೆ.

**ಶ್ರೀ ಗೋ.ಮಧುಸೂದನ್:–** ಈ ಸದನದಲ್ಲಿ ಅತ್ಯಂತ ಯೋಗ್ಯವಾದ ಉತ್ತರವನ್ನು, ಸೌಮ್ಯವಾದ ಉತ್ತರವನ್ನು ತಾವು ಮಾನ್ಯ ಉಗ್ರಪ್ಪನವರಿಗೆ ಕೊಟ್ಟಿದ್ದೀರಿ.

**ಡಾ: ಮತ್ತಿಕಟ್ಟಿ ವೀರಣ್ಣ:–** ಇದು ಬೇಡ . . .ಇಂತಹ ಮಾತುಗಳು ಬೇಡ . . .

**ಶ್ರೀ ವಿ.ಎಸ್.ಉಗ್ರಪ್ಪ:–** ಒಬ್ಬ ಸ್ನೇಹಿತನಾಗಿ ಮಾನ್ಯ ಮಧುಸೂದನ್‌ರವರು ಜೊತೆಯಲ್ಲೇ ಸೀಮೆಎಣ್ಣೆ ಮತ್ತು ಬೆಂಕಿ ಪೊಟ್ಟಣವನ್ನು ತಂದಿರುತ್ತಾರೆ, ಇದು ಸರಿಯಲ್ಲ (ಸದನದಲ್ಲಿ ನಗು)

**ಡಾ: ಮತ್ತಿಕಟ್ಟಿ ವೀರಣ್ಣ:–**ಮಾನ್ಯ ಮಧುಸೂದನ್‌ರವರು ಯಾರ್ಯಾರಿಗೆ ಸ್ನೇಹಿತರೋ ಗೊತ್ತಿಲ್ಲ . . .

**ಶ್ರೀ ರಾಮಚಂದ್ರಗೌಡ:–** ಯಾರು ಯಾರಿಗೂ ಪರಿಚಯ ಮಾಡಿಕೊಡುವುದು ಬೇಡ, ಹಾಗೆ ಮಾಡಿ ನಾವಿಬ್ಬರೂ ಅಗ್ಗವಾಗಿಬಿಟ್ಟಿದ್ದೇವೆ. ಅದೊಂದು ಬಿಟ್ಟು ಮಿಕ್ಕಿದ್ದೆಲ್ಲವನ್ನೂ ಮಾಡಿಕೊಂಡು ಹೋಗೋಣ.

**ಶ್ರೀ ವಿ.ಎಸ್.ಉಗ್ರಪ್ಪ:–**ಮಾನ್ಯ ರಾಮಚಂದ್ರಗೌಡರು ವೈಯಕ್ತಿಕ ಪರಿಚಯ ಬೇಡ ಎಂದು ಹೇಳುತ್ತಿದ್ದಾರೋ ತಾತ್ವಿಕವಾದ ಪರಿಚಯ ಮಾಡಿಕೊಡುವುದು ಬೇಡ ಎಂದು ಹೇಳುತ್ತಿದ್ದಾರೋ ಗೊತ್ತಾಗುತ್ತಿಲ್ಲ . . .

**ಡಾ: ವೀರಣ್ಣ ಮತ್ತಿಕಟ್ಟಿ:–** ಇದರಲ್ಲಿ ವೈಯಕ್ತಿಕವಾದುದಿಲ್ಲ, ತಾತ್ವಿಕವಾದುದಾಗಿದೆ. ಸಿದ್ಧಾಂತಗಳ ಪ್ರಶ್ನೆಯಾಗಿದೆ, ರಾಜಕೀಯ, ತಾತ್ವಿಕ ಹೋರಾಟದ ಪ್ರಶ್ನೆಯಾಗಿದೆ. ಎಲ್ಲಾ ಸ್ತರಗಳಲ್ಲಿ ಯಾವರೀತಿ ನಡೆಯುತ್ತಿದೆ ಎಂಬುದರ ಬಗ್ಗೆ ಕೆಲವೊಂದು ವಿಚಾರವನ್ನು . . . ಮೊತ್ತೊಬ್ಬರಿಗೆ ನೋವಾಗದ ಹಾಗೆ ತಿಳಿಸಬೇಕು ಎನ್ನುವುದು ನನ್ನ ಉದ್ದೇಶವಾಗಿದೆ. ನಾನು ಒಮ್ಮೊಮ್ಮೆ ಜಗಳ ಮಾಡಿರುತ್ತೇನೆ, ಮಾನ್ಯ ಹೊರಟ್ಟಿಯವರ ಜೊತೆಯೂ ಜಗಳವಾಡಿರುತ್ತೇನೆ. ಆದರೆ ಮನೆಗೆ ಹೋದ ಕೂಡಲೇ ನನ್ನ ಪ್ರಜ್ಞೆ ನನ್ನನ್ನು, ಇಂತಹ ಕಡೆ ತಪ್ಪು ಮಾಡಿದೆ ಎಂದು ಹೇಳುತ್ತಿರುತ್ತದೆ. ನಾನು ಅದನ್ನು ಮತ್ತೊಮ್ಮೆ ಮರುಕಳಿಸಿ ವಿಚಾರ ಮಾಡುತ್ತೇನೆ, ನಾಳೆ ಹೀಗಾಗಬಾರದು, ನಾಳೆ ನಾನು ಹೀಗೆ ಮಾಡಬಾರದು, ಆ ತಪ್ಪುಗಳನ್ನು ತಿದ್ದಿಕೊಳ್ಳಬೇಕು, ಹೇಳುವಾಗ ನೋವಾಗದ ಹಾಗೆ ಹೇಳಬೇಕು ಎಂದು ನಿಶ್ಚಯ ಮಾಡುತ್ತೇನೆ. ಮಾನ್ಯ ಮಧುಸೂದನ್‌ರವರಲ್ಲಿ ಒಂದು ವಿಶಿಷ್ಟವಾದ ಗುಣ ಇದೆ. ಎಲ್ಲರಿಗೂ ಅವರವರದೇ ಆದ ಫೀಲಿಂಗ್ ಇರುತ್ತದೆ. ಮಾನ್ಯ ಉಗ್ರಪ್ಪನವರು ಮಧುಸೂದನ್‌ರವರನ್ನು ಕುರಿತು, ಯಾವಾಗಲೂ ಬೆಂಕಿಕಡ್ಡಿ ಗೀರುವ ಕೆಲಸ ಮಾಡುತ್ತಾರೆ ಎಂದು ಹೇಳಿದರು. ನಾನು ಹಾಗೆ ಹೇಳುವುದಿಲ್ಲ . . .

**ಶ್ರೀ ವಿ.ಎಸ್.ಉಗ್ರಪ್ಪ:–**ಅಂದರೆ ನೀವು ಪರೋಕ್ಷವಾಗಿ ಹೇಳುತ್ತೀರಾ . . .(ಸದನದಲ್ಲಿ ನಗು)

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಮಧುಸೂದನ್‌ರವರು ಒಂದು ಸಲ ಮುಖ್ಯಮಂತ್ರಿಗಳಿಗೆ, ನಾನು ನಿಮ್ಮೂರವ, ನಿಮ್ಮವ ಎಂದು ನೀವು ಹೋದ ಹೋಟೆಲಿಗೆ ದೋಸೆ ತಿನ್ನುವುದಕ್ಕೆ ಬಂದಿದ್ದೆ ಎಂದು ಹೇಳಿದಾಗ, ಮರುದಿವಸವೇ ಮತ್ತೆ, ಬಿಡೋ. . .ಯಪ್ಪ ನಿನ್ನ ಸಲುವಾಗಿ ರಗಡೈತೆ ಎಂದು ಅವರು ಹೇಳಿದರು. ಈ ರೀತಿ ಮಾನ್ಯ ಮಧುಸೂದನ್‌ರವರಲ್ಲಿ ವಿಶಿಷ್ಠವಾದ ಗುಣಗಳಿವೆ. ಅವರು ಈ ಸದನದಲ್ಲಿ ಇರಬೇಕು ಎಂದು ನಾವು ಬಯಸುತ್ತೇವೆ. ಏಕೆಂದರೆ . . .

unedited copy

**ವೈಸ್‌ಚೇರ್ಮನ್:-** ಈಗ ನೀವೂ ಕೂಡ ಕಡ್ಡಿ ಗೀರುವುದಕ್ಕೆ ಶುರು ಮಾಡಿದಿರಿ . . .

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಮತ್ತಿಕಟ್ಟಿಯವರೇ ತಾವೂ ಕೂಡ ಸಭಾಪತಿಗಳ ಕುರ್ಚಿಯಲ್ಲಿ ಕುಳಿತಿದ್ದಿರಿ . . .

**ಡಾ: ಮತ್ತಿಕಟ್ಟಿ ವೀರಣ್ಣ:-** ನೀವು ನಮ್ಮ ಕಡೆಯವರು, ಈಗ ಆಕಡೆ ಹೋಗಿ ಕುಳಿತುಕೊಂಡಿದ್ದೀರಿ. ನಿಮ್ಮ ನೀತಿ, ತತ್ವ, ಹೃದಯಬಡಿತ ಎಲ್ಲಾ ನಮ್ಮ ಜೊತೆ ಇದೆ. ಆದರೆ ದುರ್ದೈವ . . .

**ಶ್ರೀ ಗೋ.ಮಧುಸೂದನ್:-** ಮಾನ್ಯ ಮತ್ತಿಕಟ್ಟಿಯವರೇ ನೀವು ನನಗೆ ಆಶೀರ್ವಾದ ಮಾಡುತ್ತಿದ್ದೀರಿ. ದಯವಿಟ್ಟು ಪೂರ್ಣ ಆಶೀರ್ವಾದ ಮಾಡಿ.

**ಡಾ: ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಗಳೆ, ಎಲ್ಲರೂ ಸದುದ್ದೇಶದ ದೃಷ್ಟಿಯಿಂದ ಕೆಲಸ ಮಾಡಬೇಕು ಎನ್ನುವುದೇ ನನ್ನ ಉದ್ದೇಶವಾಗಿದೆ. ಈ ರಾಜ್ಯದ ಮಹತ್ತರವಾದ ಸಮಸ್ಯೆ ಎಂದರೆ, ಉತ್ತರ ಕರ್ನಾಟಕದ 300 ಕ್ಕಿಂತ ಹೆಚ್ಚು ಹಳ್ಳಿಗಳಿಗೆ ಕುಡಿಯುವ ನೀರಿಗೆ ತೊಂದರೆ ಆಗಿರುವಂಥದ್ದು. ಅಲ್ಲಿ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ. ಆ ಜನರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ರಾಜ್ಯ ಸರ್ಕಾರ ಅಷ್ಟೇ ಅಲ್ಲ, ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ ಆ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಶಕ್ಯ ಇದೆ. ಆ ದೃಷ್ಟಿಯಲ್ಲಿ ನರಗುಂದ, ನವಲಗುಂದ, ರೋಣ, ಸವದತ್ತಿ, ರಾಮದುರ್ಗ, ಹುಬ್ಬಳ್ಳಿ ಭಾಗದ ಬಹುಪಾಲು ಮತ್ತು ಗದಗ ಜಿಲ್ಲೆಯ ಬಹುಪಾಲು, ಬಾಗಲಕೋಟೆ, ಬಿಜಾಪುರ, ಬೆಳಗಾವಿ ಜಿಲ್ಲೆಯ ಬಹುಪಾಲು ಜನ ರೈತರು ಕಂಗಾಲಾಗಿ 300 ದಿನಗಳಿಗಿಂತ ಶಾಂತಿಯುತ ಸತ್ಯಾಗ್ರಹ ಮಾಡುತ್ತಿದ್ದಾರೆ. ಇಂಥದ್ದರಲ್ಲಿ ಅವರಿಗೆ ಸ್ಪಂದಿಸುಬೇಕಾದುದು ನಮ್ಮ ಕರ್ತವ್ಯ. ಅದರ ಅನುಭವ ನಮಗೂ ಇದೆ. ನಮ್ಮೂರು ರೋಣ ತಾಲ್ಲೂಕಿನ ಯಾವಗಲ್ ಹಳ್ಳಿ. ನರಗುಂದ ಮತದಾರ ಕ್ಷೇತ್ರಕ್ಕೆ ಬರುತ್ತದೆ. ಅಲ್ಲಿ ಕುಡಿಯುವ ನೀರಿಗೂ ತೊಂದರೆ ಇದೆ. ಇದೇರೀತಿ 300ಕ್ಕಿಂತ ಹೆಚ್ಚು ಹಳ್ಳಿಗಳಲ್ಲಿ ಸಮಸ್ಯೆ ಇದೆ. ಈ ರಾಜ್ಯದ ಎರಡು ಮಹತ್ತರ ನಗರಗಳಾದ ಹುಬ್ಬಳ್ಳಿ-ಧಾರವಾಡದಂತಹ, ವಿದ್ಯಾಕಾಶಿ ಎಂದು ಹೇಳುವಂತಹ ಪ್ರದೇಶಗಳಲ್ಲಿ, ನರಗುಂದ, ನವಲಗುಂದ ಪಟ್ಟಣಗಳಲ್ಲಿ, ರೋಣ ಈ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಇಂಥ ಹಲವಾರು ಸಮಸ್ಯೆಗಳನ್ನು ಬಗೆಹರಿಸುವುದು ಪ್ರತಿಷ್ಠೆಯ ಮಾತಲ್ಲ. ನಾವೆಲ್ಲಾ ಒಂದಾಗಿ ಕೆಲಸ ಮಾಡಬೇಕು. (ಮುಂದು . . .)

unedited copy

(ವೈಸ್‌ಛೇರ್ಮನ್ ಉಪಸ್ಥಿತಿ)

ಡಾ:ಮತ್ತಿಕಟ್ಟಿ ವೀರಣ್ಣ(ಮುಂದು):–

ತಮಗೂ ಗೊತ್ತಿರುವ ಹಾಗೆ ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಂಡಿದ್ದೆವು. ಪಕ್ಷಾತೀತಾವಾಗಿ ಎಲ್ಲಾ ಪಕ್ಷಗಳ ನಾಯಕರ, ರೈತ ಹೋರಾಟಗಾರರ, ರೈತ ಪ್ರತಿನಿಧಿಗಳ ಮತ್ತು ಕೆಲವು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥ ಕೆಲವು ಸ್ವಾಮಿಗಳೇನಿದ್ದಾರೆ ಅವರನ್ನು ಕರೆದುಕೊಂಡು, ಚಿಂತನೆ ಮಾಡಿ, ಕರ್ನಾಟಕದ ಎಲ್ಲಾ ರೈತರ ಇದು ಒಂದು ನಿಜವಾದ ಸಮಸ್ಯೆ ಎಂದು ಬಿಂಬಿಸಿ ಇದಕ್ಕೆ ಪರಿಹಾರವನ್ನು ಕಂಡುಹಿಡಿಯೋಣವೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆವು. ಆ ರೀತಿ ಮುಖ್ಯಮಂತ್ರಿಗಳು, ಬಿಜೆಪಿ, ಜನತಾದಳ, ಕಾಂಗ್ರೆಸ್ ಹಾಗೂ ಆ ಭಾಗದ ಸಂಸತ್ ಸದಸ್ಯರುಗಳನ್ನು, ರೈತ ಹೋರಾಟಗಾರರನ್ನು ಮತ್ತು ಸಮಸ್ಯೆಗೆ ಒಳಗಾದಂಥವರನ್ನು ಸಭೆಗೆ ಕರೆದಿದ್ದರು. ಆ ಸಭೆಯಲ್ಲಿ ಎಲ್ಲರು ಮಾತನಾಡಿದರು. ನಾವೆಲ್ಲಾ ಒಂದಾಗಿ ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಹೋಗಬೇಕು, ಈ ಸಮಸ್ಯೆ ರಾಜ್ಯ ಸರ್ಕಾರದಿಂದ ಬಗೆಹರಿಸುವುದಕ್ಕಾಗುವುದಿಲ್ಲ ಎಂದು ಹೇಳಿದೆವು. ಮಾನ್ಯ ಸಭಾಪತಿಯವರೆ, ಇದರಲ್ಲಿ ರಾಜಕೀಯ ಇಲ್ಲ, ಸಮಸ್ಯೆ ಇದೆ. ಸಮಸ್ಯೆಯನ್ನು ಪರಿಹರಿಸಬೇಕು. ಅದು ನಮ್ಮ ಕರ್ತವ್ಯ. ನಾವು ಪಕ್ಷಾತೀತಾವಾಗಿ ಸ್ಪಂದಿಸಿ ನಿರ್ಧಾರ ತೆಗೆದುಕೊಳ್ಳಬೇಕು. ಆ ದೃಷ್ಟಿಯಿಂದ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆಯಿರಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆವು. ಮಾನ್ಯ ಮುಖ್ಯಮಂತ್ರಿಗಳು 'ಬೇಡ, ನಾವೆಲ್ಲರು ಹೋಗೋಣ' ಎಂದು ಹೇಳಿದರು. ಅವರು ದೊಡ್ಡ ಮನಸ್ಸು ಮಾಡಿದರು. ಇದು ನನ್ನ ರಾಜ್ಯದ ಜನತೆಯ ಸಮಸ್ಯೆ, ನನ್ನ ಕಷ್ಟ ಎಂದು ಹೇಳಿ ಮುಖ್ಯಮಂತ್ರಿಯಾಗಿ ಎಲ್ಲರನ್ನು ಕೂಡಿಸಿದರು. ಆ ಭಾಗದ ಎಲ್ಲಾ ಜಿಲ್ಲೆಗಳ ಉಸ್ತುವಾರಿ ಸಚಿವರೂ ಬಂದಿದ್ದರು. ಎಲ್ಲರನ್ನು ಸೇರಿಸಿ ಸಭೆ ಮಾಡಿ ಎಲ್ಲರಿಗೆ ಒಪ್ಪಿಗೆ ಆಗುವ ರೀತಿ ಮನವಿ ಪತ್ರ ತಯಾರಿಸಿ ಮಾನ್ಯ ಪ್ರಧಾನಿಯವರ ಹತ್ತಿರ ಹೋದೆವು. ನಮ್ಮ ಉದ್ದೇಶ ಏನಿತ್ತೆಂದರೆ, ಇಂತಹ ಸಮಸ್ಯೆಗಳು ಬಂದಾಗ ಕೇಂದ್ರದಲ್ಲಿರುವ ಸರ್ಕಾರ, ಮಾನ್ಯ ಪ್ರಧಾನ ಮಂತ್ರಿಗಳು, ಅಲ್ಲಿರತಕ್ಕಂಥ ಜಲಸಂಪನ್ಮೂಲ ಸಚಿವರು ಸೇರಿ ಇದನ್ನು ರಾಜಕೀಯದಿಂದ ಮೇಲೆತ್ತರಕ್ಕೆ ಇಟ್ಟು ನಿಜವಾದ ಮಾನವೀಯತೆಯ ಆಧಾರದ ಮೇಲೆ ಸಮಸ್ಯೆಯನ್ನು ಪರಿಹರಿಸುವ ಪ್ರಯತ್ನ ಮಾಡುವುದಾಗಿತ್ತು. ಮಾನ್ಯ ಸಭಾಪತಿಯವರೇ, ಇಂತಹ ಅನೇಕ ಉದಾಹರಣೆಗಳಿವೆ. ತಾವು

unedited copy

36 ವರ್ಷ ಈ ಸದನದ ಸದಸ್ಯರಾಗಿ ಕೆಲಸ ಮಾಡಿದ್ದೀರಿ. ಬೇರೆ ಬೇರೆ ಹಿರಿಯ ಸ್ನೇಹಿತ ಸದಸ್ಯರಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ಅಂದಿನ ಮದ್ರಾಸ್- ಇಂದಿನ ಚೆನ್ನೈ, ಹಾಗೂ ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇತ್ತು. ಅದು ಕೃಷ್ಣ ಕೊಳ್ಳದ ಕಕ್ಷೆಯಲ್ಲಿ ಬರುವುದಿಲ್ಲ. ಆದಾಗ್ಯೂ ಕೂಡ ಮಾನವೀಯತೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಅಂದಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಮೂರು ರಾಜ್ಯದ ಮುಖ್ಯಮಂತ್ರಿಗಳನ್ನು ಮಾತನಾಡುವುದಕ್ಕೆ ಕರೆದರು. ತಮಗೆ ಗೊತ್ತಿರುವ ಹಾಗೆ ಆಗ ನಮ್ಮ ರಾಜ್ಯದ ಮತ್ತು ನೆರೆ ರಾಜ್ಯಗಳ ಬೇಡಿಕೆ ಬಚಾವತ್ ಆಯೋಗದ ಮುಂದೆ ಇತ್ತು, ಟ್ರಿಬ್ಯುನಲ್‌ನಲ್ಲಿತ್ತು. ಕೃಷ್ಣಾ ಕೊಳ್ಳದ ನೀರು ಹಂಚಿಕೆ ಬಗ್ಗೆ ಆಂಧ್ರ, ಮಹಾರಾಷ್ಟ್ರ, ಕರ್ನಾಟಕದ ಮಧ್ಯೆ ಸಂಘರ್ಷ ಇತ್ತು. ನಮ್ಮ ಪಾಲನ್ನು ನಾವು ಕೇಳಬೇಕಾದ್ದು ನ್ಯಾಯವಾದದ್ದೇ. ಯಾವುದೇ ರಾಜ್ಯ ಇರಲಿ, ಅವರ ಜನತೆಯ ಹಿತದೃಷ್ಟಿಯಿಂದ ಅವರ ಪಾಲಿನ ನೀರನ್ನು ಕೇಳತಕ್ಕಂಥದ್ದು ಬಹಳ ಪ್ರಮುಖವಾದದ್ದು. ಆ ಬದ್ಧತೆಯಿಂದ ಇದ್ದರು. ಆದಾಗ್ಯೂ ಕೂಡ ಮೂರು ರಾಜ್ಯದ ಮುಖ್ಯಮಂತ್ರಿಗಳನ್ನು ಕರೆಸಿ ಅಂದಿನ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಮಾತನಾಡಿದರು. ಆಗ ಇಲ್ಲಿ ಜನತಾ ಪಕ್ಷದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು. ಬಿಜೆಪಿಯ 18 ಜನರು ಸಪೋರ್ಟ್ ಮಾಡಿದ್ದರು. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಇತ್ತು. ಆಂಧ್ರದಲ್ಲಿ ಎನ್.ಟಿ.ರಾಮರಾವ್‌ರವರು ಇದ್ದರು. ಅವರೆಲ್ಲಾ ಬೇರೆ ಬೇರೆ ಪಕ್ಷದವರಿದ್ದರು. ಅವರನ್ನೆಲ್ಲಾ ಕೂಡಿಸಿ, 'ನೋಡಿ, ಟ್ರಿಬ್ಯುನಲ್ ಡಿಸಿಷನ್ ಬರಲಿ, ಅದು ಬಂದಾಗ ನೀವೇನು ಈಗ ನೀರು ಕೊಡುತ್ತೀರಿ, ಅದನ್ನು ನಿಮ್ಮ ಪಾಲಿನಲ್ಲಿ ಸರಿ ಮಾಡೋಣ. ಈಗ ಅಲ್ಲಿ ಸಮಸ್ಯೆ ಇದೆ. ಕೋಟ್ಯಾಂತರ ಜನರಿಗೆ ನೀರಿಲ್ಲದೆ ಸಮಸ್ಯೆಯಲ್ಲಿದ್ದಾರೆ. ನೀರು ಬಹಳ ಮಹತ್ವಪೂರ್ಣವಾದ ಗಡಿ, ಭಾಷೆ, ಎಲ್ಲವನ್ನು ದಾಟಿ ಮೇಲಿರತಕ್ಕಂಥದ್ದು. ಅದಕೋಸ್ಕರ 15 ಟಿಎಂಸಿ ನೀರನ್ನು, ಅಂದರೆ 5 ಟಿಎಂಸಿ ಕರ್ನಾಟಕ, 5 ಟಿಎಂಸಿ ಆಂಧ್ರ, 5 ಟಿಎಂಸಿ ಮಹಾರಾಷ್ಟ್ರ ಸರ್ಕಾರ ತಮಿಳು ನಾಡಿಗೆ ಬಿಡಬೇಕು ಎಂದು ಹೇಳಿದರು. ಈ ಮೂರು ರಾಜ್ಯದ ಮುಖ್ಯಮಂತ್ರಿಗಳನ್ನು ಕೂರಿಸಿ ವಿನಂತಿಸಿದರು. ಈಗ, ಮುಖ್ಯಮಂತ್ರಿಗಳ ನೇತ್ರತ್ವದಲ್ಲಿ ನಾವೆಲ್ಲರು ಪ್ರಧಾನಮಂತ್ರಿಗಳ ಹತ್ತಿರ ಹೋದೆವು. ನಾವು ಕೈಮುಗಿದು ಹೇಳಿದೆವು, ತಾವು ಬಹಳ ಜನರಿದ್ದಿರಿ, ಈ ರೀತಿ ಮಾಡಬಹುದು, ಮಾಡುವುದಕ್ಕೆ ಶಕ್ತಿ ಇದೆ, ಮನಸ್ಸು ಬೇಕು, ನೀವು

unedited copy

ಮಾಡಿ ಎಂದು ವಿನಂತಿಸಿದೆವು. ಆದರೆ, ನಮ್ಮ ದುರ್ದೈವ, ಈ ನಾಡಿನ ರೈತರ ದುರ್ದೈವ. ಉತ್ತರ ಕರ್ನಾಟಕದ ಜನತೆಯ ದುರ್ದೈವ, ಮಾನ್ಯ ಪ್ರಧಾನ ಮಂತ್ರಿಗಳು ಇದಕ್ಕೆ ಸ್ಪಂದಿಸಲಿಲ್ಲ. ನಾನು ಮತ್ತೊಂದು ಕೆಟ್ಟ ಶಬ್ಧವನ್ನು ಮಾತನಾಡುವುದಿಲ್ಲ. ಸತ್ಯವನ್ನು ಹೇಳುತ್ತಿದ್ದೇನೆ. 'ನೀವು ಹೋಗಿ ಆ ರಾಜ್ಯದ ವಿರೋಧ ಪಕ್ಷದವರ ಜೊತೆ ಮಾತನಾಡಿ, ಅವರಿಗೆ ಹೇಳಿ' ಎಂದು ಹೇಳಿದರು. ಇಲ್ಲಿನ ವಿರೋಧ ಪಕ್ಷದವರಿಗೆ ಅವರು ಯಾರಾದರೂ ಹೇಳಿದ್ದಾರೆಯೇ? ನೀವೆಲ್ಲಾ ಬನ್ನಿ ಎಂದು ನಮ್ಮ ಮುಖ್ಯಮಂತ್ರಿ ಕರೆದಿದ್ದರು. ಇದು ಒಂದು ರಾಜ್ಯದ ಜ್ವಲಂತ ಸಮಸ್ಯೆ, ವಿಚಾರ ಮಾಡೋಣ, ಈಗ ಇಂತಹ ಸಮಸ್ಯೆ ಇದೆ, ಇದು ಮಾನವೀಯತೆಯ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾದದ್ದು, ಇದನ್ನು ಬಗೆಹರಿಸೋಣ ಎಂದು ಇಂದಿನ ಪ್ರಧಾನ ಮಂತ್ರಿಗಳು ಹೇಳಬೇಕಾಗಿತ್ತು. ಅದು statesmanship. ಆ ಎದೆಗಾರಿಕೆ ಜವಾಹರ್‌ಲಾಲ್ ನೆಹರುರವರಿಗೆ ಇತ್ತು. ಆ ಎದೆಗಾರಿಕೆ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಇತ್ತು. ಆ ಎದೆಗಾರಿಕೆ ವಾಜಪೇಯಿಯವರಿಗೆ ಇತ್ತು. ನಾನು ಸತ್ಯವನ್ನು ಹೇಳುತ್ತಿದ್ದೇನೆ. ಹೊಗನೆಕಲ್ ನೀರಿನ ಸಮಸ್ಯೆ ಬಂದಾಗ ವಾಜಪೇಯಿಯವರು ನಮಗೆ ಬುದ್ಧಿ ಹೇಳಿ ತಮಿಳುನಾಡಿನ ಬಿಳಿಗುಂಡ್ಲಿಗೆ ನೀರು ಕೊಡಿಸಿದರು. ಇಂತಹ ಮುತ್ಸದ್ದಿತನ ನಾಯಕರಾದವರಿಗೆ ಇರಬೇಕು. ರಾಜಕೀಯ ವ್ಯವಸ್ಥೆಯಲ್ಲಿ ಕೆಲವೊಂದು ಬಾರಿ ನಾವು ನಿಮಗೆ ನೋವು ಮಾಡಿರುತ್ತೇವೆ, ನೀವು ನಮಗೆ ಮಾಡಿರುತ್ತೀರಿ. ಆ ನೋವೆನ್ನೆಲ್ಲಾ ಮರೆತು ಮಾನವೀಯತೆಯ ದೃಷ್ಟಿಯಿಂದ ಇಡೀ ರಾಷ್ಟ್ರ ನನ್ನದು, ಇಡೀ ರಾಷ್ಟ್ರದ ಜನತೆ ನನ್ನದು, ಎಲ್ಲಾ ರೈತರು ನಮ್ಮವರು ಎನ್ನುವ ಚಿಂತನೆ, ಭಾವನೆ, ಕಳಕಳಿ ಇರಬೇಕು ಎನ್ನುವುದನ್ನು ಈ ಸದನದ ಮೂಲಕ ಹೇಳಬಯಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ,....

**ಡಾ:ಮತ್ತಿಕಟ್ಟಿ ವೀರಣ್ಣ;-** ನಾನು ಕೆಟ್ಟದಾಗಿ ಏನು ಮಾತನಾಡಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆ ವಿಚಾರ ಅಲ್ಲ. ಸ್ಪಷ್ಟೀಕರಣ ಅಷ್ಟೆ. ಕಳೆದ ವಿಧಾನ ಮಂಡಲ ಅಧಿವೇಶನದಲ್ಲಿ ಮಾನ್ಯ ವೀರಣ್ಣ

unedited copy

ಮತ್ತಿಕಟ್ಟಿಯವರು ಕೂಡ ಇದ್ದರು. ಕಳಸಾ ಬಂಡೂರಿ ವಿಚಾರದಲ್ಲಿ ತಾವು ಕೂಡ ಭಾಗವಹಿಸಿದ್ದೀರಿ. ತುಂಬಾ ಸ್ಪಷ್ಟವಾಗಿ ಮುಖ್ಯಮಂತ್ರಿಗಳು, ನೀರಾವರಿ ಸಚಿವರು ಇದ್ದಂಥ ಸಂದರ್ಭದಲ್ಲಿ ಹೇಳಿಕೆ ಬಂದದ್ದೇನು ಎಂದು ಕಡತ ತೆಗೆಯಿರಿ. ಬೇಕಾದರೆ ಅದರ ಕಾಪಿ ನಾನು ಕೊಡುತ್ತೇನೆ.

**ಡಾ:ಮತ್ತಿಕಟ್ಟಿ ವೀರಣ್ಣ:-** ಮಾನ್ಯ ವಿರೊಧಪಕ್ಷದ ನಾಯಕರೆ, ಆಮೇಲೆ ಅಲ್ಲಿಗೆ ನಾವು ನೀವೆಲ್ಲಾ ಹೋದೆವಲ್ಲಾ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಮತ್ತಿಕಟ್ಟಿಯವರೆ, ನಾನು ಒಂದೇ ಮಾತು ಹೇಳುತ್ತೇನೆ. ಗೋವಾ, ಮಹಾರಾಷ್ಟ್ರ, ಎರಡೂ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮತ್ತು ವಿರೋಧ ಪಕ್ಷದ ನಾಯಕರುಗಳಿಗೆ ನಾವು ಮನವಿ ಮಾಡಬೇಕಾಗುತ್ತದೆ, ಆ ದಿಕ್ಕಿನಲ್ಲಿ ಒಂದು ಸಭೆಯನ್ನು ಇಲ್ಲಿ ಮಾಡೋಣ, ಸಭೆ ಮಾಡಿಕೊಂಡು ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಎಲ್ಲರನ್ನು ಕರೆಯುವ ದಿಕ್ಕಿನಲ್ಲಿ ಪ್ರಯತ್ನ ನಡೆಸೋಣ ಎಂದು ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳು, ಹೇಳಿದರು. ಆದರೆ, ಈ ನಿಮಿಷದವರೆಗೂ ಮುಖ್ಯಮಂತ್ರಿಗಳು ಆ ಸಭೆ ಕರೆಯಲಿಲ್ಲ. ನಾನು ಏಕೆ ನಿಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ಈ ವಿವಾದ ಶುರು ಆದ ನಂತರ ಸ್ವಾಭಾವಿಕವಾಗಿ ಏನಾಯಿತು ಎಂದರೆ, ನಾನು ನೀರಾವರಿ ಮಂತ್ರಿಯಾಗಿದ್ದರಿಂದ ಕ್ಲಾರಿಫಿಕೇಶನ್ ಕೊಡುತ್ತಿರುವುದು. ಸೈಫುದ್ದಿನ್ ಸೋಜ್ ಬಹಳ ದೊಡ್ಡ ವ್ಯಕ್ತಿ. ಅವರು ನೀರಾವರಿ ಮಂತ್ರಿಗಳಾಗಿದ್ದರು. ಅವರು ಕಾಂಗ್ರೆಸ್ ಪಕ್ಷದ ನಾಯಕರು. ನಾನು ಹೋಗಿ ಅವರಿಗೆ ಮನವಿ ಮಾಡಿದೆ. ಮಹಾರಾಷ್ಟ್ರ ಮತ್ತು ಗೋವಾ, ಎರಡೂ ಸರ್ಕಾರದ ಮುಖ್ಯಮಂತ್ರಿಗಳು ಬರಲಿಲ್ಲ. ಯಾರೋ ಅಧಿಕಾರಿಗಳನ್ನು ಕಳುಹಿಸಿದರು. ಏಕೆ ಹೀಗೆ ಮಾಡುತ್ತಿದ್ದಾರೆಂದು ನನಗೂ ಅರ್ಥವಾಗುತ್ತಿಲ್ಲ, ಕುಡಿಯುವ ನೀರು ಕೊಡಬೇಕಾಗಿರುವುದು ಅವರ ಕರ್ತವ್ಯ ಎಂದು ಅವರು ಹೇಳಿದರು. ಅದಾದ ನಂತರ ಏನಾಯಿತು ಎಂಬುದು ತಮಗೆ ಗೊತ್ತಿದೆ. ಸುಪ್ರೀಮ್‌ಕೋರ್ಟ್‌ಗೆ ಹೋಯಿತು. ಅದಾದ ನಂತರ ನ್ಯಾಯಾಧಿಕರಣಕ್ಕೆ ಹೋಯಿತು. ನಾನು ಏಕೆ ಈ ಮಾತು ಹೇಳುತ್ತಿದ್ದೇನೆಂದರೆ, ಇವತ್ತು ನ್ಯಾಯಾಧಿಕರಣಕ್ಕೆ ಹೋಗುವುದಕ್ಕಾಗಲಿ, ಸುಪ್ರೀಮ್‌ಕೋರ್ಟ್‌ಗೆ ಹೋಗುವುದಕ್ಕಾಗಲಿ ಕಾರಣ ನಿಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನಿಮ್ಮ ಪಕ್ಷ

unedited copy

ತೆಗೆದುಕೊಂಡಂಥ ಒಂದು ನಿಲುವಿನ ದುಸ್ಥಿತಿ ಇದು. ಹಾಗಾಗಿ ಇವತ್ತು ಏನು ಪರಿಸ್ಥಿತಿ ಬಂದಿದೆ ಎಂದರೆ, ಇವತ್ತು ನ್ಯಾಯಾಧಿಕರಣಕ್ಕೂ ಹೋಗುವುದಕ್ಕೆ ಒಂದು ಕಾರಣ – ತಾವೇ, ಸುಪ್ರೀಮ್‌ಕೋರ್ಟ್‌ ಹೋಗುವುದಕ್ಕೂ ಕಾರಣ – ತಾವೇ ಮತ್ತು ಎಲ್ಲಾ ಕಡೆ ನಿಮ್ಮ ಪಕ್ಷದ ಸರ್ಕಾರ ಇದ್ದಂತಹ ಸಂದರ್ಭ. ಆದರೂ ನಾನು ಹೇಳುತ್ತೇನೆ, ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಮಹಾರಾಷ್ಟ್ರ ಮತ್ತು ಗೋವಾ ಎರಡೂ ರಾಜ್ಯದ ಮುಖ್ಯಮಂತ್ರಿಗಳನ್ನು ವಿರೋಧ ಪಕ್ಷದವರನ್ನು ಸೇರಿಸಬೇಕಾಗುತ್ತದೆ, ಒಟ್ಟಿಗೆ ಕುಳಿತು ಚರ್ಚೆ ಮಾಡಬೇಕಾಗುತ್ತದೆ ಎಂದು ಹೇಳಿದರು. ಆದರೆ, ಇಲ್ಲಿ ಏನಾಗುತ್ತಿದೆ ಎಂದರೆ ಬರೀ ರಾಜಕೀಯ ಆಗುತ್ತಿದೆ. ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನಿಮ್ಮ ಪಾರ್ಟಿ, ನಮ್ಮ ಪಾರ್ಟಿ ಎಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ರಾಜಕಾರಣವಾಗುತ್ತಿರುವುದರಿಂದ ಅನೇಕ ವರ್ಷಗಳಿಂದ ಬಂದಿರುವಂತಹ ಈ ಸಮಸ್ಯೆ ಹಾಗೆ ಉಳಿದಿದೆ.

(ಮುಂದು)

unedited copy

024/03-03-2016/12-10/bkp-vs

(ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿ ಅವರು ಸಭಾಪೀಠದಲ್ಲಿದ್ದರು)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು. . )**

ನಾನು ಆ ಪಕ್ಷ, ಈ ಪಕ್ಷ ಎಂದು ಹೇಳಲಿಕ್ಕೆ ಹೋಗುವುದಿಲ್ಲ. ಮೂರು ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ಈ ಸಮಸ್ಯೆ ಬಗೆಹರಿಯಲಿಲ್ಲ. ಈಗ ಮಹರಾಷ್ಟ್ರದಲ್ಲಿ, ಗೋವಾದಲ್ಲಿ ಬಿಜೆಪಿ ಪಕ್ಷ ಬಂದಿದೆ ಎಂದು ಹೇಳಿ, ನ್ಯಾಯಾಧೀಕರಣಕ್ಕೆ ಹೋಯಿತು.

(ಗೊಂದಲ)

ನಾನು ಇಲ್ಲಿ ಶ್ರೀಯುತ ಮತ್ತಿಕಟ್ಟಿಯವರ ವಿಚಾರವಾಗಿ ಹೇಳುತ್ತಿಲ್ಲ. ಈ ಸಮಸ್ಯೆ ಪರಿಹಾರವಾಗಬೇಕಾದರೆ, ನಾನು ಈಗಲೂ ಹೇಳುವುದೇನೆಂದರೆ ನಾವು ಎರಡು ರಾಜ್ಯಗಳ ಮುಖ್ಯಮಂತ್ರಿಗಳನ್ನು, ಎರಡು ರಾಜ್ಯಗಳ ವಿರೋಧ ಪಕ್ಷದ ನಾಯಕರುಗಳನ್ನು ನಾವು ಸಭೆಗೆ ಕರೆಯುತ್ತೇವೆಂದು ಮುಖ್ಯಮಂತ್ರಿಗಳು, ನೀರಾವರಿ ಸಚಿವರು ತುಂಬಾ ಸ್ಪಷ್ಟವಾಗಿ ಏನು ಹೌಸ್‌ನಲ್ಲಿ ಕಮಿಟ್‌ಮೆಂಟ್ ಮಾಡಿಕೊಂಡಿದ್ದಾರೆ, ಅದು ಆದಲ್ಲಿ ಈ ಸಮಸ್ಯೆ ಪರಿಹಾರವಾಗುತ್ತದೆ, ಇಲ್ಲದಿದ್ದರೆ, ಆಗುವುದಿಲ್ಲವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶ: ರಾಜ್ಯದ ಅದರಲ್ಲೂ ವಿಶೇಷವಾಗಿ ಬೆಳಗಾಂ ಡಿವಿಜನ್ ಜನರ ಹಿತದೃಷ್ಟಿಯಿಂದ ಈ ಸಮಸ್ಯೆ ಪರಿಹಾರವಾಗಬೇಕಾಗಿತ್ತು. ಮಾನ್ಯ ಶ್ರೀ ಕೆ.ಎಸ್.ಈಶ್ವರಪ್ಪನವರು ಈ ರಾಜ್ಯದ ನೀರಾವರಿ ಮಂತ್ರಿಗಳಾಗಿದ್ದಾಗ “Let what may come” ಎನ್ನುವ ರೀತಿಯಲ್ಲಿ, ಕಳಸ ಬಂಡೂರಿ ಯೋಜನೆಯನ್ನು ಜಾರಿಗೆ ತಂದೇ ತರುತ್ತೇವೆಂದು ಹೇಳಿ ಶಂಕುಸ್ಥಾಪನೆ ಮಾಡಿಕೊಂಡು ಬಂದಿದ್ದಾರೆ. ಅದೆಲ್ಲವೂ ಆದಮೇಲೆ, ಆ ಯೋಜನೆ ಏತಕ್ಕೆ ಸುಪ್ರೀಂ ಕೋರ್ಟಿಗೆ ಹೋಯಿತು, ಆ ಯೋಜನೆ ಏತಕ್ಕೆ ಕಾರ್ಯರೂಪಕ್ಕೆ ಬರಲಿಲ್ಲವೆನ್ನುವುದು ಜನತೆಗೆ ಸ್ಪಷ್ಟವಾಗಿ ಗೊತ್ತಾಗಬೇಕು. ಕಳಸ ಬಂಡೂರಿ ನಮ್ಮ ರಾಜ್ಯದಲ್ಲಿ ಹುಟ್ಟುವಂತಹ ಸಣ್ಣ ಸಣ್ಣ ನದಿಗಳು, ಹಳ್ಳಗಳು. ಈ 7.50. ಟಿಎಂಸಿ ನೀರನ್ನು 2001 ರ ನ್ಯಾಷನಲ್ ವಾಟರ್ ಪಾಲಿಸಿ ಪ್ರಕಾರ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡಬೇಕೆನ್ನುವುದಾಗಿತ್ತು. ಆನಂತರ, ನೀರಾವರಿ, ಇಂಡಸ್ಟ್ರೀ, ಇನ್ನಿತರ ಉದ್ದೇಶಕ್ಕೆ ಬಳಕ್ಕೆ ಮಾಡಿಕೊಳ್ಳಬೇಕೆನ್ನುವುದು ಸ್ಪಷ್ಟವಾದ ಮೇಲೆ ಕುಡಿಯುವ ನೀರಿಗೋಸ್ಕರ ಏನು 7.50 ಟಿ.ಎಂ.ಸಿ. ನೀರನ್ನು

unedited copy

ಬಳಸಿಕೊಳ್ಳುವುದಕ್ಕೆ ಏನು ತೀರ್ಮಾನವಾಗಿತ್ತು, ಆಗ ಕೇಂದ್ರದಲ್ಲಿದ್ದಂತಹ ಸರ್ಕಾರ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಯಾವ ಯೋಜನೆಗೆ ಕ್ಲಿಯರೆನ್ಸ್ ಇತ್ತು, ಅದನ್ನು ಸ್ಟೇ ಮಾಡಿ, ಅದನ್ನು ಮಾಡಬಾರದು ಎಂದು ಹೇಳಿ, ಆದೇಶ ಮಾಡಿರುವಂತಹದ್ದು ಆ ಸಂದರ್ಭದಲ್ಲಿ ಆಗಿರುವಂತಹದ್ದನ್ನು ಇಲ್ಲಿ ನಾವ್ಯಾರೂ ಸಹ ಮರೆಯಬಾರದು. ಇದು ಒಂದು ವಿಚಾರ.

ಎರಡನೆಯದಾಗಿ, ಮಾನ್ಯ ಸಭಾಪತಿಯವರೆ, ಸುಪ್ರೀಂ ಕೋರ್ಟಿಗೆ ಅಥವಾ ಇನ್ನು ಯಾವುದೇ ನ್ಯಾಯಾಲಯಕ್ಕೆ ಹೋಗತಕ್ಕಂತಹದ್ದು ಬಹುಶ: ಹೇಗೆ 1971–72ರಲ್ಲಿ O.S.No.1/1971 was filed by the farmers of Tamil Nadu. ಅದೇ ರೀತಿಯಲ್ಲಿ ಗೋವಾದಲ್ಲಿ ಕೆಲವರು ತಮ್ಮ ಹಿತವನ್ನು ಕಾಪಾಡತಕ್ಕಂತಹ ದೃಷ್ಟಿಯಲ್ಲಿ ಕೋರ್ಟಿಗೆ ಹೋದ ಡೈರೆಕ್ಷನ್ಸ್ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಟ್ರಿಬ್ಯುನಲ್ ರಚನೆ ಮಾಡಿರುವುದು ಒಂದು ಕಡೆ. ಈ ಸಂದರ್ಭದಲ್ಲಿ ನಾನು ಕೇಳಲಿಕ್ಕೆ ಬಯಸುವುದೇನೆಂದರೆ ಎಲ್ಲಾ ಪಕ್ಷಗಳ ಮುಖಂಡರುಗಳನ್ನು ರಾಷ್ಟ್ರದ ಇತಿಹಾಸದಲ್ಲಿ ಯಾವುದಾದರೂ ಅಂತರರಾಜ್ಯಗಳ ನದಿಗಳ ಹಿನ್ನೆಲೆಯಲ್ಲಿ Interstate Water Dispute Act, Section 3, 4, 5. ಅದರಲ್ಲಿ 7,8 ಸೆಕ್ಷನ್ ಗಳಿವೆ. I think under Section 3 or 4, there is a provision to have negotiations between the parties concerned. ಇದನ್ನು ನೆಗೋಷಿಯೇಟ್ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ಇರತಕ್ಕಂತಹದ್ದನ್ನು avail ಮಾಡಿಕೊಳ್ಳುವುದಕ್ಕೆ ಮಾನ್ಯ ಸದಸ್ಯರಾದ ಶ್ರೀಯುತ ಮತ್ತಿಕಟ್ಟಿ ವೀರಣ್ಣನವರು ಹೇಳಿದ ಹಾಗೆ ಶ್ರೀಮತಿ ಇಂದಿರಾ ಗಾಂಧಿಯವರು ಈ ದೇಶದ ಪ್ರಧಾನ ಮಂತ್ರಿಗಳಾದಂತಹ ಸಂದರ್ಭದಲ್ಲಿ ಕೃಷ್ಣ ಬೆಸಿನ್ ಮಾಡಿದರು.

ಮಾನ್ಯ ಸಭಾಪತಿಯವರೆ, ಇಡೀ ಇತಿಹಾಸದಲ್ಲಿ 'Na Bhuto na bhavishyati'. ಎಲ್ಲಿಯಾದರೂ, ಯಾವುದಾದರೂ ಸಂದರ್ಭದಲ್ಲಿ ನದಿ ನೀರಿನ ಹಂಚಿಕೆಯ ವಿಚಾರದಲ್ಲಿ ಯಾವುದಾದರೂ ರಾಜ್ಯದ ವಿರೋಧ ಪಕ್ಷಗಳನ್ನು ಆ ಮಾತುಕತೆಗೆ ಕರೆದಿರುವಂತಹದ್ದು, ಯಾವುದಾದರೂ ಉದಾಹರಣೆ ಇದ್ದರೆ, ಅಥವಾ ಮಾನ್ಯ ಶ್ರೀ ಈಶ್ವರಪ್ಪನವರು ನೀರಾವರಿ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ, ಆ ರಾಜ್ಯಗಳ ವಿರೋಧ ಪಕ್ಷದ ನಾಯಕರುಗಳು ಬರಬೇಕು, ಕರ್ನಾಟಕ ವಿರೋಧ ಪಕ್ಷದ ನಾಯಕರು ಸಹ ಬರಬೇಕು, ಮುಖ್ಯಮಂತ್ರಿಗಳು ಬರಬೇಕು, ಅದೇ ರೀತಿಯಲ್ಲಿ ಮಹರಾಷ್ಟ್ರದ ಮುಖ್ಯಮಂತ್ರಿಗಳು, ವಿರೋಧ ಪಕ್ಷದ

unedited copy

ನಾಯಕರುಗಳು ಬರಬೇಕೆಂದು ಹೇಳಿ, ಇವರ ಅವಧಿಯಲ್ಲಿ ಕೇಂದ್ರದಲ್ಲಿದ್ದಂತಹ ಕಾಂಗ್ರೆಸ್ ಸರ್ಕಾರ ಏನಾದರೂ ಹೇಳಿದ್ದರೆ, ಇಲ್ಲಾ ರೀ, ಅವತ್ತು ಹೇಳುತ್ತಿದ್ದೀರಿ, ಇವತ್ತು ನೀವು ಏತಕ್ಕೆ ಕರೆದುಕೊಂಡು ಬರುತ್ತಿಲ್ಲ. . .

ಬೆಳಗಾವಿಗೆ ಪ್ರಧಾನ ಮಂತ್ರಿಗಳು ಬರುತ್ತಾರೆ, ಆದರೆ, ಅಲ್ಲಿ ಹತ್ತಿ ಹುರಿಯುವಂತಹ, ಸುಮಾರು 300 ದಿವಸಗಳ ಕಾಲ . . .

(ಗೊಂದಲ)

**ವೈಸ್ ಚೇರ್ಮನ್:-** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಶ್ರೀಯುತ ಉಗ್ರಪ್ಪನವರೆ ಸಾಕು ಕುಳಿತುಕೊಳ್ಳಿ. ಶ್ರೀಯುತ ಮತ್ತಿಕಟ್ಟಿ ಅವರೇ, ನೀವು ನಿಮ್ಮ ಭಾಷಣವನ್ನು ಮುಂದುವರಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:-** ರಾಜ್ಯದ ಹಿತವನ್ನು ಕಾಪಾಡುವಲ್ಲಿ ನಿಮ್ಮ ಕೇಂದ್ರ ಸರ್ಕಾರ ಇವತ್ತು ವಿಫಲವಾಗಿದೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಅಶ್ವತ್‌ನಾರಾಯಣರವರು, ಶ್ರೀ, ಸೋಮಣ್ಣ ಬೇವಿನ ಮರದ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಒಟ್ಟಿಗೆ ಮಾತನಾಡಲಿಕ್ಕೆ ಪ್ರಾರಂಭಿಸಿದರು)

**ವೈಸ್ ಚೇರ್ಮನ್:-** ಬೇಡ ಬೇಡ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈ ವಿಚಾರದಲ್ಲಿ ಶ್ರೀಯುತ ಉಗ್ರಪ್ಪನವರಲ್ಲಿ ಒಂದು ಕ್ಲಾರಿಫಿಕೇಷನ್ ಕೇಳಲಿಕ್ಕೆ ಬಯಸುತ್ತೇನೆ. ಆ ಪ್ರಾಜೆಕ್ಟ್ ಅನ್ನು ಶ್ರೀಯುತ ವಾಜಪೇಯಿಯವರು ಸ್ಟೇ ಮಾಡಲಿಲ್ಲ. ಪರಿಸರ ಇಲಾಖೆಯಿಂದ ಕೊಟ್ಟಂತಹ ವ್ಯವಸ್ಥೆಯಿಂದ ಅದು ತಪ್ಪಾಯಿತು. ಇಡೀ ಪ್ರಾಜೆಕ್ಟ್‌ಗೆ ಶ್ರೀಯುತ ವಾಜಪೇಯಿಯವರು ಸ್ಟೇ ಕೊಟ್ಟಿಲ್ಲ. ಇದು ಒಂದು ವಿಚಾರ.

**ಎರಡನೆಯದಾಗಿ,** ಇದು ನ್ಯಾಯಾಧೀಕರಣಕ್ಕೆ ಹೋಗಲಿಕ್ಕೆ ಮತ್ತೆ ಸುಪ್ರೀಂ ಕೋರ್ಟಿಗೆ ಹೋಗಲಿಕ್ಕೆ ಕಾರಣದ ಬಗ್ಗೆ ಶ್ರೀಯುತ ಉಗ್ರಪ್ಪನವರಿಗೂ ಗೊತ್ತಿರಬಹುದು. ನಾನು ಅದೇ ವಿಷಯವನ್ನು ಹೇಳುತ್ತಿದ್ದೆ. Prof. Saifuddin Soz, the Union Minister of Water Resources, ಅವರ

unedited copy

ಮನಸ್ಸಿನಲ್ಲಿ ಈ ರೀತಿ ಆಗಬೇಕೆಂದು ಇತ್ತು. ಗೋವಾ ಮುಖ್ಯಮಂತ್ರಿ, ಮಹರಾಷ್ಟ್ರ ಮುಖ್ಯಮಂತ್ರಿಗಳಿಬ್ಬರು ಸಹ ಕಾಂಗ್ರೆಸಿಗರಿದ್ದರು. ಅವರು ಸುಮಾರು ನಾಲ್ಕು-ನಾಲ್ಕು ಬಾರಿ ಸಭೆಯನ್ನು ಕರೆದರು. ನಾನು ಸಹ ಅಲ್ಲಿಗೆ ಹೋಗಿದ್ದೆ. ಒಬ್ಬ ಮುಖ್ಯಮಂತ್ರಿಯೂ ಸಹ ಒಂದೂ ಬಾರಿಯೂ ಸಭೆಗೆ ಬರಲಿಲ್ಲ. ಈ ಸಮಸ್ಯೆಯೇ ಇವತ್ತಿಗೂ ಕಾರಣವಾಗಿದೆ. ನಾನು ಅದಕ್ಕೋಸ್ಕರವಾಗಿ ಈ ವಿಚಾರವಾಗಿ ಹೇಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ದಯಮಾಡಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಈ ಕೆಲಸವನ್ನು ಮಾಡಿ.

**ವೈಸ್ ಚೇರ್ಮನ್:-** ಶ್ರೀಯುತ ಉಗ್ರಪ್ಪನವರೆ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಅಶ್ವತ್ ನಾರಾಯಣ:-** ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಅಂದು ನಿಮ್ಮ ಕಾಂಗ್ರೆಸ್ ಸರ್ಕಾರ ಪ್ರಯತ್ನ ಮಾಡಿದೆಯೇ?

(ಗೊಂದಲ)

**ಶ್ರೀ ಸೋಮಣ್ಣ ಮ. ಬೇವಿನಮರದ:-** ಕಾಂಗ್ರೆಸ್‌ನವರು ಉತ್ತರ ಕರ್ನಾಟಕದ ಬಗ್ಗೆ ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಇವತ್ತು ವಿರೋಧ ಪಕ್ಷದ ನಾಯಕರನ್ನು ಕರೆಯಬೇಕೆಂದು ಹೇಳುತ್ತಿದ್ದೀರಿ. ಅಂದು ಏತಕ್ಕೆ ಕರೆಯಲಿಲ್ಲ.

**ಶ್ರೀ ರಮನಾಥ್ ರೈ:-** ಮಾನ್ಯ ಸಭಾಪತಿಯವರೆ, . . .

**ಡಾ॥ ಮತ್ತಿಕಟ್ಟಿ ವೀರಣ್ಣ:-** ನೋಡಿ, ಈಗ ಆನೆ, ಚಿರತೆ ಎಲ್ಲವೂ ಬಂದವು.

**ಶ್ರೀ ಬಸವರಾಜ ಹೊರಟ್ಟಿ:-** ಸಂಬಂಧಪಟ್ಟ ಮಂತ್ರಿಗಳು ಇದ್ದಾಗ ನೀವು ಏತಕ್ಕೆ ಮಾತನಾಡುತ್ತೀರಿ?

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಶ್ರೀಯುತ ಉಗ್ರಪ್ಪನವರು ಹೇಳುತ್ತಿರುವುದು ಸರಿ ಇದೆ. ಮಂತ್ರಿಗಳು ಮಧ್ಯೆ ಮಧ್ಯೆ ಬಾಯಿ ಹಾಕುವುದು ಸೂಕ್ತವಲ್ಲ. ಮಾನ್ಯ ಸಭಾಪತಿಯವರು ಈ ವಿಚಾರವಾಗಿ ಹೇಳುತ್ತಿದ್ದು, ನಾನು ಸಹ ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ನಿಮ್ಮ ಇಲಾಖೆಯ ವಿಷಯ ಬಂದಾಗ ನೀವು ಹೇಳಿ. ನಿಮ್ಮ ಆರ್ಶೀವಾದದಿಂದ ಯಾರ್‍ಯಾರಿಗೆ ಒಳ್ಳೆಯದಾಗಿದೆ, ಯಾರ್‍ಯಾರಿಗೆ ಕೆಟ್ಟದಾಗಿದೆ ನೋಡೋಣ.

**ವೈಸ್ ಚೇರ್ಮನ್:-** ಎಲ್ಲರೂ ಕುಳಿತುಕೊಳ್ಳಿ.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಈಗ ಶ್ರೀಯುತ ರಮಾನಾಥ್ ರೈ ರವರ ಕಡೆ ನೋಡಿದರೆ ಆನೆ, ಚಿರತೆಗಳೆಲ್ಲವೂ ನೆನಪಿಗೆ ಬರುತ್ತವೆ. ಆದ್ದರಿಂದ, ಅವರ ಸುದ್ದಿಗೆ ಹೋಗಬೇಡಿ. ಏಕೆಂದರೆ, ಅವರ ಸುದ್ದಿಗೆ ಹೋದರೆ, ಆನೆ, ಚಿರತೆ, ಸಿಂಹ ಎಲ್ಲವೂ ಹತ್ತಿರಕ್ಕೆ ಬರುತ್ತವೆ. ಅವರು ಅರಣ್ಯ ಮಂತ್ರಿಗಳಿದ್ದು, ಅವರ ಸುದ್ದಿಗೆ ಹೋಗಬೇಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಕಾಡಿನಿಂದ ಬಂದ ಪ್ರಾಣಿಗಳನ್ನು ಹಿಡಿದು ಹಿಡಿದು ಬೋನ್‌ಗೆ ಹಾಕತ್ತಾರೆ.

**ಶ್ರೀ ಸಂದೇಶ್ ನಾಗರಾಜು:-** ಮಾನ್ಯ ಸಭಾಪತಿಯವರೆ, ಆನೆ, ಚಿರತೆ ಇವುಗಳನ್ನೆಲ್ಲಾ ಕಾಡಿನಿಂದ ನಾಡಿಗೆ ಬಿಟ್ಟು ಬಿಟ್ಟಿದ್ದಾರೆ.

**ವೈಸ್ ಚೇರ್ಮನ್:-** ಸಮಯ ಜಾಸ್ತಿಯಾಯಿತು. ಡಾ॥ ಮತ್ತಿಕಟ್ಟಿ ವೀರಣ್ಣನವರು ಮಾತನಾಡಲಿ.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಇದು ಬಹಳ, ಗಹನವಾದ, ಪ್ರಮುಖವಾದ ವಿಚಾರವಾಗಿದೆ. ನಮ್ಮ ನಾಡಿನ ಬಹು ಪಾಲು ರೈತರ ಸಮಸ್ಯೆ ಇದಾಗಿದೆ. ಇವತ್ತು ಶ್ರೀಯುತ ಈಶ್ವರಪ್ಪನವರು ಕೆಲವು ವಿಚಾರಗಳನ್ನು ಹೇಳಿದರು. ಪಕ್ಷ ಯಾವುದೇ ಇರಲಿ, ಮುಖ್ಯಮಂತ್ರಿಯಾದವರು ಪ್ರಮುಖವಾಗಿ ಆ ರಾಜ್ಯದ ಜನರ ಹಿತಕ್ಕೆ, ಅವರ ಅಭಿಪ್ರಾಯಕ್ಕೆ ಸ್ಪಂದಿಸಿ ಕೆಲಸ ಮಾಡಬೇಕಾಗುತ್ತದೆ. ಮನೆಯಲ್ಲಿ ಇರುವಂತಹ ಇಬ್ಬರು ಅಣ್ಣ-ತಮ್ಮಂದಿರ ಮಧ್ಯೆ ಜಗಳ ಬಂದರೆ ಏನು ಮಾಡುತ್ತಾರೆಂದು ಹಿರಿಯ ಸದಸ್ಯರಾದ ಶ್ರೀಯುತ ಶಾಣಪ್ಪನವರು ಹೇಳಬೇಕು. ಮನೆಯ ಹಿರಿಯವ ಯಾರಿರುತ್ತಾರೆ, ಅವ ಕರೆದು ಮಾತನಾಡುತ್ತಾನೆ. ಹೌದು, ಅಲ್ಲವೋ ಹೇಳಿ. ಇದನ್ನು ನೀವು ಒಪ್ಪುತ್ತೀರಾ ಅಲ್ಲವೇ? ಅದನ್ನು ನಾನು ಶ್ರೀಯುತ ಈಶ್ವರಪ್ಪನವರಿಗೆ ಹೇಳಿದೆ.

**ಮುಂದು. . .**

unedited copy

(ವೈಸ್ ಚೇರ್ಮನ್ ಶ್ರೀ ಬಸವರಾಜ ಹೊರಟ್ಟಿಯವರ ಉಪಸ್ಥಿತಿ)

ಡಾ:ಮತ್ತಿಕಟ್ಟಿ ವೀರಣ್ಣ(ಮುಂದುವರೆದುದು...

ಈ ರಾಷ್ಟ್ರವೇ ಒಂದು ಕುಟುಂಬ ಎನ್ನುವುದಾದರೆ ಆ ಮನೆಯ ಹಿರಿಯರಾಗಿ ಪ್ರಧಾನ ಮಂತ್ರಿಗಳಿದ್ದಾರೆ. ಬೇರೆ ಬೇರೆ ರಾಜ್ಯಗಳಿಗೆ ಆ ರಾಜ್ಯಗಳ ಮುಖ್ಯಮಂತ್ರಿಗಳಿರುತ್ತಾರೆ. ಆ ದಿನ ತೆಲುಗು ಗಂಗಾ ಯೋಜನೆ ಪ್ರಕಾರ 5 ಟಿ.ಎಂ.ಸಿ. ನೀರನ್ನು ಮದ್ರಾಸ್‌ಗೆ ಅಂದರೆ, ಈಗಿನ ಚೆನ್ನೈಗೆ ಹಂಚಿಕೆ ಮಾಡಿದಾಗ ಅದಕ್ಕೆ ಯಾವ ರಾಜ್ಯದವರು ಸಹ ಒಪ್ಪಿರಲಿಲ್ಲ. ಕುಡಿಯುವ ನೀರಿನ ಸಮಸ್ಯೆ ಇದೆ, ಇದಕ್ಕೆ ಒಪ್ಪಬೇಕೆಂದು ಆಗಿನ ಪ್ರಧಾನ ಮಂತ್ರಿಗಳು ತಿಳಿಸಿದರು. ಪ್ರಧಾನ ಮಂತ್ರಿಗಳು ಮನೆಯ ಹಿರಿಯರಾದ ಮೇಲೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಆ ಮನೆಯ ಭಾಗವಿದ್ದಂತೆ. ಆ ರೀತಿ ಅವರು ಹೇಳಬೇಕು, ಇವತ್ತು ಮಹದಾಯಿ ನೀರಾವರಿ ಯೋಜನೆಯಲ್ಲಿ ಸುಮಾರು 40 ರಿಂದ 45 ಟಿ.ಎಂ.ಸಿ.ಯಷ್ಟು ನೀರು ನಮ್ಮ ರಾಜ್ಯದ ಪಾಲಿಗೆ ಬರಬೇಕಾಗಿದ್ದು, ಆ ಕೆಲಸ ಆಗಬೇಕಾಗಿದೆ. ಆ ಬಗ್ಗೆ ಕರೆಯಲಾಗಿದ್ದ ಸಭೆಯಲ್ಲಿ ನಾವೆಲ್ಲರೂ ಭಾಗಿಯಾಗಿದ್ದೆವು. ಕಾಲಿಗೆ ಬೀಳುವುದಷ್ಟೇ ಬಾಕಿ ಇತ್ತು, ಆ ಸಭೆಯಲ್ಲಿ ನನಗೂ ಸಹ ಮಾತನಾಡುವುದಕ್ಕೆ ಅವಕಾಶ ನೀಡಿದ್ದರಿಂದ ನಾನು ಹೇಳಿದೆ, Sir, I am coming from that area, ನಾನು ಆ ಭಾಗದಿಂದ ಬಂದಿದ್ದೇನೆ, It is not anything else. ಜನರ ಸಮಸ್ಯೆ ವಿಚಾರದಲ್ಲಿ ಪಕ್ಷ ಅಥವಾ ಸರ್ಕಾರವಾಗಲಿ ಅಥವಾ ಯಾರದೇ ವೈಯಕ್ತಿಕ ಗರ್ವ, ಅಹಮ್ಮಿನ ಪ್ರಶ್ನೆಯಾಗಲಿ ಬರುವುದಿಲ್ಲ, ಅದಕ್ಕಾಗಿ ದಯಮಾಡಿ ಮಹದಾಯಿ ಯೋಜನೆಯಲ್ಲಿ ನಮ್ಮ ಪಾಲಿಗೆ 40 ರಿಂದ 42 ಟಿ.ಎಂ.ಸಿ. ನೀರು ಏನು ಬರುತ್ತದೆ, ಅದರಲ್ಲಿ ತಕ್ಷಣಕ್ಕೆ ನಾವು ಮೂಲಭೂತವಾಗಿ ಕುಡಿಯುವ ನೀರಿನ ಉದ್ದೇಶಕ್ಕಾಗಿ 7.8 ಟಿಂ.ಎಂ.ಸಿ. ನೀರನ್ನು ಮಾತ್ರ ಕೇಳಿದ್ದು, ಅದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎನ್ನುವುದು ಮೊದಲನೆಯ ಅಂಶ. ಇನ್ನುಳಿದಂತೆ ನಮ್ಮ ಕಾನೂನು ತಜ್ಞರು ಮತ್ತಿತರ ಎಲ್ಲರ ಅಭಿಪ್ರಾಯವನ್ನು ಪಡೆದುಕೊಂಡು ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಮತ್ತು ನೀರಾವರಿ ಸಚಿವರಾದಂತಹ ಮಾನ್ಯ ಎಂ.ಬಿ.ಪಾಟೀಲ್‌ರವರು ಸೇರಿ ಒಟ್ಟು 36.58 ಟಿ.ಎಂ.ಸಿ. ನೀರಿಗಾಗಿ ಅರ್ಜಿ ಸಲ್ಲಿಸಿದರು. ಅದರಲ್ಲಿ ಯಾವ ಯಾವ ಉದ್ದೇಶಕ್ಕಾಗಿ ಎಂದರೆ, ನೀರು ಸುಮ್ಮನೆ ಹರಿದು ಹೋಗುವುದರಿಂದ ಕಾಳಿ ಜಲಾಶಯದ ವಿದ್ಯುತ್ ಉತ್ಪಾದನೆಗಾಗಿ 5.52 ಟಿ.ಎಂ.ಸಿ. ನೀರನ್ನು ಕೊಡಬೇಕೆನ್ನುವುದು ನಮ್ಮ ಎರಡನೆಯ ಬೇಡಿಕೆ. ಮೂರನೆಯದಾಗಿ ತಮಗೂ ಸಹ ಗೊತ್ತಿರುವಂತೆ ಬರಗಾಲದ ಪರಿಸ್ಥಿತಿಯಿಂದ ಅಂತರ್ಜಲದ ಮಟ್ಟ ಕುಸಿದಿರುವುದರಿಂದ ರೈತರ ಕೊಳವೆಬಾವಿಗಳಲ್ಲಿ ನೀರು ಬತ್ತಿ ಹೋಗಿದ್ದು, ಪಂಪ್‌ಸೆಟ್ ಚಾಲನೆಗೊಳಿಸಿದರೆ ಮೋಟಾರ್ ಸುಟ್ಟು ಹೋಗುತ್ತಿವೆ. ಇಂತಹ ಸಮಸ್ಯೆಗಳನ್ನು ನಮ್ಮ ರೈತರು ಎದುರಿಸುತ್ತಿದ್ದಾರೆ. ಆ ದೃಷ್ಟಿಯಿಂದ ಆ ಭಾಗದ

unedited copy

ಕೆರೆಗಳಿಗೆ ನೀರನ್ನು ತುಂಬಿಸಿದರೆ ದನಕರುಗಳಿಗೆ ಕುಡಿಯುವುದಕ್ಕೆ ನೀರು ಸಿಗುವುದರ ಜೊತೆಗೆ ಕೊಳವೆಬಾವಿಗಳು ಪುನಶ್ಚೇತನಗೊಳ್ಳುತ್ತವೆ ಎಂಬ ಸದುದ್ದೇಶದಿಂದ Drought-prone area ತಾಲ್ಲೂಕುಗಳು, ರಾಮದುರ್ಗ, ರೋಣ, ನರಗುಂದ, ನವಲಗುಂದ, ಬೈಲಹೊಂಗಲ, ಸವದತ್ತಿ ಮುಂತಾದ ಕರೆಗಳಿಗೆ ನೀರು ತುಂಬಿಸುವುದಕ್ಕಾಗಿ 7 ಟಿಂ.ಎಂ.ಸಿ. ನೀರು ಈ ರೀತಿಯ ಎಲ್ಲ ಪರಿಸ್ಥಿತಿಗಳನ್ನು ಮಾನ್ಯ ಪ್ರಧಾನ ಮಂತ್ರಿಗಳಿಗೆ ಮತ್ತು ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವರಿಗೆ ಮನವರಿಕೆ ಮಾಡಿಕೊಟ್ಟು ನಾವು ವಿನಂತಿಸಿಕೊಂಡೆವು. ಆದರೆ ದುರ್ದೈವದಿಂದ ಆ ಕೆಲಸಗಳಾಗಿಲ್ಲ. ಆದ್ದರಿಂದ ಆ ಭಾಗದ ರೈತರ ಪರವಾಗಿ, ಆ ಭಾಗದ ಜನತೆಯ ಪರವಾಗಿ ನಾನು ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ಮನೆಯ ಯಜಮಾನ ಎಲ್ಲರನ್ನೂ ಕರೆದು, ಆ ಟ್ರಿಬ್ಯುನಲ್ ಡಿಸಿಷನ್ ಬರುವುದು ಸ್ವಲ್ಪ ತಡವಾಗುತ್ತಿವೆ, ಅಲ್ಲಿಯವರೆಗೆ ಜನರು ಸಾಯಬಾರದು, ತೊಂದರೆಗೆ ಒಳಗಾಗಬಾರದು, ಅದಕ್ಕಾಗಿ ಕುಡಿಯುವ ನೀರಿನ ಉದ್ದೇಶಕ್ಕಾಗಿಯಾದರೂ ಇಷ್ಟನ್ನು ಕೊಡಿ. ಮುಂದೆ ಟ್ರಿಬ್ಯುನಲ್ ಡಿಸಿಷನ್ ಏನಾಗುತ್ತದೆ, ನಾವು 40 ರಿಂದ 42 ಟಿ.ಎಂ.ಸಿ. ನೀರನ್ನು ಕೇಳುತ್ತಿದ್ದೇವೆ, ಕನಿಷ್ಟ 39.8 ಟಿ.ಎಂ.ಸಿ. ನೀರು ನಮಗೆ ನ್ಯಾಯವಾಗಿ ಸಿಗಬೇಕಾಗುತ್ತದೆ. ಈಗ ಏನು ಕೊಟ್ಟಿರುತ್ತೀರಿ ಅಷ್ಟನ್ನು ಕಡಿಮೆ ಮಾಡಿಕೊಡಿ. ಈ ಕಕ್ಷೆಯಲ್ಲಿ ಸುಮಾರು ಒಂದು ಕೋಟಿಗಿಂತಲೂ ಹೆಚ್ಚು ಜನರು ಬರುವುದರಿಂದ ಅವರಿಗೆ ನೀರು ಕೊಟ್ಟು, ಜೀವದಾನ ಮಾಡಿದ ಪುಣ್ಯ ನಿಮಗೆ ಬರುತ್ತದೆ.

**(The Hon'ble Chairman Sri D.H. Shankarmurthy occupied the Chair)**

ದಯಮಾಡಿ ನೀವು ಹೇಗೆ ಮಾಡುತ್ತೀರೋ ಗೊತ್ತಿಲ್ಲ, ಒಂದು ರಾಜ್ಯದ ಮುಖ್ಯಮಂತ್ರಿ ಮತ್ತೊಂದು ರಾಜ್ಯದ ಮುಖ್ಯಮಂತ್ರಿಗೆ ಪತ್ರ ಬರೆಯಬಹುದು, ಆದರೆ ಅವರವರು stick on ಆಗಿರುತ್ತಾರೆ ಎಂಬುದು ನಿಮಗೂ ಗೊತ್ತಿದೆ, ಆ ದೃಷ್ಟಿಯಿಂದ ನಾನು ಕಾಂಗ್ರೆಸ್, ಬಿಜೆಪಿ ಎಂದು ಪಕ್ಷಗಳನ್ನು ಮುಂದಿಟ್ಟುಕೊಂಡು ಮಾತನಾಡುತ್ತಿಲ್ಲ. ನೀವು ಕರೆದು ಮಾತನಾಡುವಂತೆ ತಿಳಿಸಬೇಕಾಗುತ್ತದೆ. ಇದು ಸಂವಿಧಾನಬದ್ಧವಾಗಿ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಅಧಿಕಾರ ಕೂಡ ಇದೆ. ನೋಡಿ, ಈ ರೀತಿ ಮಾಡೋಣ, ನೀವೆಲ್ಲಾ ಹೊಂದಿಕೊಂಡು ಹೋಗಿ ಎಂದು ಹೇಳಿದರೆ ನಾವು ನಿಮ್ಮನ್ನು ಪೂಜಿಸುತ್ತೇವೆ. ಅದರಿಂದ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಗಷ್ಟೇ ಕ್ರೆಡಿಟ್ ಬರುತ್ತದೆ ಎಂದು ತಿಳಿದುಕೊಳ್ಳಬೇಡಿ, ಕರ್ನಾಟಕದ ಜನತೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಎರಡೂ ಕೂಡಿ ಉಪಕಾರ ಮಾಡಿವೆ ಎಂಬ ಪುಣ್ಯ ಬರುತ್ತದೆ. ಕರ್ನಾಟಕ ರಾಜ್ಯ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರಕ್ಕೂ ಅದರ ಕ್ರೆಡಿಟ್ ಬರುತ್ತದೆ. ನಮ್ಮ

unedited copy

ಭಾಗದ ಜನ ಒಂದು ಕಪ್ ಜಹಾ ಕುಡಿದರೂ ಅದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುತ್ತಾರೆ, ನಾವು ಅವರ ಋಣ ತೀರಿಸುವುದು ಹೇಗೆ ಎಂದು ವಿಚಾರ ಮಾಡುತ್ತಾರೆ. ಅದರಲ್ಲಿಯೂ ಉತ್ತರ ಕರ್ನಾಟಕದ ರೈತರು, ರೈತ ಕೂಲಿಕಾರರು, ಹಳ್ಳಿಯ ಜನತೆ ನಂಬಿಕೆ ಮತ್ತು ವಿಶ್ವಾಸದ ಮೇಲೆ ಬದುಕುತ್ತಿದ್ದಾರೆ.

**ಸಭಾಪತಿಯವರು:–** ನೆನ್ನೆ ದಿವಸ ನಾವು ತೀರ್ಮಾನ ಮಾಡಿರುವಂತೆ ಮಾನ್ಯ ಮತ್ತಿಕಟ್ಟಿ ವೀರಣ್ಣನವರಿಗೆ ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಮಂಡಿಸಿ ಮಾತನಾಡಲು ಸುಮಾರು ಒಂದು ಗಂಟೆಗಳ ಕಾಲಾವಕಾಶವನ್ನು ಕೊಡಬೇಕು ಎಂದು ತೀರ್ಮಾನವಾಗಿತ್ತು. ಈಗಾಗಲೇ ತಾವು ಭಾಷಣ ಪ್ರಾರಂಭಿಸಿ 1 ಗಂಟೆ 7 ನಿಮಿಷವಾಗಿದೆ. ಆ ನಿರ್ಣಯವನ್ನು ತಾವು ಮೊದಲೇ ಮಂಡಿಸಬೇಕಾಗಿತ್ತು, ಆದ್ದರಿಂದ ಅದನ್ನು ತಾವು ಈಗ ಮಂಡಿಸಿ. ನಂತರ ಮುಂದಿನವರಿಗೆ ನಾನು ಮಾತನಾಡಲು ಅವಕಾಶ ಕೊಡುತ್ತೇನೆ. ಏಕೆಂದರೆ ನನ್ನಲ್ಲೀಗ ಹೆಚ್ಚಿನ ಸಮಯವಿಲ್ಲ, ಆದ್ದರಿಂದ ಮೊದಲು ಅದನ್ನು ಮಂಡಿಸಿಬಿಡಿ.

**ಡಾ:ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಅಷ್ಟು ಸಮಯ ನಾನೊಬ್ಬನೇ ಮಾತನಾಡಿಲ್ಲ, ಸಂಸದೀಯ ಪರಂಪರೆಯ ಪ್ರಕಾರ ಮಾನ್ಯ ವಿರೋಧ ಪಕ್ಷದ ನಾಯಕರು ಮಧ್ಯ ಪ್ರವೇಶ ಮಾಡಿ ಮಾತನಾಡಬಯಸಿದರೆ ನಾವು ಅವರಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ, ಬೇರೆ ಸದಸ್ಯರು ಅದರ ಬಗ್ಗೆ ಸ್ಪಷ್ಟೀಕರಣ ನೀಡಬಯಸುವುದಾದರೆ ಅವರಿಗೂ ಅವಕಾಶ ಕೊಡಬೇಕಾಗುತ್ತದೆ.

MR.CHAIRMAN: How long are you going to talk? Please tell me. ಮಧ್ಯಾಹ್ನ 2.00 ಗಂಟೆಯವರೆಗೂ ಮಾತನಾಡುತ್ತೀರಾ? Please tell me how long you want to talk. ಈಗ ತಮ್ಮ ಮಾತುಗಳನ್ನು ಮುಗಿಸಿ ಎಂದು ಹೇಳುತ್ತಿದ್ದೇನೆ, ದಯಮಾಡಿ ಮುಗಿಸಿ.

**ಡಾ:ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ನನಗೆ ಇನ್ನೂ ಅರ್ಧ ಗಂಟೆಯಷ್ಟು ಸಮಯ ಬೇಕೆಂದು ಕೇಳುತ್ತಿದ್ದೆ, ಆದರೆ ಸಮಯದ ಅಭಾವದಿಂದ ನನಗೆ ಇನ್ನು 20 ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೋರುತ್ತಿದ್ದೇನೆ.

**ಸಭಾಪತಿಯವರು:–** ಹೆಚ್ಚು ಸಮಯ ಕೇಳುವುದಾದರೆ ಈ ಅಧಿವೇಶನವನ್ನು 6ನೇ ತಾರೀಖು, 7ನೇ ತಾರೀಖಿನವರೆಗೆ ನಡೆಸುವುದಕ್ಕಾಗುತ್ತದೆಯೆ? ನನ್ನ ಹತ್ತಿರ ಸಮಯ ಕಡಿಮೆ ಇದೆ, ಹಾಗಾಗಿ ಯಾರಿಗೂ ಹೆಚ್ಚು ಸಮಯವನ್ನು ಕೊಡುವುದಕ್ಕೆ ಬರುವುದಿಲ್ಲ. ದಯವಿಟ್ಟು ವಂದನಾ ನಿರ್ಣಯವನ್ನು ಮಂಡಿಸಿ

unedited copy

ಎಂದರೆ ನೀವು ಮಂಡಿಸುವುದಕ್ಕೆ ತಯಾರಿಲ್ಲ. ನಿಮಗೆ ಇನ್ನೂ ಎಷ್ಟು ಹೊತ್ತಿನವರೆಗೆ ನಾನು ಮಾತನಾಡುವುದಕ್ಕೆ ಬಿಡಲಿ?

**ಡಾ:ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ನಾನು ಈ ವಿಚಾರವನ್ನು ಹೇಳಿದ ನಂತರ ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಮಂಡಿಸಿ, ನಾನು ನನ್ನ ಕೃತಜ್ಞತೆಗಳನ್ನು ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸುತ್ತಿದ್ದೇನೆ. ಅದಕ್ಕೋಸ್ಕರ ನನಗೆ ಇನ್ನೂ 20 ನಿಮಿಷಗಳನ್ನು ಕೊಡಿ, ನಾನು ಮುಗಿಸಿಬಿಡುತ್ತೇನೆ.

**ಸಭಾಪತಿಯವರು:-** ಸದನ ಒಪ್ಪುವುದಾದರೆ ನೀವು ಮಾತನಾಡುವುದಕ್ಕೆ ಇನ್ನೂ 2 ಗಂಟೆಗಳನ್ನು ತೆಗೆದುಕೊಳ್ಳಿ, ನನ್ನದೇನೂ ಅಭ್ಯಂತರವಿಲ್ಲ. 1 ಗಂಟೆ ಕಾಲಾವಕಾಶ ಬೇಕೆಂದು ನೀವೇ ಒಪ್ಪಿದ್ದು. ನಾನು 40 ನಿಮಿಷ ಎಂದೆ, ನೀವು 1 ಗಂಟೆ ಎಂದಿರಿ, ಈಗ 1 ಗಂಟೆ 10 ನಿಮಿಷ ಆಯಿತು. ನೀವು ಇನ್ನೂ ಮಾತನಾಡುತ್ತೇನೆ ಎನ್ನುವುದಾದರೆ ಬೇರೆಯವರಿಗೆ ಅವಕಾಶ ಇರುವುದಿಲ್ಲ ಅಷ್ಟೆ. ಬೇರೆಯವರಿಗೆ ಅವಕಾಶವನ್ನು ಮೊಟಕುಗೊಳಿಸುತ್ತೇನೆ, I am asking you to finish your speech. Please conclude.

**ಡಾ:ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ನಾನೇನಾದರೂ ಜಗಳ ತರುವಂತಹ ಮಾತುಗಳನ್ನಾಗಲಿ ಅಥವಾ ಜನರ ಸಮಸ್ಯೆಗಳನ್ನು ಬಿಟ್ಟು ಬೇರೆ ಏನಾದರೂ ಮಾತನಾಡಿದಲ್ಲಿ ತಾವು ಆ ರೀತಿ ಹೇಳಬಹುದು. ನನ್ನ ಮಾತನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪುತ್ತಾರೆ ಎಂದು ನಾನು ಭಾವಿಸಿದ್ದೇನೆ.

(ಮುಂದುವರೆದಿದೆ ...

unedited copy

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** ಸದನ ಹೇಗೆ ನಡೆಸಬೇಕು ಎನು ಎಂಬುದನ್ನು ನಾನು ಸಹ ಬಹಳ ವರ್ಷಗಳಿಂದ ಈ ಸದನದಲ್ಲಿದ್ದು ಗಮನಿಸಿದ್ದೇನೆ. ಪಾರ್ಲಿಮೆಂಟ್ ಹೇಗೆ ನಡೆಯುತ್ತದೆ ಎಂಬುದನ್ನು ನೆನ್ನೆ-ಮೊನ್ನೆ ಕುಳಿತು ನೋಡಿದ್ದೇನೆ. ಪಾರ್ಲಿಮೆಂಟಿನಲ್ಲಿ ಬಹಳ ಪ್ರಮುಖರು ಎಂದರೆ ಸಚಿವರುಗಳು ಮಾತನಾಡುವಂತಹ ಸಮಯದಲ್ಲಿ ಮಾನ್ಯ ಸಭಾಧ್ಯಕ್ಷರು ನಿಮ್ಮ ಸಯಮ ಮುಗಿಯಿತು ಕುಳಿತುಕೊಳ್ಳಿ ಎಂದು ಹೇಳಿದರು. ಅದಕ್ಕೆ ಮಾನ್ಯ ಸಚಿವರು ನಾನು ಇನ್ನೂ ಕನ್‌ಕ್ಲೂಡ್ ಮಾಡಿಲ್ಲವೆಂದು ಹೇಳಿದರು. ಅದಕ್ಕೆ ಮಾನ್ಯ ಸಭಾಧ್ಯಕ್ಷರು ಪರವಾಗಿಲ್ಲ ಕುಳಿತುಕೊಳ್ಳಿ ಎಂದು ಹೇಳಿ ಅವರನ್ನು ಕೂರಿಸಿದ್ದನ್ನು ನಾನು ನಿನ್ನೆ ದಿವಸ ಪಾರ್ಲಿಮೆಂಟಿನಲ್ಲಿ ನೋಡಿದ್ದೇನೆ. ಅದಕ್ಕಾಗಿ ನಾನು ನಿಮಗೆ 40 ನಿಮಿಷ ಕಾಲಾವಕಾಶ ಕೊಡೋಣವೆಂದು ಇದ್ದೆ, ಆದರೆ ಒಂದು ಗಂಟೆ ಕಾಲಾವಕಾವನ್ನು ಕೊಟ್ಟೆ. ಆದರೆ ತಾವು 1 ಗಂಟೆ 10 ನಿಮಿಷ ಕಾಲಾವಕಾಶ ತೆಗೆದುಕೊಂಡಿದ್ದರೂ ಸಹ ಇನ್ನೂ ಮುಗಿಸಿಲ್ಲ. ಆದಕಾರಣ ಈಗ ಇನ್ನು 2 ನಿಮಿಷದಲ್ಲಿ ಮುಗಿಸಿ ಎಂದು ಕೇಳುತ್ತಿದ್ದೇನೆ. ನೀವು ಇಲ್ಲ, ನಾನು ಇನ್ನು ಅರ್ಧ, ಮುಕ್ಕಾಲು ಗಂಟೆ ಮಾತನಾಡುತ್ತೇನೆ ಎಂದು ಹೇಳಿದರೆ ಮುಂದುವರೆಸಿ. Go ahead. ಇಷ್ಟರ ಮೇಲೆ ನಿಮ್ಮ ಇಷ್ಟ. ನೀವು ಇನ್ನೂ ಮಂಡಿಸಿಲ್ಲ, ಮಂಡಿಸಿ ಎಂದು ಹೇಳುತ್ತಿದ್ದೇನೆ. ಇಷ್ಟರ ಮೇಲೆ ನಿಮಿಷ್ಟ. Go ahead.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ....

**ಸಭಾಪತಿಯವರು:–** ಆಯಿತು, ನಿಮ್ಮ ಇಷ್ಟ ಎಂದು ಹೇಳಿದೆನಲ್ಲ. Go ahead.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಧನ್ಯವಾದಗಳು ಸರ್. ತಮ್ಮ ವಿಶಾಲತೆಗೆ ಧನ್ಯವಾದಗಳು. ಮಾನ್ಯ ಈಶ್ವರಪ್ಪನವರೇ, ನಾವೆಲ್ಲರೂ ಸೇರಿ ಈ ವಿಚಾರವಾಗಿ ಮನಸ್ಸು ಮಾಡಿ ಆ ಭಾಗದ ರೈತರ ಸಮಸ್ಯೆಯನ್ನು ಪರಿಹರಿಸೋಣ. ನಾನು ಹಲವಾರು ವಿಚಾರಗಳನ್ನು ಹೇಳಬೇಕೆಂದಿದ್ದೆ. ಆದರೆ ಈಗಾಗಲೇ ಮಾನ್ಯ ಸಭಾಪತಿಯವರು ಹೇಳಿದ ಕಾರಣ ಹೇಳುವುದಕ್ಕೆ ಕಾಲಾವಕಾಶವಿಲ್ಲ.

ಕೊನೆಯದಾಗಿ, ಹೇಳುವುದೇನೆಂದರೆ, ಮಾನ್ಯ ಸಭಾಪತಿಯವರೇ, ನಮ್ಮ ನಾಡಗೀತೆ ಅತ್ಯಂತ ಪ್ರಗತಿಪರ, ಜನಸಾಮಾನ್ಯರ, ಹೊಸ ವಿಚಾರಧಾರೆಯ, 12ನೇ ಶತಮಾನದ ಬಸವಾದಿ ಶರಣರ ಸಾಮಾಜಿಕ ಕ್ರಾಂತಿಯ ನಂತರ ಅದಕ್ಕೆ ಹೆಚ್ಚು ಒತ್ತು ಕೊಟ್ಟಂತಹ ಕವಿಗಳಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದಂತಹ ಕುವೆಂಪು

unedited copy

ರವರು ಶ್ರೇಷ್ಠರು. ತಮಗೆಲ್ಲರಿಗೂ ತಿಳಿದಿರುವಂತೆ ಅವರು ನಮ್ಮ "ನಾಡಗೀತೆ"ಯನ್ನು ಹೇಳಿದ್ದಾರೆ. ಅದನ್ನು ನಮ್ಮ ಕರ್ನಾಟಕ ಸರ್ಕಾರ ಹಾಗೂ ನಾವೆಲ್ಲರೂ ಅಭಿಮಾನದಿಂದ ಒಪ್ಪಿದ್ದೇವೆ. ಯಾವ ರೀತಿ ನಮ್ಮ ರಾಷ್ಟ್ರಗೀತೆಯಾದ "ಜನಗಣಮನಕ್ಕೆ" ನಾವು ಗೌರವ ಕೊಡುತ್ತೇವೆ, ಅದೇ ರೀತಿ ನಮ್ಮ ಕರ್ನಾಟಕದಲ್ಲಿ ಅಷ್ಟೇ ಗೌರವವನ್ನು "ನಾಡಗೀತೆ"ಗೆ ಕೊಡುತ್ತಿದ್ದೇವೆ. ಅಲ್ಲಿ ಏನು ಹೇಳಿದ್ದಾರೆ, "ಜಯ ಭಾರತ ಮಾತೆಯ ತನುಜಾತೆ, ಜಯಯೇ ಕರ್ನಾಟಕ ಮಾತೆ" ಎಂದು ಹೇಳಿದ್ದಾರೆ. ಅದರಲ್ಲಿ ನಮ್ಮ ಎಲ್ಲಾ ಶರಣರ, ಸಂತರ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರ ಎಲ್ಲವನ್ನೂ ನೆನಪು ಮಾಡಿಕೊಟ್ಟಿದ್ದಾರೆ. ಅದರ ಜೊತೆಗೆ ನಮ್ಮ ಕರ್ನಾಟಕಕ್ಕೆ ಅತ್ಯಂತ ಶ್ರೇಷ್ಠವಾದ ಇತಿಹಾಸ ಚರಿತ್ರೆ ಇದೆ. ಅಂದು ರಾಷ್ಟ್ರ ಕೂಟರು ಇಡೀ ದಕ್ಷಿಣ ಭಾರತವನ್ನೇ ಜನಪರ ಚಿಂತನೆಯೊಂದಿಗೆ ಆಳ್ವಿಕೆ ಮಾಡಿದವರು. ಆವತ್ತು ಕಲ್ಯಾಣದ ಚಾಲುಕ್ಯರು, ಅದರಲ್ಲಿಯೂ ಬಾದಾಮಿಯ ಚಾಲುಕ್ಯರು, ವೀರ ಪುಲಕೇಶಿಯಿಂದ ಹಿಡಿದು ಈ ನಾಡಿಗೆ ಮಹತ್ತರವಾದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಅಂದಿನ ಪಂಪ, ರನ್ನ, ರಾಘವಾಂಕ ಇವರುಗಳೆಲ್ಲರೂ ಒಂದು ಹೊಸ ಇತಿಹಾಸವನ್ನೇ ಸೃಷ್ಟಿ ಮಾಡಿದರು. ರಾಜ ಮಹಾರಾಜರುಗಳನ್ನು ಹೊಗಳದೆ, ಜನರ ಸಮಸ್ಯೆಗಳಿಗೆ ಸ್ಪಂದಿಸಿ, , ಕಾಯಕಕ್ಕೆ ಗೌರವ ಕೊಟ್ಟು "ಕಾಯಕವೇ ಕೈಲಾಸ" ಎಂದು ಹೇಳಿದರು. ಹುಟ್ಟಿನ ಆಧಾರದ ಮೇಲೆ ಮೇಲು, ಕೀಳು ಎಂಬ ಭಾವನೆ ಏನಿತ್ತು, ಅದನ್ನು ತೊಡೆದು ಹಾಕಿ ಸಮಾನತೆಯನ್ನು ಸಾರಿದರು.

ಮಾನ್ಯ ಸಭಾಪತಿಯವರೇ, ಹೆಣ್ಣು ಮಕ್ಕಳಿಗೆ ನಾವು ಅತ್ಯಂತ ಕೆಳ ಹಂತದಲ್ಲಿ ನೋಡುವಾಗ ಸಮಾನತೆಯನ್ನು ಮೊಟ್ಟಮೊದಲು ವಿಶ್ವದ ಇತಿಹಾಸದಲ್ಲಿ ಸಾರಿದವರು 12ನೇ ಶತಮಾನದ ಶರಣ ಶರಣೆಯರು. ಇದೆಲ್ಲವನ್ನು ನೆನಪು ಮಾಡಿಕೊಂಡು ನಮ್ಮ ನಾಡಗೀತೆಯ ಕೊನೆಯ ಸಾಲುಗಳನ್ನು ಹೇಳುತ್ತೇನೆ. ಕರ್ನಾಟಕ ಉತ್ತಮವಾದ ನಾಡು, ಕರ್ನಾಟಕ ರಾಷ್ಟ್ರದ ಇತಿಹಾಸದಲ್ಲಿ ಕರ್ನಾಟಕದ ಜನ ನಾಯಕರುಗಳಿಗೂ ಸಹ ಬಹಳ ಗೌರವವಿದೆ ಮಾನ್ಯ ಈಶ್ವರಪ್ಪನವರೆ, ಆ ಕೊಡುಗೆಯನ್ನು ನಾವು ಕೊಟ್ಟಿದ್ದೇವೆ. ಮುಂಚೂಣಿಯ ರಾಜ್ಯವಾಗಿ ಅಭಿವೃದ್ಧಿಪರ ರಾಜ್ಯವಾಗಿ ಸರ್ವ ಜನಾಂಗದ ಏಳಿಗೆಯನ್ನು ಬಯಸುವಂತಹ ರಾಜ್ಯವಾಗಿ ಕರ್ನಾಟಕ ತನ್ನದೇ ಆದ ಕೊಡುಗೆಯನ್ನು ಕೊಟ್ಟಿದೆ. ಅಷ್ಟೇ ಅಲ್ಲದೆ, ಕೋಮು ಸೌಹಾರ್ದತೆ, ಸಾಮಾಜಿಕ ನ್ಯಾಯಕ್ಕೆ, ಇಡೀ ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡಿದೆ. ನಮ್ಮ ಒಡೆಯರ್ ಅವರು ಇರಬಹುದು, ಅಥವಾ ಯಾರೇ ಇರಬಹುದು ಎಲ್ಲರೂ ಆ ರೀತಿ ಕೆಲಸ ಮಾಡಿದ್ದಾರೆ. ಕೊನೆಯದಾಗಿ, ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ, ಹಿಂದು ಕ್ರೈಸ್ತ ಮುಸಲ್ಮಾನ, ಪಾರಸಿಕ ಜೈನರ ಉಧ್ಯಾನ. Irrespective of community, basically all

unedited copy

of us are humanbeings. We must live together. ನಾವೆಲ್ಲರೂ ಒಂದಾಗಿ ಅಭಿವೃದ್ಧಿ ಹೊಂದೋಣ, ಸಹಭ್ರಾತೃತ್ವದಲ್ಲಿ ಬೆಳೆಯೋಣ ಆಗ ಮಾತ್ರ ನಾವು ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಆ ದಿವಸ ಹೇಳಿದರು. ಇಡೀ ರಾಷ್ಟ್ರದ ಇತಿಹಾಸದಲ್ಲಿ ಜನಕ ಪ್ರಜಾಪರವಾದಂತಹ ದೊರೆ. ಆ ಜನಕನ ಹೋಲುವ ರಾಯರು ಆಳಿದ ನಾಡು. ಅಂಥವರನ್ನು ನಾವು ನೆನಪು ಮಾಡಿಕೊಳ್ಳುತ್ತಿದ್ದೇವೆ. ಆ ದೃಷ್ಟಿಯಿಂದ ಇದು ನಮಗೆ ಆದರ್ಶ ಎಂಬ ಮಾತನ್ನು ಹೇಳಿ, ನನಗೆ ಇನ್ನೂ ಹತ್ತು ನಿಮಿಷ ಕಾಲಾವಕಾಶವನ್ನು ಕೊಟ್ಟಿದ್ದೀರಿ, ಆದರೂ ಸಹ ನಿಮ್ಮ ಭಾವನೆಗೆ ಸ್ಪಂದಿಸಿ ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಏನೆಂದರೆ, ಸಮಸ್ಯೆಗಳು ಬಂದಾಗ ವ್ಯಕ್ತಿಗತ ಸಮಸ್ಯೆಗಳಿಗಿಂತ ಹೆಚ್ಚು ನಾವು ಅದನ್ನು ಪರಿಹರಿಸುವುದಕ್ಕೆ ಪ್ರಯತ್ನ ಪಡಬೇಕು. ಆ ರೀತಿಯ ಪ್ರಯತ್ನ ನಿನ್ನೆ ದಿವಸ ನಿಮ್ಮ ಘನ ಅಧ್ಯಕ್ಷತೆಯಲ್ಲಿ ನಡೆದಂತಹ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ತಾವು ತೆಗೆದುಕೊಂಡಂತಹ ನಿರ್ಧಾರಗಳು ನಮಗೆಲ್ಲರಿಗೂ ಹೆಚ್ಚು ಮಾನ್ಯತೆಯನ್ನು ಗೌರವವನ್ನು ತಂದು ಕೊಟ್ಟಿದೆ. ಅಲ್ಲಿ ನಾವು ಏನು ಮಾತನಾಡಿದ್ದೇವೆ, ಸಮಸ್ಯೆಯ ಬಗ್ಗೆ ಚಿಂತನೆ ಆಗಬೇಕು, ಚರ್ಚೆ ಆಗಬೇಕು. ಕರ್ನಾಟಕದ ಜನತೆ ಸಮಸ್ಯೆಗಳನ್ನು ಪರಿಹರಿಸುವಂತಹ ಕೆಲಸ ಆಗಬೇಕು. ಅದರ ಜೊತೆಗೆ ನಾವು ಕೆಲವು ವಿಚಾರದಲ್ಲಿ ಲಕ್ಷ್ಮಣ ರೇಖೆಯನ್ನು ದಾಟಬಾರದು. ಎಲ್ಲಾ ಪಕ್ಷದವರು ಒಂದಾಗಿ ಕೆಲಸ ಮಾಡೋಣ ಎಂಬ ಮಾತನ್ನು ತಾವು ಹೇಳಿದಿರಿ. ಆ ಮಾತಿನ ಮಾರ್ಗದರ್ಶನದ ಮೇರೆಗೆ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ನಮ್ಮನ್ನು ಒಳಗೊಂಡಂತೆ ಮಾನ್ಯ ಸಭಾನಾಯಕರು, ಮಾನ್ಯ ಮುಖ್ಯ ಸಚೇತಕರು ಹಾಗೂ ಇನ್ನುಳಿದ ಎಲ್ಲಾ ಹಿರಿಯ ಸದಸ್ಯರು ಕೂಡಿ ತಾವು ಹೇಳಿದಂತಹ ಮಾತನ್ನು ಪಾಲಿಸಿದೆವು. ಇವತ್ತು ಮಾನ್ಯ ವೆಂಕಟೇಶ್‌ರವರು ಹೇಳಿದರು. ಏನೆಂದರೆ, ನಾನು ಐದು ನಿಮಿಷದ ಹಿಂದೆ ಹೊರಗಡೆ ಹೋಗಿದ್ದೆ, ಆಗ ಎಲ್ಲಾ ಜನರು ನಿಮ್ಮ ವಿಧಾನ ಪರಿಷತ್ತು ಬಹಳ ಅಗಾಧವಾದುದು, ರಾಜ್ಯಕ್ಕೆ ಆದರ್ಶವಾದಂತಹದ್ದು ಎಂದು ಇವತ್ತು ಹೇಳುತ್ತಿದ್ದಾರೆ ಎಂದು ಹೇಳಿದರು. ಆದಕಾರಣ ಮಾನ್ಯ ಈಶ್ವರಪ್ಪನವರೇ, ವಿಚಾರ, ಸಮಸ್ಯೆ, ಸಂಘರ್ಷಗಳಿರುತ್ತವೆ. ಅದನ್ನು ತಾರ್ಕಿಕ ಹಂತಕ್ಕೆ ಹೋಗಿ ಒಬ್ಬೊರಿಗೊಬ್ಬರು ನೋಡಿಕೊಳ್ಳುವುದು ಬೇಡ. ನಮ್ಮ ನಿಮ್ಮ ಉದ್ದೇಶ ಏನೇ ಆದರೂ ಸರ್ಕಾರದ ಗಮನ ಸೆಳೆದು ಜನರ ಸಮಸ್ಯೆಗಳಿಗೆ ಸ್ಪಂದಿಸಿ ನಾವೆಲ್ಲರೂ ಸೇರಿ ಕೆಲಸ ಮಾಡೋಣ. ಆ ದೃಷ್ಟಿಯಿಂದ ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ ನಾವು ಈ ರಾಜ್ಯದ ಅಭಿವೃದ್ಧಿಗೆ ಕರ್ನಾಟಕವನ್ನು ಸುವರ್ಣ ಕರ್ನಾಟಕ ಮಾಡುವುದಕ್ಕೆ ಯಾವ ಭಾಗಗಳು ಅಭಿವೃದ್ಧಿಯಿಂದ ವಂಚಿತವಾಗಿದೆಯೋ, ಹಿಂದುಳಿದಿದೆಯೋ ಅವುಗಳನ್ನು ನಮ್ಮ ಜೊತೆ ಕರೆದುಕೊಂಡು ಹೋಗೋಣ. ಒಂದು ಮನೆಯಲ್ಲಿ ಯಾವುದಾದರು ಒಂದು ಮಗು ಅಶಕ್ತಿಯಿಂದ ನರಳುತ್ತಿದ್ದರೆ, ಜ್ವರ

ಬಂದಿದ್ದರೆ ತಾಯಿ ಆ ಮಗುವಿಗೆ ಹಾಲು, ಹಣ್ಣು ಕೊಡುತ್ತಾಳೆ. ಉಳಿದ ಮಕ್ಕಳಿಗಿಂತ ಇಂತಹ ಮಗುವಿನ ಬಗ್ಗೆ ಹೆಚ್ಚು ಕಾಳಜಿಯನ್ನು ತೋರಿಸುತ್ತಾಳೆ. ಏಕೆಂದರೆ ಆ ಮಗು ಸಹ ಸಶಕ್ತವಾಗಲಿ, ಉಳಿದ ಮಕ್ಕಳಂತೆ ಆಗಲಿ ಎಂದು ಹಾರೈಕೆ ಮಾಡುತ್ತಾಳೆ. ಆ ದೃಷ್ಟಿಕೋನದಂತೆ ಸರ್ಕಾರ ತಾಯಿ ಇದ್ದಂತೆ. ಅಸಹಿಷ್ಣುತೆ ಹಾಗು ಅಪೌಷ್ಠಿಕತೆ ಈ ಎರಡರ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಕೆಲಸ ಮಾಡಬೇಕಾಗುತ್ತದೆ. ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕೇಂದ್ರದಲ್ಲಿ ....

**ಸಭಾಪತಿಯವರು:–** ತಾವು ಈ ನಿರ್ಣಯವನ್ನು ಮಂಡಿಸಲೇ ಇಲ್ಲ. ಓದಲೇ ಇಲ್ಲ. ಇದನ್ನು ನಾನು ಗಮನಿಸುತ್ತಲೇ ಇದ್ದೇನೆ. ನಾನು ಮೊದಲಿನಿಂದಲೂ ನೋಡುತ್ತಿದ್ದೇನೆ. ತಾವು ಈ ನಿರ್ಣಯವನ್ನು ಮಂಡಿಸುತ್ತಿದ್ದೇನೆಂದು ಹೇಳಬೇಕು. ದಯಮಾಡಿ ಓದಿ.

unedited copy

**ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ.**

**ಡಾ: ಮತ್ತಿಕಟ್ಟಿ ವೀರಣ್ಣ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ಪ್ರಸ್ತಾವನೆಯನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"2016ನೇ ಫೆಬ್ರವರಿ 29ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಬೆಂಬಲಿಸಬೇಕೆಂದು ತಮ್ಮ ಮೂಲಕ ಕೋರುತ್ತೇನೆ"

**ಶ್ರೀ ಐವನ್ ಡಿಸೋಜ(ನಾಮ ನಿರ್ದೇಶಿತರು):–**ಮಾನ್ಯ ಸಭಾಪತಿಯವರೇ,

"2016ನೇ ಫೆಬ್ರವರಿ 29ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನಾ ನಿರ್ಣಯದ ಪ್ರಸ್ತಾವನೆಯನ್ನು ಅನುಮೋದಿಸುತ್ತೇವೆ.

**ಪ್ರಸ್ತಾವನೆಯನ್ನು ಮಂಡಿಸಲಾಯಿತು**

(ಮುಂದು)

unedited copy

**ಸಭಾಪತಿಯವರು**:- ಐವಾನ್ ಡಿ'ಸೋಜಾರವರಿಗೆ ಅವರ ಪಕ್ಷದವರು ವಿಷಯವನ್ನು ತಿಳಿಸಿರಬೇಕು. ತಾವು ಇದನ್ನು ಅನುಮೋದಿಸಿ ಮಾತನಾಡಬೇಕು. ತಮಗೆ 20 ನಿಮಿಷಗಳ ಸಮಯವನ್ನು ನಿಗದಿ ಮಾಡಿದ್ದೇವೆ. ಅಷ್ಟರಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು)**:-ಮಾನ್ಯ ಸಭಾಪತಿಗಳೆ, 2016 ಫೆಬ್ರವರಿ 29ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞಾಪೂರ್ವಕವಾದ ವಂದನಾ ನಿರ್ಣಯವನ್ನು ಅನುಮೋದಿಸುವುದಕ್ಕಾಗಿ ತಮ್ಮ ಅನುಮತಿಯೊಂದಿಗೆ ಈ ಸಭೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ಕರ್ನಾಟಕ ರಾಜ್ಯದ ಸಂಸದೀಯ ವ್ಯವಸ್ಥೆಯಲ್ಲಿ ಅತ್ಯಂತ ಹೆಚ್ಚು ಘನತೆ ಮತ್ತು ಗೌರವವುಳ್ಳಂತಹ ಪ್ರಜಾಪ್ರಭುತ್ವ ವ್ಯವಸ್ಥೆಯ ಈ ಜಂಟಿ ಅಧಿವೇಶನದ ಈ ಭಾಷಣದ ಮೇಲೆ ಈ ಸದನದ ಅತ್ಯಂತ ಹಿರಿಯ ಸದಸ್ಯರಾದ ಮಾನ್ಯ ವೀರಣ್ಣ ಮತ್ತೀಕಟ್ಟಿಯವರು ಭಾಷಣ ಮಾಡಿದ ಮೇಲೆ ಅವರ ಭಾಷಣವನ್ನು ಅನುಮೋದಿಸುವದಕ್ಕಾಗಿ ನಮ್ಮ ಪಕ್ಷದ ನಾಯಕರ ಜೊತೆಗೆ ತಮ್ಮ ಅನುಮತಿಯೊಂದಿಗೆ ಈ ನಿರ್ಣಯವನ್ನು ಅನುಮೋದಿಸಲು ವಯಸ್ಸಿನಲ್ಲಿ ಹಿರಿಯನಾದರೂ ಸದನದಲ್ಲಿ ಅತ್ಯಂತ ಕಿರಿಯ ಸದಸ್ಯರ ಸಾಲಿನಲ್ಲಿ ಇರುವ ನನಗೆ ಈ ಅವಕಾಶವನ್ನು ಕೊಟ್ಟಿರುವ ತಮಗೆ ಮತ್ತು ಸದನದ ಎಲ್ಲ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ರಾಜ್ಯಪಾಲರ ಭಾಷಣ ಸುಮಾರು 31 ಪುಟಗಳಿಂದ ಕೂಡಿದೆ. ಅವರು ಮಾಡಿರುವ ಭಾಷಣದ ಪ್ರತಿಯೊಂದು ಅಂಶಗಳು ರಾಜ್ಯ ಸರ್ಕಾರದ ಸಾಧನೆಗಳು ಮತ್ತು ಮುಂದಕ್ಕೆ ಸರ್ಕಾರ ಏನು ಮಾಡುತ್ತದೆ ಎನ್ನುವ ಬಹಳ ಸ್ಪಷ್ಟವಾದ ಚಿಂತನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಭಾಷಣ ಕೇವಲ 31 ಪುಟಗಳದಲ್ಲ, ಸುಮಾರು 100 ಪುಟಗಳಲ್ಲಿ ಬರೆಯವಷ್ಟು ಸಾಧನೆಗಳನ್ನು ನಮ್ಮ ಸರ್ಕಾರ ಕಳೆದ 2 ವರ್ಷ 10ತಿಂಗಳಲ್ಲಿ ಮಾಡಿ ತೋರಿಸಿದೆ. ಈ ಸರ್ಕಾರ 2013ರಂದು ಅಧಿಕಾರಕ್ಕೆ ಬರುವಂತಹ ಸಂದರ್ಭದಲ್ಲಿ, ಚುನಾವಣೆ ಎಂದರೆ, ರಾಜಕೀಯ ಪಕ್ಷಗಳಿಗೆ ಯುದ್ಧ ಇದ್ದಹಾಗೆ. ಈ ಯುದ್ಧಕ್ಕೆ ಹೋಗುವಂತಹ ಸಂದರ್ಭದಲ್ಲಿ ಯಾವ ರೀತಿಯ ಯುದ್ಧವನ್ನು ಈ ರಾಜ್ಯದಲ್ಲಿ ಮಾಡುತ್ತೇವೆ ಎನ್ನುವುದರ ಬಗ್ಗೆ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳುತ್ತೇವೆ. ಚುನಾವಣೆ ಮುಗಿಸಿ ಅಧಿಕಾರಕ್ಕೆ ಬಂದಿರುವ ಸರ್ಕಾರದ ಮೊದಲು ಕರ್ತವ್ಯ ಎಂದರೆ, ಚುನಾವಣೆಗೆ ಬರುವಂತಹ ಸಮಯದಲ್ಲಿ ಜನರಿಗೆ ಏನು ಆಶ್ವಾಸನೆಗಳನ್ನು

unedited copy

ಕೊಟ್ಟಿದೆ, ಅವುಗಳನ್ನು ಇಡೇರಿಸುವುದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ, ಸಂಸದೀಯ ವ್ಯವಸ್ಥೆಯಲ್ಲಿ ಆ ಪಕ್ಷದ ಗುರಿಯಾಗಿರುತ್ತದೆ. ಮಾನ್ಯ ಸಿದ್ದರಾಮಯ್ಯನವರು 2013ರಲ್ಲಿ ಅಧಿಕಾರವನ್ನು ಸ್ವೀಕಾರ ಮಾಡಿದ ತಕ್ಷಣ ಮೊದಲು ಮಾಡಿರುವ ಕೆಲಸ ಎಂದರೆ, ಈ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಆಶ್ವಾಸನೆಗಳನ್ನು ಇಡೇರಿಸಲು ಅಧಿಕಾರ ತೆಗೆದುಕೊಂಡ ಒಂದು ಗಂಟೆಯಲ್ಲಿ ಕ್ಯಾಬಿನೆಟ್ ಸಭೆಯನ್ನು ನಡೆಸಿ, ಆಶ್ವಾಸನೆಗಳಲ್ಲಿ ಹೇಳಿರುವಂತಹ ವಿಷಯಗಳ ಬಗ್ಗೆ ಯೋಜನೆಗಳನ್ನು ರೂಪಿಸಿ, ತೊಂದರೆಯಲ್ಲಿ ಇರುವ ಜನರಿಗೆ ಸಹಕಾರವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರನ್ನು 'ಅನ್ನದಾತ ಮುಖ್ಯಮಂತ್ರಿ' ಎಂದೇ ಕರೆಯುತ್ತಾರೆ. ಅನ್ನವನ್ನು ಕೊಟ್ಟಿರುವ ಸರ್ಕಾರ ನಮ್ಮದು. ಹಸಿವಿನಿಂದ ಯಾರು ಇರಬಾರದು, ಹಸಿವು ಮುಕ್ತವಾದ ರಾಜ್ಯ ನಮ್ಮದಾಗಬೇಕು ಎನ್ನುವ ಸಂಕಲ್ಪವನ್ನು ತೊಟ್ಟಿರುವಂತಹ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಈ ಸರ್ಕಾರ ಅಹಿಂದ ಸರ್ಕಾರ, ಅಹಿಂದದವರ ಏಳಿಗಾಗಿ ಮಾತ್ರ ದುಡಿಯುತ್ತಿರುವಂತಹ ಸರ್ಕಾರ ಎಂದು ಕೆಲವರು ಟೀಕೆ ಮಾಡಿದರು. ಆದರೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಅಹಿಂದ ವರ್ಗದ ಜನರಿಗೆ ಮಾತ್ರವಲ್ಲ ಈ ರಾಜ್ಯದ ಆರು ಕೋಟಿ 38 ಲಕ್ಷ ಜನರಿಗೆ ನೆಮ್ಮದಿಯ ಮತ್ತು ಸ್ವಾಭಿಮಾನದಿಂದ ಬಾಳುವಂತಹ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಪುಷ್ಟಿಯಾಗಿ ಸರ್ವರಿಗೆ ಸಮಬಾಳು-ಸರ್ವರಿಗೆ ಸಮಪಾಲು ಎಂದು ಅಬ್ದುಲ ನಜೀರ ಸಾಹೇಬರು ಅಂದು ಹೇಳಿದ್ದರು. ಅದನ್ನು ಈಗ ಜಾರಿಗೆ ತಂದಿರುವಂತಹ ಮಾನ್ಯ ಸಿದ್ದರಾಮಯ್ಯನವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯ ಸರ್ಕಾರ ನಡೆದುಕೊಂಡಿರುವ ರೀತಿ ಮತ್ತು ಯಾವ ರೀತಿ ನಡೆದುಕೊಂಡು ಹೋಗುತ್ತಿದೆ, ಸರ್ಕಾರದ ಹೆಜ್ಜೆಗಳೇನು, ಸರ್ಕಾರ ಜನಮನಣೆಯನ್ನು ಗಳಿಸಿದೆಯಾ, ರಾಜ್ಯದಲ್ಲಿ ಗ್ರಾಮೀಣ ಭಾಗದಲ್ಲಿರುವ ಕಟ್ಟಕಡೆಯ ಜನರಿಗೆ ಮುಟ್ಟಿದೆಯೇ ಇಲ್ಲವೆ ಎನ್ನುವುದನ್ನು ಪರೀಕ್ಷೆ ಮಾಡಲು ಒಂದು ಮೌಲ್ಯ ಮಾಪನ ಇದೆ. ಕಾಲೇಜಿನಲ್ಲಿ ಒಂದು ವರ್ಷ ಓದಿರುವುದನ್ನು ಮೂರು ಗಂಟೆಗಳಲ್ಲಿ ಮೌಲ್ಯ ಮಾಪನ ಮಾಡಲು ಪರೀಕ್ಷೆಯನ್ನು ಬರೆಯುತ್ತೇವೆ. ಅದರಲ್ಲಿ ಪಾಸ್ ಆಗುತ್ತೇವೆ, ಫೇಲ್ ಆಗುತ್ತೇವೆ, ಪ್ರಥಮ ದರ್ಜೆಯಲ್ಲಿ ಬರುತ್ತವೆಯೇ ಎನ್ನುವ ಫಲಿತಾಂಶವನ್ನು ಕೊಡುವ ಪದ್ಧತಿ ಮೊದಲಿನಿಂದಲು ನಡೆದುಕೊಂಡು ಬಂದಿದೆ. ರಾಜ್ಯದಲ್ಲಿ ರಾಜಕೀಯ ಪಕ್ಷಗಳಿಗೆ ಮೌಲ್ಯ ಮಾಪನ ಎಂದರೆ ಚುನಾವಣೆಗಳು. ಇವತ್ತು ರಾಜ್ಯದ ದೇಶದ ಚುನಾವಣೆಗಳ ಬಗ್ಗೆ ಅವಲೋಕನ ಮಾಡಿದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಯಾವ ರೀತಿ ಆಡಳಿತವನ್ನು ಕೊಡುತ್ತಿದೆ ಎನ್ನುವುದಕ್ಕೆ ಮೊನ್ನೆ

unedited copy

ನಡೆದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳು ಸರ್ಕಾರಕ್ಕೆ ಸರ್ಟಿಫಿಕೇಟ್ ಕೊಟ್ಟಿವೆ. ಆ ಸರ್ಟಿಫಿಕೇಟನ್ನು ನಾನು ಓದಿ ಹೇಳಬೇಕಾಗಿಲ್ಲ. ಅದನ್ನು ರಾಜ್ಯದ ಜನತೆ ಗಮನಿಸಿದ್ದಾರೆ. ನಗರ ಭಾಗದ ಜನತೆ ಭಾಗಿಗಳಾಗದಿದ್ದರು ಕೂಡಾ ಗ್ರಾಮೀಣ ಭಾಗದ ಜನತೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರದ, ಕಾಂಗ್ರೆಸ್ ಸರ್ಕಾರದ ಚಿಂತನೆಗಳು ಏನು, ಹೇಗೆ ಅನುಷ್ಠಾನಕ್ಕೆ ಬಂದಿವೆ ಎನ್ನುವುದರ ಬಗ್ಗೆ ಇವತ್ತು ಒಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಈ ಚುನಾವಣೆಯ ಫಲಿತಾಂಶದ ಬಗ್ಗೆ ಈಗಾಗಲೇ ಮಾನ್ಯ ವೀರಣ್ಣ ಮತ್ತೀಕಟ್ಟಿಯವರು ಹೇಳಿದ್ದಾರೆ. ಆದರೂ ಕೂಡಾ ನಾನು ಮತ್ತೆ ಸದನದ ಗಮನಕ್ಕೆ ತರಲು ಬಯಸುತ್ತೇನೆ. ಜಿಲ್ಲಾ ಪಂಚಾಯತ್‌ದ ಸುಮಾರು 1083 ಸ್ಥಾನಗಳಲ್ಲಿ 498 ಸ್ಥಾನಗಳನ್ನು ಕಾಂಗ್ರೆಸ್ ಪಕ್ಷ ಗೆದ್ದುಕೊಂಡಿದೆ. ಬಿಜೆಪಿ ಯವರು ಸುಮಾರು 408 ಸ್ಥಾನಗಳನ್ನು ಗೆದ್ದಿದ್ದಾರೆ. ಅಂದರೆ ಸುಮಾರು 90 ಸ್ಥಾನಗಳನ್ನು ಕಾಂಗ್ರೆಸ್ ಸರ್ಕಾರ ಹೆಚ್ಚುವರಿಯಾಗಿ ಗೆದ್ದುಕೊಂಡಿದೆ. ಚುನಾವಣೆಯ ಒಟ್ಟಾರೆ ಮತಗಳನ್ನು ಗಣನೆಗೆ ತೆಗೆದುಕೊಂಡರೆ ಸುಮಾರು 13% ಹೆಚ್ಚಾಗಿ ಬಿಜೆಪಿ ಗಿಂತ ಕಾಂಗ್ರೆಸ್ ಸರ್ಕಾರ ಹೆಚ್ಚುವರಿಯಾಗಿ ಮತಗಳನ್ನು ಪಡೆದುಕೊಂಡಿದೆ.

ಸದಸ್ಯರು:- ಉಪ ಚುನಾವಣೆ ಬಗ್ಗೆ ಹೇಳಿ.

**ಶ್ರೀ ಐವನ್ ಡಿ'ಸೋಜಾ:-** ಅದಕ್ಕಿಂತ ಮೊದಲು ಲೋಕಸಭಾ ಚುನಾವಣೆಯಾಗಿದೆ. ಲೋಕಸಭೆ ಚುನಾವಣೆಯನ್ನು ಹೋಲಿಕೆ ಮಾಡಿ ನೋಡಿ ಬಿಜೆಪಿ ಯವರು ಎಲ್ಲಿ ಇದ್ದೀರಿ ಎನ್ನುವುದನ್ನು ನೀವೆ ಹೇಳಿ. ಸ್ಥಳೀಯ ಚುನಾವಣೆಗಳ ಬಗ್ಗೆಯು ಗಂಭೀರ ಆಲೋಚನೆ ಮಾಡಬೇಕಾಗಿದೆ. ಸಮಯದ ಅಭಾವದಿಂದ ಸ್ಥಳೀಯ ಚುನಾವಣೆಯ ಬಗ್ಗೆ ಹೇಳಲು ನಾನು ಹೋಗುವುದಿಲ್ಲ.

**ಶ್ರೀ ಸಂದೇಶ ನಾಗರಾಜ:-** ಸ್ಥಳೀಯ ಚುನಾವಣೆಗಳೆ ಮುಖ್ಯ. ಸಮಯವಿಲ್ಲ ಎಂದು ಏಕೆ ಹೇಳುತ್ತೀರಿ? ಅದರ ಬಗ್ಗೆ ಹೇಳುವುದಿಲ್ಲ ಎಂದು ಹೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿ ಗಿಂತ ಕಾಂಗ್ರೆಸ್ 13% ರಷ್ಟು ಹೆಚ್ಚು ಮತಗಳನ್ನು ಪಡೆದಿದೆ ಎನ್ನುವುದು ಗಮನಾರ್ಹವಾದ ವಿಚಾರ. ರಾಜ್ಯಪಾಲರು ಹೇಳಿರುವಂತಹ ಮತ್ತು ಪ್ರಣಾಳಿಕೆಯಲ್ಲಿ ಕೊಟ್ಟಿರುವಂತಹ ವಿಚಾರಗಳನ್ನು ಈ ರಾಜ್ಯದ ಜನತೆ ಬಹುಷ: ಮೆಚ್ಚಿಕೊಂಡಿದ್ದಾರೆ. ಈ ರಾಜ್ಯದ ಕಟ್ಟಕಡೆಯ ಜನತೆಗೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರದ ಕಾರ್ಯಕ್ರಮಗಳು, ಗ್ರಾಮೀಣ ಭಾಗದಲ್ಲಿ ತೆಗೆದುಕೊಂಡಿರುವ

unedited copy

ಕಾರ್ಯಕ್ರಮಗಳು ಮುಟ್ಟಿವೆ ಎಂದು ಹೇಳಬಯಸುತ್ತೇನೆ. ನನ್ನ ಮಿತ್ರರು ಉಪ ಚುನಾವಣೆಯ ಬಗ್ಗೆ ಮಾತನಾಡಿ, ಸ್ಥಳೀಯ ಸಂಸ್ಥೆಗಳ ಚುನಾವಣೆ ಬಗ್ಗೆ ಹೇಳಿ ಎಂದು ಹೇಳಿದರು. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಂದು ವೇಳೆ 10 ಸ್ಥಾನಗಳಿಗಿಂತ ಕಡಿಮೆ ಬಂದರೆ ನಾನು ರಾಜಕೀಯ ಸನ್ಯಾಸವನ್ನು ಸ್ವೀಕಾರ ಮಾಡುತ್ತೇನೆ ಎಂದು ಈ ಮನೆಯ ಸದಸ್ಯರೊಬ್ಬರು ಹೇಳಿದ್ದರು.

(ಮುಂದು)

unedited copy

**ಶ್ರೀ ನಾಗರಾಜ್ ಎಸ್. ಸಂದೇಶ್ ನಾಗರಾಜ್:–** 20 ಸೀಟುಗಳನ್ನು ಗೆಲ್ಲುತ್ತೇವೆ ಎಂದು ಹೇಳಿದ್ದರು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಅವರು ಚಾಲೆಂಜ್ ಸ್ವೀಕಾರ ಮಾಡಿಲ್ಲ. ಅದನ್ನು ಹೇಳಬೇಕು.

**ಶ್ರೀ ಐವನ್ ಡಿ'ಸೋಜಾ:–** ಆದರೆ ನಾವು ಸವಾಲನ್ನು ಸ್ವೀಕಾರ ಮಾಡಿ 13 ಸ್ಥಾನಗಳನ್ನು ಗೆದ್ದಿದ್ದೇವೆ. ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ನಮಗೆ ಬರುವುದಿಲ್ಲ ಎಂದು ಹೇಳಿದರು. ಗ್ರಾಮ ಪಂಚಾಯತ್ ಚುನಾವಣೆಗಳ ಮೂಲಕ ಓಟು ಹಾಕಿದ್ದು, ಅವರು ಪಕ್ಷಕ್ಕೆ affiliated ಅಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಈಶ್ವರಪ್ಪನವರು ಸವಾಲು ಸ್ವೀಕರಿಸಿದ್ದೇನೆ ಎಂದು ಹೇಳಿರಲಿಲ್ಲ. ಅವರು ಸ್ವಯಿಚ್ಛೆಯಿಂದ ಹೇಳಿದರು. ಮಾನ್ಯ ಈಶ್ವರಪ್ಪ ಅಥವಾ ನನ್ನ ಸ್ನೇಹಿತ ಸೋಮಣ್ಣನವರು ಸ್ವಯಿಚ್ಛೆಯಿಂದ ಹೇಳಿದರು. ಇಷ್ಟು ಸೀಟು ಗೆಲ್ಲಲು ಸಾಧ್ಯವಿಲ್ಲ ಎಂದು ಹೇಳಿದ್ದರೂ, ಮಾನ್ಯ ಈಶ್ವರಪ್ಪನವರು ನಿವೃತ್ತಿಯಾಗಬೇಕು ಎಂದು ನಾನು ಬಯಸುವುದಿಲ್ಲ. ಆದರೆ ಮಾತನ್ನು ಆಡಿದ ಮೇಲೆ ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬುದು ಪ್ರಶ್ನೆ.

**ಸಭಾಪತಿಯವರು:–** ನಿಮ್ಮ ಸಮಯ ಬಿಟ್ಟುಕೊಟ್ಟರೆ ಅದು ನಿಮ್ಮ ಸೌಜನ್ಯ. ಆದರೆ ಸಮಯ ನಿಮಗೆ ಸೇರುತ್ತದೆ. 20 ಕೊಟ್ಟಿರುವುದರಿಂದ ಅದರೊಳಗೆ ಮುಗಿಸಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:–** ಪಾರ್ಲಿಮೆಂಟ್‌ನಲ್ಲಿ ಈ ವಿಚಾರಗಳಿಗೆ ರಾತ್ರಿ 4 ಗಂಟೆಯವರೆಗೂ ಚರ್ಚೆ ಮಾಡುತ್ತಾರೆ. ದಯಮಾಡಿ ಸದನವನ್ನು ರಾತ್ರಿ 10 ಗಂಟೆಯವರೆಗೆ ನಡೆಸಬೇಕು.

**ಸಭಾಪತಿಯವರು:–** 12 ಗಂಟೆಯವರೆಗೂ ಮಾಡೋಣ. ನಿಮ್ಮ ನಾಯಕರಿಗೆ ಹೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಸಮಯ ಆಗಿದೆ ಎಂದು ಹೇಳಿದರೆ ಬೆಳಕು ಚೆಲ್ಲುವ ಅನೇಕ ವಿಚಾರಗಳು ಇವೆ. ತಾವು 5 ನಿಮಿಷ, 10 ನಿಮಿಷ ಎಂದರೆ ಏನಿದರರ್ಥ?

**ಸಭಾಪತಿಯವರು:–** ಮಾನ್ಯ ಸಭಾನಾಯಕರಿಗೆ ಹೇಳಿ.

unedited copy

**ಶ್ರೀ ವಿ.ಎಸ್. ಉಗ್ರಪ್ಪ:-** ಪಾರ್ಲಿಮೆಂಟ್‌ನಲ್ಲಿ ಬೆಳಿಗಿನ ಜಾವ 4 ಗಂಟೆವರೆಗೂ ಮಾಡುತ್ತಾರೆ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾನಾಯಕರು ಮಾತನಾಡಬೇಕು, ಅವರು ಮೌನವಾಗಿ ಕುಳಿತುಕೊಂಡರೆ ಹೇಗೆ? ಅವರು ಶಾಸಕರನ್ನು ನಿಯಂತ್ರಣಕ್ಕೆ ತರಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ನಿನ್ನೆ Business Advisory Committee (BAC) ನಲ್ಲಿ ಅನೇಕ ನಿರ್ಣಯಗಳನ್ನು ಕೈಗೊಂಡಿದ್ದು, ಅದಕ್ಕನುಗುಣವಾಗಿ ನಡೆದುಕೊಳ್ಳುತ್ತೇವೆ. ಅದರ ಬಗ್ಗೆ ಎರಡು ಮಾತಿಲ್ಲ. ಮಾನ್ಯ ಈಶ್ವರಪ್ಪನವರೇ, ಸಂಸದೀಯ ವ್ಯವಸ್ಥೆಯಲ್ಲಿ ಕೊಟ್ಟು-ತೆಗೆದುಕೊಳ್ಳುವುದು ಇರುತ್ತದೆ. ಅವರು ಮಧ್ಯೆ ಮಾತನಾಡಿರಬಹುದು. ಆದರೆ ತುಟಿ ಪಿಟಿಕ್ ಎನ್ನದೇ ಕುಳಿತುಕೊಳ್ಳಲು ಆಗುವುದಿಲ್ಲ. ಮಾನ್ಯ ಸಭಾಪತಿಯವರು ಸದನವನ್ನು ನಿಯಂತ್ರಣ ಮಾಡುತ್ತಾರೆ. ಮಧ್ಯೆ ಮಾನ್ಯ ಸದಸ್ಯರು 5-6 ಗಂಟೆ ಬದಲು ರಾತ್ರಿ 10 ಗಂಟೆಯವರೆಗೂ ಮುಂದುವರೆಸಲು ಸಲಹೆ ಕೊಟ್ಟಿದ್ದಾರೆ. He has got an inherent power. ಮಾನ್ಯ ಸಭಾಪತಿಯವರು 12 ಗಂಟೆಯವರೆಗೂ ನಡೆಸೋಣ ಎಂದಿದ್ದಾರೆ. ಇದರ ಬಗ್ಗೆ ಹೆಚ್ಚು ಚರ್ಚೆ ಮಾಡದೇ ಮುಗಿಸೋಣ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ನನ್ನ ಪಾಯಿಂಟ್ ಏನೆಂದರೆ ನಿನ್ನೆ ಬಿಎಸಿ ನಲ್ಲಿ ತೀರ್ಮಾನವಾದಂತೆ ನಮ್ಮ ಸದಸ್ಯರಿಗೆ ಹೇಳಿದ ನಂತರ ಅದರಂತೆ ನಡೆದುಕೊಳ್ಳುತ್ತಿದ್ದಾರೆ. ಆದರೆ ಮಾನ್ಯ ಉಗ್ರಪ್ಪನವರ ಅಭಿಪ್ರಾಯದ ಬಗ್ಗೆ ಅಲ್ಲ. ಅವರು ಪಾರ್ಲಿಮೆಂಟ್‌ನಲ್ಲಿ ರಾತ್ರಿಯವರೆಗೂ ನಡೆಯುತ್ತದೆ, ಸದಸ್ಯರಿಗೆ 5-10 ನಿಮಿಷ ಏಕೆ ಮಾಡುತ್ತಿದ್ದಾರೆ ಎಂದು ಕೇಳಿದರು. ಆದ್ದರಿಂದ ನಿನ್ನೆ BAC ವಿಷಯ ಅವರಿಗೆ ಗೊತ್ತಿಲ್ಲ. ದಯವಿಟ್ಟು ತಿಳಿಸಬೇಕು. ಅದು ಸಭಾನಾಯಕರ ಕೆಲಸ. ಅವರನ್ನು ಇಕ್ಕಟ್ಟಿಗೆ ಸಲುಕಿಸಬಾರದು.

unedited copy

**ಶ್ರೀ ಎಸ್.ಆರ್. ಪಾಟೀಲ್:-** ರಾಜ್ಯದಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿದ್ದು, ಸದನ ಸ್ವಲ್ಪ ಅವಧಿಯವರೆಗೂ ನಡೆಯುತ್ತದೆ, ಸಮಯವನ್ನು ವಿಸ್ತರಿಸಿ ರಾತ್ರಿ 10ರವರೆಗೆ ನಡೆಸಿ ಅನೇಕ ವಿಷಯಗಳನ್ನು ಚರ್ಚೆ ಮಾಡೋಣ ಮತ್ತು ರಾಜ್ಯದ ಜನತೆಗೆ ಅನುಕೂಲವಾಗುತ್ತದೆ ಎಂದು ಸಲಹೆ ಕೊಟ್ಟಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಇದನ್ನು ಅವರು ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ. BAC ನಲ್ಲಿ ತೀರ್ಮಾನ ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಅದಕ್ಕೆ ಮಾನ್ಯ ಸಭಾಪತಿಯವರು ಸ್ಪಂದನೆ ಮಾಡಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ರಾತ್ರಿ 12 ಗಂಟೆವರೆಗೂ ನಡೆಯುವುದಕ್ಕೆ ಸ್ಪಂದಿಸಿದ್ದಾರೆಯೇ?

**ಶ್ರೀ ಎಸ್.ಆರ್. ಪಾಟೀಲ್;-** ಎಷ್ಟು ಸಾಧ್ಯವೋ ಅಷ್ಟು ಮುಂದುವರೆಸಲು ಹೇಳಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಅವರು ಹೇಳುತ್ತಿರುವುದು ಸರಿಯಾದರೆ ನನ್ನ ಅಭ್ಯಂತರವೇನೂ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಆದಷ್ಟು ಮಧ್ಯೆ ಪ್ರವೇಶಿಸದಂತೆ ಈ ಕಡೆ ಸದಸ್ಯರನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನದಾಗಿದೆ. ಅವರ ಕಡೆ ಅವರ ಜವಾಬ್ದಾರಿ ಇದೆ. ಜೆಡಿ(ಎಸ್) ಪಕ್ಷದವರನ್ನು ಮಾನ್ಯ ಹೊರಟ್ಟಿಯವರು ನೋಡಿಕೊಳ್ಳುತ್ತಾರೆ. ಸ್ವತಂತ್ರ್ಯ ಅಭ್ಯರ್ಥಿಗಳು ಶಾಂತವಾಗಿಯೇ ಇದ್ದಾರೆ.

**ಸಭಾಪತಿಯವರು:-** ಸಭೆಯ ಗಮನಕ್ಕೆ ಒಂದು ವಿಷಯವನ್ನು ತರಲು ಇಚ್ಛಿಸಿದ್ದು, ನಿನ್ನೆ ಬಿಎಸಿ ನಲ್ಲಿ ಆದ ಸ್ವಲ್ಪ ವಿಷಯಗಳ ಬಗ್ಗೆ ಸಭೆಯ ಒಪ್ಪಿಗೆಗೆ ಮಂಡಿಸಿದ್ದೆನು. ಪ್ರಶ್ನೋತ್ತರ ವೇಳೆಯನ್ನು ಸಾಯಂಕಾಲ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಈ ರೀತಿ ನಿರ್ಣಯ ಮಾಡಲು BAC ಇದೆ. BAC ನಲ್ಲಿ ಆದ ತೀರ್ಮಾನದಂತೆ ಸಭೆ ನಡೆಸಲು ನಾನು ಸಭಾಪತಿ ಸ್ಥಾನದಲ್ಲಿ ಕುಳಿತು ಕೆಲಸ ಮಾಡಬೇಕು. ಸಭಾಪತಿ ಹೇಳುವ ನಿರ್ಣಯಗಳ ಮೇಲೆ ಉದ್ರೇಕದಿಂದ, ಕೋಪಗೊಂಡು ಯಾರಾದರೂ ಮಾತನಾಡುವುದಾದರೆ ನಾನು ಸಹಿಸುವುದಿಲ್ಲ. ದಯಮಾಡಿ ಅದನ್ನು ಅರ್ಥಮಾಡಿಕೊಳ್ಳಬೇಕು. ಆ ರೀತಿ ಯಾರೂ ಮಾತನಾಡಬಾರದು, ಅದು

unedited copy

ಒಳ್ಳೆಯ ಪದ್ಧತಿ ಅಲ್ಲ. ಏನಾದರೂ ಸಲಹೆ ಇದ್ದರೆ, ಸರಿಯಿಲ್ಲದಿದ್ದರೆ ಸರಿ ಮಾಡುವ ಬಗ್ಗೆ ಸಲಹೆ ಇದ್ದರೆ ಅದನ್ನು ಹೇಳುವ ರೀತಿ, ಶೈಲಿ, ಭಾಷೆಯಲ್ಲಿ ಹೇಳಿದರೆ ಖಂಡಿತವಾಗಿ ಪರಿಗಣಿಸೋಣ. ಆದರೆ ಪರಿಗಣಿಸಿ ಅಂತಿಮ ನಿರ್ಧಾರ ಮಾಡುವ ಅಧಿಕಾರ ನನಗೆ ಇಲ್ಲ. ಕಾರಣ ನಿನ್ನೆ ಬಿಎಸಿಯಲ್ಲಿ ಆದ ನಿರ್ಣಯಗಳು ನನ್ನ ಇತಿಮಿತಿ ಅಂದರೆ ಇಂದು ಮತ್ತು ನಾಳೆ ನಡೆಯುವ ಸಭೆಗಳ ಬಗ್ಗೆ ನಿಯಂತ್ರಣ ಮಾಡಿದೆ. ಹಾಗಾಗಿ ಏನಾದರೂ ಹೇಳುವುದಿದ್ದರೆ ತಪ್ಪಿಲ್ಲ. ಆದರೆ ತಂಡದ ನಾಯಕರಿಗೆ ತಿಳಿಸಿದರೆ ಅವರ ಮೂಲಕ ಮತ್ತೊಮ್ಮೆ ಅವಶ್ಯ ಬಿದ್ದರೆ BAC ಸೇರಿ ನಿರ್ಣಯಗಳನ್ನು ಬದಲಾವಣೆ ಮಾಡಲು ಆಗುತ್ತದೆ. 5ನೇ ತಾರೀಖು ಮುಗಿಸಬೇಕೆಂದು ಇದ್ದೇವೆ. ಇನ್ನಷ್ಟು ದಿನ ಸಭೆಯನ್ನು ನಡೆಸುವುದು ಸರ್ಕಾರವಾಗಿದ್ದು, ಇದನ್ನು BAC ಯಿಂದ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದ ಮೇಲೆ ಒತ್ತಡ ತಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಮಂಡಲ ಸಭೆ ನಡೆಸಲು ಒಪ್ಪುವುದಾದರೆ ನನ್ನದೇನೂ ಅಭ್ಯಂತರ ಇಲ್ಲ. ಅವರು ಹೇಳುವಷ್ಟು ದಿನ ಸಭೆ ನಡೆಸುವ ಕೆಲಸ ನನ್ನದು.

**ಶ್ರೀ ಐವನ್ ಡಿ'ಸೋಜಾ:-** ನಾನು ಚುನಾವಣೆ ಫಲಿತಾಂಶದ ಬಗ್ಗೆ ಮಾತನಾಡುತ್ತಿದ್ದು, ರಾಜ್ಯ ಸರ್ಕಾರದ ಕಾರ್ಯವೈಖರಿಗಳು ಚುನಾವಣೆ ಮೂಲಕ ಪ್ರತಿಬಿಂಬಿಸುತ್ತದೆ ಎಂದು ತಮ್ಮ ಮೂಲಕ ಸದನದ ಗಮನಕ್ಕೆ ತರಲು ಬಯಸುತ್ತಿದ್ದೆನು. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳು, ಸರ್ಕಾರದ ಮುಂದೆ ಹೋಗುವ ದಾರಿ ಮತ್ತು ರಾಜ್ಯಪಾಲರ ಭಾಷಣಗಳನ್ನು ಒಟ್ಟಿಗೆ ಸೇರಿಸಿದಾಗ ಬಹುಶ: ಎಲ್ಲೋ ಒಂದು ಕಡೆ ರಾಜ್ಯ ಸರ್ಕಾರ ಜನರ ಆಶೋತ್ತರಗಳಿಗೆ ಸ್ಪಂದಿಸಿದೆ ಎನ್ನುವುದನ್ನು ತಿಳಿಯಬಹುದು. ಚುನಾವಣೆ ಸಂದರ್ಭದಲ್ಲಿ ನಾನು ಮನೆ-ಮನೆಗೆ ಹೋಗಿ ಮತ ಕೇಳುವ ಸಂದರ್ಭದಲ್ಲಿ ಬಿಪಿಎಲ್ ಕಾರ್ಡ್ ಇದೆಯೇ ಎಂದು ಕೇಳುತ್ತಿದ್ದೆನು. ಆಗ ಅವರು ಇದೆ ಎಂದು ಹೇಳುತ್ತಿದ್ದರು. ನಂತರ ಸವಲತ್ತುಗಳ ಬಗ್ಗೆ ಕೇಳಿದಾಗ ' ಸವಲತ್ತುಗಳು ಬರುತ್ತಿದೆ, 12 ಕೆ.ಜಿ. ಅಕ್ಕಿ ಬರುತ್ತದೆ, 15 ಕೆ.ಜಿ. ಅಕ್ಕಿ ಬರುತ್ತದೆ, 20 ಕೆ.ಜಿ ಅಕ್ಕಿ ಬರುತ್ತದೆ, ಜೋಳ ಬರುತ್ತದೆ' ಎಂದು ಮತದಾರರು ಅತ್ಯಂತ ಸಂತೋಷದಿಂದ ಹೇಳುತ್ತಿದ್ದರು. ಅನೇಕ ಸರ್ಕಾರಗಳು ಬಂದು ಹೋಗಿದ್ದು, ಅದು ಕಾಂಗ್ರೆಸ್ ಸರ್ಕಾರ ಇರಬಹುದು, ಬಿಜೆಪಿ ಸರ್ಕಾರ ಇರಬಹುದು, ಜೆಡಿ(ಎಸ್) ಸರ್ಕಾರ ಇರಬಹುದು, ಆದರೆ ಅದನ್ನು ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಕೊಟ್ಟಿದೆ ಎಂದು ಪ್ರತಿಯೊಬ್ಬ ಮತದಾರರು

ನೆನಪಿಸಿಕೊಳ್ಳುವ ಮಟ್ಟಕ್ಕೆ ಬಂದಿದೆ ಎಂದು ಸದನದ ಗಮನಕ್ಕೆ ತರಬಯಸುತ್ತೇನೆ. ಅದರ ಫಲಿತಾಂಶವೇ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಹೆಚ್ಚು ಸಂಖ್ಯೆಯಲ್ಲಿ ಗೆದ್ದು, ಸರ್ಕಾರದ ಕಾರ್ಯವೈಖರಿಯನ್ನು ಮೆಚ್ಚುಗೆ ಮಾಡಿದ್ದಾರೆ ಎಂಬುದನ್ನು ಹೇಳಬಯಸುತ್ತೇನೆ.

ಇನ್ನು ನಮ್ಮ ಸರ್ಕಾರವು 2013ರಲ್ಲಿ ಆಡಳಿತಕ್ಕೆ ಬಂದಾಗ ಸುಮಾರು 58 ಸಾವಿರ ಬಿಪಿಎಲ್ ಕಾರ್ಡುಗಳನ್ನು ನೀಡಿತ್ತು. ಬಡವರನ್ನು ಬಿಜೆಪಿ ಸರ್ಕಾರವು ಸರಿಯಾಗಿ ಗುರುತಿಸಲಿಲ್ಲ ಎಂದು ರಾಜ್ಯದ ಜನತೆಯ ಮನಸ್ಸಿನಲ್ಲಿ ಇತ್ತು. ನಾವು ಬಡವರನ್ನು ಗುರುತಿಸುವ ಕೆಲಸ ಮಾಡಿ, ಬಡವರಿಗೆ ಸರ್ಕಾರದ ಯೋಜನೆಗಳನ್ನು ಮುಟ್ಟಿಸುತ್ತೇವೆ ಎಂದು ಹೇಳಿದ್ದು, ಬಹುಶ: ತಾತ್ಕಾಲಿಕ ಮತ್ತು ಎಲ್ಲಾ ಕಾರ್ಡುಗಳನ್ನು ಸರಿದೂಗಿಸಿ 1.03 ಕೋಟಿ ಬಿಪಿಎಲ್ ಕಾರ್ಡುಗಳನ್ನು ಕೊಟ್ಟಿದ್ದೇವೆ. ಇದರ ಮುಖಾಂತರ ಬಡವರಿಗೆ ಯೋಜನೆಗಳನ್ನು ಒದಗಿಸಲು ಈ ಸರ್ಕಾರ ಪ್ರಯತ್ನ ಪಟ್ಟಿದೆ. ಅದರ ಪರಿಣಾಮವಾಗಿ ಶ್ರೀ ಸಿದ್ದರಾಮಯ್ಯನವರ ಸರ್ಕಾರ ಅನ್ನದಾತರ ಸರ್ಕಾರ ಎಂದು ಸಾಭೀತಾಗಿದೆ. ಇದು ರಾಜ್ಯದ ಚರಿತ್ರೆಯಲ್ಲಿ ಪ್ರಥಮ ಬಾರಿಯಾಗಿ ಯೋಜನೆ ಜಾರಿಗೆ ತಂದು ಬಡವರಿಗೆ ಮುಟ್ಟಿಸುವ ಕೆಲಸ ಮಾಡಿದೆ ಎಂಬುದನ್ನು ಹೇಳಬಯಸುತ್ತೇನೆ.

(ಮುಂದು)

unedited copy

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಈ ಯೋಜನೆಯನ್ನು ಸಹ ಅನೇಕ ಬಾರಿ ಟೀಕೆ ಮಾಡಿರುವುದನ್ನು ನಾನು ಕೇಳಿದ್ದೇನೆ. 'ಧರ್ಮಾರ್ಥವಾಗಿ ಅಕ್ಕಿ ಕೊಟ್ಟು, ಬಡವರನ್ನು ಸೋಮಾರಿಗಳನ್ನಾಗಿ ಮಾಡಿದರು. ಬಡವರು ಕೂಲಿಗೆ ಬರುತ್ತಿಲ್ಲ.' ಎನ್ನುವ ಟೀಕೆ-ಟಿಪ್ಪಣಿಗಳು ಬಂದವು. ಈ ಟೀಕೆ ಟಿಪ್ಪಣಿಗಳ ಮಧ್ಯೆ ಕೂಡ, ಯಾರು ಹಸಿದವರಿದ್ದಾರೆ, ಯಾರು ಬಡತನದಲ್ಲಿದ್ದಾರೆ, ಯಾರು ದಿನಕ್ಕೆ ಎರಡು ಬಾರಿ ಊಟ ಮಾಡುವುದಕ್ಕೆ ಸಶಕ್ತರಾಗಿರುವುದಿಲ್ಲ ಅವರಿಗೆ ಶಕ್ತಿ ಕೊಡುವ ಸರ್ಕಾರ 'ಅಹಿಂದ ಸರ್ಕಾರ' ಎಂದು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಮಾತನ್ನು ಅವರು ಏತಕ್ಕೋಸ್ಕರ ಹೇಳಿದ್ದಾರೆಂದರೆ, 'ಅಹಿಂದ' ಕೂಡ ಈ ರಾಜ್ಯದ ಒಂದು ಭಾಗವಾಗಿದೆ. 'ಅಹಿಂದ'ದಡಿಯಲ್ಲಿ ಬರುವಂತಹ ಬಡವರು, ಅಲ್ಪ ಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಇವರೆಲ್ಲರೂ ಸಹ ಈ ರಾಜ್ಯದ ಒಂದು ಭಾಗ ಎಂದು ಹೇಳುವುದರ ಮೂಲಕ ಅವರಿಗೆ ಊಟಕ್ಕೆ ಅನ್ನವನ್ನು ಕೊಡುವುದರ ಜೊತೆಗೆ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಔದ್ಯೋಗಿಕವಾಗಿ ಹಂತಹಂತವಾಗಿ ಬೆಂಬಲ ನೀಡುವ ಕೆಲಸವನ್ನು ಈ ಸರ್ಕಾರ ಮಾಡಿದೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. 'ಅಹಿಂದ' ಎಂದರೇನು ಎಂದು ಹೇಳಿ ಗೇಲಿ ಮಾಡುವ ಜನವರಿಗೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಸರಿಯಾದ ಉತ್ತರವನ್ನು ಕೊಟ್ಟಿವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇವತ್ತು ಈ ಸರ್ಕಾರ 'ನಡೆದಂತೆ ನುಡಿದಿದೆ, ನುಡಿದಂತೆ ನಡೆದಿದೆ' ಎಂದು ಹೇಳುವುದಕ್ಕೆ ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದ ಮತ್ತು ಕೇಂದ್ರದ ಅನೇಕ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಸೂಕ್ತವಾದ ರೀತಿಯಲ್ಲಿ ಬೆಂಬಲ ದೊರೆತಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. 2014-15 ಮತ್ತು 2015-16ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಪ್ರತಿಯೊಂದು ಯೋಜನೆಗಳಿಗೂ ತಮ್ಮ ಆರ್ಥಿಕ ಬೆಂಬಲವನ್ನು ಕಡಿಮೆ ಮಾಡುತ್ತಾ ಹೋಗಿದೆ. ಕೇಂದ್ರ ಸರ್ಕಾರದಿಂದ ದೊರೆಯಬೇಕಾದ ಹಣಕಾಸು ಸಹಾಯ ಕಡಿಮೆಯಾದರೂ ಸಹ ಆ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗುವ ಕೆಲಸವನ್ನು

unedited copy

ಕಾಂಗ್ರೆಸ್ ಸರ್ಕಾರ ಮಾಡಿದೆ. ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಇರಬಹುದು, ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ಐ.ಸಿ.ಡಿ.ಎಸ್.ಕಾರ್ಯಕ್ರಮ ಇರಬಹುದು ಅಥವಾ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇರಬಹುದು ಪ್ರತಿಯೊಂದು ಯೋಜನೆಗೂ ಕೂಡ ಶೇಕಡಾ 30 ರಿಂದ 35 ರಷ್ಟು ಹಣಕಾಸಿನ ಸಹಾಯವನ್ನು ಕೇಂದ್ರ ಸರ್ಕಾರ ಕಡಿಮೆ ಮಾಡಿದೆ. ಇತ್ತೀಚೆಗೆ ಕೇಂದ್ರ ಸರ್ಕಾರ ಮಂಡನೆ ಮಾಡಿದ ಆಯವ್ಯಯ ಎಲ್ಲರಿಗೂ ಪ್ರಿಯವಾಗಿರುವ, ರೈತರಿಗೆ ಪ್ರಿಯವಾಗಿರುವ ಮತ್ತು ರೈತರಿಗೆ ಬೆಂಬಲ ಕೊಡುವ ಆಯವ್ಯಯ ಆಗಬಹುದೆಂದು ನಿರೀಕ್ಷಿಸುತ್ತಿದ್ದೆವು. ಏಕೆಂದರೆ, ನಮ್ಮ ದೇಶದ ಪ್ರಧಾನ ಮಂತ್ರಿಗಳು 'ಮನ್ ಕಿ ಬಾತ್' ಎನ್ನುವ ಕಾರ್ಯಕ್ರಮದ ಮೂಲಕ ಪ್ರತಿದಿನ ರೈತರ ಜೊತೆಗೆ ಸಂಭಾಷಿಸುತ್ತಿದ್ದಾರೆ. ಹಿಂದಿನ ಯು.ಪಿ.ಎ. ಸರ್ಕಾರ ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿತ್ತು. ಅದೇ ರೀತಿಯ ಕಾರ್ಯಕ್ರಮವನ್ನು ಈ ಸರ್ಕಾರವೂ ಸಹ ಹಮ್ಮಿಕೊಳ್ಳುತ್ತದೆ ಎನ್ನುವ ನಿರೀಕ್ಷೆಯಲ್ಲಿದ್ದೆವು. ಬೆಳಗ್ಗೆ ಎದ್ದರೆ, ಮಾನ್ಯ ಪ್ರಧಾನಮಂತ್ರಿಗಳ 'ಮನ್ ಕಿ ಬಾತ್' 'ದಿಲ್ ಕಿ ಬಾತ್' 'ಚೌಚೋ ಬಾತ್' 'ಕೇಸರಿ ಬಾತ್' ಎಲ್ಲ ಬಾತ್‌ಗಳು ಆಯಿತು ಆದರೆ, ರೈತರಿಗೆ ಮಾತ್ರ ತಮ್ಮ ಆಯವ್ಯಯದಲ್ಲಿ ಏನೂ ಕೊಟ್ಟಿಲ್ಲವೆಂದು ಬೇಸರದಿಂದ ಹೇಳುತ್ತಿದ್ದೇನೆ.

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ಅವರು ಕೇಂದ್ರ ಸರ್ಕಾರ ಮೊನ್ನೆ ಮಂಡಿಸಿರುವ ಆಯವ್ಯಯವನ್ನು ಸರಿಯಾಗಿ ನೋಡಿಲ್ಲವೆಂದು ಕಾಣುತ್ತದೆ.

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಆ ಆಯವ್ಯಯವನ್ನು ನೋಡಿಯೇ ನಾನು ಮಾತನಾಡುತ್ತಿದ್ದೇನೆ. ಅವಶ್ಯಕತೆ ಇದ್ದರೆ ಅಂಕಿಅಂಶಗಳ ಜೊತೆಗೆ ನಾನು ಮಾತನಾಡುತ್ತೇನೆ. ಈಗ ನಮ್ಮ ರಾಜ್ಯ ಭೀಕರ ಬರಗಾಲವನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಹಣವನ್ನು ಬಳಸಿಕೊಂಡು ಜನರಿಗೆ ಉದ್ಯೋಗ ಸೃಷ್ಟಿ ಮಾಡುವ ಕೆಲಸವನ್ನು ಮಾಡಲಾಗುತ್ತಿತ್ತು. ಆದರೆ, ಈ ಯೋಜನೆಗೆ ಅವಶ್ಯಕತೆ ಇರುವಷ್ಟು ಹಣವನ್ನು ಕೇಂದ್ರ ಸರ್ಕಾರ ಒದಗಿಸುತ್ತಿಲ್ಲ ಎನ್ನುವುದನ್ನು ನಾನು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಆದರೂ ಸಹ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳು ಏನಿವೆ ಅವುಗಳನ್ನು ರಾಜ್ಯ ಸರ್ಕಾರದ ಹಣದಿಂದ ಮುಂದುವರಿಸಿಕೊಂಡು ಹೋಗಿದ್ದೇವೆ ಎಂದು ಹೇಳಿರುವುದನ್ನು ನಾನು

unedited copy

ಬೆಂಬಲಿಸುತ್ತಿದ್ದೇನೆ. ಇದು ನಮ್ಮ ರಾಜ್ಯ ಸರ್ಕಾರಕ್ಕೆ ಜನಸಾಮಾನ್ಯರ ಬಗ್ಗೆ, ಮಕ್ಕಳ ಬಗ್ಗೆ ಮತ್ತು ರೈತರ ಬಗ್ಗೆ ಇರುವ ಕಾಳಜಿಯನ್ನು ಎತ್ತಿ ತೋರಿಸುತ್ತಿದೆ. ಅಪೌಷ್ಠಿಕತೆಯಿಂದ ನರಳುತ್ತಿರುವ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ, ಮೂಲಕ ಮೂರು ದಿನಗಳ ಕಾಲ ಹಾಲನ್ನು ಕೊಡುವ ಕ್ಷೀರಭಾಗ್ಯ ಯೋಜನೆ ಮತ್ತು ಶಾಲಾ ಮಕ್ಕಳಿಗೆ ಷೂ ಕೊಡುವ ಕೆಲಸವನ್ನು ಮಾಡಲಾಗುತ್ತಿದೆ. ಒಟ್ಟಾರೆಯಾಗಿ ಹೇಳಬೇಕಾದರೆ, ಈ ರಾಜ್ಯದ ಸಮಗ್ರ ಅಭಿವೃದ್ಧಿಯಲ್ಲಿ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಪ್ರಮುಖವಾಗಿರುವ ಪಾತ್ರವನ್ನು ವಹಿಸಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಸರ್ಕಾರ ಮಕ್ಕಳಿಗೆ, ಸಮಾಜದ ಕೆಳವರ್ಗದವರಿಗೆ, ಹಿಂದುಳಿದವರಿಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ನೀಡಿ ಜನರ ದುಡ್ಡನ್ನು ಎಲ್ಲರಲ್ಲಿ ಹಂಚುವ ಕಾರ್ಯಕ್ರಮವನ್ನು ಮಾಡಲಾಗಿದೆ. ಸುಮಾರು 27 ಸಾವಿರ ಕೋಟಿ ರೂಪಾಯಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಿಟ್ಟು ಆ ಹಣವನ್ನು ಅವರಿಗಾಗಿಯೇ ವಿನಿಯೋಗ ಮಾಡಬೇಕೆನ್ನುವ ಕಾನೂನನ್ನು ತಂದಿರುವ ಸರ್ಕಾರ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ಅಹಿಂದ ಸರ್ಕಾರ, ಅಹಿಂದಗೋಸ್ಕರವೇ ಇರುವ ಸರ್ಕಾರ ಎಂದು ಹೇಳಿದರೆ ಗೇಲಿ ಮಾಡಿ ನಗುವವರ ಮುಂದೆ ಅಹಿಂದದವರಿಗೆ ಶಾಂತಿ ಮತ್ತು ನೆಮ್ಮದಿಯ ಜೀವನ ಸಾಗಿಸುವುದಕ್ಕೆ ಬೆಂಬಲವನ್ನು ಕೊಟ್ಟಿದೆ ಎನ್ನುವುದನ್ನು ಈ ಮೂಲಕ ಸದನಕ್ಕೆ ತಿಳಿಸಲು ಬಯಸುತ್ತಿದ್ದೇನೆ.

**ಶ್ರೀ ಸೋಮಣ್ಣ ಬಿ.ಬೇವಿನಮರದಃ–** ಸನ್ಮಾನ್ಯ ಸಭಾಪತಿಯವರೇ, ಅದೇ ರೀತಿ ಈ ಸರ್ಕಾರ ಕರುಣಿಸಿರುವ 'ಕತ್ತಲ ಭಾಗ್ಯ' ಮತ್ತು 'ರೈತರ ಆತ್ಮಹತ್ಯೆ'ಯ ಬಗೆಯೂ ಅವರು ಹೇಳಬೇಕಾಗುತ್ತದೆ.

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆಯೂ ಮುಂದೆ ಮಾತನಾಡುತ್ತೇನೆ. ನಾನು ಕರಾವಳಿ ಭಾಗದಿಂದ ಬಂದಿರುವವನು. ಕರಾವಳಿ ಭಾಗದಲ್ಲಿ 'ಅಸಹಿಷ್ಣುತೆ' ಎನ್ನುವ ಪ್ರಯೋಗ ನಡೆಯುತ್ತಿದೆ. ದಾರಿಯಲ್ಲಿ ಯಾರಾದರೂ ಟೋಪಿ ಹಾಕಿಕೊಂಡು ಓಡಾಡುತ್ತಿದ್ದರೆ, ಅವರನ್ನು ಕೊಲೆ ಮಾಡಲಾಗುತ್ತಿದೆ. ಇತ್ತೀಚೆಗೆ ಭಂಟ್ವಾಳ ಕ್ಷೇತ್ರ

unedited copy

ವ್ಯಾಪ್ತಿಯಲ್ಲಿ ಹರೀಶ್ ಎನ್ನುವ ವ್ಯಕ್ತಿಯನ್ನು ಕೊಲೆ ಮಾಡಲಾಗಿದೆ. ಈ ಕೊಲೆ ಯಾಕೆ ಮಾಡಲಾಯಿತು ಎನ್ನುವ ಪ್ರಶ್ನೆ ಕೇಳಿದರೆ, ಆತ ಹೇಳುತ್ತಾನೆ, 'ಮುಸ್ಲಿಂ ಎಂದು ಭಾವಿಸಿ ಆತನನ್ನು ಕೊಂದೆ' ಎಂದು ಹೇಳುತ್ತಾನೆ. ಆ ವ್ಯಕ್ತಿ ತಪ್ಪು ಮಾಡಿದ್ದಾನೆಂದು ಕೊಂದಿಲ್ಲ. ಆತ ಮುಸ್ಲಿಂ ಎನ್ನುವ ಕಾರಣಕ್ಕಾಗಿ ಕೊಲೆ ಮಾಡಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ ಪ್ರಶಾಂತ ಪೂಜಾರಿ ಎನ್ನುವವರ ಕೊಲೆಯಾಗಿದೆ. ಅದರ ಬಗ್ಗೆಯೂ ಅವರು ಹೇಳಬೇಕಾಗುತ್ತದೆ.

**ಸಭಾಪತಿಯವರುಃ–** ಮಾನ್ಯ ಶ್ರೀನಿವಾಸ ಪೂಜಾರಿಯವರೇ, ಅವರು ಮಾತನಾಡುವಾಗ ಮಧ್ಯದಲ್ಲಿ ಮಾತನಾಡಬೇಡಿ. ತಾವು ಮಾತನಾಡಲು ಅವಕಾಶವನ್ನು ನೀಡಿದಾಗ ಇದನ್ನು ಉಲ್ಲೇಖ ಮಾಡಿ ಮಾತನಾಡಿ.

ಮಾನ್ಯ ಐವನ್ ಡಿ'ಸೋಜಾರವರೇ, ತಮಗೆ ನಾನು 20 ನಿಮಿಷಗಳ ಕಾಲಾವಕಾಶವನ್ನು ನೀಡಿದೇನೆ. ಈಗಾಗಲೇ 28 ನಿಮಿಷಗಳಾಗಿವೆ. ಇನ್ನು 3 ನಿಮಿಷಗಳ ಕಾಲಾವಕಾಶವನ್ನು ಮಾತ್ರ ನೀಡುತ್ತಿದ್ದೇನೆ. ಅಷ್ಟರಲ್ಲಿ ತಾವು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಬೇಕಾಗಿದೆ.

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು)ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಬಹಳ ಚೆನ್ನಾಗಿ ತಯಾರಿ ಮಾಡಿಕೊಂಡು ಬಂದು ಮಾತನಾಡುತ್ತಿದ್ದಾರೆ. ಅವರಿಗೆ ಇನ್ನೊಂದು 10 ನಿಮಿಷಗಳ ಕಾಲಾ ಮಾತನಾಡುವುದಕ್ಕೆ ಅವಕಾಶವನ್ನು ನೀಡಿದರೆ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ. ಅಗತ್ಯವಿದ್ದರೆ ರಾತ್ರಿ 8 ಗಂಟೆಯ ತನಕ ಸದನ ನಡೆಸೋಣ. ದಯಮಾಡಿ ಎಲ್ಲ ಸದಸ್ಯರಿಗೂ 5 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ನೀಡಿ.

**ಸಭಾಪತಿಯವರುಃ–** ತಾವು ಈ ಮಾತನ್ನು ನಿನ್ನೆ ಹೇಳಬೇಕಾಗಿತ್ತು. ಮಾನ್ಯ ಐವನ್ ಡಿ'ಸೋಜಾರವರೇ, ತಾವು ತಮ್ಮ ಮಾತುಗಳನ್ನು ಬೇಗನೇ ಮುಗಿಸಿ.

unedited copy

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಕರಾವಳಿ ಪ್ರದೇಶದಲ್ಲಿ ನಡೆಯುತ್ತಿರುವ ಅಸಹಿಷ್ಣುತೆಯ ಬಗ್ಗೆ ಮಾತನಾಡುತ್ತಿದ್ದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇದರ ಪ್ರಮಾಣ ಹೆಚ್ಚಾಗಿದೆ. ನಾನು ಮಾನ್ಯ ಗೃಹ ಸಚಿವರಿಗೆ 'ರಾಜ್ಯದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದವರ ಮೇಲೆ ದಾಖಲು ಮಾಡಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?' ಎನ್ನುವ ಒಂದು ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಅವರು 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 38 ಪ್ರಕರಣಗಳು, ಉಡುಪಿಯಲ್ಲಿ ಒಂದು ಪ್ರಕರಣ, ಚಿಕ್ಕಮಗಳೂರಿನಲ್ಲಿ ಒಂದು ಪ್ರಕರಣ ಮತ್ತು ಕೊಡಗು ಜಿಲ್ಲೆಯಲ್ಲಿ ಒಂದು ಪ್ರಕರಣ ದಾಖಲಾಗಿದೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಯಾವುದಾದರೊಂದು ಸಮುದಾಯ ತನ್ನ ಸಮುದಾಯದವರನ್ನು ಕರೆದು ಭಾಷಣ ಮಾಡಿದರೆ, ಬೇರೆ ಸಮುದಾಯದವರು, 'ಅವರಿಗೆ ಭಾಷಣ ಮಾಡಲು ಅನುಮತಿ ಕೊಡಬೇಡಿ, ಅವರಿಗೆ ಅನುಮತಿ ಕೊಟ್ಟರೆ ನಮ್ಮ ಸಮುದಾಯವನ್ನು ಕರೆದು ಭಾಷಣ ಮಾಡುತ್ತೇವೆ' ಎನ್ನುವ ಮಟ್ಟಕ್ಕೆ ಹೋಗಿದೆ. ಇದನ್ನು ಯಾರು ಸರಿ ಮಾಡಬೇಕು? ಎಲ್ಲ ಜಾತಿಯವರು ನೆಮ್ಮದಿಯಿಂದ ಇರಬೇಕಾದರೆ ಅದನ್ನು ನೋಡಿಕೊಳ್ಳುವ ಜವಾಬ್ದಾರಿ ಕೇವಲ ಸರ್ಕಾರದ್ದು ಮಾತ್ರವಲ್ಲ.

ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಜೈಲಿನಲ್ಲಿ ಎರಡು ಕೊಲೆಗಳಾಯಿತು. ಆ ಕೃತ್ಯ ನಡೆಸಲು ಯಾರೋ ಒಬ್ಬ ಗ್ರಾಮ ಪಂಚಾಯ್ತಿ ಅಧ್ಯಕ್ಷ ಜೈಲಿನ ಹೊರಗಡೆಯಿಂದ ಕತ್ತಿಯನ್ನು ಎಸೆದಿದ್ದಾನೆ. ಆತ ಯಾವ ಪಕ್ಷಕ್ಕೆ ಸೇರಿದವನು ಎನ್ನುವುದನ್ನು ನಾನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಎಲ್ಲ ಕಡೆಗಳಲ್ಲಿ ಪೊಲೀಸರು ಆರೋಪಿಗಳನ್ನು ಹಿಡಿದು ಚಾರ್ಜ್‌ಶೀಟ್ ಹಾಕಿ ಶಿಕ್ಷೆ ನೀಡಿದರೆ, ನಮ್ಮ ಜಿಲ್ಲೆಯಲ್ಲಿ ಪೊಲೀಸಿನವರ ಅಗತ್ಯವಿಲ್ಲ. 'ನೈತಿಕ ಪೊಲೀಸ್ ಗಿರಿ' ಎನ್ನುವ ಹೊಸ ವ್ಯವಸ್ಥೆ ಹುಟ್ಟಿಕೊಂಡಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಅಲ್ಲಿ ಪೊಲೀಸ್ ವ್ಯವಸ್ಥೆ ಎಷ್ಟು ವಿಫಲವಾಗಿದೆ ಎನ್ನುವುದನ್ನು ಅವರು ಹೇಳುತ್ತಿದ್ದಾರೆ.

**ಡಾಃಜಿ.ಪರಮೇಶ್ವರ್(ಗೃಹ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು ಸರಿಯಾಗಿದೆ. 'ನೈತಿಕ ಪೊಲೀಸ್‌ಗಿರಿ' ಮಾಡುವುದಕ್ಕೆ ಯಾರು ಹೊರಟಿದ್ದಾರೆ

unedited copy

ಎನ್ನುವುದನ್ನು ಅವರು ಮುಂದೆ ಹೇಳುತ್ತಾರೆ ಮಾನ್ಯ ಶ್ರೀನಿವಾಸ ಪೂಜಾರಿಯವರು ಸ್ವಲ್ಪ ಶಾಂತಿಯಿಂದ ಕೇಳಬೇಕಾಗಿದೆ.

(ಮುಂದುವರಿದಿದೆ)

unedited copy

(30) 03-03-2016 1.10 MD-AK

(ಸಭಾಪತಿಯವರ ಉಪಸ್ಥಿತಿ)

(ಗೊಂದಲ)

**ಡಾ॥ ಜಿ.ಪರಮೇಶ್ವರ್:–** ಅವರು ಏನು ಹೇಳುತ್ತಿದ್ದಾರೆ ಎಂಬುದನ್ನು ದಯಮಾಡಿ ಕೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಅವರು ಹೇಳುವುದನ್ನು ಸಹಿಸುವುದಕ್ಕಾಗುವುದಿಲ್ಲವೆಂದರೆ ಎಷ್ಟು intolerance ಇದೆ ಎಂಬುದನ್ನು ಯೋಚಿಸಿ. ಅವರು ಇರುವ ಪರಿಸ್ಥಿತಿಯನ್ನು ಹೇಳುತ್ತಿದ್ದಾರೆ. ಅದನ್ನು ಕೇಳುವಷ್ಟು ಸೌಜನ್ಯತೆ ನಿಮಗೆ ಇಲ್ಲ.

**ಸಭಾಪತಿಯವರು:–** ಮಧ್ಯದಲ್ಲಿ ಯಾರೂ ಮಾತನಾಡಬೇಡಿ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಐವಾನ್ ಡಿ'ಸೋಜ಼ಾರವರೆ ದಯಮಾಡಿ ತಮ್ಮ ಮಾತುಗಳನ್ನು ಮುಗಿಸಿ. ಈಗಾಗಲೇ ಸಮಯವಾಗಿದೆ. ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಂಡಿಸಿರುವ ನಿರ್ಣಯವನ್ನು ನಾನು ಅನುಮೋದಿಸುತ್ತೇನೆಂದು ಹೇಳಿ. ನೀವು ನಿರ್ಣಯವನ್ನು ಅನುಮೋದಿಸುವುದಿಲ್ಲವೇ? ನಿಮಗೆ ಕೊಟ್ಟಿರುವ ಸಮಯ ಮುಗಿದಿದೆ, ಬೇಗ ಮುಗಿಸಿ.

**ಶ್ರೀ ಐವಾನ್ ಡಿ'ಸೋಜ಼ಾ (ನಾಮ ನಿರ್ದೇಶಿತರು) :–** ಮಾನ್ಯ ಸಭಾಪತಿಯವರೆ, ನಾನು ಎರಡು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. I will just finish it and take it up. Moral policing ಎಂದು ಹೇಳುವವರು ಎಲ್ಲಿಯವರೆಗೆ ಎಂದರೆ ಜನಗಳನ್ನು ಹಿಡಿಯುವ ಅಧಿಕಾರವನ್ನು ಇವರಿಗೆ ಯಾರು ಕೊಟ್ಟವರು? ಮಾಲ್‌ನಲ್ಲಿ ಒಂದು ಹುಡುಗ ಮತ್ತು ಹುಡುಗಿ ಬೇರೆ ಬೇರೆ ಕೋಮಿನವರು ಕುಳಿತುಕೊಂಡಿದ್ದರೆ ಅವರನ್ನು ಎಳೆದು ತಂದು ಕಂಬಕ್ಕೆ ಕಟ್ಟಿ ಹಾಕಿ ಅವರನ್ನು naked ಮಾಡಿ ಹೊಡೆಯುತ್ತೀರಲ್ಲಾ?

(ಗೊಂದಲ)

**Mr. CHAIRMAN:** Why do you take it on your head?

unedited copy

**ಶ್ರೀ ಐವಾನ್ ಡಿ'ಸೋಜ಼ಾ:–** ಅವರು ಯಾವ ಪಕ್ಷಕ್ಕೆ, ಎಲ್ಲಿಗೆ ಸೇರಿದವರು ಎಂಬ ವಿವರಗಳನ್ನು ತರಿಸಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಐವಾನ್ ಡಿ'ಸೋಜ಼ಾರವರೆ, ನೀವು ನಿಮ್ಮ ಮಾತುಗಳನ್ನು ಮುಗಿಸುವುದಿಲ್ಲವೇ? ದಯಮಾಡಿ ಕುಳಿತುಕೊಳ್ಳಿ. ಇಲ್ಲದೇ ಇದ್ದರೆ ನಾನು ನಿಂತುಕೊಳ್ಳುತ್ತೇನೆ.

**ಶ್ರೀ ಐವಾನ್ ಡಿ'ಸೋಜ಼ಾ:–** ಮಾನ್ಯ ಸಭಾಪತಿಯವರೆ, ಈ ದ್ವೇಷದ ರಾಜಕಾರಣದ ಬಗ್ಗೆ, ಈ ದ್ವೇಷದ ವಿಚಾರದ ಬಗ್ಗೆ ಕ್ರಮ ತೆಗೆದುಕೊಳ್ಳಲಿಕ್ಕೆ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಜಿಲ್ಲೆಯಲ್ಲಿ ಪೊಲೀಸ್ ಬಲವನ್ನು ವೃದ್ಧಿಸುವಂಥ ಅವಕಾಶವಿದೆ. ಆದ್ದರಿಂದ ಪೊಲೀಸ್ ಬಲವನ್ನು ವೃದ್ಧಿಸಬೇಕು. ಯಾರು ಇಂತಹ ಕೃತ್ಯಗಳಲ್ಲಿ ಭಾಗವಹಿಸುತ್ತಾರೆ, ಅದು ಪ್ರಚೋದನಕಾರಿ ಭಾಷಣ ಇರಬಹುದು, moral policing ಇರಬಹುದು, ಅನಾವಶ್ಯಕವಾಗಿ ಕೊಲೆ ಮಾಡತಕ್ಕಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥಾದ್ದನ್ನು ನಾನು ಗೃಹ ಸಚಿವರಿಗೆ ಒತ್ತಾಯ ಮಾಡುತ್ತೇನೆ. ಡಾ॥ ವೀರಣ್ಣ ಮತ್ತಿಕಟ್ಟಿಯವರು ಮಂಡಿಸಿರುವಂಥ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ.

**ಶ್ರೀ ಗೋ.ಮಧುಸೂದನ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ತಮಗೆ ಪತ್ರವನ್ನು ಬರೆದಿದ್ದೇನೆ. ಆ ಪತ್ರದಲ್ಲಿರುವಂತೆ ಈ ಸದನದಲ್ಲಿ 2013–15ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ 75ನೇ ವರದಿ ದಿ: 25–06–2014ರಲ್ಲಿ ಮಂಡಿಸಲಾಗಿದೆ. ಹೀಗೆ ಮಂಡಿಸಲಾಗಿರುವ ಈ ಒಂದು ವರದಿ ಏನಿದೆ, ಈ ವರದಿಗೆ ಸಂಬಂಧಪಟ್ಟ ಹಾಗೆ ಡಾ॥ ಶಿವಯೋಗಿಸ್ವಾಮಿ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ಮೋನಪ್ಪ ಭಂಡಾರಿಯವರು....

**ಸಭಾಪತಿಯವರು:–** ವಿವರಗಳು ಬೇಡ, ಏನಾಗಬೇಕೆಂಬುದನ್ನು ಹೇಳಿ. ಪೀಠಿಕೆಯೇ ಅರ್ಧ ಗಂಟೆ ಆಗುತ್ತದೆ.

unedited copy

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ದಯಮಾಡಿ ತಾವು ನನ್ನ ರಕ್ಷಣೆಗೆ ಬರಬೇಕು. ನಾನು ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಿದ್ದೇನೆ. ದಯಮಾಡಿ ತಾವು ನನ್ನ ಹಕ್ಕನ್ನು ಮೊಟಕು ಮಾಡಬೇಡಿ.

**ಸಭಾಪತಿಯವರು:-** ಆಯಿತು, ಪೀಠಿಕೆ ಬೇಡ ವಿಷಯಕ್ಕೆ ಬನ್ನಿ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ಕಳೆದ ಬಾರಿ ತಾವು ಕೊಟ್ಟಂಥ ಒಂದು ರೂಲಿಂಗ್ ಏನಿದೆ, ಅದು ಪಾಲನೆಯಾಗಿಲ್ಲ ಎನ್ನುವ ಕಾರಣಕ್ಕೋಸ್ಕರವಾಗಿ....

**ಶ್ರೀ ಹೆಚ್.ಎಂ.ರೇವಣ್ಣ;-** ಮಾನ್ಯ ಸಭಾಪತಿಯವರೆ, point of order. ಇವರು ಯಾವ ನಿಯಮಗಳಡಿಯಲ್ಲಿ ಕೇಳುತ್ತಿದ್ದಾರೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ಅದು ಏನೆಂದು ಹೇಳಿದರೂ ಸಹ ಅವರಿಗೆ ಆ ವಿಚಾರ ಮರೆತು ಹೋಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಯಾವ ವಿಚಾರ ಎಂದು ಅವರು ಹೇಳಬೇಕಲ್ಲಾ. ಸುಮ್ಮನೆ ಎದ್ದು ನಿಂತು ಮಾತನಾಡಿದರೆ ಹೇಗೆ?

**ಸಭಾಪತಿಯವರು:-** ಅವರು ಹೇಳಬೇಕಾ. ಅವರು ಮಾತನಾಡುತ್ತಾರೆ ಕೇಳಿ.

**Sri V.S.UGRAPPA:-** Mr. Chairman, Sir, point of order.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇವರು point of order ಎನ್ನುತ್ತಾರೆ, ಫೋಟೋ ತೋರಿಸುತ್ತಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಚಾರ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಇಲ್ಲ. ನಿಯಮಾವಳಿಗಳು ಪಾಲನೆಯಾಗಬೇಕು.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ನಾನು ನಿಮ್ಮ point of order ಅನ್ನು ಒಪ್ಪುವುದಿಲ್ಲ. ಮಾನ್ಯ ಮಧುಸೂದನ್‌ರವರೆ, ದಯಮಾಡಿ ನಿಮ್ಮ ಮಾತುಗಳನ್ನು ಬೇಗ ಮುಗಿಸಿ. Come to the point.

unedited copy

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೆ, ತಾವು ಸದನದಲ್ಲಿ ಒಂದು ತೀರ್ಪನ್ನು ಕೊಟ್ಟಿದ್ದೀರಿ.

**ಸಭಾಪತಿಯವರು:–** ನೀವು ವಿಷಯಕ್ಕೆ ಬರುವುದಿಲ್ಲ, ನೀವು ಪೀಠಿಕೆ ಹಾಕುತ್ತಿದ್ದೀರಿ. Come to the point.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೆ, ನಾನು ಅದನ್ನೇ ಹೇಳುತ್ತಿದ್ದೇನೆ. ತಾವು ತಮ್ಮ ತೀರ್ಪಿನಲ್ಲಿ ಹಕ್ಕುಬಾಧ್ಯತಾ ಸಮಿತಿಯು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಕಾಯಿದೆ, 1994ರ ಕಲಂ 10(2) ರ ಅನ್ವಯ ಆಯೋಗದ ವರದಿಗಳು ಹಾಗೂ ಅದರ ಶಿಫಾರಸ್ಸುಗಳು ಅಂಗೀಕಾರ ಅಥವಾ ನಿರಾಕರಣೆ ಎರಡು ಸಂದರ್ಭಗಳಲ್ಲಿ ಕೈಗೊಂಡ ಕ್ರಮದ ವರದಿಯೊಂದಿಗೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವುದು ಕಡ್ಡಾಯವಾಗಿರುತ್ತದೆ ಎಂಬ ಅಂಶಗಳನ್ನು ಗಮನಿಸುತ್ತಾ, ಹಾಗೆಯೇ ಮೇಲ್ಕಂಡ ರಾಜ್ಯ ಅಲ್ಪಸಂಖ್ಯಾತರ ಆಯೋಗದ ವರದಿಯನ್ನು ಈ ಕೂಡಲೇ ಸದನದಲ್ಲಿ ಮಂಡಿಸುವಂತೆ ರಾಜ್ಯ ಸರ್ಕಾರಕ್ಕೆ ನಾನು ನಿರ್ದೇಶಿಸುತ್ತೇನೆಂದು ಹೇಳಿ ಇದೇ ಸದನದಲ್ಲಿ ದಿ:30–07–2014ರಲ್ಲಿ ತಾವು ಒಂದು ರೂಲಿಂಗ್‌ನ್ನು ಕೊಟ್ಟಿದ್ದೀರಿ. ಆದರೆ ಇಲ್ಲಿಯವರೆವಿಗೂ ಸಹ ಆ ರೂಲಿಂಗ್ ಪಾಲನೆಯಾಗಿರಲಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಉಚ್ಛ ನ್ಯಾಯಾಲಯದಲ್ಲಿ ಒಬ್ಬರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಾಕಿದ್ದರು. ಆ ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಾಕಿದ್ದಂಥ ಸಂದರ್ಭದಲ್ಲಿ ಒಂದು ಅಫಿಡವಿಟ್‌ನ್ನು ಕೊಟ್ಟರು. ಆ ಅಫಿಡವಿಟ್ ನ್ನು ಉಲ್ಲೇಖ ಮಾಡಿ ರಾಜ್ಯ ಉಚ್ಛ ನ್ಯಾಯಾಲಯ ಒಂದು ತೀರ್ಮಾನವನ್ನು ಕೊಟ್ಟಿದೆ.

**Mr. CHAIRMAN:** What do you want? You tell me what do you want.

**Sri S.R. PATIL:** We know all the facts of the case. ಏನಿದೆ ಎಂಬುದನ್ನು ಅವರು ನೇರವಾಗಿ ಹೇಳಿಬಿಡಲಿ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೆ, ಈ ಸಮಯದಲ್ಲಿ ನಾನು ಒಂದೇ ವಿಷಯವನ್ನು ಕೇಳುತ್ತಿರುವುದು. ಉಚ್ಛ ನ್ಯಾಯಾಲಯದಲ್ಲಿ ಮಂಡಿಸುತ್ತೇವೆಂದು ಹೇಳಿದ್ದಾರೆ. ಕಳೆದ ಬಾರಿ ನಾನೇ ಈ ಸದನದಲ್ಲಿ ಸತ್ಯಾಗ್ರಹ ಕುಳಿತಿದ್ದಂತಹ ಸಂದರ್ಭದಲ್ಲಿ ಸನ್ಮಾನ್ಯ ಸಭಾನಾಯಕರು ಸಹ ಇದನ್ನು

ಕೂಡಲೇ ಮಂಡಿಸುತ್ತೇನೆಂದು ಹೇಳಿದ್ದರು. ಆದರೆ ಇಲ್ಲಿಯವರೆವಿಗೂ ಮಂಡಿಸಿಲ್ಲ. ನಾನು ಈ ಸಮಯದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಕೇಳುವುದೇನೆಂದರೆ, ದಯಮಾಡಿ ಈ ಸದನದ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಒಬ್ಬ ಮಂತ್ರಿಗಳ ಬಗ್ಗೆ ಹಕ್ಕುಚ್ಯುತಿ ಚರ್ಚೆ ಅರ್ಧಕ್ಕೆ ನಿಂತಿದೆ. ಆದ್ದರಿಂದ ಆ ವರದಿಯನ್ನು ಕೂಡಲೇ ಸದನದಲ್ಲಿ ಮಂಡಿಸಿ ಎಂದು ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಮಧುಸೂದನ್‌ರವರು ತಮಗೆ ಒಂದು ಮನವಿಯನ್ನು ಮಾಡಿ ಈ ವರದಿಯನ್ನು ಹಿಂದೆ ಸದನದಲ್ಲಿ ಚರ್ಚೆಯಾದಂಥ ರೀತಿಯಲ್ಲಿ ಮಂಡನೆ ಮಾಡಬೇಕೆಂದು ಹೇಳಿದರು. ಅದು ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿಯೂ ಸಹ ತೀರ್ಮಾನವಾಗಿದೆ. ಫೆಬ್ರವರಿಯಲ್ಲಿ ನಡೆಯತಕ್ಕಂಥ ಅಧಿವೇಶನದಲ್ಲಿ ಮಂಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಭಾನಾಯಕರು ಸಹ ಹೇಳಿದ್ದಾರೆ. ಇವತ್ತು ಸಚಿವ ಸಂಪುಟದಲ್ಲಿಯೂ ಸಹ ಈ ವಿಚಾರ ವ್ಯಾಪಕವಾಗಿ ಚರ್ಚೆಯಾಗಿದೆ. ನಾವು ಆದಷ್ಟು ಬೇಗ ಅದನ್ನು ಮಂಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಏನು ಚರ್ಚೆ ಆಯಿತು, ಏನು ತೀರ್ಮಾನವಾಯಿತು ಎನ್ನುವುದನ್ನು ಅವರು ಸ್ಪಷ್ಟವಾಗಿ ಹೇಳಬೇಕು. ಏಕೆಂದರೆ ಇದನ್ನು ಸುಮ್ಮನೆ ಎಳೆದುಕೊಂಡು ಹೋಗುವುದು ಒಳ್ಳೆಯದಲ್ಲ. ನಿನ್ನೆಯ ದಿವಸ ಅಲ್ಲಿ ಏನು ತೀರ್ಮಾನವಾಯಿತು ಎನ್ನುವುದನ್ನು ಅವರು ಸ್ಪಷ್ಟವಾಗಿ ಹೇಳಲಿ. ಇದರಲ್ಲಿ ಏಕೆ ಹಿಂದೆ–ಮುಂದೆ ನೋಡಬೇಕು. ಇದಕ್ಕೆ ಆದಷ್ಟು ಬೇಗ ಎಂದು ಏಕೆ ಹೇಳಬೇಕು?

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಈ ವಿಚಾರದ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ, ಇದು ಮಧುಸೂದನ್‌ರವರನ್ನೊಳಗೊಂಡಂತೆ ಎಲ್ಲರಿಗೂ ಗೊತ್ತಿರುವಂಥ ವಿಚಾರವೇ ಆಗಿದೆ. ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಮಾನ್ಯ ಸಭಾಧ್ಯಕ್ಷರು ಕೊಟ್ಟಿರತಕ್ಕಂಥ ತೀರ್ಮಾನವೂ ಸಹ ಎಲ್ಲರಿಗೂ ಗೊತ್ತಿರುವಂಥಾದ್ದು. ತಮಗೂ ಸಹ ಗೊತ್ತಿರುವಂತೆ ಇವತ್ತು ಸಹ ಸಚಿವ ಸಂಪುಟ

unedited copy

ಸಭೆಯಲ್ಲಿ ಅದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ. ನಮ್ಮ ಕಮಿಟ್‌ಮೆಂಟ್ ಪ್ರಕಾರವೇ ಆದಷ್ಟು ಬೇಗ ಫೆಬ್ರವರಿ ಅಧಿವೇಶನದಲ್ಲಿ ಮಂಡಿಸುತ್ತೇವೆಂದು ನಾವು ಹೇಳಿದ್ದೇವೆ. ಫೆಬ್ರವರಿ ಅಧಿವೇಶನದಲ್ಲಿ ನಾವು ಖಂಡಿತವಾಗಿ ವರದಿಯಲ್ಲಿ ಮಂಡಿಸುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಏನಾಯಿತು ಎಂಬುದನ್ನು ಹೇಳಿ. ನೀವು ಇವತ್ತು ಮಂಡಿಸುತ್ತೀರೋ ಅಥವಾ ನಾಳೆಯ ದಿವಸ ಮಂಡಿಸುತ್ತೀರೋ ಅದು ಸರ್ಕಾರಕ್ಕೆ ಬಿಟ್ಟದ್ದು. ಫೆಬ್ರವರಿ ಅಧಿವೇಶನದಲ್ಲಿ ಮಂಡಿಸುತ್ತಾರೆ ಎನ್ನುವ ಶಬ್ಧವನ್ನು ನಿನ್ನೆಯ ದಿವಸ ಹೇಳಿಲ್ಲ. That is not the decision that we have taken yesterday.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಫೆಬ್ರವರಿ ಅಧಿವೇಶನ ಎಂದರೆ ಏನು? It is a continued…

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ತಾವಿದ್ದೀರಿ, ಮಾನ್ಯ ಸಭಾನಾಯಕರಿದ್ದಾರೆ ಮತ್ತು ಕಾನೂನು ಸಚಿವರಿದ್ದಾರೆ. ನಾನು ನಿಮ್ಮಗಳ ಬಳಿ ವಾದ ಮಾಡಲು ಖಂಡಿತವಾಗಿ ನಿಂತಿಲ್ಲ. ನಮ್ಮ ಆಸೆ ಏನೆಂದರೆ, ನಿನ್ನೆಯ ದಿವಸ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಏನು ತೀರ್ಮಾನವಾಯಿತು ಅದರ ಪ್ರಕಾರ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರೆ ಮುಗಿಯಿತು. ಇದಿಷ್ಟನ್ನು ಬಿಟ್ಟರೆ ನಾನು ಬೇರೆ ಏನನ್ನು ಹೇಳುವುದಿಲ್ಲ. ಏಕೆಂದರೆ ಇದನ್ನು ಚರ್ಚೆ ಮಾಡುತ್ತಾ ಹೋಗಿ ಸಮಯವನ್ನು ಹಾಳು ಮಾಡಬೇಕೆನ್ನುವ ಆಸೆ ನನಗಿಲ್ಲ. ಏನು ತೀರ್ಮಾನವಾಗಿದೆ, ಆ ತೀರ್ಮಾನದ ಪ್ರಕಾರ ಸರ್ಕಾರ ನಡೆದುಕೊಳ್ಳುತ್ತದೆಯೋ ಇಲ್ಲವೋ ಎಂಬುದನ್ನಷ್ಟೇ ಹೇಳಲಿ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೆ, ತಾವು ಕೊಟ್ಟಿರುವಂಥ ತೀರ್ಪಿನನ್ವಯ ಈ ವಿಚಾರ ಸಚಿವ ಸಂಪುಟದಲ್ಲಿ ವ್ಯಾಪಕವಾಗಿ ಚರ್ಚೆಯಾಗಿದೆ. ಆದಷ್ಟು ಬೇಗ ಎಂದರೆ ಮಾನ್ಯ ವಿರೋಧ

ಪಕ್ಷದ ನಾಯಕರಿಗೂ ಸಹ ಗೊತ್ತಿದೆ. ಅವರು ಸಹ ಉಪ ಮುಖ್ಯಮಂತ್ರಿಗಳಾಗಿದ್ದವರು. ಸಚಿವ ಸಂಪುಟ ಸಭೆ ಬೆಳಿಗ್ಗೆ 11.00 ಗಂಟೆಗೆ ಮುಗಿದಿದೆ. ಅದನ್ನು ಮಂಡಿಸಬೇಕೆಂದರೆ ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ನಾವೇನು ಕಮಿಟ್‌ಮೆಂಟ್ ಕೊಟ್ಟಿದ್ದೇವೆ ಅದರ ಪ್ರಕಾರ ಫೆಬ್ರವರಿಯಲ್ಲಿ ಪ್ರಾರಂಭವಾಗತಕ್ಕಂಥ ಅಧಿವೇಶನದಲ್ಲಿ ವರದಿಯನ್ನು ಮಂಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆ. ಅಷ್ಟರಲ್ಲಿಯೇ ಅದಕ್ಕೆ ಸೀಮಿತವಾಗಿಯೇ ನಾವು ಮಂಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದಕ್ಕೆ ನನ್ನ ಅಭ್ಯಂತರವಿಲ್ಲ. ಅವರು ಹೀಗೆ ಮಾತನಾಡಬೇಕು ಅಥವಾ ಹಾಗೆ ಮಾತನಾಡಬೇಕೆಂದು ಹೇಳುವುದಕ್ಕೆ ನನಗೆ ಅಧಿಕಾರವಿಲ್ಲ. ನಾನು ಮಾನ್ಯ ಸಭಾಪತಿಯವರಿಗೆ ಕೇಳುತ್ತೇನೆ. ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಆದಂಥ ತೀರ್ಮಾನಕ್ಕೆ ಇವರು ಬದ್ಧರೋ ಅಲ್ಲವೋ ಎನ್ನುವುದು ಇಲ್ಲಿರುವಂಥ ಪ್ರಶ್ನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಆ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ.

(ಮುಂದು)

unedited copy

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

**ಶ್ರೀ ಕೆ.ಬಿ.ಶಾಣಪ್ಪ:-**ನಿನ್ನೆ ಏನು ಹೇಳಿದ್ದೀರಿ ಎನ್ನುವುದನ್ನು ನಿಮಗೆ ನೆನಪು ಮಾಡಿಸುತ್ತೇನೆ, ಅಲ್ಲಿ ನಾನೂ ಇದ್ದೆ I am also one of the member. ಇವತ್ತು ಪ್ರಯತ್ನ ಮಾಡುತ್ತೇವೆ, ಆಗದೇ ಇದ್ದರೆ ನಾಳೆ tentatively ಇಡುತ್ತೇವೆ ಎಂದು ಮಾನ್ಯ ಸಭಾನಾಯಕರು ಹೇಳಿದರು. ಆಗ ನಾವು, ಬೇಗ ಇಟ್ಟರೆ ಒಳ್ಳೆಯದು ಎಂದು ಹೇಳಿದೆವು. Because, it should not be prolonged. ನೀವು ಈಗ ಫೆಬ್ರವರಿ ಸೆಷನ್‌ನಲ್ಲಿ ಮಂಡಿಸುತ್ತೇವೆ ಎಂದರೆ ಮುಂದೆ ಬರುವ ಅಧಿವೇಶನದಲ್ಲೂ ಮಂಡಿಸಬಹುದು ಎಂದು ಅರ್ಥವಾಗುತ್ತದೆ.

**ಶ್ರೀ ಟಿ.ಬಿ.ಜಯಚಂದ್ರ:-** ನಾವು ಮಂಡಿಸುತ್ತೇವೆ, ಆದರೆ ಇದೇ ನಿಮಿಷದಲ್ಲಿ ಇಷ್ಟೇ ಗಂಟೆಯಲ್ಲಿ ಮಂಡಿಸುತ್ತೇವೆ ಎಂದು ಹೇಳುವುದು ಬೇಡ . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ತೀರ್ಮಾನದ ಪ್ರಕಾರ ಸಂಜೆಯ ಒಳಗೆ ಮಂಡನೆ ಮಾಡುತ್ತೀರಾ? .. .

**ಶ್ರೀ ಟಿ.ಬಿ.ಜಯಚಂದ್ರ:-**ಇವತ್ತು ಕ್ಯಾಬಿನೆಟ್ ಆಗಿದೆ, ವ್ಯಾಪಕವಾಗಿ ಚರ್ಚೆ ಆಗಿದೆ. ಆ ಚರ್ಚೆಯ ಹಿನ್ನೆಲೆಯಲ್ಲಿ ನಾವು ಆದಷ್ಟು ಬೇಗ ಮಂಡಿಸುತ್ತೇವೆ. ಇವತ್ತು ಮಂಡಿಸಬಹುದು, ನಾಳೆ ಮಂಡಿಸಬಹುದು ಅಥವಾ ನಾಳಿದ್ದು ಮಂಡಿಸಬಹುದು. ಒಟ್ಟಿನಲ್ಲಿ ನಾವು ಹೇಳಿದ ರೀತಿಯಲ್ಲಿ ಫೆಬ್ರವರಿ ಅಧಿವೇಶನದಲ್ಲೇ ಮಂಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನನ್ನ ಪಾಯಿಂಟ್ ಅದಲ್ಲ. ನಿನ್ನೆ ಏನು ತೀರ್ಮಾನವಾಯಿತು ಅದನ್ನು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:-ನಿನ್ನೆ** ಬಿಎಸಿಯಲ್ಲಿ ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಬಿಎಸಿಯಲ್ಲಿ ಇದು ಚರ್ಚೆಯಾಗಿದೆ ಎನ್ನುವ ಕಾರಣದಿಂದ ಇದಕ್ಕೋಸ್ಕರ ವಿಶೇಷವಾದ ಕ್ಯಾಬಿನೆಟ್ ಕರೆದು, ಮೀಟಿಂಗ್ ಮಾಡಿ ಚರ್ಚೆ ಮಾಡಿದೆವು. ಸರ್ಕಾರ ಕೊಟ್ಟ ಮಾತಿಗೆ ಎಂದೂ ಹಿಂದೆ ಸರಿಯುವುದಿಲ್ಲ. ಫೆಬ್ರವರಿ ಅಧಿವೇಶನದಲ್ಲಿ ಮಂಡಿಸಬೇಕು ಎಂದು ಹೇಳಿರುವ ಹೈಕೋರ್ಟ್‌ನ ಆದೇಶದ ಪ್ರತಿ ಕೂಡ ನಮ್ಮ ಹತ್ತಿರ ಇದೆ. ಇದರ ಬಗ್ಗೆ ಹಿಂದೆ ಬಿಎಸಿಯಲ್ಲಿ ಚರ್ಚೆ ಮಾಡಿ

unedited copy

ಹೇಳಿದ್ದೆವು. ಫೆಬ್ರವರಿ ಅಧಿವೇಶನದಲ್ಲಿ ಮಂಡಿಸುತ್ತೇವೆ ಎಂದು ಸದನದಲ್ಲಿ ಕೂಡ ಹೇಳಿದ್ದೇವೆ. ಆ ಮಾತಿನಿಂದ ನಾವು ಹಿಂದೆ ಸರಿಯುವುದಿಲ್ಲ. ಫೆಬ್ರವರಿ ಅಧಿವೇಶನದಲ್ಲಿ ಮಂಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:**–ಮಾನ್ಯ ಸಭಾಪತಿಗಳೆ, ನೀವು ನಮ್ಮ ರಕ್ಷಣೆಗೆ ಬರಬೇಕು. ನಿನ್ನೆ ತುಂಬಾ ಸ್ಪಷ್ಟವಾಗಿ ಕಾನೂನು ಮಂತ್ರಿಗಳಾದ ಮಾನ್ಯ ಜಯಚಂದ್ರರವರು, ಇವತ್ತು ಬೆಳಿಗ್ಗೆ ಆಗುತ್ತದೆ, ನಾಳೆ ಸಂಜೆಯ ಒಳಗಾದರೂ ಮಂಡಿಸುತ್ತೇವೆ ಎಂದು ಹೇಳಿದರು. ಅಂದರೆ ಇವತ್ತು ಸಂಜೆಯ ಒಳಗೆ ಎಂದರ್ಥ. ಆಗ ಮಾನ್ಯ ಸಭಾನಾಯಕರು, ಒಂದೇ ದಿನದಲ್ಲಿ ಕಷ್ಟವಾಗುತ್ತದೆ, ಇನ್ನೊಂದು ದಿನ ಬೇಕಾಗುತ್ತದೆ ಎಂದು ಹೇಳಿದರು. ಅದಕ್ಕೂ ನಾವು ಒಪ್ಪಿಕೊಂಡೆವು. ಮಾನ್ಯ ಸಭಾಪತಿಗಳೇ ಅಲ್ಲಿ ತಾವೂ ಕೂಡ ಇದ್ದಿರಿ. ತಮ್ಮ ಅಧ್ಯಕ್ಷತೆಯಲ್ಲೇ ಸಭೆ ನಡೆಯಿತು. ಇವತ್ತು ಬೆಳಿಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನವಾಗುತ್ತದೆ, ಈ ಸಂಜೆಯ ಒಳಗೆಯೇ ಮಂಡನೆ ಮಾಡಬೇಕು ಎಂದು ನಾವು ಮನವಿ ಮಾಡಿದಾಗ ಮಾನ್ಯ ಜಯಚಂದ್ರರವರು ಒಪ್ಪಿಕೊಂಡರು. ಆಗ ಮಾನ್ಯ ಸಭಾನಾಯಕರು, ಇಲ್ಲ, ಇನ್ನೊಂದು ದಿನ ಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಆಯಿತು ಎಂದು ನಾವೂ ಹೇಳಿದೆವು. ಇವತ್ತಾದರೆ ಮಂಡನೆ ಮಾಡುತ್ತೇವೆ, ಇಲ್ಲದೇ ಇದ್ದರೆ ನಾಳೆ ಮಾಡುತ್ತೇವೆ ಎನ್ನುವ ಮಾತುಗಳನ್ನು ತಾವು ಹೇಳಿದ್ದೀರಿ. ಹೇಳಿದಿರಿ ತಾನೇ? ಹೀಗಿರುವಾಗ, ಮತ್ತೆ ನೀವು, ಆದಷ್ಟು ಬೇಗ ಮಂಡಿಸುತ್ತೇವೆ ಎನ್ನುವುದು ಸೂಕ್ತವಲ್ಲ. ತಾವು ಹೇಳಿದ ಪ್ರಕಾರ ಇವತ್ತಾದರೆ ಇವತ್ತೇ ಮಂಡಿಸಿ, ಇವತ್ತಾಗದೇ ಇದ್ದರೆ ನಾಳೆ ಮಂಡಿಸುತ್ತೇವೆ ಎಂದು ಏನು ಒಪ್ಪಿಕೊಂಡಿದ್ದೀರೋ ಆ ಪ್ರಕಾರ ನಡೆದುಕೊಳ್ಳುತ್ತೀರಾ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:**– ನಮ್ಮ ಮಾತಿಗೆ ನಾವು ಬದ್ಧರಾಗಿದ್ದೇವೆ. ಬೆಳಿಗ್ಗೆ ಸೇರಿದ ಕ್ಯಾಬಿನೆಟ್‌ನಲ್ಲಿ 11 ಗಂಟೆಯವರೆಗೂ ಈ ಕುರಿತು ಚರ್ಚೆಯಾಗಿದೆ. ಇದನ್ನು ಮಂಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಕ್ಯಾಬಿನೆಟ್ ಆದಮೇಲೆ ಏನೇನು ಪ್ರೊಸಿಜರ್ಸ್ ಇರುತ್ತದೆ ಎನ್ನುವುದು ನಿಮಗೂ ಗೊತ್ತಿದೆ. ಆದಷ್ಟು ಬೇಗ ಮಂಡಿಸುತ್ತೇನೆ. ನಿನ್ನೆ ಬಿಎಸಿಯಲ್ಲಿ ಮಾತನಾಡಿದಂತೆ ಇದರಲ್ಲಿ ನಮ್ಮ ಜವಾಬ್ದಾರಿ ಕೂಡ ಇದೆ. ಆದಷ್ಟು ಬೇಗ ಮಂಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:**–ಸರ್ಕಾರ ಏನು ಹೇಳಿತ್ತೋ ಅದರಂತೆ ನಡೆದುಕೊಳ್ಳಬೇಕು ಎನ್ನುವುದನ್ನು ನಾವು ನೆನಪು ಮಾಡಿಕೊಡುತ್ತಿದ್ದೇವೆ. ಬಿಎಸಿಗೆ ಒಂದು ಪಾವಿತ್ರ್ಯತೆ ಇದೆ. ಅಲ್ಲಿ ನಾವು ಈ ಕುರಿತು

unedited copy

ಪ್ರಸ್ತಾಪ ಮಾಡಿದಾಗ ಇದಕ್ಕೋಸ್ಕರ ಒಂದು ಸಚಿವ ಸಂಪುಟದ ಸಭೆ ಕರೆಯುತ್ತೇವೆ ಎಂದು ಹೇಳಿದಿರಿ, ಸಂತೋಷ. ತಾವು ಸಭೆಯನ್ನು ಕರೆದಿದ್ದೀರಿ. ನಾನು ಅದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಹಕ್ಕುಚ್ಯುತಿ ಸಮಿತಿಯ ಅಧ್ಯಕ್ಷರಾದ ಮಾನ್ಯ ಮಧುಸೂದನ್‌ರವರು ಪ್ರಸ್ತಾಪ ಮಾಡಿದ ವಿಚಾರವಾಗಿ ಸಚಿವ ಸಂಪುಟದ ಸಭೆಯನ್ನು ಕರೆಯುತ್ತಿದ್ದೇವೆ ಎಂದು ತಾವು ಹೇಳಿದಿರಿ. ನಾನು ನಿಜಕ್ಕೂ ಅಭಿನಂದನೆ ಸಲ್ಲಿಸಿದೆ. ಸಂಜೆಯ ಒಳಗೆ ಇದನ್ನು ಕ್ಲಿಯರ್ ಮಾಡಿ ಎಂದು ನಾನು ನಿಮಗೆ ಮನವಿ ಮಾಡಿದೆ. ನೀವು, ಬೆಳಿಗ್ಗೆ ಮುಗಿಯುತ್ತದೆ, ಸಂಜೆಯ ಒಳಗೆ ಮಾಡುತ್ತೇವೆ ಎಂದು ಒಪ್ಪಿಕೊಂಡಿರಿ. ಆದರೆ ಮಾನ್ಯ ಸಭಾನಾಯಕರು, ಸ್ವಲ್ಪ ಕೆಲಸ ಇರುತ್ತದೆ, ಇವತ್ತಾದರೆ ಮಾಡುತ್ತೇವೆ, ಇವತ್ತಾಗದೇ ಇದ್ದರೆ ನಾಳೆ ಮಂಡನೆ ಮಾಡೇ ಮಾಡುತ್ತೇವೆ ಎಂದು ಹೇಳಿದರು. ಹೇಳಿದಿರಿ ತಾನೇ? ಈ ರೀತಿ ಹೇಳಿದ ಮೇಲೆ ಮತ್ತೆ, ಆದಷ್ಟು ಬೇಗ ಮಂಡಿಸುತ್ತೇವೆ ಎಂದು ಏಕೆ ಹೇಳುತ್ತಿದ್ದೀರಿ? ಸದನ ಚೆನ್ನಾಗಿ ನಡೆಯಬೇಕು ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆಯೇ ಹೊರತು ಬೇರೆ ಉದ್ದೇಶದಿಂದ ಹೇಳುತ್ತಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಈಶ್ವರಪ್ಪನವರೇ, ತಾವು ಆಡಳಿತ ಮಾಡಿರುವವರು. ಅದು ಪ್ರಿಂಟ್ ಆಗಬೇಕಾಗುತ್ತದೆ, ಇನ್ನೊಂದು ಆಗಬೇಕಾಗುತ್ತದೆ, ನಂತರ ಅದನ್ನು ಎರಡೂ ಸದನಗಳ ಮುಂದೆ ಇಡಬೇಕಾಗುತ್ತದೆ. . . .

**ಶ್ರೀ ಗೋ.ಮಧುಸೂದನ್:-** ಅದು ಪ್ರಿಂಟ್ ಆಗಿ ರೆಡಿಯಾಗಿದೆ . . .

**ಶ್ರೀ ಟಿ.ಬಿ.ಜಯಚಂದ್ರ:-**ನಾವು ಕೊಟ್ಟ ಮಾತಿನಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಹೇಳಿದಂತೆ ನಾವು ಮಂಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಯಾವಾಗ ಮಂಡಿಸುತ್ತೀರಿ? . . .

**ಶ್ರೀ ಟಿ.ಬಿ.ಜಯಚಂದ್ರ:-** ಯಾವಾಗ, ಎಷ್ಟು ಗಂಟೆಗೆ ಮಂಡಿಸುತ್ತೀರಿ ಎಂದು ಕೇಳಿದರೆ ಹೇಗೇ? . .

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಸಭಾಪತಿಗಳೆ, ತಾವು ಈಗ ಮಧ್ಯೆ ಬರಬೇಕು. ನಿಮ್ಮ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಿತು. ಬಿಎಸಿಯಲ್ಲಿ, ಇವತ್ತಿನ ಸಚಿವ ಸಂಪುಟದಲ್ಲಿ ಇಡುತ್ತೇವೆ, ಪಾಸ್ ಮಾಡುತ್ತೇವೆ, ಇವತ್ತೇ ಸದನದಲ್ಲಿ ಮಂಡಿಸುತ್ತೇವೆ ಎಂದು ಹೇಳಿದರು. ನಂತರ, ಇದಕ್ಕೆ ಒಂದು ದಿನ ಸಮಯ ಬೇಕಾಗುತ್ತದೆ ಎಂದು ಹೇಳಿದರು. ಅಂದರೆ ಇವತ್ತು ಅಥವಾ ನಾಳೆ ಮಂಡಿಸುತ್ತೇವೆ ಎಂದು ಒಪ್ಪಿದ್ದಾರೋ ಇಲ್ಲವೋ? ಮಾನ್ಯ ಸಭಾಪತಿಗಳೆ ನಾನು ನಿಮಗೆ ಈ ನೇರ ಪ್ರಶ್ನೆಯನ್ನು ಕೇಳುತ್ತೇನೆ. ಅವರು ಒಪ್ಪಿದ್ದರೋ ಇಲ್ಲವೋ ದಯವಿಟ್ಟು ಹೇಳಿ.

**ಶ್ರೀ ಟಿ.ಬಿ.ಜಯಚಂದ್ರ:-** ನಾವು ಹೇಳಿದ ರೀತಿಯಲ್ಲೇ ವಿಶೇಷವಾದ ಸಂಪುಟ ಸಭೆಯನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಿದ್ದೇವೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಇದನ್ನು ಮಂಡಿಸುವುದಕ್ಕೆ ಅದು ಪ್ರಿಂಟ್ ಆಗಬೇಕೋ ಬೇಡವೋ? . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ಅದು ನನಗೆ ಗೊತ್ತಿಲ್ಲ . . . (ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:-** ಅದನ್ನು ಅಜೆಂಡಾದಲ್ಲಿ ತಂದು ಸದನದಲ್ಲಿ ಮಂಡಿಸಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಈ ಸದನ ಸರಿಯಾಗಿ ನಡೆದುಕೊಂಡು ಹೋಗಬೇಕು ಎನ್ನುವುದು ನಮ್ಮ ಆಸೆಯಾಗಿದೆ. ನಿಮ್ಮ ಮಾತನ್ನು ನೀವೇ ಕದ್ದರೇ . . .

**ಶ್ರೀ ಟಿ.ಬಿ.ಜಯಚಂದ್ರ:-** ಆ ಪ್ರಶ್ನೆಯೇ ಬರುವುದಿಲ್ಲ. ಬಿಎಸಿಯಲ್ಲಿ "ಆದಷ್ಟು ಬೇಗ" ಎಂದು ಹೇಳಿದ್ದೆವು. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಕುಳಿತು ಚರ್ಚೆ ಮಾಡಿದ್ದೇವೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ನಾನು ಇಲ್ಲ ಎಂದು ಹೇಳುತ್ತಿಲ್ಲ. ಅದಕ್ಕೋಸ್ಕರ ನಾನು ನಿಮಗೆ ಅಭಿನಂದನೆ ಸಲ್ಲಿಸಿಬಿಟ್ಟೆ. . . .

**ಶ್ರೀ ಟಿ.ಬಿ.ಜಯಚಂದ್ರ:-** ಇಷ್ಟೇ ಗಂಟೆಯಲ್ಲಿ, ಇಷ್ಟೇ ನಿಮಿಷದಲ್ಲಿ ಮಂಡಿಸುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ . . .

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:-**ನಾನು ಆ ರೀತಿ ಹೇಳಿಲ್ಲ. ನೀವು ಏನು ಹೇಳಿದಿರೋ ಅದರ ಪ್ರಕಾರ ನಡೆದುಕೊಳ್ಳಿ. ಮಾನ್ಯ ಸಭಾಪತಿಗಳೆ, ನೀವು ನಮ್ಮ ನೆರವಿಗೆ ಬರಬೇಕು. ಮಾನ್ಯ ಸಭಾಪತಿಗಳೆ, ನಿಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ರೀತಿ ತೀರ್ಮಾನವಾಗಿತ್ತೋ ಇಲ್ಲವೋ? ಆ ರೀತಿ ಆಗಿದ್ದರೆ ಅವರು ನಡೆದುಕೊಳ್ಳಬೇಕೋ ಬೇಡವೋ? ಸುಮ್ಮನೆ ಸದನದ ಸಮಯವನ್ನು ವ್ಯರ್ಥ ಮಾಡಬಯಸುವುದಿಲ್ಲ. ಸರ್ಕಾರ ಏನು ಒಪ್ಪಿಕೊಂಡಿದೆಯೋ ಅದರ ಪ್ರಕಾರ ನಡೆದುಕೊಳ್ಳಬೇಕಾದುದು ಅದರ ಕರ್ತವ್ಯ. ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಆ ಸಭೆಯಲ್ಲಿ ಏನು ನಡೆಯಿತು ಹೇಳಿಬಿಡಿ. ಆಮೇಲೆ ಮುಂದಿನ ತೀರ್ಮಾನವನ್ನು ನಾವು ಮಾಡುತ್ತೇವೆ.

**ಶ್ರೀ ಟಿ.ಬಿ.ಜಯಚಂದ್ರ :-** ಮಾನ್ಯ ಸಭಾಪತಿಗಳೆ, ಸೆಕ್ಷನ್ 10(2) ಪ್ರಕಾರ ಶಿಫಾರಸ್ಸುಗಳನ್ನು ಮಂಡನೆ ಮಾಡಬೇಕಾದರೆ ಅದಕ್ಕೆ ಕಾರಣಗಳನ್ನು ಕೊಡಬೇಕಾಗುತ್ತದೆ. ಅದಕ್ಕಾಗಿ ಒಂದು ಪ್ರೊಸೀಜರ್ ಇದೆ. ಅದರ ಪ್ರಕಾರ ಮಾಡಿ ಅದನ್ನು ಅಜೆಂಡಾದಲ್ಲಿ ತಂದು ಉಭಯ ಸದನಗಳಲ್ಲೂ ಮಂಡಿಸಬೇಕಾಗುತ್ತದೆ. ಆ ಕಾರಣಕ್ಕೋಸ್ಕರ "ಆದಷ್ಟು ಬೇಗ" ಎಂದು ಹೇಳಿದೆವು.

**ಶ್ರೀ ಕೆ.ಎಸ್.ಈಶ್ವರಪ್ಪ:-**ನಾನು ನಿಮ್ಮ ಬಗ್ಗೆ ಪ್ರಶ್ನೆ ಮಾಡುತ್ತಲೇ ಇಲ್ಲ. ಮಾನ್ಯ ಸಭಾಪತಿಗಳೆ, ನಾನು ನೇರವಾಗಿ ನಿಮ್ಮನ್ನು ಪ್ರಶ್ನೆ ಕೇಳುತ್ತೇನೆ. ನಿನ್ನೆ ಸಭೆ ನಡೆಯಿತು. ಮಂಡನೆಗೆ ಪ್ರೊಸೀಜರ್ ಏನಿರುತ್ತದೆ, ಏನು ಮಾಡಬೇಕು, ಏನು ಬಿಡಬೇಕು ಎನ್ನುವುದು ಕಾನೂನು ಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ನಿಮಗೆ ಮತ್ತು ನನಗೆ ಎಲ್ಲರಿಗೂ ಗೊತ್ತಿರುತ್ತದೆ. ಇದೆಲ್ಲಾ ಗೊತ್ತಿದ್ದೂ ನಾವು ಪ್ರಸ್ತಾಪ ಮಾಡಿದಾಗ, ಬೆಳಿಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ, ಸಂಜೆಯ ಒಳಗೆ ಕ್ಲಿಯರ್ ಮಾಡಿ ಎಂದು ಕೇಳಿದಾಗ, ಅದನ್ನು ಕಾನೂನು ಮಂತ್ರಿಗಳು ಒಪ್ಪಿಕೊಂಡರು. ನಂತರ, ಮಾನ್ಯ ಸಭಾನಾಯಕರು ಇದಕ್ಕೆ ಇನ್ನೊಂದು ದಿನ ಬೇಕು ಎಂದು ಹೇಳಿದರು. ಇವತ್ತೇ ಮಾಡುತ್ತೇವೆ, ಇಲ್ಲದಿದ್ದರೆ ನಾಳೆ ಮಾಡೇ ಮಾಡುತ್ತೇವೆ ಎಂದು ಹೇಳಿದ್ದರೋ ಇಲ್ಲವೋ ಎನ್ನುವುದನ್ನು ತಾವು ಸ್ಪಷ್ಟ ಮಾಡಬೇಕು.

**ಸಭಾಪತಿಗಳು:-** ಮಾನ್ಯ ಸಭಾನಾಯಕರು ಮತ್ತು ಮಾನ್ಯ ಕಾನೂನು ಸಚಿವರು ಗಮನಿಸಬೇಕು. ನಿನ್ನೆ ಇದೇ ರೀತಿಯಲ್ಲಿ ತೀರ್ಮಾನವಾಗಿದ್ದು ನಿಜ. ಇವತ್ತಾದರೆ ಮಂಡಿಸುತ್ತೇವೆ ಇಲ್ಲದಿದ್ದರೆ ನಾಳೆ ಮಂಡಿಸುತ್ತೇವೆ ಎನ್ನುವ ಮಾತುಗಳನ್ನು ತಾವು ಹೇಳಿದಾಗ ಅದನ್ನು ಸಭೆಯಲ್ಲಿದ್ದವರೆಲ್ಲರೂ ಒಪ್ಪಿಕೊಂಡರು.

unedited copy

ತಮಗೇನಾದರೂ ಈ ಹಿನ್ನೆಲೆಯಲ್ಲಿ ಕ್ಲ್ಯಾರಿಫಿಕೇಷನ್ ಇದ್ದರೆ, ಅಂದರೆ, ನಿನ್ನೆ ತೀರ್ಮಾನ ಮಾಡುವಾಗ ಒಪ್ಪಿಕೊಂಡಿದ್ದರಲ್ಲಿ ಸಣ್ಣ–ಪುಟ್ಟ ಬದಲಾವಣೆ ಮಾಡಬೇಕು ಎಂದೆನಿಸಿದ್ದರೆ ಅದು ಏನು ಎನ್ನುವುದನ್ನು ಸದನಕ್ಕೆ ಹೇಳುವುದು ಒಳ್ಳೆಯದು. ಏಕೆಂದರೆ ಮತ್ತೆ ನಾವು ಬಿಸ್‌ನೆಸ್ ಅಡ್ವೈಸರಿ ಕಮಿಟಿ ಕರೆಯುವುದಕ್ಕೆ ಆಗುವುದಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಗಳೆ, ವರದಿಯನ್ನು ಮಂಡಿಸುವುದರಲ್ಲಿ ವಿಳಂಬ ಮಾಡುತ್ತೇವೆ ಎಂದು ಭಾವಿಸುವುದು ಬೇಡ. ನಾವು ನಿನ್ನೆ ಹೇಳಿದ ರೀತಿಯಲ್ಲಿ ಈ ಕುರಿತು ಇವತ್ತು ಬೆಳಿಗ್ಗೆ

ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದ್ದೇವೆ, ವ್ಯಾಪಕವಾಗಿ ಚರ್ಚೆ ಆಗಿದೆ. ಕ್ಯಾಬಿನೆಟ್ ಮುಗಿಸಿಕೊಂಡೇ ಸದನಕ್ಕೆ ಬಂದಿದ್ದೇವೆ. ಹಾಗಾಗಿ ವರದಿಯನ್ನು ಮಂಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ, ಮಾಡಿಯೇ ಮಾಡುತ್ತೇವೆ. ಆದರೆ ಅದನ್ನು ಇವತ್ತೇ ಮಾಡುತ್ತೇವೆಯೋ ನಾಳೆ ಮಾಡುತ್ತೇವೆಯೋ ಎನ್ನುವುದಲ್ಲ. ಹಿಂದೆ ಏನು ಕಮಿಟ್‌ಮೆಂಟ್ ಆಗಿದೆ? ಫೆಬ್ರವರಿಯಲ್ಲಿ ನಡೆಯುವ ಅಧಿವೇಶನದಲ್ಲಿ ಮಂಡಿಸಬೇಕೆಂದು ಏನು ಹೈಕೋರ್ಟ್ ಆದೇಶ ಕೊಟ್ಟಿದೆಯೋ ಮತ್ತು ಸಭಾಧ್ಯಕ್ಷರು ಏನು ತೀರ್ಪು ಕೊಟ್ಟಿದ್ದಾರೋ ಆ ಪ್ರಕಾರವೇ ಮತ್ತು ನಿನ್ನೆ ನಾವು ಒಪ್ಪಿಕೊಂಡಿರುವ ಪ್ರಕಾರ ಆದಷ್ಟು ಬೇಗ ಮಂಡಿಸುತ್ತೇವೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಗಳೆ, ಹಾಗಾದರೆ ಅವರು ಒಂದು ಕ್ಲ್ಯಾರಿಫಿಕೇಷನ್ ಕೊಡಲಿ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆಯಾಗಿ ಸದನ ಮುಗಿದು ಹೋಗುತ್ತದೆ. ನಂತರ ಮತ್ತೆ ಬಜೆಟ್ ಅಧಿವೇಶನ ಪ್ರಾರಂಭವಾಗುತ್ತದೆ. ಹಾಗಾದರೆ ಅವರು, ಇವತ್ತೋ, ನಾಳೆಯೋ ಅಥವಾ ಶನಿವಾರದ ಒಳಗೋ ಮಂಡಿಸುತ್ತೇವೆ ಎಂದು ಒಪ್ಪಿಕೊಳ್ಳಲಿ.

**ಶ್ರೀ ಟಿ.ಬಿ.ಜಯಚಂದ್ರ:–**ಮಂಡಿಸುತ್ತೇವೆ ಎಂದು ಒಪ್ಪುತ್ತಿದ್ದೇವೆ. ಆದರೆ ಇಷ್ಟೇ ಗಂಟೆಗೆ ಮಂಡಿಸಿ ಎಂದು ಹೇಳುವುದರಲ್ಲಿ ಏನರ್ಥ ಇದೆ? . . .(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಮಧುಸೂದನ್‌ರವರು ಹೇಳಿದುದಕ್ಕೆ ನಾನು ಒಪ್ಪುವುದಿಲ್ಲ. ಬಿಎಸಿಯಲ್ಲಾಗುವ ತೀರ್ಮಾನಕ್ಕೆ ಒಂದು ಪಾವಿತ್ರ್ಯತೆ ಇರುತ್ತದೆ. . . .

unedited copy

**ಶ್ರೀ ಟಿ.ಬಿ.ಜಯಚಂದ್ರ:–** ಸಚಿವ ಸಂಪುಟ ಸಭೆ ಮುಗಿದ ಮೇಲೂ ನಂತರ ಅದಕ್ಕೆ ಒಂದು ಪ್ರೊಸೀಜರ್ ಇರುತ್ತದೆ. ಸಚಿವ ಸಂಪುಟದಲ್ಲಿ ಒಪ್ಪಿಗೆ ಆದಮೇಲೆ ಅದನ್ನು ಉಭಯ ಸದನಗಳಲ್ಲಿ ಮಂಡಿಸುವುದಕ್ಕೆ ಒಂದು ಪ್ರೊಸೀಜರ್ ಇರುತ್ತದೆ . . .(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–**ನಾನು ಇಲ್ಲ ಎಂದು ಹೇಳುತ್ತಿಲ್ಲ. ಕಾನೂನು ಮಂತ್ರಿಯಾದ ನಿಮಗೆ ನಿನ್ನೆ ಮಾತನಾಡುವಾಗ ಆ ಪ್ರೊಸೀಜರ್‌ಗಳ ಬಗ್ಗೆ ಗೊತ್ತಿರಲಿಲ್ಲವೇ? . . .

**ಶ್ರೀ ಹೆಚ್.ಎಂ.ರೇವಣ್ಣ:–**ಕ್ಯಾಬಿನೆಟ್ ಆಗಿರುವುದು ಇವತ್ತು . . .(ಗೊಂದಲ)

**ಸಭಾಪತಿಗಳು:–** ಸಚಿವರು ಉತ್ತರ ಹೇಳುತ್ತಾರೆ. ನೀವು ಕುಳಿತುಕೊಳ್ಳಿ. . . .(ಗೊಂದಲ)

( ಮುಂದು . . .)

unedited copy

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಎಂ.ರೇವಣ್ಣ:-** ಇವತ್ತು ಕ್ಯಾಬಿನೆಟ್ ಆಗಿರುವುದು.

**ಸಭಾಪತಿಯವರು:-** ರೇವಣ್ಣನವರೇ, ಈಗ ಸಚಿವರು ಮಾತನಾಡುತ್ತಾರೆ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು dictate ಮಾಡುವುದು ಸರಿಯಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇದು dictate ಅಲ್ಲ. ನಿಮ್ಮ ಬದ್ಧತೆಯನ್ನು ನೆನಪು ಮಾಡಿಕೊಡುತ್ತಿದ್ದಾರೆ. ನೀವೇನು ಆಶ್ವಾಸನೆ ಕೊಟ್ಟಿದ್ದೀರಿ ಅದನ್ನು ನೆನಪು ಮಾಡಿಕೊಡುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:-** ರೇವಣ್ಣನವರೇ, ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಲ್ಲಿ ಉತ್ತರ ಕೊಡುವುದಕ್ಕೆ ಅವರಿಗೆ ಶಕ್ತಿ ಇಲ್ಲವೆ?

(ಗೊಂದಲ)

**ಸಭಾಪತಿಯವರು:-** ರೇವಣ್ಣನವರೇ, ಕುಳಿತುಕೊಳ್ಳಿ. ಸಚಿವರು ಮಾತನಾಡುತ್ತಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾವು ಸಚಿವ ಸಂಪುಟದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ನಾನು ಹೇಳಿದ ರೀತಿಯಲ್ಲೇ ವಿಶೇಷವಾಗಿ ಕರೆದು ವ್ಯಾಪಕವಾಗಿ ಚರ್ಚೆ ಮಾಡಿದ್ದೇವೆ. ಅದನ್ನು ಮಂಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಗಂಟೆಯಲ್ಲೇ ಮಾಡಿ ಆ ಗಂಟೆಯಲ್ಲೇ ಮಾಡಿ ಎನ್ನುವುದು ಪ್ರಶ್ನೆಯಲ್ಲ. ನಾವು ಆದಷ್ಟು ಬೇಗ ಮಂಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ತಾವು ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಏನು ಒಪ್ಪಿಕೊಂಡಿದ್ದೀರೋ ಅದನ್ನು ನೆನಪು ಮಾಡುತ್ತಿದ್ದೇನೆ. ಬೇರೆ ಏನೂ ಹೇಳುತ್ತಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ನಾವು ಏನು ಹೇಳಿದ್ದೇವೆಯೋ, ನಾವು ಏನು ಹಿಂದೆ ಸಭಾಪತಿಯವರಿಗೆ ಮಾತು ಕೊಟ್ಟಿದ್ದೇವೆಯೋ.....

**ಶ್ರೀ ಕೆ.ಎಸ್.ಈಶ್ವರಪ್ಪ:-** ಇವತ್ತು ಅಥವಾ ನಾಳೆ ಎಂದು ಮಾತು ಕೊಟ್ಟಿದ್ದೀರೋ ಇಲ್ಲವೋ?

**ಶ್ರೀ ಟಿ.ಬಿ.ಜಯಚಂದ್ರ:-** ಇದಕ್ಕಿಂತ ಮುಂಚೆ ಹಿಂದೆ ಕಾರ್ಯಕಲಾಪ ಸಲಹಾ ಸಮಿತಿ ಸಭೆ ಆದಂತಹ ಸಂದರ್ಭದಲ್ಲಿ ಫೆಬ್ರವರಿಯಲ್ಲಿ ನಡೆಯತಕ್ಕಂಥ ಅಧಿವೇಶನದಲ್ಲಿ ಮಂಡಿಸುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಹೇಳಿದ್ದೀರಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾನಾಯಕರು ಕೂಡ ಹೇಳಿದ್ದಾರೆ. ಮಾನ್ಯ ಸಭಾಪತಿಯವರು ಕೂಡ ಅದಕ್ಕೆ ಸಮ್ಮತಿಯನ್ನು ಸೂಚಿಸಿದ್ದಾರೆ. ಅದಕೋಸ್ಕರ ಕ್ಯಾಬಿನೆಟ್ ಮಾಡಿ ತೀರ್ಮಾನ ಮಾಡಿದಾದ ಮೇಲೆ ನಾವು ಅದರಲ್ಲಿ ವಿಳಂಬ ಎಂದರೆ ತುಂಬಾ ದಿವಸ ಆಗುತ್ತದೆ ಎನ್ನತಕ್ಕಂಥದ್ದಲ್ಲ. ಅದಕ್ಕೊಂದು ಪ್ರೊಸೀಜರ್ ಇರುತ್ತದೆ. ನೀವು ಈ ಗಂಟೆಯಲ್ಲೇ ಮಾಡಿ, ಹೀಗೆ ಮಾಡಿ ಎಂದು ನಿರ್ದೇಶನ ಕೊಡತಕ್ಕಂಥದ್ದು ಸರಿಯಾಗುತ್ತದೆಯೇ? ನಾವು ಮಂಡಿಸುತ್ತೇವೆ.

**ಸಭಾಪತಿಯವರು:-** ಮಂಡಿಸುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಯಾವಾಗ ಮಂಡಿಸುತ್ತಾರೆ?

**ಸಭಾಪತಿಯವರು:-** ಈ ಅಧಿವೇಶನ ಮುಗಿಯುವುದರೊಳಗೆ ಮಂಡಿಸುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈ ಅಧಿವೇಶನ ಎಂದರೆ ಮತ್ತೆ ಮಾರ್ಚ್‌ಗೆ ಸೇರುತ್ತದೆ.

unedited copy

**ಸಭಾಪತಿಯವರು:-** ಆ ರೀತಿ ಅಲ್ಲ. ಈ ಅಧಿವೇಶನ sine die ಆಗುತ್ತದೆ. 5ನೇ ತಾರೀಖು ಅನಿರ್ದಿಷ್ಟ ಕಾಲ ಮುಂದಕ್ಕೆ ಹೋಗುತ್ತದೆ. ಆದ್ದರಿಂದ ಫೆಬ್ರವರಿ ಅಧಿವೇಶನ 5ನೇ ತಾರೀಖು ಮುಗಿಯುತ್ತದೆ. ಅಷ್ಟರೊಳಗೆ ಅವರು ಏನು ಹೇಳುತ್ತಾರೆ ನೋಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:-** 5ನೇ ತಾರೀಖಿನ ಒಳಗಾದರೂ ಕೊಡುತ್ತೀರಾ?

**ಶ್ರೀ ಎಸ್.ಆರ್.ಪಾಟೀಲ್:-** ಹಾಗೆಲ್ಲಾ ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:-** ಸಮಯ ಇಲ್ಲ ಎಂದು ಹೇಳುತ್ತೀರಿ, ಇದು ಮೊಂಡುವಾದ.

**ಶ್ರೀ ವಿ.ಎಸ್.ಉಗ್ರಪ್ಪ:-** ಇವರು ಉಪಮುಖ್ಯಮಂತ್ರಿಗಳಾಗಿದ್ದಾಗ ಈ ರೀತಿಯೇ ಉತ್ತರ ಕೊಡುತ್ತಿದ್ದರೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೈಕೋರ್ಟ್ ನಿರ್ದೇಶನ ಇದೆ. ತಾವು ಪೀಠದಿಂದ ಹೇಳಿದ್ದೀರಿ. ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಚರ್ಚೆಯಾಗಿದೆ. ಈಗ ಕ್ಯಾಬಿನೆಟ್‌ನಲ್ಲಿ ವಿಸ್ತೃತವಾಗಿ ಚರ್ಚೆ ಮಾಡಿದ್ದೇವೆ. ನಾವು ಮಂಡಿಸುತ್ತೇವೆ ಎಂದು ಹೇಳಿದ್ದೇವೆ. Opposition cannot dictate like this.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಚರ್ಚೆ ಆಗಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಗಮನಕ್ಕೆ ತಂದರು. ಆದಷ್ಟು ಬೇಗ ಮಂಡಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ತಮ್ಮ ಕಡೆ ತೋರಿಸಿದಾಗ ತಾವು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ, ನಿನ್ನೆ ಚರ್ಚೆ ಆಗಿದೆ, ಯಾವಾಗ ಮಂಡಿಸುತ್ತೀರಿ ಎಂದು ನೀವು ಕೇಳುತ್ತಿದ್ದೀರಿ. ಅದು ಅಷ್ಟರಲ್ಲೇ ಇರುವುದು. ಆದಷ್ಟು ಬೇಗ ಅಥವಾ ನಾಳೆಯೋ ಎನ್ನುವುದು ಬಿಟ್ಟು ಬೇರೆ ಏನಿದೆ? We are in confusion. ನಮ್ಮ confusion ಅನ್ನು ತಾವು ತೆಗೆದು ಹಾಕಬೇಕು.

unedited copy

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಕೋರ್ಟ್‌ನಲ್ಲಿ ಅಫಿಡವಿಟ್ ಕೊಟ್ಟಿದ್ದಾರೆ. ಸದನದಲ್ಲಿ ಮಂಡಿಸುತ್ತೇವೆಂದು ಹೇಳಿದ್ದಾರೆ. ತಾವು ಆದೇಶ ಕೊಟ್ಟಿದ್ದೀರಿ. ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ನಿರ್ಣಯವಾಗಿದೆ. ಕೂಡಲೇ ಮಂಡನೆ ಮಾಡಿ ಎಂದು ತಾವು ಆದೇಶ ಕೊಟ್ಟಿದ್ದೀರಿ. ಇವತ್ತಿಗೂ ಕೂಡ ಯಾವಾಗ ಮಾಡುತ್ತೀರಿ ಎಂದು ಕೇಳಿದರೆ ಆದಷ್ಟು ಬೇಗ ಮಾಡುತ್ತೇವೆಂದು ಹೇಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಯಾವ ನಿಯಮಾವಳಿಯಲ್ಲಿ ಚರ್ಚೆ ನಡೆಯುತ್ತಿದೆ?

(ಗೊಂದಲ)

**ಸಭಾಪತಿಯವರು:-** ಐವನ್ ಡಿಸೋಜಾರವರೇ, ಸಚಿವರು ಮಾತನಾಡುತ್ತಿದ್ದಾರೆ, ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಯಾವ ನಿಯಮಾವಳಿಯಲ್ಲಿ ಇದು ಚರ್ಚೆಯಾಗುತ್ತಿದೆ? ನನಗೆ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಸಿಗುತ್ತಿಲ್ಲ.

**ಶ್ರೀ ಗೋ.ಮಧುಸೂದನ್:-** ಯಾವ ನಿಯಮಾವಳಿಯ ಅಡಿಯಲ್ಲಿ ಹಕ್ಕುಚ್ಯುತಿಯಾಗುತ್ತದೆ? ಹಕ್ಕುಚ್ಯುತಿ ಬಗ್ಗೆ ನಾವು ಪ್ರಶ್ನೆ ಮಾಡಿರುವಂಥದ್ದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು ಕಾನೂನು ಸಂಸದೀಯ ಸಚಿವರು ಹೇಳಿದ್ದಾರೆ. ಫೆಬ್ರವರಿ ಅಧಿವೇಶನದಲ್ಲಿ ಮಂಡಿಸಬೇಕೆಂದು ತಾವು ಆದೇಶ ಮಾಡಿದ್ದೀರಿ. ಹೈಕೋರ್ಟ್ ಆದೇಶ ಮಾಡಿದೆ. ನಾವು ಫೆಬ್ರವರಿ ಅಧಿವೇಶನದಲ್ಲಿ ಮಂಡಿಸುತ್ತೇವೆಂದು ಹೇಳಿದ ಮೇಲೂ ನೀವು ಯಾವ ಗಳಿಗೆಯಲ್ಲಿ ಮಂಡಿಸುತ್ತೀರಿ, ಯಾವ ನಿಮಿಷಕ್ಕೆ ಮಂಡಿಸುತ್ತೀರಿ, ಯಾವ ಸೆಕೆಂಡ್‌ಗೆ ಮಂಡಿಸುತ್ತೀರಿ ಎಂದು ಕೇಳಿದರೆ ಹೇಗೆ? ನಾನು

ಯಾವಾಗಲೂ ನೋಡಿಲ್ಲ. ನಾನು ಮೇಲ್ಮನೆ ಸದಸ್ಯನಾಗಿ 19 ವರ್ಷಗಳಾಗಿವೆ. ಹೀಗೆ dictate ಮಾಡಿ ಯಾವ ಗಳಿಗೆಯಲ್ಲಿ, ಯಾವ ನಿಮಿಷಕ್ಕೆ, ಯಾವ ಸೆಕೆಂಡ್‌ನಲ್ಲಿ ಮಂಡಿಸುತ್ತೀರಿ ಎಂದರೆ is it possible? This is not the way.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಖಂಡಿತವಾಗಿಯೂ dictate ಮಾಡುತ್ತಿಲ್ಲ. ನಾವು ಪ್ರಾರ್ಥನೆ ಮಾಡುತ್ತಿದ್ದೇವೆ. ಏನು ಪ್ರಾರ್ಥನೆ ಮಾಡುತ್ತಿದ್ದೇವೆಂದರೆ, ನಿನ್ನೆ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ನಡೆದಂಥ ಅಂಶವನ್ನು ತಾವು ಹೇಳಿದ್ದೀರಿ. ನಾಳೆ ಅಥವಾ ನಾಳಿದ್ದು ಮುಗಿಯುತ್ತದೆ. ಮುಗಿಯುವುದರೊಳಗಾದರೂ ಪ್ರಸ್ತಾಪ ಮಾಡುತ್ತೀರಾ ಎಂದು ಕೇಳಿದೆವು. ತಾವು ಹೇಳಿದ್ದೀರಿ, ನಾಳೆ ಶನಿವಾರದೊಳಗೆ ಮುಗಿಯುತ್ತದೆ, ಅವರು ಒಪ್ಪಿಕೊಂಡಿರುವ ಪ್ರಕಾರದಲ್ಲಿ ಈ ಅಧಿವೇಶನದಲ್ಲಿ ಮುಗಿಸಬೇಕಾಗುತ್ತದೆ. ಅಧಿವೇಶನ ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತದೆ. ಹಾಗಾಗಿ ಅದರೊಳಗೆ ಮಂಡಿಸುತ್ತಾರೆಯೇ ಎನ್ನುವ ಅಂಶವನ್ನು ಒಪ್ಪಿಕೊಂಡಿರುವುದನ್ನು ಒಪ್ಪುತ್ತಾರೆಯೇ ಎಂದು ಕೇಳಬೇಕು ಎಂದು ಹೇಳಿದಿರಿ. ಈಗ ನಾನು ಅದನ್ನೇ ಹೇಳುತ್ತಿರುವುದು, dictate ಮಾಡುತ್ತಿಲ್ಲ. ಸಭಾನಾಯಕರಿಗೆ, ಕಾನೂನು ಮಂತ್ರಿಗಳಿಗೆ, ಇಡೀ ಸದನಕ್ಕೆ ನಾನು ಪ್ರಾರ್ಥನೆ ಮಾಡುತ್ತಿರುವುದೇನೆಂದರೆ, ಏನು ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ನೀವು ಕಮಿಟ್ ಮಾಡಿಕೊಂಡ ಹಾಗೆ ಸಭಾನಾಯಕರು ಮತ್ತು ಕಾನೂನು ಮಂತ್ರಿಗಳು ಏನು ಹೇಳಿದ್ದರೋ ಆ ಪ್ರಕಾರ ನಡೆದುಕೊಳ್ಳಿ ಎಂದು ನಾನು ಹೇಳಿದೆ. ಅದಕ್ಕೆ ಈ ಅಧಿವೇಶನ ಶನಿವಾರದವರೆಗೆ ಹೋಗುತ್ತದೆ, ಅಷ್ಟರೊಳಗೆ ಅವರು ಮಂಡಿಸಬೇಕಾಗುತ್ತದೆ, ಅದರ ಬಗ್ಗೆ ನೀವೇನು ಹೇಳುತ್ತೀರಿ ಎಂದು ತಾವು ಹೇಳಿದಿರಿ. ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ನಾವು ತೀರ್ಮಾನ ಮಾಡಿದ್ದೇವೆ. ಖಂಡಿತ ಯಾವ ಅಂಶ ನ್ಯಾಯಯುತವಾಗಿ ನಮ್ಮ ಹಕ್ಕನ್ನು ನಾವು ಪಡೆಯಬೇಕು ಎನ್ನುವ ಅಂಶವನ್ನು ಸರ್ಕಾರದ ಮುಂದೆ ಮನಬಿಚ್ಚಿ ಹೇಳುತ್ತೇವೆ. ಭಂಡತನ ನಮ್ಮದೋ, dictate ಮಾಡುತ್ತಿರುವುದು ಅವರದ್ದೋ ತೀರ್ಮಾನ ನೀವು ಮಾಡಿ. ಇಲ್ಲಿ ಏನಾಗುತ್ತದೆಂದರೆ ಒಪ್ಪಿಕೊಂಡಾದ ನಂತರ ಇವತ್ತು ಅಥವಾ ನಾಳೆ ಎಂದು ಹೇಳಿ. ಇವತ್ತೇ ಮಾಡಿ ಎಂದು ನಾನು ಹೇಳುತ್ತಿಲ್ಲ. ಅವರೇನು ಹೇಳಿದ್ದಾರೆ ಅದಕ್ಕೆ ಅವರು ಬದ್ಧರಾಗಿರಲಿ

unedited copy

ಎಂದು ನಾನು ಹೇಳುತ್ತಿದ್ದೇನೆ. ಹಾಗಾದರೆ ಕಾರ್ಯಕಲಾಪ ಸಲಹಾ ಸಮಿತಿಯ ತೀರ್ಮಾನಕ್ಕೆ ನಾವು ಬದ್ಧರಾಗಬೇಕು, ಅವರು ಬದ್ಧರಾಗಬೇಕು. ತಾವು ಮಧ್ಯೆ ಇರುತ್ತೀರಿ. ತಾವು ನಮಗೆ ರೂಲಿಂಗ್ ಕೊಡಿ, ಇಲ್ಲದಿದ್ದರೆ ಅವರಿಗೆ ರೂಲಿಂಗ್ ಕೊಡಿ. ನೀವು dictate ಮಾಡುತ್ತಿದ್ದೀರಿ ಎಂದು ತಾವು ಹೇಳಿ, ನಿಮ್ಮದು ಸರಿಯಿಲ್ಲ ಎಂದು ತಾವು ಹೇಳಿ, ತಮ್ಮ ಮಾತಿಗೆ ಗೌರವ ಕೊಟ್ಟು ನಾವು ಮಾತನಾಡುವುದೇ ಇಲ್ಲ. ಇಲ್ಲದಿದ್ದರೆ ತಾವು ಸರ್ಕಾರಕ್ಕೆ ಹೇಳಿ. ನೀವು ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಒಪ್ಪಿಕೊಂಡಿದ್ದೀರಿ, ಇವತ್ತು ಸಚಿವ ಸಂಪುಟ ಸಭೆ ಮಾಡುತ್ತೇವೆ, ಇವತ್ತು ಆಗದಿದ್ದರೆ ನಾಳೆಯೊಳಗೆ ನಾವು ಮಂಡಿಸುತ್ತೇವೆಂದು ಹೇಳಿದ್ದೀರಿ, ಆ ಪ್ರಕಾರ ಮಂಡಿಸಿ ಎಂದು ಅವರಿಗೆ ಹೇಳಿ. ಇಲ್ಲದಿದ್ದರೆ ಅವರಿಗೆ ರೂಲಿಂಗ್ ಕೊಡಿ. ಇಬ್ಬರಿಗೂ ಸ್ಪಷ್ಟಪಡಿಸಿ.

**ಡಾ:ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ನಡೆದಿರುವ ಬಗ್ಗೆ ಮಾನ್ಯ ಈಶ್ವರಪ್ಪನವರು ಹೇಳಿದರು. ಅಲ್ಲಿ ಆದ ನಿರ್ಧಾರವೇನೆಂದರೆ, ನಾವು ತಕ್ಷಣ ಸಚಿವ ಸಂಪುಟದ ಸಭೆ ಕರೆಯುತ್ತೇವೆ, ಇದಕ್ಕೋಸ್ಕರವೇ ಕರೆಯುತ್ತೇವೆ, ಇದರ ಬಗ್ಗೆ ಚರ್ಚೆ ಮಾಡುತ್ತೇವೆ, ಇವತ್ತೇ ಮಾಡಿ ನಾಳೆಯೇ ಮಾಡಿ ಎಂದು ಹೇಳಿದರೆ ಆಗುವುದಿಲ್ಲ ಎಂದು ಅವರು ಅಲ್ಲಿಯೇ ಹೇಳಿದ್ದಾರೆ. ಕೆಲವು ಪ್ರೊಸೀಜರ್ ಇರುತ್ತದೆ ಎಂದು ಹೇಳಿದರು.

**ಶ್ರೀ ಕೆ.ಬಿ.ಶಾಣಪ್ಪ:-** ನೀವು ಸ್ಪಷ್ಟ ಪಡಿಸಿ. ಇಲ್ಲ ನಾನು ಹೇಳುತ್ತೇನೆ. Let us clarify ourselves.

**ಡಾ:ಮತ್ತಿಕಟ್ಟಿ ವೀರಣ್ಣ:-** ಇವರು ಹಾಗಾದರೆ ನಾಳೆ ಮಾಡಿಬಿಡಿ ಎಂದು ಹೇಳಿದರು. ಇವತ್ತು ಅಲ್ಲದಿದ್ದರೂ ಮರು ದಿವಸ ಮಾಡಿ ಎಂದು ಹೇಳಿದರು. ಇಲ್ಲ, ನಾವು ಮಾಡುತ್ತೇವೆ, ಕೆಲವು ಪ್ರೊಸೀಜರ್‌ಗಳಿವೆ ಎಂದು ಅವರು ಹೇಳಿದರು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಹಿರಿಯರಿದ್ದಾರೆ. ಏಕೆ ವ್ಯತ್ಯಾಸಗಳಾಗುತ್ತಿವೆ?

unedited copy

**ಡಾ:ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಈಶ್ವರಪ್ಪನವರೇ, ದಯಮಾಡಿ ಕೇಳಿ. ಮಾನ್ಯ ಸಭಾಪತಿಯವರೇ, ತಮಗೂ ಗೊತ್ತಿದೆ.

**ಸಭಾಪತಿಯವರು:-** ಈ ಚರ್ಚೆ ಬಹಳ ಉದ್ದ ಮಾಡುವುದು ಸರಿಯಲ್ಲ. ದಯಮಾಡಿ ವೀರಣ್ಣ ಮತ್ತಿಕಟ್ಟಿಯವರೇ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಿನ್ನೆ ನಮ್ಮ ಸದನದಲ್ಲಿ ಏನು ತೀರ್ಮಾನವಾಗಿತ್ತು ಆ ತೀರ್ಮಾನದಂತೆ ನಡೆದುಕೊಳ್ಳಬೇಕಾಗಿರುವುದು ನಿಮ್ಮದು ಧರ್ಮ ನಮ್ಮದು ಧರ್ಮ. ನಾವು ನಿನ್ನೆ ಏನು ಮಾತನಾಡಿದ್ದೇವೆ, ಯಾವುದೋ ಮಧ್ಯೆದಲ್ಲಿ ಮಂಡಿಸಿ ಎಂದು ಹೇಳಿದ್ದೇವೆ. ಅದಕ್ಕೆ ಅವರು ಒಪ್ಪಕೊಂಡಿದ್ದಾರೆ, ನಾವು ಒಪ್ಪಿಕೊಂಡಿದ್ದೇವೆ, ತಾವು ಒಪ್ಪಿಕೊಂಡಿದ್ದೀರಿ. ಮಾತನಾಡಿದಂತೆ ನಡೆಯಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಈ ವಿಷಯ ಅಜೆಂಡಾದಲ್ಲಿ ಹಾಕಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಅಜೆಂಡಾದಲ್ಲಿ ಹಾಕುವವರು ಯಾರು? ಅಜೆಂಡಾದಲ್ಲಿರುವ ಎಲ್ಲಾ ವಿಷಯಗಳು ಎಲ್ಲಿ ಚರ್ಚೆಯಾಗುತ್ತಿವೆ? ಮಾನ್ಯ ಸಭಾನಾಯಕರೇ, ಇದರಲ್ಲಿ ಕಾನೂನು ಹೋಗಬೇಡಿ. ಇದನ್ನು ನಾವು ನೀವು ಒಪ್ಪಿಕೊಂಡಿರುವಂಥದ್ದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಬಸವರಾಜ ಹೊರಟ್ಟಿಯವರೇ, ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ, we have discussed so many informal subjects. ಅಜೆಂಡಾ ಬಿಟ್ಟು ಚರ್ಚೆ ಮಾಡುತ್ತೇವೆ. ಅಜೆಂಡಾದಲ್ಲಿ ಇಲ್ಲದಿರುವ ವಿಷಯಗಳನ್ನು ಚರ್ಚೆ ಮಾಡಿದ್ದೇವೆ. ಅಜೆಂಡಾದಲ್ಲಿರುವ ವಿಷಯಗಳನ್ನು ಚರ್ಚೆ ಮಾಡಿದ್ದೇವೆ.

(ಮುಂದು)

unedited copy

**ಶ್ರೀ ಎಸ್.ಆರ್.ಪಾಟೀಲ್**(ಮುಂದು. . )

ಅಜೆಂಡಾದಲ್ಲಿದ್ದು ವಿಷಯದ ಬಗ್ಗೆ ಚರ್ಚೆ ಮಾಡಿದ್ದೇವೆ. Informal ಆಗಿ ಇದು ಕೂಡ ಚರ್ಚೆಗೆ ಬಂದಿದೆ. ಮತ್ತೆ, ಕಾನೂನು ಸಚಿವರು ಏನು ಹೇಳಿದರು ಎಂದರೆ ಫೆಬ್ರವರಿ ಅಧಿವೇಶನದಲ್ಲಿ ಮಂಡಿಸಬೇಕೆಂದು ಹೈಕೋರ್ಟಿನ ನಿರ್ದೇಶನ ಇದೆ. ತಾವು ಕೂಡ ಹೇಳಿದಿರಿ. ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಪೂರ್ವದಲ್ಲಿ ನಿರ್ಣಯ ಆಗಿದೆ, ನಮಗೆ commitment ಸಹ ಇದೆ. ಅಧಿವೇಶನದಲ್ಲಿ ಮಂಡಿಸುವಲ್ಲಿ ಹಿಂದೆ ಸರಿಯುವುದಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:–** ನಾವು ಮಂಡಿಸುವುದಿಲ್ಲವೆನ್ನುವ ಮಾತನ್ನು ಹೇಳುತ್ತಿಲ್ಲ. ನಾವು ಮಂಡಿಸುತ್ತೇವೆ. ಅದಕ್ಕೋಸ್ಕರ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ. ಅದಕ್ಕೋಸ್ಕರ ಚರ್ಚೆ ಮಾಡಿದ್ದಾದ ಮೇಲೆ, ಇದನ್ನು ಉಭಯ ಸದನದಲ್ಲೂ ಮಂಡಿಸಬೇಕಾಗುತ್ತದೆ. ಇದನ್ನು ಅಜೆಂಡದಲ್ಲಿ ತಂದು ಮಂಡಿಸಬೇಕಾಗುತ್ತದೆ. ಇದು ಪ್ರಿಂಟ್ ಆಗುವುದು ಬೇಡವೇ?

**ಶ್ರೀ ಕೆ.ಬಿ.ಶಾಣಪ್ಪ:–** ಇದು ಮೊಂಡುತನವಾಗಿದೆ.

**ಶ್ರೀ ಟಿ.ಬಿ.ಜಯಚಂದ್ರ:–** ಇದು ಮೊಂಡುತನದ ಅಲ್ಲ ರೀ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರು ಅವರು ಒಂದು ರೂಲಿಂಗ್ ಕೊಟ್ಟಿದ್ದಾರೆ. 5ನೇ ತಾರೀಖು ಎಂದು ನಿಮ್ಮ ಮುಂದೆ ಹೇಳಲಿಲ್ಲವೇ?

(ಗೊಂದಲ)

**ಸಭಾಪತಿಯವರು:–** ನಿನ್ನೆ ಏನು ತೀರ್ಮಾನವಾಯಿತು ಎಂದು ಎಲ್ಲರ ಬಾಯಿಯಲ್ಲೂ ಬಂದಿದೆ. ನಾನು ಹೇಳಿದ್ದೇನೆ. ಮತ್ತೆ ಮತ್ತೆ ಅದನ್ನೇ ಹೇಳುವುದು ಬೇಡ. ನಿನ್ನೆಯ ತೀರ್ಮಾನದಂತೆ ನಾವು ಅದನ್ನು ಸದನದಲ್ಲಿ ಹೇಳಬೇಕಾಗಿತ್ತು. ಈ ವಿಚಾರ ಬಹಳ ಸೂಕ್ಷ್ಮವಾಗಿ ಪ್ರಸ್ತಾಪವಾಗಿದೆ. ಇವತ್ತೇ ಮಂಡಿಸಿ ಎಂದವರು ಕೇಳಿದರು. ಇಲ್ಲ, ಇವತ್ತು ಮಂಡಿಸುವುದಕ್ಕಾಗುವುದಿಲ್ಲ, ನಾಳೆ ಸಾಯಂಕಾಲದೊಳಗೆ ಮಂಡಿಸುತ್ತೇವೆ ಎನ್ನುವುದನ್ನು ಸರ್ಕಾರದ ಕಡೆಯಿಂದ ಸಭಾ ನಾಯಕರು ಮತ್ತು ಕಾನೂನು ಸಚಿವರು ಹೇಳಿದ್ದು ಹೌದು. ಆ ಮಾತಿನ ನಂತರ ಅವರಿಗೆ ಏನಾದರೂ ಹೊಸ ಸಮಸ್ಯೆ ಉದ್ಭವವಾಗಿದ್ದರೆ, ಆ

unedited copy

ಸಮಸ್ಯೆಯ ಹಿನ್ನೆಲೆಯಲ್ಲಿ ಅವರು ಒಪ್ಪಿಕೊಂಡಿರುವಂತೆ 3 ಕೆಲಸಗಳನ್ನು ಮಾಡಿದ್ದಾರೆ. ಕೂಡಲೇ ಈ ನಿಟ್ಟಿನಲ್ಲಿ ಕ್ಯಾಬಿನೆಟ್ ಕರೆಯುತ್ತೇವೆಂದು ಹೇಳಿದ್ದು, ಕ್ಯಾಬಿನೆಟ್ ಕರೆದಿದ್ದಾರೆ. ಅದರೊಳಗೆ ತೀರ್ಮಾನ ಮಾಡುತ್ತೇವೆಂದು ಹೇಳಿದ್ದು, ತೀರ್ಮಾನ ಮಾಡಿದ್ದೇವೆಂದು ಹೇಳಿದ್ದಾರೆ. ತೀರ್ಮಾನವೂ ಸಹ ಆಗಿದೆ. ಮಂಡಿಸಬೇಕೆಂದು ಹೇಳಿದ್ದು, ಮಂಡಿಸುವುದಕ್ಕೂ ತೀರ್ಮಾನ ಮಾಡಿದ್ದೇವೆಂದು ಹೇಳಿದ್ದಾರೆ.

ಇನ್ನು ನಾಲ್ಕನೆಯದಾಗಿ, ಮಂಡಿಸಬೇಕಷ್ಟೆ. ಅದನ್ನು ಮಂಡಿಸುವುದಕ್ಕೆ ನಿಮಗೆ ಏನಾದರೂ ತೊಂದರೆ ಇದ್ದರೆ ಅದಕ್ಕೆ ನೀವು ಮತ್ತೊಮ್ಮೆ ಆ ವಿಚಾರವಾಗಿ ಸಭೆಯಲ್ಲಿ ವಿನಂತಿ ಮಾಡಿಕೊಂಡರೆ ಅಂದರೆ ಮಂಡಿಸುವ ಸಮಯ ನಿನ್ನೆ ತೀರ್ಮಾನದ ಪ್ರಕಾರ ನಾಳೆ ಸಾಯಂಕಾಲ ಎಂದು ಆಗಿತ್ತು. ಅದನ್ನು ಬದಲಾವಣೆ ಮಾಡಬೇಕೆಂದು ಇದ್ದರೆ ದಯಮಾಡಿ, ತಾವು ಅದನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕು. ಏಕೆಂದರೆ, ಬಾಕಿಯದನ್ನೆಲ್ಲಾ ತಾವು ನಡೆಸಿದ್ದೀರಿ. ಅದರಲ್ಲಿ original point ಗಳಿಗೆ ಸಂಬಂಧಪಟ್ಟಂತೆ ನೀವು ಹಿಂದೆ ಹೋಗಿಲ್ಲ, ಅವರು ಹಿಂದೆ ಹೋಗಿಲ್ಲ. ಸಮಯದ ಬಗ್ಗೆ ಮಾತ್ರ ಪ್ರಶ್ನೆ ಇದೆ. ಅದಕ್ಕೆ ಸಂಬಂಧಪಟ್ಟಂತೆ ಏನಾದರೂ ತಾಂತ್ರಿಕ ಸಮಸ್ಯೆ ಇದ್ದರೆ ಯಾವಾಗ ಎಂದು ತಾವು ಹೇಳಿ. ಈಗ ಆಗುವುದೇ ಇಲ್ಲವೆಂದರೆ . . .

**ಶ್ರೀ ಗೋ.ಮದುಸೂಧನ್:–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ತಡೆಯಿರಿ, ಅವರು ಹೇಳುತ್ತಾರೆ.

**ಶ್ರೀ ಗೋ.ಮದುಸೂಧನ್:–** ಮಾನ್ಯ ಸಭಾಪತಿಯವರೆ, ಒಂದು ಅಂಶವನ್ನು ಇದರಲ್ಲಿ ಸೇರಿಸಿಬಿಡುತ್ತೇನೆ. ಏನೆಂದರೆ, ಯಾರೇ ವರದಿಯನ್ನು ಸರ್ಕಾರಕ್ಕೆ ಕೊಡಬೇಕಾದಾಗ ಸಾಕಷ್ಟು copy ಗಳನ್ನು ಪ್ರಿಂಟ್ ಮಾಡಿ ಕೊಟ್ಟು ಬಿಡುತ್ತಾರೆ. ಹೊಸದಾಗಿ ಪ್ರಿಂಟ್ ಮಾಡಬೇಕಾಗಿಲ್ಲ. ಪ್ರಿಂಟ್ ಮಾಡಿರುವ ವರದಿಯ 500 ಪ್ರತಿಗಳು ಸರ್ಕಾರದ ಹತ್ತಿರ ರಡಿ ಇವೆ.

**ಸಭಾಪತಿಯವರು:–** ಅವರ ಕಷ್ಟ ಏನು ಎಂದು ನೀವು presume ಮಾಡುತ್ತೀರಲ್ಲಾ? ಅವರ ಕಷ್ಟ ಏನೆಂದು ಅವರು ಹೇಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಈ ವಿಚಾರದಲ್ಲಿ ಅವರು ಹಿಂದೆ ಸರಿದಿಲ್ಲ, ನಾವು ಹಿಂದೆ ಸರಿದಿಲ್ಲ. ಇದನ್ನು ನಾವು ಒಪ್ಪಿದ್ದೇವೆ. ಹೇಳಿದ್ದಕ್ಕೆ ನಾವು ವಿಶೇಷವಾಗಿ ಕಾಳಜಿ ವಹಿಸಿ, ಕ್ಯಾಬಿನೆಟ್ ಮೀಟಿಂಗ್ ಮಾಡಿ,

unedited copy

ಇದರ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡಿ ಮಂಡಿಸಬೇಕೆನ್ನುವ ಆಸಕ್ತಿ ಅವರಿಗಿಂತ ನಮ್ಮ ಸರ್ಕಾರಕ್ಕೆ ಹೆಚ್ಚು ಇದೆ. ಶ್ರೀಯುತ ಮದುಸೂಧನ್‌ರವರಿಗಿಂತ ಹೆಚ್ಚು ಆಸಕ್ತಿ ನಮಗೂ ಇದೆ.

**ಸಭಾಪತಿಯವರು:–** ತೀರ್ಮಾನವನ್ನೂ ಸಹ ಮಾಡಿದ್ದೀರಿ.

**Sri S.R. PATIL:-** Under Section 10(2) of the Karnataka Minorities Commission Act, 1994ರ ಪ್ರಕಾರ it is mandatory and we know it. ಹೈಕೋರ್ಟ್ ನಿರ್ದೇಶನ ಇದೆ, ನೀವು ಹೇಳಿದಿರಿ. ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನವಾಗಿದೆ. ವರದಿಯನ್ನು ಮಂಡಿಸುತ್ತೇವೆ. ಇದಕ್ಕೆ procedure ನಲ್ಲಿ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಈ ಬಗ್ಗೆ ಹೇಳಲಿಕ್ಕೆ ಬೇಕಾದರೆ ಮಾನ್ಯ ಸಭಾಪತಿಯವರ ಛೆಂಬರ್‌ಗೆ ನಮ್ಮನ್ನು ಮತ್ತು ವಿರೋಧ ಪಕ್ಷದ ನಾಯಕರನ್ನೂ ಕರೆಯಿರಿ. ನಾವು ಬೇಕಾದರೆ, ಈ ವಿಚಾರವಾಗಿ ಮಾತನಾಡೋಣ.

**ಸಭಾಪತಿಯವರು:–** ಈಗ ಪ್ರಶ್ನೆ ಇರುವುದು, ನಿನ್ನೆ ಈ ಬಗ್ಗೆ ನಿರ್ಣಯ ಮಾಡುವಾಗ ಆ ಹಿನ್ನೆಲೆ ಇತ್ತು. ಈಗ ನೀವು ಹೊಸ ಸಮಸ್ಯೆಯನ್ನು ಎತ್ತಿದ್ದೀರಿ. ಎಲ್ಲವನ್ನೂ ಒಪ್ಪಿದ್ದೇವೆ, ನಮಗೆ ಸ್ವಲ್ಪ ಸಮಯ ಬೇಕೆಂದು ಕೇಳುತ್ತಿದ್ದೀರಿ. ಅದನ್ನು ನೀವು ಸದನಕ್ಕೆ ಹೇಳಿ. ಸದನ ಒಪ್ಪಿದರೆ ಮಾಡೋಣ.

**Sri S.R. PATIL:-** Procedural aspect comply ಮಾಡಲಿಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ ಅಷ್ಟೆ.

**ಸಭಾಪತಿಯವರು:–** ಯಾವಾಗ ಮಂಡಿಸುತ್ತೀರಿ ಎಂದು ಹೇಳಿ? ತಾವು ಯಾವುತ್ತು ಹೇಳುತ್ತೀರೋ ಅಂದೇ ಮಂಡಿಸಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, we will come back to you.

**ಸಭಾಪತಿಯವರು:–** ಸದನ ಮುಗಿಯುವುದರೊಳಗೆ ಎಂದು ತಾವು ಹೇಳಿದ್ದೀರಿ. ಸದನ ಮುಗಿಯುವುದರೊಳಗೆ ಮಂಡಿಸುತ್ತೇವೆಂದು ನೀವು ಈಗಾಗಲೇ commit ಮಾಡಿಕೊಂಡಿದ್ದೀರಿ. ಸದನ ಶನಿವಾರ ಮುಗಿಯುತ್ತದೆ, ಅಷ್ಟರೊಳಗೆ ಮಂಡಿಸುತ್ತೇವೆ ಎನ್ನುವ ಅರ್ಥ ಬರುತ್ತದೆ. ದಯಮಾಡಿ ಅದನ್ನು ತಾವು clarify ಮಾಡಬೇಕು.

unedited copy

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:-** ಇದನ್ನು ನಾವು ಒಪ್ಪಿ ಸಚಿವ ಸಂಪುಟದಲ್ಲಿ ವ್ಯಾಪಕವಾಗಿ ಚರ್ಚೆಯಾಗಿದೆ. ಚರ್ಚೆಯಾದ ಮೇಲೆ ಉಭಯ ಸದನದಲ್ಲಿ ಮಂಡಿಸುವಂತಹ ಜವಾಬ್ದಾರಿಯಿದ್ದು, ನಾವು ಮಂಡಿಸುತ್ತೇವೆ. ಹಿಂದಿನ ಕಾರ್ಯಕಲಾಪಗಳ ಸಲಹ ಸಮಿತಿ ಸಭೆಯಲ್ಲಿ ಮಾನ್ಯ ನಾಯಕರು ಒಪ್ಪಿಗೆ ಕೊಟ್ಟ ರೀತಿಯಲ್ಲಿಯೇ ಈ ಅಧಿವೇಶನದಲ್ಲಿ ಮಂಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದು ಮಂಡಿಸುತ್ತೇವೆ. ನಾನು ಏತಕ್ಕೆ ಈ ರೀತಿಯಲ್ಲಿ ಹೇಳುತ್ತಿದ್ದೇನೆಂದರೆ ನಾನು ಮತ್ತೆ ಮತ್ತೆ ಈ ವಿಚಾರವಾಗಿ ಸಮಯವನ್ನು ಕೇಳುವುದು ಬೇಡ ಎನ್ನುವುದಾಗಿದೆ. ಅದಕ್ಕೆ ಒಂದು procedure ಇದೆ. ಅದು ರೆಡಿಯಾದ ತಕ್ಷಣ ಅಜೆಂಡಾದಲ್ಲಿ ಸೇರಿಸುವ ಸಲುವಾಗಿ ತಮಗೆ ತಂದು ಅದನ್ನು present ಮಾಡುತ್ತೇವೆ. ಅದನ್ನು ಅಜೆಂಡಾದಲ್ಲಿ ಸೇರಿಸಿ, place ಮಾಡಬೇಕಾಗುತ್ತದೆ. ಅದಕ್ಕೆ ಆ ಒಂದು procedure ಇದೆ. ಕೇಳಿದರು ಎಂದು ಹೇಳಿ ತೆಗೆದು ಕೊಡಲಿಕ್ಕೆ ಬರುವುದಿಲ್ಲ. ಅಜೆಂಡಾದಲ್ಲಿಯೇ ಮಂಡಿಸಬೇಕಾಗುತ್ತದೆ. ಆ ಕಾರಣಕ್ಕೋಸ್ಕರ ಈ ವಿಚಾರವಾಗಿ ನಾವು ಹೇಳುತ್ತಿದ್ದೇವೆ.

**ಸಭಾಪತಿಯವರು:** ಕೊಡಲಿಕ್ಕೆ ಬರುವುದಿಲ್ಲ. ಶ್ರೀಯುತ ಹೊರಟ್ಟಿಯವರು ಏನೋ ಹೇಳಲಿಕ್ಕೆ ಬಯಸುತ್ತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಸಭಾನಾಯಕರು ಹೇಳುತ್ತಾರೆ, House is supreme ಎಂದು. ಸಭಾಪತಿಯವರು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ತಾವು ಕಾನೂನು ಮಂತ್ರಿಗಳಿದ್ದೀರಿ. ಇದನ್ನು ಅಜೆಂಡಾದಲ್ಲಿ ಹಾಕಬೇಕೆಂದು ನಿನ್ನೆಯೇ ಹೇಳಬೇಕಾಗಿತ್ತು. ನಿನ್ನೆ ಏತಕ್ಕೆ ಹೇಳಲಿಲ್ಲ. ಅಜೆಂಡಾದಲ್ಲಿ ಹಾಕಬೇಕೆಂದು ಹೇಳಬೇಕಾಗಿತ್ತು. ನಂಬಿಕೆಯ ಮೇಲೆ ನೀವು ಹೇಳಿದ್ದನ್ನು ನಾವು ಒಪ್ಪಿಕೊಂಡೆವು.

**ಶ್ರೀ ಟಿ.ಬಿ.ಜಯಚಂದ್ರ:-** ಇವತ್ತು ಕ್ಯಾಬಿನೆಟ್ ಮುಗಿದಿದೆ. ಅದಕ್ಕೆ further proceedings ಇಲ್ಲವೇ? ಅದು ಪ್ರಿಂಟ್ ಆಗಬೇಕೋ ಬೇಡವೋ?

**ಶ್ರೀ ಬಸವರಾಜ ಹೊರಟ್ಟಿ:-** ನೀವು ಏನು ಹೇಳಿದಿರಿ, ನಿನ್ನೆ ಈ ವಿಚಾರವನ್ನು ಹೇಳಬೇಕಾಗಿತ್ತು.

(ಗೊಂದಲ)

unedited copy

**ಶ್ರೀ ಟಿ.ಬಿ.ಜಯಚಂದ್ರ:** ಮಂಡಿಸುತ್ತೇವೆಂದು ಒಪ್ಪಿಕೊಂಡ ಮೇಲೆ ಈಗಲೇ, ಆಗಲೇ ಎಂದು ಹೇಳಿದರೆ ಏನು ಅರ್ಥ?

**ಶ್ರೀ ಎಸ್.ಆರ್.ಪಾಟೀಲ್:-**ಮಂಡಿಸುತ್ತೇವೆಂದು ನಾವು ಒಪ್ಪಿಕೊಂಡಿದ್ದೆವೆ.

**ಶ್ರೀ ಬಸವರಾಜ ಹೊರಟ್ಟಿ:-** ಆಯಿತು, ಮಂಡಿಸಿ.

**Sri S.R. PATIL:-** We will go by our words. We are committed ಎಂದು ಹೇಳಿದರೂ, ಯಾವಾಗ ಮಂಡಿಸುತ್ತೀರಿ, ಇನ್ನು 5 ನಿಮಿಷಕ್ಕೆ ಮಂಡಿಸುತ್ತಿರೋ, 2 ನಿಮಿಷಕ್ಕೆ ಮಂಡಿಸುತ್ತೀರೋ ಎನ್ನುವ ಬಗ್ಗೆ ನಾವು ಎಲ್ಲಿಯೂ ಕೇಳಿಲ್ಲ. ನಾನು 19 ವರ್ಷಗಳ ಅವಧಿಯಲ್ಲಿ ಅಧಿವೇಶದಲ್ಲಿ ಭಾಗವಹಿಸಿದಂತಹ ಸಮಯದಲ್ಲಿ ಈ ರೀತಿ ಕೇಳಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅಂದರೆ, 19 ವರ್ಷಗಳಿಂದ ಈ ರೀತಿಯಲ್ಲಿಯೇ ಮಾಡಿಕೊಂಡು ಬಂದಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ನಾವು ಇದೇ ರೀತಿಯಲ್ಲಿ ಮಾಡಿಕೊಂಡಿದ್ದರೆ, ನಾನು 19 ವರ್ಷಗಳ ಕಾಲ ಇಲ್ಲಿ ಇರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬೇಗನೆ ಮನೆಗೆ ಹೋಗುತ್ತಿದ್ದೆ. ಆದರೆ, ನಾನು ಸರಿಯಾಗಿ, ಚಾರಿತ್ರ್ಯ ಇಟ್ಟುಕೊಂಡು, ಭದ್ದತೆ, ಕಾಳಜಿ ಪೂರ್ವಕವಾಗಿ ಇದ್ದೇನೆಂದು ಹೇಳಿ, ನನ್ನನ್ನು 4ನೇ ಬಾರಿಗೆ ನನ್ನ ಜಿಲ್ಲೆಯ ಜನರು ಆರಿಸಿ ಕಳುಹಿಸಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:** - ತಾವು ಗೆದ್ದ ತಕ್ಷಣ ನಾನು ಅಭಿನಂದನೆಯನ್ನು ಕಳುಹಿಸಿದ್ದೇನೆ.

(ಗೊಂದಲ)

**ಸಭಾಪತಿಯವರು:-** ಈಗ ಸರ್ಕಾರದ ಪರವಾಗಿ, ಸಭಾನಾಯಕರು ಮತ್ತು ಕಾನೂನು ಮತ್ತು ಸಂಸದೀಯ ಸಚಿವರು ನಿನ್ನೆ ಸಭೆಯಲ್ಲಿದ್ದರು. ಅವರು ಅದನ್ನು ತೀರ್ಮಾನ ಮಾಡಿದ್ದಾರೆ. ನಾನು ಅದನ್ನು ಸ್ಪಷ್ಟವಾಗಿ ಹೇಳಿದೆ. ನಿನ್ನೆಯ ತೀರ್ಮಾನದಲ್ಲಿ ಬದಲಾವಣೆ ಏನಾದರೂ ಆಗಬೇಕೆಂದಿದ್ದರೆ ಆ ಬದಲಾವಣೆಯನ್ನು ತಾವು ಸರಿಯಾಗಿ ಹೇಳಬೇಕು. ಅದನ್ನು ಪ್ರಿಂಟ್ ಮಾಡಬೇಕಾಗುತ್ತದೆ, ಅದನ್ನು ಅಜೆಂಡಾ ಮೂಲಕ ಹಾಕಬೇಕಾಗುತ್ತದೆ ಎಂದು ತಾವು ಒಂದು ಮಾತನ್ನು ಹೇಳಿದಿರಿ. ನಾಳೆ ಸಾಯಂಕಾಲ ಮಂಡಿಸಲಾಗುತ್ತದೆ ಎಂದು ನಿನ್ನೆ ತೀರ್ಮಾನ ಮಾಡಲಾಗಿತ್ತು. ಅದನ್ನು ಮಾಡಲಿಕ್ಕೆ ಆಗದಿದ್ದರೆ, ಇಲ್ಲ ಸರ್,

unedited copy

ನಾಳೆ ಸಾಯಂಕಾಲ ಆಗುವುದಿಲ್ಲ, ನಮಗೆ ಮತ್ತೊಂದು ದಿವಸ ಬೇಕು, ಎರಡು ದಿವಸಗಳು ಬೇಕು ಎನ್ನುವುದಿದ್ದರೆ ಅದನ್ನು ನೇರವಾಗಿ ಹೇಳಿ, ಆಮೇಲೆ ತೀರ್ಮಾನ ಮಾಡೋಣ. ತೀರ್ಮಾನ ಮಾಡಿ ಬದಲಾವಣೆ ಮಾಡುವಾಗ ಅನಿರ್ಧಿಷ್ಟ ಬದಲಾವಣೆ ಮಾಡಲಿಕ್ಕೆ ಬರುವುದಿಲ್ಲ. ಒಂದು, ಏನಾದರೂ specific ಬದಲಾವಣೆ ಮಾಡಬೇಕಾಗುತ್ತದೆ. ದಯಮಾಡಿ, ಅದರ ಬಗ್ಗೆ ಹೇಳಿ. ಬದಲಾವಣೆ ಮಾಡಲಿಕ್ಕೆ ಬರುವುದೇ ಇಲ್ಲವೆಂದು ನಾನು ಹೇಳಲಿಕ್ಕೆ ಬರುವುದಿಲ್ಲ. ಬದಲಾವಣೆ ಮಾಡಲಿಕ್ಕೆ ಬರುತ್ತದೆ. ಆದರೆ, ಅದನ್ನು ಅನಿರ್ದಿಷ್ಟವಾಗಿ ಬದಲಾವಣೆ ಮಾಡಲಿಕ್ಕೆ ಬರುವುದಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೆ, ನಿಮ್ಮ ಮಾತಿಗೆ ನಾನು ಬದ್ಧವಾಗಿದ್ದೇನೆ. ಮಂಡಿಸುವುದಕ್ಕೆ ನಾವು ತಯಾರಾಗಿದ್ದೇವೆ. ನಾವು ಯಾವ ಕಾರಣಕ್ಕೋಸ್ಕರ ಈ ರೀತಿ ಹೇಳುತ್ತಿದ್ದೇನೆ ಎನ್ನುವುದಕ್ಕೆ ತಮ್ಮ ಛೇಂಬರ್‌ಗೆ ಬಂದು ನಾನು ವಿವರಣೆ ಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಛೇಂಬರ್‌ಗೆ ಬಂದು ಹೇಳುತ್ತೇನೆಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ,

**ಶ್ರೀ ಸಂದೇಶ್ ನಾಗರಾಜು:–** ಮಾನ್ಯ ಸಭಾಪತಿಯವರೆ, ಈ ಮಾತನ್ನು ಛೇಂಬರ್‌ನಲ್ಲಿ ಹೇಳುತ್ತೇನೆಂದು ಹೇಳುವುದು ತಪ್ಪು. ಇಲ್ಲಿ ನಾವೆಲ್ಲರೂ ಏತಕ್ಕೆ ಕುಳಿತಿದ್ದೇವೆ. ನಾವೆಲ್ಲರೂ ಏತಕ್ಕೆ ಇರಬೇಕು. ಹಾಗಾದರೆ, ಒಂದು ಕೆಲಸ ಮಾಡಿ. ನಮ್ಮೆಲ್ಲರನ್ನೂ ವಾಪಸ್ಸು ಕಳುಹಿಸಿ ಬಿಡಿ. ನೀವೇ ಮಾತನಾಡಿಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ:–** ಇದನ್ನು ಅಜೆಂಡಾದಲ್ಲಿ ಕಳುಹಿಸಿಕೊಡಬೇಕಾಗುತ್ತದೆ. ಮೊದಲು ಸಭಾಪತಿಯವರಿಗೆ ಕೊಡಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ಶ್ರೀಯುತ ಸಂದೇಶ್ ನಾಗರಾಜು ಅವರು ನಾವೆಲ್ಲಾ ಏತಕ್ಕೆ ಇರುವುದು ಎಂದು ಹೇಳಿ, ಒಂದು ಒಳ್ಳೆಯ ಸುದ್ದಿಯನ್ನು ಎತ್ತಿದ್ದಾರೆ. ನೀವೆಲ್ಲರೂ ಇರುವುದರಿಂದಲೇ ಸಭೆ ನಡೆಯುತ್ತಿದೆ. ಇಲ್ಲದಿದ್ದರೆ ಸಭೆಯೇ ಆಗುವುದಿಲ್ಲ.

unedited copy

**ಶ್ರೀಮತಿ ತಾರಾ ಅನುರಾಧ:–** ಸಭಾಪತಿಯವರೆ, ಒಂದು ನಿಮಿಷ ಅವಕಾಶ ಕೊಡಿ. ಇಡೀ ಪ್ರಸಂಗವನ್ನು ನೋಡುತ್ತಿದ್ದಾಗ ನನಗೆ ಒಂದು ಸಿನಿಮಾದ ಸೀನು ಜ್ಞಾಪಕ ಬರುತ್ತದೆ. ಒಬ್ಬ ಗುರು, ಒಂದು ರೂಪಾಯಿ ಕೊಟ್ಟು ಎರಡು ಬಾಳೆ ಹಣ್ಣನ್ನು ತೆಗೆದುಕೊಂಡು ಬಾ ಎಂದು ಶಿಷ್ಯನಿಗೆ ಹೇಳುತ್ತಾನೆ, ಎರಡು ಬಾಳೆಯನ್ನು ಶಿಷ್ಯ ತರಬೇಕಾದರೆ, ಅವನು ಒಂದೇ ಬಾಳೆಹಣ್ಣನ್ನು ತೆಗೆದುಕೊಂಡು ಬರುತ್ತಾನೆ. ಆಗ ಆ ಗುರು "ನಾನು ನಿನಗೆ ಎರಡು ಬಾಳೆ ಹಣ್ಣನ್ನು ತೆಗೆದುಕೊಂಡು ಬಾ" ಎಂದು ಹೇಳಿದ್ದೆ. ನೀನು ಅದಕ್ಕೆ ಒಪ್ಪಿಕೊಂಡಿದ್ದೀಯಾ, ಆದರೆ, ನೀನು ಒಂದೇ ಬಾಳೆ ಹಣ್ಣನ್ನು ತೆಗೆದುಕೊಂಡು ಬಂದಿದ್ದೀಯಾ? ಆಗ ಅವನು ಅದೇ ಇದು, ಅದೇ ಇದು, ಎಂದು ಶಿಷ್ಯ ಹೇಳುತ್ತಾನೆ. ಈ ಪ್ರಸಂಗವೇ ಇಷ್ಟು ಆಗುತ್ತಿರಬೇಕಾದರೆ ಅದೇ ಇದು, ಅದೇ ಇದು ಎಂದೆನಿಸುತ್ತದೆಯೇ ಹೊರತು, ಶ್ರೀಯುತ ಸಂದೇಶ ನಾಗರಾಜು ರವರು ಹೇಳಿದ ಹಾಗೆ ನಾನು ನಿಮ್ಮಲ್ಲಿ ಛೇಂಬರ್‌ನಲ್ಲಿ ಬಂದು ಮಾತನಾಡುತ್ತೇನೆಂದು ಹೇಳಿದರೆ, ನಾವೆಲ್ಲರೂ ಏತಕ್ಕೆ ಇದ್ದೇವೆ ಎನಿಸುತ್ತದೆ. ಈಗ ಆ ಪ್ರಸಂಗ ನಮಗೆ ನಿಜವಾಗಿಯೂ ಜ್ಞಾಪಕ ಬರುತ್ತದೆ. 1 ರೂಪಾಯಿಗೆ ಎರಡು ಬಾಳೆ ಹಣ್ಣು, ಅದೇ ಇದಾಗಿದೆ. ಅದನ್ನೇ ಇದು ಎಂದು ಹೇಳುತ್ತಿದ್ದಾರೆ.

**ಮುಂದು**. . .

unedited copy

(ಸಭಾಪತಿಯವರ ಉಪಸ್ಥಿತಿ)

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಸದನದ ಸುಮಾರು ಒಂದು ಗಂಟೆಯಷ್ಟು ಸಮಯ ಈ ರೀತಿ ಬಳಕೆಯಾಗುತ್ತಿರುವುದು ದುರ್ದೈವದ ಸಂಗತಿ. ಈ ರೀತಿಯಾದರೆ ಈ ಸದನದ ನಡವಳಿಕೆಗಳಿಗೆ ಘನತೆ–ಗೌರವ ಬರುತ್ತದೆಯೇ?

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಸರ್ಕಾರದ ಪರವಾಗಿ ನೀವೇಕೆ ಮಾತನಾಡುತ್ತೀರಿ? ಸರ್ಕಾರದ ಪರವಾಗಿ ಯಾರೂ ಮಾತನಾಡಬೇಡಿ. Please don't talk on behalf of the Government when the Ministers are present in the House. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ಸದನದಲ್ಲಿ ಸರ್ಕಾರದ ಅಧಿಕೃತ ಸಚಿವರುಗಳು ಮಾತ್ರ ಸರ್ಕಾರದ ಪರವಾಗಿ ಮಾತನಾಡಬೇಕಾಗುತ್ತದೆಯೇ ಹೊರತು ಬೇರೆ ಯಾರೂ ಮಾತನಾಡುವುದಕ್ಕೆ ಬರುವುದಿಲ್ಲ. ಬೇರೆ ಯಾರೇ ಇದ್ದರೂ ಸರ್ಕಾರದಿಂದ ಮಾಹಿತಿ ತೆಗೆದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಕೇಳಬಹುದು, ಚರ್ಚೆಯಲ್ಲಿ ಭಾಗವಹಿಸಬಹುದು. Don't try to defend the Government when there are competent Ministers present in the House. ಆದ್ದರಿಂದ ದಯಮಾಡಿ ಬೇರೆ ಯಾರೂ ಮಾತನಾಡಬೇಡಿ. ತಮ್ಮದೇನಾದರೂ ಸಮಸ್ಯೆ ಇದ್ದರೆ, ಪ್ರಶ್ನೆ ಇದ್ದರೆ ಕೇಳಬಹುದು. ಆದರೆ ಸರ್ಕಾರದ ಪರವಾಗಿ ಎಲ್ಲರೂ ಮಾತನಾಡುವುದಕ್ಕೆ ಪ್ರಾರಂಭಿಸಿದರೆ ಸರ್ಕಾರವನ್ನು ನಡೆಸುವುದು ಅವರಿಗೆ ಕಷ್ಟವಾಗುತ್ತದೆ. ಏಕೆಂದರೆ ಸರ್ಕಾರದ ಪರವಾಗಿ ಯಾರಾದರೂ ಮಾತನಾಡಿದವರು ಒಂದು commit ಮಾಡಿಕೊಂಡರೆ what is the problem and where do we head? ಆಗುವುದಿಲ್ಲ. ದಯಮಾಡಿ ಸರ್ಕಾರದ ಪರವಾಗಿ ಸರ್ಕಾರದವರು ಮಾತನಾಡುತ್ತಾರೆ, ವಿರೋಧ ಪಕ್ಷದವರ ಪರವಾಗಿ ಕೂಡ ಎಲ್ಲರೂ ಮಾತನಾಡುವುದು ಬೇಡ, ಒಬ್ಬಿಬ್ಬರು ಮಾತನಾಡಿದರೆ ಸಾಕು.

unedited copy

**ಡಾ:ಮತ್ತಿಕಟ್ಟಿ ವೀರಣ್ಣ:–** ನಮ್ಮ ಸದನದ ಬಗ್ಗೆ, ನಮ್ಮ ನಾಯಕರುಗಳ ಬಗ್ಗೆ ಮಾನ್ಯ ಸಂದೇಶ್ ನಾಗರಾಜ್‌ರವರು ನನಗೆ ಏನು ಹೇಳಿದರೆಂದರೆ, 'ಅಯ್ಯೋ! ಇಲ್ಲಿಗೆ ಬಂದ ಮೇಲೆ ನನಗೆ ಗೊತ್ತಾಯಿತು, ನಮ್ಮ ಸಿನಿಮಾ ನಟ–ನಟಿಯರಿಗಿಂತ ದೊಡ್ಡ ಕಲಾವಿದರು ಇಲ್ಲೆಲ್ಲಾ ಇದ್ದಾರೆ, ಅಲ್ಲಿ ನಿರ್ದೇಶಕರು ಹೇಳಿದಂತೆ ನಟಿಸುತ್ತಾರೆ; ಇಲ್ಲಿ ನಿರ್ದೇಶಕರು ಹೇಳಿದರೂ ಮಾಡುವುದಿಲ್ಲವಲ್ಲ ಸ್ವಾಮಿ' ಎಂದು ಹೇಳಿದರು.

ಶ್ರೀ ಆರ್.ಧರ್ಮಸೇನ:– ಮಾನ್ಯ ಸಭಾಪತಿಯವರೇ, ಇನ್ನೊಂದು ಬಾಳೆ ಹಣ್ಣು ಎಲ್ಲಿ ಹೋಯಿತು ಎಂದು ಕಂಡುಹಿಡಿಯುವುದಕ್ಕೆ ಒಂದು ಸಮಿತಿಯನ್ನು ರಚನೆ ಮಾಡೋಣ.

**ಸಭಾಪತಿಯವರು:–** ನೋಡೋಣ, ಅದನ್ನೂ ಮಾಡೋಣ. ಈಗ ಸಚಿವರು ಏನು ಹೇಳುತ್ತಾರೆಯೋ ಕೇಳೋಣ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ನಾನು ಸದನದಲ್ಲಿ ಪ್ರಸ್ತಾಪಿಸಿರುವಂತಹ privilege issue ಮುಕ್ತಾಯಗೊಳ್ಳಬೇಕೆಂದರೆ, ಈ ವರದಿ ಮಂಡನೆ ಆಗಬೇಕು. ತಾವೀಗ ಸೂಚನೆ ಕೊಟ್ಟಿದ್ದೀರಿ, ಆ ಸೂಚನೆಯನ್ನು ಸರ್ಕಾರದವರು ಪಾಲನೆ ಮಾಡುತ್ತಿಲ್ಲ, ನಾಳೆ ಸಂಜೆಗೆ ಸಾಧ್ಯವಾಗುತ್ತದೆಯೇ ಎಂದರೆ, ಅದನ್ನೂ ಹೇಳುತ್ತಿಲ್ಲ. ಶನಿವಾರಕ್ಕೆ ಎಂದು ತಾವೇನು ಉಲ್ಲೇಖ ಮಾಡಿದಿರಿ, ಅದನ್ನಾದರೂ ಅವರು ಹೇಳಬೇಕು, ಆದರೆ ಅವರು ಅದನ್ನು ಸಹ ಹೇಳುತ್ತಿಲ್ಲ. ಸದನದ ಸದಸ್ಯರಾಗಿ ನಮಗೆ ಅದನ್ನು ಕೇಳುವಂತಹ ಹಕ್ಕಿದೆ. ನನ್ನ privilege issue ಮುಕ್ತಾಯವಾಗಬೇಕಾದರೆ ವರದಿ ಮಂಡನೆಯಾಗಬೇಕು. ಇದಕ್ಕೆ ಒಂದು ವರ್ಷಕ್ಕಿಂತ ಜಾಸ್ತಿ ಆಯಿತು, ಯಾವಾಗ ಕೇಳಿದರೂ ನಾವು ಮಂಡನೆ ಮಾಡುತ್ತೇವೆ, ಮಂಡನೆ ಮಾಡುತ್ತೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಆಯಿತು, ಈಗ ಸರ್ಕಾರದವರು ಏನು ಹೇಳುತ್ತಾರೆಯೋ ಕೇಳೋಣ.

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದನ್ನೇನೂ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ವರದಿಯನ್ನು ಮಂಡನೆ ಮಾಡಿಲ್ಲ, ಈ ವರದಿಯನ್ನು ಮಂಡನೆ ಮಾಡಿರುವುದು ಅವರ ಸರ್ಕಾರ ಇದ್ದಾಗಲೇ. 12ನೇ ಮಾರ್ಚ್ 2012 ರಲ್ಲಿಯೇ ಮಂಡನೆ ಆಗಿದೆ. ಹಾಗಾದರೆ ಇವರ ಸರ್ಕಾರದ ಅಧಿಕಾರಾವಧಿ ಇನ್ನೂ ಸುಮಾರು 1 ವರ್ಷ 3 ತಿಂಗಳು ಏನಿತ್ತು, ಆ

unedited copy

ಸಂದರ್ಭದಲ್ಲಿ ಇವರು ಏನು ಮಾಡುತ್ತಿದ್ದರು? ಆ ಸಂದರ್ಭದಲ್ಲಿ ಅವರ ಕೈಯಲ್ಲಿಯೇ ಆಡಳಿತ ಇತ್ತು, ಆಗಲೇ ಮಾಡಿಬಿಡಬಹುದಾಗಿತ್ತು. ಇವತ್ತು ನಮ್ಮ ಮೇಲೆ ಇವರು ಗೂಬೆ ಕೂರಿಸುವ ಅಗತ್ಯವಿರುತ್ತಿರಲಿಲ್ಲ.

**ಸಭಾಪತಿಯವರು:–** ಸಚಿವರೇ, ತಾವು ಅಂತಿಮವಾಗಿ ಹೇಳಿಕೆ ಕೊಡಿ, ಇದನ್ನು ತೀರ್ಮಾನ ಮಾಡಿದ ನಂತರ ಮುಂದಿನ ವಿಷಯಕ್ಕೆ ಹೋಗೋಣ. ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಆದಂತಹ ತೀರ್ಮಾನದಲ್ಲಿ ಒಂದು ಸಣ್ಣ ಬದಲಾವಣೆ ಬಗ್ಗೆ ತಾವು ಸದನದಲ್ಲಿಯೇ ಪ್ರಸ್ತಾಪ ಮಾಡಿ, ಸದನ ಒಪ್ಪುವುದಾದರೆ ಮುಂದಕ್ಕೆ ಹೋಗೋಣ, ಅಷ್ಟೆ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ನಾನು ಮಧ್ಯಾಹ್ನ ಅದನ್ನು ಸದನದಲ್ಲಿ ತಿಳಿಸುತ್ತೇನೆ.

**ಸಭಾಪತಿಯವರು:–** ಆ ವರದಿಯನ್ನು ಯಾವಾಗ ಮಂಡಿಸಲಾಗುತ್ತದೆ ಎಂಬುದನ್ನು ಮಾನ್ಯ ಸಚಿವರು ಮಧ್ಯಾಹ್ನ ತಿಳಿಸುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾನು ಒಪ್ಪುತ್ತೇನೆ. ಅವರು ಏನು commit ಮಾಡಿಕೊಂಡಿದ್ದಾರೆಯೋ ಆ ಪ್ರಕಾರವಾಗಿ ಅವರು ನಡೆದುಕೊಳ್ಳಬೇಕೆಂಬುದು ನನ್ನ ಆಸೆ. ಅಕಸ್ಮಾತ್ ಅವರು ನಡೆದುಕೊಳ್ಳಲಿಲ್ಲವೆಂದರೆ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರ ಒಪ್ಪಿಕೊಂಡಿರುವ ಪ್ರಕಾರ, ನಿಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಗಿರುವಂತಹ ತೀರ್ಮಾನದ ಪ್ರಕಾರ ತಾವು ರೂಲಿಂಗ್ ಕೊಡಿ. ನನ್ನ ಪರವಾಗಿಯಾದರೂ ಕೊಡಿ, ಅವರ ಪರವಾಗಿಯಾದರೂ ಕೊಡಿ. ತಾವು ಕೊಡುವಂತಹ ರೂಲಿಂಗ್‌ಗೆ ನಾವು ಬದ್ಧರಾಗಿರುತ್ತೇವೆ. ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನಕ್ಕೆ, ಅದರ ಪಾವಿತ್ರ್ಯತೆಗೆ ಸರ್ಕಾರದವರು ಬೆಲೆ ಕೊಡಬೇಕು.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2012ನೇ ಇಸವಿಯಲ್ಲಿ ಮಂಡನೆಯಾಗಿರುವಂತಹ ವರದಿ, ಅವತ್ತಿನ ಅವಧಿಯಲ್ಲಿ ಇದ್ದಂತಹ ಇವರ ಸರ್ಕಾರ ಅದನ್ನು ತೀರ್ಮಾನ ಮಾಡಿಲ್ಲ. ಆದರೆ ಮಾನ್ಯ ಸಭಾಪತಿಯವರಿಗೆ ನಾವು ಕೊಟ್ಟಿರುವ ಮಾತಿನಂತೆ ಇವತ್ತು ಕರೆದು ವಿಶೇಷವಾಗಿ ಚರ್ಚೆ ಮಾಡಿದ್ದೇವೆ. ಅದನ್ನು ಸದನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ತಂದು ಸದನದಲ್ಲಿ ಮಂಡಿಸಬೇಕಾಗುತ್ತದೆ. ಆ ರೀತಿ ಸದನದಲ್ಲಿ

unedited copy

ಮಂಡಿಸುವುದಕ್ಕೆ ಮೊದಲು ಕೆಲವು ವಿಚಾರಗಳು ಕೂಡ ಇರುತ್ತವೆ ಎಂಬುದು ಆಡಳಿತ ನಡೆಸಿರುವಂತಹ ತಮಗೂ ಸಹ ಗೊತ್ತಿರುತ್ತದೆ. ಆ ಕಾರಣಕ್ಕೋಸ್ಕರ ಹೇಳುತ್ತಿರುವುದು, ನಾವು ವಾಪಸ್ ಹೋಗುವಂತಹ ಪ್ರಶ್ನೆಯೇ ಇಲ್ಲ. Clarity ಇದೆ, ನಾವು ಖಂಡಿತವಾಗಿಯೂ ಮಂಡಿಸುತ್ತೇವೆ. ಕೆಲವು ವಿಚಾರಗಳೇನಾದರೂ ಇದ್ದರೆ ಅದನ್ನು ನಾನು ಮಾನ್ಯ ಸಭಾಪತಿಯವರ ಚೇಂಬರ್‌ನಲ್ಲಿ ಕುಳಿತು ಮಾತನಾಡಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಿಮ್ಮ ಚೇಂಬರ್‌ನಲ್ಲಲ್ಲ, ಮಧ್ಯಾಹ್ನ ಬಂದು ಅವರು ಇಲ್ಲಿಯೇ ಅದನ್ನು ಹೇಳಬೇಕು.

**ಸಭಾಪತಿಯವರು:–** ಇಲ್ಲಿಯೇ ಹೇಳುತ್ತಾರೆ. ಈಗ ವಿಧಾನ ಸಭೆಯಿಂದ ಅಂಗೀಕೃತಗೊಂಡು ಬಂದಿರುವಂತಹ ವಿಧೇಯಕವನ್ನು ತೆಗೆದುಕೊಳ್ಳೋಣ.

## ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿಯವರು:–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ನೇ ಸಾಲಿನ ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, 2015ರ ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

unedited copy

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಇದರಲ್ಲಿ ವಿವರಣೆ ಕೊಡುವುದಕ್ಕಿಂತ ಹೆಚ್ಚಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಸಭಾಪತಿಗಳಾಗಿ ತಾವು ಎಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತೀರಿ ಎಂದರೆ, ಯಾರೇ ಶಾಸಕರಾಗಲಿ, ಮಾಜಿ ಶಾಸಕರಾಗಲಿ, ಅವರ ಕುಟುಂಬದವರು ಹೋದಂತಹ ಸಂದರ್ಭದಲ್ಲಿ ಎಷ್ಟು ಕಾಳಜಿಯನ್ನು ವಹಿಸುತ್ತಾರೆ ಎಂಬುದಕ್ಕೆ ಇದೊಂದು ಸ್ಪಷ್ಟ ನಿದರ್ಶನವಾಗಿದೆ. ಹಿಂದಿನ ಅಧಿವೇಶನದಲ್ಲಿಯೇ ಈ ವಿಧೇಯಕವನ್ನು ಮಂಡಿಸಬೇಕಾಗಿತ್ತು. ಆದರೆ ರಾಜ್ಯಪಾಲರಿಂದ ಒಪ್ಪಿಗೆ ಬರುವುದು ಸ್ವಲ್ಪ ತಡವಾದ ಹಿನ್ನೆಲೆಯಲ್ಲಿ ಅದನ್ನು ನಾವು ಈ ಸದನದ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇವೆ. ನಾನು ಈ ಮಾತನ್ನು ಹೇಳುತ್ತಿರುವುದೇಕೆಂದರೆ, ಈ ವಿಚಾರದಲ್ಲಿ ತಾವು ಏನಿಲ್ಲವೆಂದರೂ ಕನಿಷ್ಠ ಸುಮಾರು ಹತ್ತು ಸಲವಾದರೂ ನನ್ನೊಡನೆ ಮಾತನಾಡಿರಬಹುದು. ಅದಕ್ಕಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇದರಲ್ಲಿ 1978ಕ್ಕೆ ಮುಂಚೆ ಮೃತಪಟ್ಟಿರುವಂತಹ ಮಾಜಿ ಶಾಸಕರಿರಬಹುದು, ಅವರ ಕುಟುಂಬದವರಿಗೆ ನಿವೃತ್ತಿ ವೇತನ ಬರಬೇಕಾಗಿರುವಂಥದ್ದು ಕಾನೂನಿನಲ್ಲಿ ಬಿಟ್ಟುಹೋಗಿತ್ತು. ಅದನ್ನು ಸೇರಿಸಬೇಕೆಂದು ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇನೆ. ಆ ತಿದ್ದುಪಡಿಗೆ ಈ ಸದನ ಒಪ್ಪಿಗೆಯನ್ನು ಕೊಡಬೇಕು. ಇದು ಬಹಳಷ್ಟು ಜನಕ್ಕಲ್ಲ, Family Pension ಪಡೆಯುವಂತಹ ಕೆಲವರೇನಿದ್ದಾರೆ, 1978ಕ್ಕೆ ಮುಂಚೆ ಇದ್ದಂತಹವರಿಗೆ ಕೂಡ ಅನ್ವಯಗೊಳಿಸಬೇಕೆಂಬುದಾಗಿದೆ. ಬಹುಶಃ ಇದನ್ನು ನಾವು ಯಾರು ಕೂಡ ಯೋಚನೆ ಮಾಡಿರಲಿಲ್ಲ. ಮಾನ್ಯ ಸಭಾಧ್ಯಕ್ಷರು ಈ ವಿಚಾರದಲ್ಲಿ ಬಹಳ ಯೋಜನೆ ಮಾಡಿ, ಅವರ ಜೊತೆಯಲ್ಲೆಲ್ಲಾ ಮಾತನಾಡಿ ನಮಗೆ ಅದನ್ನು ಮನವರಿಕೆ ಮಾಡಿದ್ದಾರೆ. ಸರ್ಕಾರ ಕೂಡ ಅದನ್ನು ಒಪ್ಪಿ, ಇವತ್ತು ಆ ವಿಧೇಯಕವನ್ನು ಮಂಡಿಸುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಟಿ.ಬಿ.ಜಯಚಂದ್ರ ಅವರು ಹೇಳುವವರೆಗೂ ಈ ವಿಧೇಯಕ ತಮ್ಮ ಅಪೇಕ್ಷೆಯ ಮೇಲೆ ಬಂದಿದೆ ಎನ್ನುವ ವಿಚಾರ ನನಗೆ ಗೊತ್ತಿರಲಿಲ್ಲ. ಮಾನ್ಯ ಸಚಿವರು ಹೇಳಿದ ತಕ್ಷಣ ನನಗೆ ಬಹಳ ಸಂತೋಷವಾಗಿದೆ. ಸರ್ಕಾರ ಈ ವಿಚಾರದಲ್ಲಾದರೂ ಮಾನ್ಯ ಸಭಾಪತಿಯವರ ಮಾತನ್ನು ಕೇಳಿರುವುದಕ್ಕಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ನಮಗೆ ಕೆಲವು ಸದ್ಸಂಪ್ರದಾಯಗಳಿವೆ.

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:–** ಅದಕ್ಕಾಗಿ ಸರ್ಕಾರಕ್ಕೆ ಕೂಡ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಾನೂನು ಸಚಿವ ಟಿ.ಬಿ.ಜಯಚಂದ್ರ ಅವರ ಅವಧಿಯಲ್ಲಿ ಇದು ಆಗಿರುವುದರಿಂದ ನಾನು ಅವರಿಗೆ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಮುಂದುವರೆದಿದೆ ...

unedited copy

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2015ರ ಕರ್ನಾಟಕ ವಿದಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** " ಖಂಡ 2 ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

unedited copy

**ಪ್ರಸ್ತಾವದ ಅಂಗೀಕಾರ**

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2015ರ ಕರ್ನಾಟಕ ವಿದಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2015ರ ಕರ್ನಾಟಕ ವಿದಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಸಭಾಪತಿಯವರು:–** ಈಗ ಸದನವನ್ನು 3 ಗಂಟೆ 15 ನಿಮಿಷದವರೆಗೂ ಮುಂದೂಡಿದ್ದೇನೆ.

**ಸದನವು ಮಧ್ಯಾಹ್ನ 2 ಗಂಟೆ 1 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳಲು ತೀರ್ಮಾನಿಸಿತು**

unedited copy

**( ಭೋಜನ ವಿರಾಮದ ನಂತರ ಸದನವು 3 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು.**

**ಮಾನ್ಯ ಉಪಸಭಾಪತಿಗಳು ಪೀಠವನ್ನು ಅಲಂಕರಿಸಿದರು)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮಧ್ಯಾಹ್ನ ಊಟಕ್ಕೆ ಹೋಗುವುದಕ್ಕಿಂತ ಮುಂಚೆ ಮಾನ್ಯ ಕಾನೂನು ಸಚಿವರು ಊಟ ಮಾಡಿಕೊಂಡು ಬಂದ ತಕ್ಷಣ ಅದನ್ನು ವಿವರಿಸುತ್ತೇನೆ ಎಂದು ಹೇಳಿದರು. ಆದರೆ ಮಾನ್ಯ ಕಾನೂನು ಸಚಿವರು ಇನ್ನು ಸದನಕ್ಕೆ ಬಂದಿರುವುದಿಲ್ಲ. ಅದಕ್ಕಾಗಿ ಮಾನ್ಯ ಸಭಾನಾಯಕರೆ ಮಂಡನೆ ಮಾಡುತ್ತಾರೊ ಅಥವಾ ಕಾನೂನು ಸಚಿವರು ಬರುತ್ತಾರೊ ಎನ್ನುವುದನ್ನು ಸರ್ಕಾರಕ್ಕೆ ಕೇಳಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಕಾನೂನು ಸಚಿವರು ಕೆಳಮನೆಯಲ್ಲಿ ಇದ್ದಾರೆ ಅವರನ್ನು ಕರೆಯಿಸಿ ಅವರಿಂದ ಹೇಳಿಕೆ ಕೊಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸಭಾನಾಯಕರು ಎಸ್ ಎಂದು ಹೇಳುತ್ತಾರೆ ಎಂದು ನಾನು ಅಂದುಕೊಂಡಿದೆ. ಇರಲಿ ಮಾನ್ಯ ಕಾನೂನು ಸಚಿವರು ಬರುವವರೆಗೆ ನಾವು ಕಾಯುತ್ತೇವೆ; ನಮ್ಮದೇನು ಅಭ್ಯಂತರವಿಲ್ಲ. ಇಷ್ಟು ದಿನಗಳವರೆಗೆ ಕಾಯಿದಿದ್ದೆವೆ ಇನ್ನು ಅವರು ಬರುವವರೆಗೆ ಕಾಯುತ್ತೇವೆ.

**ಉಪಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ತಮ್ಮ ಭಾಷಣವನ್ನು ಪ್ರಾರಂಭ ಮಾಡಬೇಕು.

ಶ್ರೀ ವಿ.ಎಸ್.ಉಗ್ರಪ್ಪ:- ಮಾನ್ಯ ಸಭಾಪತಿಗಳೆ, ನಮ್ಮ ಪ್ರಶ್ನೆಗಳ ಕಥೆ ಏನು? ನಮ್ಮ ನೋವನ್ನು ಅರ್ಥ ಮಾಡಿಕೊಳ್ಳಿ. ನಾವು ಇಲ್ಲಿ ಶಾಸಕರಾಗಿ ಬರುವುದು ಈ ರಾಜ್ಯದ ಸಮಸ್ಯೆಗಳನ್ನು ಇಲ್ಲಿ ಇಡಲು. ಇದು ಅಲ್ಲದೆ ಮಾಹಿತಿಯನ್ನು ಸಂಗ್ರಹ ಮಾಡುವುದಕ್ಕೆ ಪ್ರಶ್ನಾವಳಿಯಲ್ಲಿ ನಮಗೆ ಅವಕಾಶವಿದೆ. ಕಳೆದ ಮೂರು ದಿನಗಳಿಂದ ಪ್ರಶ್ನಾವಳಿ ನಡೆದಿರುವುದಿಲ್ಲ. ಇವತ್ತು ತೆಗೆದುಕೊಳ್ಳದಿದ್ದರೆ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸಿ ಬಿಡುತ್ತೀರಿ.

(ಮುಂದು)

unedited copy

**ಶ್ರೀ ವಿ.ಎಸ್. ಉಗ್ರಪ್ಪ (ಮುಂದು)**

ನಾನೊಬ್ಬ ವಕೀಲನಾಗಿ 6 ವರ್ಷ ಸಂವಿಧಾನವನ್ನು ಟೀಚ್ ಮಾಡಿದ್ದೇನೆ. ನಿಯಮಾವಳಿಗಳನ್ನು ಪಾಲನೆ ಮಾಡದಿದ್ದರೆ ಹೇಗೆ? ಈಗ ಪ್ರಶ್ನೆ ಮತ್ತು ಶೂನ್ಯವೇಳೆ ಯಾವುದೂ ಇಲ್ಲ ಎಂದರೆ ಸದನದ ಮಹತ್ವ ಏನಿರುತ್ತದೆ? ನಾನು ಅತ್ಯಂತ ಬದ್ಧತೆಯಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. ತಾವು ಪ್ರಸ್ತಾಪ ಮಾಡಿದ ವಿಚಾರ ಸೆಕ್ಷನ್ 10(2) ಪ್ರಕಾರ ಒಪ್ಪಿಕೊಳ್ಳಲು ಮತ್ತು ತಿರಸ್ಕಾರ ಮಾಡುವುದಕ್ಕೆ ಅವಕಾಶ ಇದೆ. ಅದನ್ನು ಬಹುಶ: ಸರ್ಕಾರ ತೀರ್ಮಾನ ಮಾಡಬಹುದಾಗಿತ್ತು, ಇದನ್ನು ಇಷ್ಟು ಬೆಳೆಸುವ ಅವಶ್ಯಕತೆಯೂ ಇಲ್ಲ. ನಾನೊಬ್ಬ ಸದನದ ಸದಸ್ಯನಾಗಿ ಯಾವಾಗ ಪ್ರಶ್ನಾವಳಿಯನ್ನು ತೆಗೆದುಕೊಳ್ಳುತ್ತೀರಾ ಎಂದು ವಿನಂತಿಸುತ್ತೇನೆ.

**ಉಪ ಸಭಾಪತಿಯವರು:–** ಈಗಾಗಲೇ ಈ ದಿನದ ಕಾರ್ಯಕಲಾಪಗಳ ಪಟ್ಟಿಯನ್ನು ಎಲ್ಲಾ ಸದಸ್ಯರಿಗೆ ಒದಗಿಸಿದ್ದು, ಅದರ ಪ್ರಕಾರ ಸದನ ನಡೆಯುತ್ತಿದೆ. ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಲು ಕಾರ್ಯಕಲಾಪಗಳ ಪಟ್ಟಿಯಲ್ಲಿ ನಿಗದಿ ಮಾಡಿದ್ದು, ಈಗ ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡಲು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆದಿದ್ದೇನೆ. ಈ ದಿನದ ಪ್ರಶ್ನೋತ್ತರ ವೇಳೆಯೂ ನಡೆಯುತ್ತದೆ ಎಂದು ತಮಗೆ ಸ್ಪಷ್ಟ ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕರ್ನಾಟಕದ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದ ಭಾಷಣದ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ವೀರಣ್ಣನವರ ಪ್ರಸ್ತಾವನೆಯನ್ನು ಮಾನ್ಯ ಡಿಸೋಜಾರವರು ಅನುಮೋದನೆ ಮಾಡಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ಬಹಳ ಪಾವಿತ್ರ್ಯತೆ ಇದ್ದು, ಇಲ್ಲಿ ಆ ಪಾವಿತ್ರ್ಯತೆಯನ್ನು ಸರ್ಕಾರದವರು ಕಾಪಾಡಿದ್ದಾರೆಯೇ ಎಂಬ ಬಗ್ಗೆ ಒಂದೆರಡು ಅಂಶಗಳನ್ನು ಪ್ರಸ್ತಾಪಿಸುತ್ತೇನೆ, ನಂತರ ತಾವು ತೀರ್ಮಾನ ಮಾಡಿ. ಮೊನ್ನೆ ವಾಚ್ ಬಗ್ಗೆ ಪ್ರಸ್ತಾಪ ಮಾಡುತ್ತಿರುವಾಗ ಕಾಂಗ್ರೆಸ್ ಪಕ್ಷದ ಪ್ರಮುಖರು ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಅದರ ಬಗ್ಗೆ ಪ್ರಸ್ತಾಪ ಮಾಡದೇ ಯಾವುದೋ ವಾಚ್ ವಿಷಯ ಹಿಡಿದುಕೊಂಡಿ ಕುಳಿತಿದ್ದಾರೆ ಎಂದರು. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ನಮ್ಮ ನಿರೀಕ್ಷೆಗೆ ಮೀರಿ ಇರುವುದು ಸತ್ಯ. ಇದರ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣನೆ ಮಾಡಿದ್ದಾರೆಯೇ ಎಂದಾಗ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ ಕುಡಿಯುವ ನೀರಿಗೆ ಎಷ್ಟೇ ಹಾಹಾಕಾರ ಇದ್ದರೂ ಸರ್ಕಾರ

unedited copy

ಒಂದು ರೀತಿ....... ನಮ್ಮ ಕಡೆ ಮೈತೊಳೆದ ದೇವರು ಎಂದು ಹೇಳುತ್ತಾರೆ. ಅಂದರೆ ಅದಕ್ಕೆ ಏನೇನೂ ಸಂಬಂಧ ಇರುವುದಿಲ್ಲ. ಅಲ್ಲೊಂದು ಕಲ್ಲು ಇರುತ್ತದೆ, ಆ ಕಲ್ಲಿಗೆ ನೀರು ಹಾಕಿ ತೊಳೆಯುತ್ತಾರೆ, ಅಭಿಷೇಕ ಮಾಡುತ್ತಾರೆ, ಹರಿಶಿಣ–ಕುಂಕುಮ ಇಡುತ್ತಾರೆ, ಒಂದು ಹೂ ಹಾಕಿ ಕಲ್ಲಿನ ಪಾಡಿಗೆ ಕಲ್ಲು ಇರುತ್ತದೆ. ಆ ರೀತಿ ಸರ್ಕಾರವು ಮೈ ತೊಳೆದ ದೇವರಾಗಿದೆ. ಕುಡಿಯುವ ನೀರಿಲ್ಲದೇ ಎಷ್ಟಾದರೂ ಸಾಯಲಿ, ನಮಗೇನೂ ಸಂಬಂಧ ಇಲ್ಲ ಎನ್ನುವಂತಾಗಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಸಂದರ್ಭದಲ್ಲಿ ಸದನದಲ್ಲಿ ಇದ್ದರೆ ಚೆನ್ನಾಗಿರುತ್ತಿತ್ತು. ನಾವು ಕೊಡುವ ಸಲಹೆ ಅವರು ಸ್ವೀಕಾರ ಮಾಡಲಿ ಎನ್ನುವಂತೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುತ್ತದೆಯೇ ವಿನ: ಕೇವಲ ಸರ್ಕಾರವನ್ನು ಟೀಕೆ ಮಾಡುವ ಉದ್ದೇಶ ನಮ್ಮದಲ್ಲ. ನಾವು ಸಲಹೆ ಕೊಡುವುದು ಏಕೆಂದರೆ ಇಲ್ಲಿವರೆಗೂ ಅವರು ಮೈಮರೆತಿದ್ದಾರೆ, ಹಳ್ಳಿಯ ಜನ–ಜಾನುವಾರುಗಳು ಕುಡಿಯುವ ನೀರಿಲ್ಲದೇ ಸಾಯುತ್ತಿದ್ದಾರೆ. ಕೆರೆ–ಕಟ್ಟೆಗಳು ಬತ್ತಿ ಎಲ್ಲಾ ಜಲಾಶಯಗಳು ತೊಂದರೆಯಲ್ಲಿವೆ. ಹೀಗಾಗಿ ನೀರನ್ನು ಯಾವ ರೂಪದಲ್ಲಿ ಹೇಗೆ ಕೊಡಬೇಕೆಂದು ಸಲಹೆಯನ್ನು ಕೊಡುತ್ತೇವೆ. ಅದೇ ರೀತಿ ಟೀಕೆ ಮಾಡುತ್ತೇವೆ. ಏಕೆಂದರೆ ಮೈತೊಳೆದುಬಿಟ್ಟಿದ್ದಾರೆ ಎಂದು ಟೀಕೆ ಮಾಡುತ್ತೇವೆ. ಏನೂ ಸಂಬಂಧ ಇಲ್ಲದಂತೆ ಇದ್ದಾರೆ ಎಂದು ಟೀಕೆ ಮಾಡುತ್ತೇವೆ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಒಂದು ಒಳ್ಳೆಯ ಹೇಳಿಕೆ ಕೊಟ್ಟರು, ಸಾಧ್ಯವಾದರೆ ಅವರನ್ನು ಸದನಕ್ಕೆ ಕರೆಸಿದರೂ ಒಳ್ಳೆಯದು. ಅವರ ಉದ್ದೇಶವೂ ಬಹಳ ಚೆನ್ನಾಗಿ ಇತ್ತು. ಕುಡಿಯುವ ನೀರಿನ ಶುದ್ಧ ಘಟಕವನ್ನು ಆರ್.ಓ ತಾಂತ್ರಿಕತೆಯ ಮುಖಾಂತರ ಸ್ಥಾಪಿಸುವ ಗುರಿ ಇಟ್ಟುಕೊಂಡು 2013–14ಕ್ಕೆ 1,000 ಘಟಕಗಳು, 2014–15ಕ್ಕೆ 2,000 ಮತ್ತು 2015–16ರಲ್ಲಿ 4,000 ಘಟಕಗಳನ್ನು ಸೇರಿ ಒಟ್ಟು 7,000 ಘಟಕಗಳನ್ನು ಸ್ಥಾಪಿಸುವ ಗುರಿ ಇಟ್ಟುಕೊಂಡಿದ್ದರು. ಇವುಗಳನ್ನು ಮಾಡಿದರೆ ರಾಜ್ಯದ ಇಡೀ ಹಳ್ಳಿಗಳಲ್ಲಿ ಕುಡಿಯುವ ನೀರು ಸಿಗುತ್ತದೆ. ಗ್ರಾಮೀಣ ಪ್ರದೇಶದ ಜನರಿಗೆ ಬಿಸ್ಲೇರಿ ನೀರಿನಂತೆ 20 ಲೀಟರ್ ಕ್ಯಾನ್‌ನಷ್ಟು ನೀರನ್ನು ರೂ.2ಗಳಿಗೆ ಕೊಡುವ ಖeverse Osmosis ಅನ್ನುವ ತಂತ್ರಜ್ಞಾನದ ಮೂಲಕ ಕೊಡುವಂತೆ ಆಗಿತ್ತು. 7,000 ಘಟಕಗಳನ್ನು ಮಾರ್ಚ್ 2016ರೊಳಗೆ ಮಾಡದಿದ್ದರೆ ರಾಜೀನಾಮೆ ಕೊಡುತ್ತೇನೆ ಎಂದು ತೆಗೆದುಕೊಂಡ ಅವರ ಸವಾಲಿಗೆ ನಾನು ಅಭಿನಂದನೆ ಸಲ್ಲಿಸಬೇಕು. ಏಕೆಂದರೆ ರಾಜ್ಯದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಇರುವಾಗ ಒಬ್ಬ ಗ್ರಾಮೀಣಾಭಿವೃದ್ಧಿ ಸಚಿವನಾಗಿ ಜವಾಬ್ದಾರಿ ಇದೆ, ಕುಡಿಯುವ ನೀರು ಕೊಡಬೇಕೆಂದು ಗುರಿ

unedited copy

ಇಟ್ಟುಕೊಂಡರು. ಆದರೆ ಸಾಧನೆ ಏನು? ಇವತ್ತು 3ನೇ ತಾರೀಖಿದ್ದು, ಮಾರ್ಚ್ 31 ಅಂದರೆ ಇನ್ನು 28 ದಿನ ಉಳಿಯುತ್ತದೆ. ಮಾನ್ಯ ಹೆಚ್.ಕೆ. ಪಾಟೀಲರು ಹೇಳಿದ ಪ್ರಕಾರ ನಡೆದುಕೊಳ್ಳಬೇಕೆಂದರೆ ಅವರು ಪೆನ್ನು-ಪೇಪರ್ ಅನ್ನು ರಾಜೀನಾಮೆ ಕೊಡಲು ರೆಡಿ ಇಟ್ಟುಕೊಳ್ಳಬೇಕು. ಆದರೆ ಅವರು ರಾಜೀನಾಮೆ ಕೊಡಬಾರದು, ಯಾವ ಕಾರಣಕ್ಕೂ ಕೊಡಬಾರದು. ಇಟ್ಟುಕೊಂಡಿರುವ ಗುರಿ ತಲುಪಲು ಏನು ಪ್ರಯತ್ನ ಬೇಕೋ ಮಾಡಲಿ. ಸರ್ಕಾರ, ಮುಖ್ಯಮಂತ್ರಿಗಳು ಅಥವಾ ವಿರೋಧ ಪಕ್ಷ ಇರಬಹುದು, ನಾವುಗಳು ಸಹಕಾರ ಕೊಡುತ್ತೇವೆ. ಒಂದು ಘಟಕಕ್ಕೆ ರೂ.9.5 ಲಕ್ಷ ಆಗುತ್ತಿದ್ದು, ಇದಕ್ಕೆ ಶೇ.50 ಆಯಾ ಗ್ರಾಮ ಪಂಚಾಯಿತಿ ಮತ್ತು ಉಳಿದ ಶೇ.50ರಷ್ಟು ಹಣವನ್ನು ರಾಜ್ಯ ಸರ್ಕಾರ ಕೊಡಬೇಕೆಂದು ಇತ್ತು. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದು, ಅದು ಸಹ ಸರಿಯಾದ ಹೇಳಿಕೆ ಅಲ್ಲ. ಈಗಾಗಲೇ 1,600 ಘಟಕಗಳನ್ನು ಸ್ಥಾಪನೆ ಮಾಡುವ ಬಗ್ಗೆ ಹೇಳಿದ್ದಾರೆ. ಆದರೆ ಇಷ್ಟೂ ಆಗಿಲ್ಲ. ಇದು 7,000 ಘಟಕಗಳಿಗೆ 1,600 ಸ್ಥಾಪನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಎಷ್ಟೆಷ್ಟು ಘಟಕಗಳು ಆಗಿದೆ ಎಂಬುದನ್ನು ಕೇಳಿದರೆ ಶ್ರೀ ಹೆಚ್.ಕೆ. ಪಾಟೀಲ್ ರಾಜೀನಾಮೆ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ, ಆದರೆ ಅವರೇ ಕ್ಯಾಬಿನೆಟ್‌ನಲ್ಲಿ ಇಟ್ಟುಕೊಳ್ಳುವುದಿಲ್ಲ. ಮಾನ್ಯ ಸಭಾನಾಯಕರು ಸ್ವಲ್ಪ ಬರೆದುಕೊಂಡು ಮಾನ್ಯ ಸಚಿವರಿಗೆ ಹೇಳಿದರೆ ಬಹಳ ಅನುಕೂಲವಾಗುತ್ತದೆ. ರಾಜ್ಯದ ಜನರು ಕುಡಿಯುವ ನೀರಿಗೆ ಏನಾದರೂ ಮಾಡುತ್ತಾರೆ ಎಂದು ಕಾಯುತ್ತಿದ್ದಾರೆ. ಮಾನ್ಯ ಹೆಚ್.ಕೆ. ಪಾಟೀಲರ ಜಿಲ್ಲೆ ಗದಗ್ ಆಗಿದ್ದು, 2013-14ರಲ್ಲಿ 6 ಘಟಕಗಳ ಗುರಿ ಇಟ್ಟುಕೊಂಡು 6ನ್ನು ಮಾಡಿದ್ದಾರೆ. 2014-15ರಲ್ಲಿ 178 ಘಟಕಗಳ ಗುರಿ ಮತ್ತು 2015-16ರಲ್ಲಿ 184 ಘಟಕಗಳ ಸ್ಥಾಪನೆ ಗುರಿ ಇಟ್ಟುಕೊಂಡಿದ್ದಾರೆ. ಇದರಲ್ಲಿ ಒಂದೇ ಒಂದು ಘಟಕ ಸ್ಥಾಪನೆಯಾಗಿಲ್ಲ. ಅವರದ್ದೇ ಜಿಲ್ಲೆಯಲ್ಲಿ ಆಗಿಲ್ಲ.

(ಮುಂದು)

unedited copy

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಊರಿನಲ್ಲಿ ಒಂದೇ ಒಂದು ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪನೆಯಾಗಿಲ್ಲ. ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬೆಳಿಗ್ಗೆ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಾತನಾಡುವ ಸಂದರ್ಭದಲ್ಲಿ ಈ ವಿಚಾರ ಗೊತ್ತಿಲ್ಲದೆ ಏನೇನೋ ಪದಗಳನ್ನು ಬಳಕೆ ಮಾಡಿ ಸರ್ಕಾರವನ್ನು ಹೊಗಳಿದರು. 'ನಾವು ಪ್ರಣಾಳಿಕೆಯನ್ನು ಭಗವದ್ಗೀತೆ ಎಂದು ಭಾವಿಸುತ್ತೇವೆ.' 'ನೀಡಿದ ಭರವಸೆಯನ್ನು ಈಡೇರಿಸುವುದಕ್ಕೆ ನಾವು ಬದ್ಧರಿದ್ದೇವೆ' ಎಂದು ಹೇಳಿದ್ದರು.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ನಾವು ಯಾವ ಪದವನ್ನು ಬಳಕೆ ಮಾಡಿದರೂ ಅದರ ಬಗ್ಗೆ ನಮಗೆ ಬದ್ಧತೆ ಇರುತ್ತದೆ.

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು 1978ನೇ ಇಸವಿಯಲ್ಲಿಯೇ ವಿಧಾನಸಭಾ ಸದಸ್ಯರಾಗಿದ್ದರು. ಎರಡೂ ಸದನಗಳಲ್ಲಿ ಕೆಲಸ ಮಾಡಿದ ಅನುಭವ ಅವರಿಗಿದೆ. ಹಿರಿಯ ಸದಸ್ಯರಾದ ಅವರು ಗೊತ್ತಿಲ್ಲದೇ ಏನೂ ಮಾತನಾಡುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹಾಗೂ ಶ್ರೀ ಆರ್.ವಿ.ವೆಂಕಟೇಶ್‌ರವರು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಏನು ಕೊಡಬೇಕೆಂದು ಹೇಳಬೇಕು.

**ಶ್ರೀ ಆರ್.ವಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಅವರು ನಮಗೆ ಏನು ಕೊಡುವುದು ಬೇಡ. ನಮ್ಮನ್ನು ಕೆಣಕದೇ ಸರಿಯಾಗಿ ಮಾತನಾಡಿದರೆ ಸಾಕಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಾನು ಅವರನ್ನು ಕೆಣಕಿಲ್ಲ. ಈ ರೀತಿ ಪ್ರಸ್ತಾಪ ಮಾಡಿದ್ದರು ಎಂದು ಮಾತ್ರ ಹೇಳಿದೆ.

unedited copy

ಸನ್ಮಾನ್ಯ ಸಭಾಪತಿಯವರೇ, ಈಗ ನಾನು ವಿಷಯಕ್ಕೆ ಬರುತ್ತೇನೆ. ಚಿತ್ರದುರ್ಗ ಜಿಲ್ಲೆಯಲ್ಲಿ 2014–15ನೇ ಸಾಲಿನಲ್ಲಿ 168, 2015–16ನೇ ಸಾಲಿನಲ್ಲಿ 209 ಒಟ್ಟು 348 ಶುದ್ಧ ಕುಡಿಯುವ ಘಟಕವನ್ನು ಸ್ಥಾಪನೆ ಮಾಡಲು ಉದ್ದೇಶಿಸಲಾಗಿತ್ತು. ಆದರೆ, ಇಲ್ಲಿಯವರೆಗೆ ಒಂದೇ ಒಂದು ಘಟಕವನ್ನು ಸ್ಥಾಪನೆ ಮಾಡಿಲ್ಲ. ನಿನ್ನೆಯ ದಿನ ಅವರುಗಳು ಮಾತನಾಡುತ್ತಾ, 'ಭಾರತೀಯ ಜನತಾ ಪಕ್ಷದವರು ವಾಚಿನ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟಿದೆ ಅದರ ಬಗ್ಗೆ ಚರ್ಚೆಯಾಗಬೇಕು. ವೃಥಾ ಕಾಲಹರಣ ಮಾಡುತ್ತಿದ್ದಾರೆ' ಎಂದು ಹೇಳಿದ್ದರು. ದಿನಾಂಕ:27.02.2016ರಂದು ನಮ್ಮ ಕಾರ್ಯಾಲಯಕ್ಕೆ ಚಿತ್ರದುರ್ಗದ ಜಿಲ್ಲಾ ಪಂಚಾಯಿತಿಯಿಂದ ಬಂದ ಅಧಿಕೃತ ಪತ್ರದಲ್ಲಿರುವ ವಿವರವನ್ನು ನಾನು ಸದನದ ಮುಂದಿಡುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಇಷ್ಟೊಂದು ದೊಡ್ಡ ಪ್ರಮಾಣದ ಯೋಜನೆಯನ್ನು ಒಂದೇ ಒಂದು ವರ್ಷದಲ್ಲಿ ಮಾಡಿ ಮುಗಿಸುವುದಕ್ಕೆ ಸಾಧ್ಯವಿದೆಯೇ? 'ಭತ್ತ ಕುಟ್ಟೋದಾ? ಅಡಿಗೆ ಮಾಡೋದಾ?' ಎನ್ನುವ ಗಾದೆ ಮಾತಿನಂತಿದೆ ಇವರು ಹೇಳುತ್ತಿರುವ ಮಾತು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು ಸರಿ ಇದೆ. ಅವರ ಕೈಯಿಂದ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಬೀದರ್ ಜಿಲ್ಲೆಯಿಂದ ಬಂದಿರುವ ಅಧಿಕೃತ ಪತ್ರದಲ್ಲಿ ಉಲ್ಲೇಖ ಮಾಡಿರುವಂತೆ 2013–14ರಲ್ಲಿ 4 ಶುದ್ಧ ಕುಡಿಯುವ ಘಟಕಗಳನ್ನು ಸ್ಥಾಪನೆ ಮಾಡಿದ್ದಾರೆ. 2014–15, 2015–16ನೇ ಸಾಲಿನಲ್ಲಿ 292 ಘಟಕಗಳ ಸ್ಥಾಪನೆಯ ಗುರಿಯನ್ನು ಹೊಂದಲಾಗಿತ್ತು. ಅದರಲ್ಲಿ ಒಂದೇ ಒಂದು ಘಟಕವನ್ನು ಸಹ ಇಲ್ಲಿಯವರೆಗೆ ಸ್ಥಾಪನೆ ಮಾಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 2013–14ನೇ ಸಾಲಿನಲ್ಲಿ ಯಾವುದೇ ಶುದ್ಧ ಕುಡಿಯುವ ನೀರಿನ ಘಟಕ ಹಂಚಿಕೆಯಾಗಿರುವುದಿಲ್ಲ. 2014–15ನೇ ಸಾಲಿನಲ್ಲಿ 05 ಮತ್ತು 2015–16ನೇ ಸಾಲಿನಲ್ಲಿ 73 ಶುದ್ಧ ಕುಡಿಯುವ ಘಟಕ

unedited copy

ಹಂಚಿಕೆಯಾಗಿರುತ್ತದೆ. ಒಟ್ಟಾರೆಯಾಗಿ 78 ಘಟಕಗಳ ಪೈಕಿ ಒಂದು ಘಟಕವನ್ನು ಸಹ ಸ್ಥಾಪನೆ ಮಾಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಯಾದಗಿರಿ ಜಿಲ್ಲೆಯಲ್ಲಿ 291 ಘಟಕಗಳನ್ನು ಹಂಚಿಕೆ ಮಾಡಲಾಗಿತ್ತು. ಇಲ್ಲಿಯವರೆಗೆ ಒಂದೇ ಒಂದು ಘಟಕವನ್ನು ಸ್ಥಾಪನೆ ಮಾಡಿಲ್ಲ. ಚಾಮರಾಜನಗರ ಜಿಲ್ಲೆಗೆ 191 ಘಟಕಗಳನ್ನು ಹಂಚಿಕೆ ಮಾಡಲಾಗಿತ್ತು. ಇಲ್ಲಿಯವರೆಗೆ ಒಂದೇ ಒಂದು ಘಟಕವನ್ನು ಸ್ಥಾಪನೆ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಾದ ಮೈಸೂರು ಜಿಲ್ಲೆಯಲ್ಲಿ ಮಲ್ಟಿ ವಿಲೇಜ್ ಸ್ಕೀಂ ಇದೆ. ಅದನ್ನು ಅನಂತರ ಹೇಳುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು 7 ಸಾವಿರ ಶುದ್ಧ ಕುಡಿಯುವ ಘಟಕಗಳನ್ನು ಸ್ಥಾಪನೆ ಮಾಡಲು ಹಂಚಿಕೆ ಮಾಡಲಾಗಿದೆ. ಅದರಲ್ಲಿ ಒಂದೇ ಒಂದು ಘಟಕವನ್ನು ಸ್ಥಾಪನೆ ಮಾಡಲು ಸಾಧ್ಯವಾಗದೇ ಇರುವುದಕ್ಕೆ ಕಾರಣವೇನು ಎನ್ನುವುದನ್ನು ಅವರು ತಿಳಿಸಬೇಕಾಗಿದೆ. ಇದೊಂದು ಉತ್ತಮವಾಗಿರುವ ಯೋಜನೆಯಾಗಿದೆ. ಇದು ಕಾರ್ಯಗತಗೊಳ್ಳಬೇಕೆನ್ನುವುದು ನನ್ನ ಆಸೆಯೂ ಆಗಿದೆ. ಮೊನ್ನೆ ಪಂಚಾಯಿತಿ ಚುನಾವಣೆಗಳ ಹಿನ್ನೆಲೆಯಲ್ಲಿ ಹಳ್ಳಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಹೆಣ್ಣುಮಕ್ಕಳು 'ಸಾರ್ ನಮಗೆ ಏನು ಕೊಡುವುದು ಬೇಡ. ಕುಡಿಯುವುದಕ್ಕೆ ನೀರು ಕೊಟ್ಟರೆ ಸಾಕು' ಎಂದು ಹೇಳಿದರು. ನಾವು ಗಂಡುಮಕ್ಕಳು ಹೋಗಿ ಕೈಕಾಲು ತೊಳೆದುಕೊಂಡು 'ಊಟಕ್ಕೆ ಕೊಡಿ' ಎಂದು ಕೇಳುತ್ತೇವೆ. ಆದರೆ, ಹೆಣ್ಣುಮಕ್ಕಳು ಎಲ್ಲಿಂದ ನೀರು ತಂದರು, ನೀರು ತರುವುದಕ್ಕೆ ಎಷ್ಟು ಕಷ್ಟಪಟ್ಟರು ಎನ್ನುವುದು ನಮಗೆ ಗೊತ್ತಾಗುವುದಿಲ್ಲ. ಈ ಯೋಜನೆಗಾಗಿ ರಾಜ್ಯ ಸರ್ಕಾರ 300 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ರಾಜ್ಯ ಸರ್ಕಾರದ ಎಲ್ಲ ಮಂತ್ರಿಗಳು ಯಾವ ಜಿಲ್ಲೆಗೆ ಹೋದರೂ 'ಕುಡಿಯುವ ನೀರಿಗೆ ಹಣದ ಕೊರತೆ ಇಲ್ಲ. ಕುಡಿಯುವ ನೀರಿಗಾಗಿ ಎಷ್ಟು ಬೇಕಾದರೂ ಹಣ ಕೊಡುತ್ತೇವೆ' ಎಂದು ಹೇಳಿಕೆಗಳನ್ನು ನೀಡುತ್ತಿರುತ್ತಾರೆ. ಇದು ರಾಜ್ಯ ಸರ್ಕಾರದ ಯೋಜನೆಯಾಗಿದೆ. ಇದನ್ನು ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ನಂತರ ಇಷ್ಟು ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪನೆ ಮಾಡಬೇಕೆನ್ನುವ ಗುರಿಯನ್ನು ಸಹ ಹೊಂದಲಾಗಿದೆ. ಒಂದು ವೇಳೆ ಗುರಿ ಮುಟ್ಟದಿದ್ದರೆ ರಾಜಿನಾಮೆ ಕೊಡುತ್ತೇವೆಂದು ಹೇಳುತ್ತಾರೆ. ಆದರೆ, ಯಾವ ಜಿಲ್ಲೆಯಲ್ಲಿಯೂ ಗುರಿಯನ್ನು ಮುಟ್ಟಲಿಲ್ಲವೆಂದರೆ ಈ ಯೋಜನೆಯನ್ನು ಯಾಕೆ ಘೋಷಣೆ ಮಾಡಬೇಕಾಗಿತ್ತು

unedited copy

ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕುಡಿಯುವುದಕ್ಕೆ ನೀರೇ ಇಲ್ಲವೆಂದರೆ ಎಲ್ಲಿಂದ ನೀರು ತರುವುದು? ನೀರು ತರುವ ಯೋಜನೆಗಳಿಗೆ ಹಣವೇ ಇಲ್ಲ. ಈ ಸರ್ಕಾರ ದಿವಾಳಿಯೆದ್ದಿದೆ ಎಂದು ಅವರು ಒಪ್ಪಿಕೊಂಡು ಬಿಡಲಿ.

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಶುದ್ಧ ಕುಡಿಯುವ ನೀರಿನ ಘಟಕವನ್ನು ಕಾರ್ಯಗತಗೊಳಿಸುವುದಕ್ಕೆ ತಾಂತ್ರಿಕ ಸಮಸ್ಯೆಗಳೇನಿವೆ ಎನ್ನುವುದನ್ನು ಅವರು ತಿಳಿದುಕೊಳ್ಳಬೇಕಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ನಾವೆಲ್ಲರೂ ನಿಶಬ್ಧವಾಗಿ ಕುಳಿತು ಕೇಳಿದ್ದೇವೆ. ಆದರೆ, ನಮ್ಮ ನಾಯಕರು ಮಾತನಾಡುವ ಸಂದರ್ಭದಲ್ಲಿ ಅವರು ಮಧ್ಯೆ ಮಧ್ಯೆ ಎದ್ದು ಮಾತನಾಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಾನು ರಾಜ್ಯದ ಹೆಣ್ಣುಮಕ್ಕಳ ಸಮಸ್ಯೆಯ ಬಗ್ಗೆ ಮಾತನಾಡುತ್ತಿದ್ದರೆ, ಸ್ವಾಭಾವಿಕವಾಗಿ ಅವರು ಹೆಣ್ಣುಮಕ್ಕಳಿಗೆ ಬೆಂಬಲವನ್ನು ವ್ಯಕ್ತಪಡಿಸಬೇಕಾಗುತ್ತದೆ. ಆದರೆ, ಶ್ರೀಮತಿ ಮೋಟಮ್ಮನವರು ನೀರು ಕೊಡದೇ ಇರುವ ಕಾಂಗ್ರೆಸ್ ಪಕ್ಷದ ಪರವಾಗಿ ನಿಂತು ಮಾತನಾಡುತ್ತಿದ್ದಾರೆ. ಅವರನ್ನು ಈ ರಾಜ್ಯದ ಹೆಣ್ಣುಮಕ್ಕಳ ಪ್ರತಿನಿಧಿ ಎಂದು ಹೇಳುವುದಕ್ಕೆ ಸಾಧ್ಯವಿದೆಯೇ?

ಸನ್ಮಾನ್ಯ ಸಭಾಪತಿಯವರೇ, ನಾನು ಟೀಕೆ ಮಾಡುವುದಕ್ಕಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲ. ಇರುವಂತಹ ಪರಿಸ್ಥಿತಿಯನ್ನು ಅಧಿಕೃತವಾಗಿ ಮಾಹಿತಿ ತರಿಸಿಕೊಂಡು ಹೇಳುತ್ತಿದ್ದೇನೆ. ಯಾಕೆ ಇದನ್ನು ಇನ್ನೂ ಕಾರ್ಯಗತಗೊಳಿಸುವುದಕ್ಕೆ ಸಾಧ್ಯವಾಗಿಲ್ಲ ಎನ್ನುವುದನ್ನು ನೋಡಿದರೆ, ಇದರಲ್ಲಿ ಮೂರು ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಮೊದಲನೆಯದಾಗಿ DOVAC ಎನ್ನುವ ಕಂಪನಿಗೆ ಸ್ವಲ್ಪ ಪ್ರಮಾಣದಲ್ಲಿ ಆರ್ಡರ್ ಕೊಟ್ಟು, ಸ್ವಲ್ಪ ಹಣವನ್ನು ಕೊಟ್ಟಿದ್ದಾರೆ. ಎರಡನೆಯದಾಗಿ, ಟೆಂಡರ್ ಕರೆದು ಹೆಚ್ಚಿನ ಪ್ರಮಾಣದಲ್ಲಿ ಈ ಕಾರ್ಯವನ್ನು ವಹಿಸಿದ್ದಾರೆ. ಮೂರನೆಯದಾಗಿ, ಸೊಸೈಟಿಗಳಿಗೆ ಈ ಕಾರ್ಯವನ್ನು ವಹಿಸಿದ್ದಾರೆ. ಸೊಸೈಟಿಯವರು 9.5 ಲಕ್ಷ ರೂಪಾಯಿಗಳನ್ನು ಪೂರ್ಣ ಪ್ರಮಾಣದಲ್ಲಿ ತಮ್ಮ ಕೈಯಿಂದ

unedited copy

ಹಾಕಿಕೊಂಡು ಈ ಕಾರ್ಯವನ್ನು ಮಾಡಬೇಕಾಗಿದೆ. ಇದು ಮೂರು ವರ್ಷದ ಹಿಂದಿನ ಮಾಹಿತಿಯನ್ನು ನಾನು ಹೇಳುತ್ತಿದ್ದೇನೆ. ಟೆಂಡರ್ ಪ್ರಕ್ರಿಯೆ ಮುಗಿದು ಹೋಗಿದೆ. ಅವರುಗಳ ಜೊತೆಗೆ ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗಿದೆ. ವರ್ಕ್ ಆರ್ಡರ್ ಕೊಡಬೇಕಾಗಿದೆ. ಅಗ್ರಿಮೆಂಟ್ ಪ್ರಕಾರ ವರ್ಕ್ ಆರ್ಡರ್ ಕೊಟ್ಟು ಶೇಕಡಾ 10ರಷ್ಟು ಹಣವನ್ನು ಪಾವತಿ ಮಾಡಬೇಕಾಗಿದೆ. ಈ ಸರ್ಕಾರ ದಿವಾಳಿಯಾಗಿದೆಯೆಂದು ಹೇಳಿದರೆ ಅವರಿಗೆ ಬೇಸರವಾಗುತ್ತದೆ. ಶೇಕಡಾ 10ರಷ್ಟು ಹಣವನ್ನು ಸರ್ಕಾರ ಅವರಿಗೆ ಕೊಡದಿದ್ದರೆ ಅವರು ಹೇಗೆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯ? 6 ಸಾವಿರ ಯೂನಿಟ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಶೇಕಡಾ 10ರಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಈ ಸರ್ಕಾರ ಗ್ರಾಮಾಂತರ ಪ್ರದೇಶದವರ ಪರವಾಗಿ ಬಡವರ ಪರವಾಗಿ ಇದೆಯೇ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಬರಗಾಲದ ಬಗ್ಗೆ ಚರ್ಚೆಯಾಗಬೇಕು, ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗಬೇಕು ಎನ್ನುವುದು ಸರಿ. ಆದರೆ, ಈ ಅಂಕಿಅಂಶಗಳನ್ನು ನೋಡಿದರೆ ಯಾವುದರ ಬಗ್ಗೆ ಚರ್ಚೆ ಮಾಡುವುದು?

**ಶ್ರೀ ವೀರಣ್ಣ ಮತ್ತಿಕಟ್ಟಿಃ-** ಸನ್ಮಾನ್ಯ ಸಭಾಪತಿಯವರೇ, ಕುಡಿಯುವುದಕ್ಕೇ ನೀರಿನಲ್ಲ. ಇನ್ನೂ ಶುದ್ಧ ಕುಡಿಯುವ ನೀರಿನ ಘಟಕದ ಮಾತು ದೂರವೇ ಉಳಿದಿದೆ.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಈ ಮಾತನ್ನು ಅವರು ತಮ್ಮ ಭಾಷಣದಲ್ಲಿ ಯಾಕೆ ಪ್ರಸ್ತಾಪ ಮಾಡಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಜನರು ಕುಡಿಯುವುದಕ್ಕೆ ನೀರಿಲ್ಲದೆ ಸಾಯುತ್ತಿದ್ದಾರೆಂದು ಅವರು ಯಾಕೆ ಹೇಳಲಿಲ್ಲ? ನನಗೆ ಮಾಹಿತಿ ದೊರೆತಿರುವ ಪ್ರಕಾರ ಮಾನ್ಯ ಹೆಚ್.ಕೆ.ಪಾಟೀಲ್‌ರವರು ನಿನ್ನೆ 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರಬಹುದು. ಮುಂಬರುವ ಆಯವ್ಯಯದಲ್ಲಿ ಈ ಕೆಲಸಕ್ಕಾಗಿ 300 ಕೋಟಿಗಳನ್ನು ಮೀಸಲಿಡಬೇಕೆಂದು ನಾನು ಕೈಜೋಡಿಸಿ ಪ್ರಾರ್ಥನೆ ಮಾಡುತ್ತಿದ್ದೇನೆ.

**ಡಾಃಜಯಮಾಲ ರಾಮಚಂದ್ರಃ-** ಸನ್ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ ಈ ವಿಚಾರದ ಬಗ್ಗೆ ಚರ್ಚೆಯಾದಾಗ ಮಾನ್ಯ ವಿರೋಧ ಪಕ್ಷದ ನಾಯಕರು, 'ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಆಗುವುದಕ್ಕೆ ಕೆಳಮನೆ ಮತ್ತು ಮೇಲ್ಮನೆಯಲ್ಲಿರುವ ಎಲ್ಲ ಸದಸ್ಯರು ತಮ್ಮ ತಮ್ಮ ಅನುದಾನವನ್ನು ಬಳಸಿಕೊಳ್ಳಬೇಕು' ಎನ್ನುವ ಸಲಹೆಯನ್ನು ನೀಡಿದ್ದರು.

(ಮುಂದುವರಿದಿದೆ)

unedited copy

(ಉಪ ಸಭಾಪತಿಯವರ ಉಪಸ್ಥಿತಿ)

**ಡಾ॥ ಜೈಮಾಲಾ ರಾಮಚಂದ್ರ (ಮುಂದು):-**

ನಾನು ಅವರಿಗೆ ಪೂರಕವಾಗಿ ಹೇಳುತ್ತಿದ್ದೇನೆ. ನಾವು ಸುಮಾರು 300 ಜನ ಶಾಸಕರಿದ್ದೇವೆ. ನಮ್ಮ ಎಲ್ಲಾ ಸದಸ್ಯರು ಎಲ್ಲಾ ಹಣವನ್ನು ಕೊಟ್ಟು ಮೊದಲು ಇದನ್ನು ಪೂರೈಸುವ ಹಾಗೆ ಮಾಡಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಅದಕ್ಕೂ ಸಹ ದುಡ್ಡು ಬಂದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮೋಟಮ್ಮನವರು ಸ್ವಲ್ಪ ಹೆಣ್ಣುಮಕ್ಕಳ ಪರವಾಗಿ ಇದ್ದರೂ ಸಹ ಡಾ॥ ಜೈಮಾಲಾ ರಾಮಚಂದ್ರರವರು ನೂರಕ್ಕೆ ನೂರರಷ್ಟು ಹೆಣ್ಣುಮಕ್ಕಳ ಪರವಾಗಿದ್ದಾರೆಂದು ನಾನು ಅವರಿಗೆ ಸರ್ಟಿಫಿಕೇಟ್‌ನ್ನು ಕೊಡುತ್ತೇನೆ. ಅದರ ಜೊತೆಗೆ ನಾನು ಈಗಲೂ ಸಹ ಅದಕ್ಕೆ ಬದ್ಧವಾಗಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರ ಮಾತಿನ ಧಾಟಿಯನ್ನು ನೋಡಿದರೆ ಅವರು ಏಕೋ ಗಂಡುಮಕ್ಕಳ ವಿರೋಧ ಆಗಿರುವ ಹಾಗೆ ಕಾಣುತ್ತಿದೆ. ಏನಾದರೂ ಮಾಡಿ ಅವರು ಎಲ್ಲರ ಪರವಾಗಿ ಇರುವ ಹಾಗೆ ನೋಡಿಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆ ವಿಚಾರವನ್ನು ಬಿಡಿ. ನಾನು ಕಳೆದ ಬಾರಿ ಹೇಳಿದ್ದೆ. ಈಗಲೂ ಸಹ ನಾನು ಕಮಿಟ್ ಮಾಡಿಕೊಳ್ಳುತ್ತೇನೆ. ಕಾಂಗ್ರೆಸ್ ಪಕ್ಷದ ಎಲ್ಲಾ ಶಾಸಕರು ಒಪ್ಪಿಕೊಂಡರೆ ನಾನು ಭಾರತೀಯ ಜನತಾ ಪಕ್ಷದ ಶಾಸಕರನ್ನು ಸಹ ಒಪ್ಪಿಸುತ್ತೇನೆ. ವಿಧಾನ ಸಭೆ ಬಿಟ್ಟುಬಿಡಿ, ವಿಧಾನ ಪರಿಷತ್ತಿನಲ್ಲಿ ನಾನು ಎಲ್ಲರಿಗೂ ಸಹ ಒಪ್ಪಿಸುತ್ತೇನೆ. ಇಲ್ಲೊಂದು ಷರತ್ತು ಇದೆ. ಮಾನ್ಯ ಸಭಾನಾಯಕರ ಮಾತನ್ನು ಅವರ ಕಡೆಯ ಶಾಸಕರು ಕೇಳಿದರೆ ಈಗಲೂ ಸಹ ಮೊದಲನೆಯದಾಗಿ ಒಬ್ಬೊಬ್ಬರಿಗೆ 50 ಲಕ್ಷ ರೂಪಾಯಿ ಏನು ಬಿಡುಗಡೆಯಾಗುತ್ತದೆ, 50 ಲಕ್ಷ ರೂಪಾಯಿಗಳನ್ನು ಸಹ ನಾವು ಕುಡಿಯುವ ನೀರಿನ ಸಲುವಾಗಿ ಕೊಟ್ಟುಬಿಡುತ್ತೇವೆ. ನಾನು ಈ ವರ್ಷದ ಬಗ್ಗೆ ಹೇಳುತ್ತಿದ್ದೇನೆ. 2 ಕೋಟಿ

unedited copy

ರೂಪಾಯಿಗಳಲ್ಲಿ ಮೊದಲು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಆಡಳಿತ ಪಕ್ಷದ ಸದಸ್ಯರಗಳದ್ದು ಸೇರಿಸಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ, ಈ 50 ಲಕ್ಷ ರೂಪಾಯಿಗಳನ್ನು ಸರ್ಕಾರ ಕುಡಿಯುವ ನೀರಿನ ಸಲುವಾಗಿ ಬಳಸಿಕೊಳ್ಳಲಿ. ಮಾನ್ಯ ಜೈಮಾಲಾ ರಾಮಚಂದ್ರರವರು ಹೇಳಿದ್ದನ್ನು ನಾನು ತುಂಬಾ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ನಾನು ಈ ಮಾತನ್ನು ಆ ದಿನವೂ ಸಹ ಹೇಳಿದ್ದೇನೆ, ಈ ದಿನವೂ ಸಹ ಹೇಳುತ್ತೇನೆ. ಇಲ್ಲವೆಂದರೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಿಗೆ ಈ ಪ್ರಾಜೆಕ್ಟ್‌ನ್ನು ಮಾಡಿದ್ದೇವೆನ್ನುವ ಸಮಾಧಾನ ಬಿಟ್ಟರೆ ಕುಡಿಯುವ ನೀರಿನ ಘಟಕಗಳೇ ಆಗುವುದಿಲ್ಲ. ಏನು ಪರಿಸ್ಥಿತಿ ಇದೆ ಎಂದು ನಾನು ಮೊನ್ನೆಯ ದಿವಸ ಜಿಲ್ಲಾ ಪಂಚಾಯ್ತಿಯಿಂದ ವಿವರಗಳನ್ನು ತರಿಸಿ ಕೇಳಿದಾಗ ಈ ರೀತಿಯ ಪರಿಸ್ಥಿತಿ ಇರುವುದು ತಿಳಿಯಿತು. ಇದು ಕೇವಲ ಒಂದು ಉದಾಹರಣೆಯನ್ನಷ್ಟೇ ಕೊಟ್ಟೆ. ಎಲ್ಲಾ ಜಿಲ್ಲೆಯಲ್ಲಿಯೂ ಇದೇ ಪರಿಸ್ಥಿತಿ ಇದೆ. ಸಾವಿರಾರು, ನೂರಾರು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆಯಿತು ನಾನಿದನ್ನು ಒಪ್ಪಿಕೊಳ್ಳುತ್ತೇನೆ. ಇನ್ನುಳಿದ 5,400 ಶುದ್ಧ ಕುಡಿಯುವ ನೀರಿನ ಘಟಕಗಳ ಗತಿ ಏನು? ಈಗಾಗಲೇ ನಾವು ಮಾರ್ಚ್ 31ನೇ ತಾರೀಖಿನ ಹತ್ತಿರದಲ್ಲಿದ್ದೇವೆ. ಅಂದರೆ ಈ ಆರ್ಥಿಕ ವರ್ಷದ ಕೊನೆಯಲ್ಲಿದ್ದೇವೆ. *"ಸಾಲ ಮಾಡಿಯಾದರೂ ಕುಡಿಯುವ ನೀರಿಗೆ ಹಣ"* ಎಂದು ಮಾನ್ಯ ಹೆಚ್.ಕೆ.ಪಾಟೀಲರು ಒಂದು ಮಾತನ್ನು ಹೇಳಿದ್ದಾರೆ. ಅವರು ತೆಗೆದುಕೊಳ್ಳುವಂಥ ತೀರ್ಮಾನ ನಿಜಕ್ಕೂ ಚೆನ್ನಾಗಿರುತ್ತದೆ. ಆದರೆ ಅದು ಇಂಪ್ಲಿಮೆಂಟ್ ಆಗುವುದಿಲ್ಲ. ಕೇವಲ ತೀರ್ಮಾನ ಮಾಡಿದರೆ ಏನು ಬಂತು? ಆದರೆ ಅದು ಇಂಪ್ಲಿಮೆಂಟ್ ಆಗುವುದಿಲ್ಲ. ಇತ್ತೀಚೆಗೆ ಬಂದಂಥ ಒಬ್ಬ ಒಳ್ಳೆಯ ಸಿನಿಮಾ ನಟಿಯನ್ನು ಮದುವೆಯಾಗಬೇಕೆಂದು ಮಾನ್ಯ ಎಸ್.ಆರ್.ಪಾಟೀಲರಿಗೆ ಆಸೆ. ಆದರೆ ಅದು ಇಂಪ್ಲಿಮೆಂಟ್ ಆಗುವುದಿಲ್ಲ, ಏನು ಮಾಡುತ್ತೀರಿ? ಅದು ನಮ್ಮ ಅವರ ವಿಚಾರ ಅದನ್ನು ನಂತರ ಹೇಳುತ್ತೇನೆ. 75 ಜನ ಶಾಸಕರು 50 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆಂದರೆ, ಸುಮಾರು 40 ಕೋಟಿ ರೂಪಾಯಿಯಾಗುತ್ತದೆ. ಇದನ್ನು ಮಾಡಿದರೆ ಅನೇಕ ಘಟಕಗಳು ರಾಜ್ಯದಲ್ಲಿ ತಕ್ಷಣದಿಂದ ಪ್ರಾರಂಭವಾಗುತ್ತದೆ. ಆ ದಿಕ್ಕಿನಲ್ಲಿ ಸರ್ಕಾರ ಪ್ರಯತ್ನ ಮಾಡಲಿ. ವಿಧಾನ ಸಭೆಯಲ್ಲಿ ಏನು ಮಾಡುತ್ತಾರೋ ಬಿಡುತ್ತಾರೊ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡಿ ಮೊದಲನೆಯ ಕಂತು ಏಪ್ರಿಲ್ ಮೊದಲನೆಯ ವಾರದಲ್ಲಿ, ಬಜೆಟ್ ಅಧಿವೇಶನ ಮುಗಿಯುತ್ತಿದ್ದ ಹಾಗೆ ಮೊದಲು ವಿಧಾನ ಪರಿಷತ್ತಿನ ಸದಸ್ಯರಿಗೆ ಹಣವನ್ನು ಬಿಡುಗಡೆ ಮಾಡಲು ಹೇಳಿ. ಆ ಹಣವನ್ನು ಸರ್ಕಾರ ನಮಗೆ ಕೊಡುವುದು ಬೇಡ. ಅದು ನೇರವಾಗಿ ಸಂಬಂಧಪಟ್ಟವರು ಯಾರಿಗೆ ಶೇಕಡ 50ರಷ್ಟು ಕೊಡಬೇಕೋ ಅವರಿಗೆ ಕೊಡಲಿ. ಈ ರೀತಿ ಮಾಡಿದರೆ ಎಷ್ಟು ಘಟಕಗಳು ಆರಂಭವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಈ ದಿಕ್ಕಿನಲ್ಲಿ

unedited copy

ತೀರ್ಮಾನವನ್ನು ತೆಗೆದುಕೊಳ್ಳಿ. ಶೇಕಡ 10ರಷ್ಟಕ್ಕೆ ಎಂದುಕೊಂಡು ಏನು 50 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದಾರೆ, ಅದಕ್ಕೆ ಸಂಬಂಧಪಟ್ಟ ಏಜೆನ್ಸಿಯವರನ್ನು ಕರೆಯಿರಿ. ಈ ಏಜೆನ್ಸಿಯನ್ನು ಪಡೆದಿರುವವರಿಗೆ ನಾನು ಈ ಸ್ಕೀಂನಲ್ಲಿ ಟೆಂಡರ್ ಹಾಕಿದ್ದೆ, ಇದನ್ನು ಮಾಡಬೇಕೆನ್ನುವುದು ಮರೆತು ಹೋಗಿದೆ. ಅವರಿಗೆ ಇದರ ಕಲ್ಪನೆಯೇ ಇಲ್ಲ. ಏಕೆಂದರೆ ಈ ಸರ್ಕಾರಕ್ಕೆ ಆಸಕ್ತಿ ಇಲ್ಲ, ನನಗೇಕೆ ಆಸಕ್ತಿ ಎನ್ನುತ್ತಾರೆ. ಈ ಪ್ರಶ್ನೆಯೂ ಸಹ ಬರುತ್ತದೆ. ಜಾಗವನ್ನು ಹುಡುಕಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ. ಈ ರೀತಿಯ ಎಲ್ಲಾ ಸಮಸ್ಯೆಗಳಿವೆ. ತಕ್ಷಣವೇ ಸರ್ಕಾರ ಇದನ್ನು ಮಾಡಿದರೆ, ನಾವು 50 ಲಕ್ಷ ರೂಪಾಯಿಯನ್ನು ಕೊಡಬೇಕಾದರೆ ಯಾವ ಶಾಸಕರು ಯಾವ ಹಳ್ಳಿಗೆ ಹೇಳುತ್ತಾರೆಯೋ ಅಲ್ಲಿಗೆ ಮಾಡಿಸಿ. ಸುಮ್ಮನೆ ಆ ಹಣವನ್ನು ಸರ್ಕಾರಕ್ಕೆ ಕೊಟ್ಟುಬಿಡುವುದಿಲ್ಲ. ಒಂದೊಂದು ವಿಧಾನ ಸಭಾ ಕ್ಷೇತ್ರಕ್ಕೆ ಒಬ್ಬೊಬ್ಬರಿಗೆ ಆಸೆ ಇರುತ್ತದೆ. ಅವರವರ ಕ್ಷೇತ್ರದಲ್ಲಿ ಎಲ್ಲಿ ಹೇಳಿತ್ತಾರೋ ಅಲ್ಲಿಗೆ ಕೊಟ್ಟುಬಿಡಿ. ಆಗ ಸರ್ಕಾರದ ಜೊತೆಗೆ ನಾವು ವಿರೋಧ ಪಕ್ಷದವರು ಕೈ ಜೋಡಿಸುವುದಕ್ಕೆ ತಯಾರಿದ್ದೇವೆ. ಆದರೆ ಮಾನ್ಯ ಹೆಚ್.ಕೆ.ಪಾಟೀಲರು, ಮಾನ್ಯ ಮುಖ್ಯಮಂತ್ರಿಗಳು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಯೋ ಇದನ್ನು ಸರ್ಕಾರ ಉತ್ತರ ಕೊಡುವಂಥ ಸಂದರ್ಭದಲ್ಲಿ ನಮಗೆ ತಿಳಿಸಬೇಕೆನ್ನುವುದು ನನ್ನ ಒಂದು ಪ್ರಾರ್ಥನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಕೊಡುತ್ತಿರುವ ಸಲಹೆಯನ್ನು ನೋಡಿದರೆ ಸರ್ಕಾರದವರು ದುಡ್ಡಿಲ್ಲವೆಂದು ಘೋಷಣೆಯನ್ನು ಮಾಡಿಕೊಂಡು ಬಿಟ್ಟಿದ್ದಾರೆಯೇ, ಖಜಾನೆ ಖಾಲಿಯಾಗಿದೆಯೇ? ಆ ರೀತಿಯ ಪರಿಸ್ಥಿತಿ ಬಂದಿದ್ದರೆ ಅವರು ಹೇಳುವುದು ಸರಿ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಪುಟ್ಟಸ್ವಾಮಿಯವರೆ, ನೀವು ಹೇಳಿದ್ದು ಸರಿ ಇದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಈಶ್ವರಪ್ಪನವರು ಒಳ್ಳೆಯ ಸಲಹೆಯನ್ನು ಕೊಡುತ್ತಿದ್ದಾರೆ,

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ನಿಮಗೆ ಮಾತನಾಡಲಿಕ್ಕೆ ಅವಕಾಶವಿದೆ, ಆಗ ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರ ಕಳಕಳಿಯನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳುತ್ತೇವೆ.

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಕೇಂದ್ರ ಸರ್ಕಾರಕ್ಕೆ ಹೇಳಿ ಎನ್ನುತ್ತಾರೆ, ಬೇರೆ ಇನ್ನೇನು ಇಲ್ಲ. ಅವರದು ಅದೇ ರಾಜಕಾರಣ. ಹೌದಾ ಉಗ್ರಪ್ಪನವರೆ? ಪ್ರತಿಯೊಂದಕ್ಕೂ ಅವರು ಈ ಅಂಶವನ್ನು ಹೇಳುವುದು ಬಿಟ್ಟರೆ ಅವರು ಬೇರೆ ಕಡೆಗೆ ಹೋಗುವುದೇ ಇಲ್ಲ. ಆಯಿತು ಮಾನ್ಯ ಉಗ್ರಪ್ಪನವರು ಏನು ಹೇಳುತ್ತಾರೆಂದು ಕೇಳುತ್ತೇವೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಿಜಕ್ಕೂ ಸಹ ನಾವಿಲ್ಲಿ ಇರುವಂಥಾದ್ದು, ಜನಸಾಮಾನ್ಯರ ಬದುಕಿಗೆ ಏನೆಲ್ಲಾ ಸಾಧ್ಯವಾಗುತ್ತದೆ ಅದೆಲ್ಲವನ್ನು ಕೊಡಿಸುವುದಕ್ಕೆ ಎಂದು ನಾವು ಭಾವಿಸಿದ್ದೇವೆ. ಮಾನ್ಯ ಈಶ್ವರಪ್ಪನವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಮಗೆ ಬರತಕ್ಕಂಥ ಅನುದಾನದಲ್ಲಿ ಮೊದಲನೆಯ ಕಂತನ್ನು ಕುಡಿಯುವ ನೀರಿಗಾಗಿ ಕೊಡಬೇಕೆಂದು ಅವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನು ನನ್ನ ಅನುದಾನದಲ್ಲಿ ಗಿಡ ನೆಡಲಿಕ್ಕೆ ಎಲ್ಲಾ ಶಾಲೆಗಳನ್ನು ದತ್ತು ತೆಗೆದುಕೊಂಡು ಗಿಡ ಕೊಡಿಸಿ ಅಲ್ಲಿ ನೆಡೆಸುತ್ತಿದ್ದೇವೆ ಎನ್ನುವುದು ಬೇರೆ ಪ್ರಶ್ನೆ. ಇದರ ಜೊತೆಗೆ ಅವರೇ ಹೇಳಿದಂತೆ ಕಳೆದ ಬಾರಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಯನ್ನು ಕುಡಿಯುವ ನೀರಿಗಾಗಿ ಕೇಂದ್ರ ಸರ್ಕಾರದಿಂದ ಮೀಸಲಿಟ್ಟಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇದು ಹಳೆಯ ಕಥೆ, ಬಿಡಿ. ಕೇಂದ್ರ ಸರ್ಕಾರಕ್ಕೆ ಇವರು ಟೀಕೆ ಮಾಡುವುದು ಬಿಟ್ಟರೆ ಇವರಿಗೆ ಬೆಳಿಗ್ಗಿನಿಂದ ಸಂಜೆಯವರೆವಿಗೂ ತಿಂದ ಅನ್ನ ಕರಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈ ವರ್ಷ ಇಡೀ ದೇಶಕ್ಕೆ ಇವರ ಸರ್ಕಾರ ಇಟ್ಟಿರತಕ್ಕಂಥಾದ್ದು 1,300 ಕೋಟಿ ರೂಪಾಯಿ. ದಯಮಾಡಿ ಈಶ್ವರಪ್ಪನವರು ಮೋದಿಯವರ ಹತ್ತಿರ....

**ಶ್ರೀ ಕೆ.ಎಸ್.ಈಶ್ವರಪ್ಪ:–** ಆಯಿತು, ನಾನೀಗ ಮೋದಿಯವರ ಹತ್ತಿರ ಹೋಗುತ್ತೇನೆ. ನೀವು ಕುಳಿತುಕೊಳ್ಳಿ. ಮಾನ್ಯ ಸಭಾಪತಿಯವರೆ, ನಾನೀಗ ಈಲ್ಡ್ ಆಗಿಲ್ಲ ಅವರಿಗೂ ಕರೆದುಕೊಂಡು ಹೋಗುತ್ತೇನೆ ದಯಮಾಡಿ ಕುಳಿತುಕೊಳ್ಳುವುದಕ್ಕೆ ಹೇಳಿ.

unedited copy

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಈಶ್ವರಪ್ಪನವರು ಮೋದಿಯವರ ಹತ್ತಿರ ಕರೆದುಕೊಂಡು ಹೋಗಿ 1,300 ಕೋಟಿ ರೂಪಾಯಿ ಕೊಡಿಸುವುದಕ್ಕೆ ಆ ಹಣವನ್ನು ಬಿಡುಗಡೆ ಮಾಡಿಸುವುದಕ್ಕೆ ಇವರು ಏಕೆ ಪ್ರಯತ್ನ ಮಾಡಬಾರದು?

**ಶ್ರೀ ಕೆ.ಎಸ್.ಈಶ್ವರಪ್ಪ:-** ಆಯಿತು, ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ.

**ಶ್ರೀ ವಿ.ಎಸ್.ಉಗ್ರಪ್ಪ:-** ನಿಮಗೆ ಹೆಣ್ಣುಮಕ್ಕಳ ಬಗ್ಗೆ, ಈ ರಾಜ್ಯದ ಜನತೆಯ ಬಗ್ಗೆ ಏನಾದರೂ ಕಿಂಚಿತ್ತು ಕಾಳಜಿ ಇದ್ದರೆ ದಯಮಾಡಿ ಆ ಹಣವನ್ನು ಬಿಡುಗಡೆ ಮಾಡಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಲ್ಲಿ ಶೇಕಡ 10ರಷ್ಟು ಕೊಡುವುದಕ್ಕೆ ಯೋಗ್ಯತೆ ಇಲ್ಲ. ಇವರು ಮಾತನಾಡುತ್ತಿದ್ದಾರೆ.

**ಶ್ರೀ ವಿನಯಕುಮಾರ್ ಸೊರಕೆ:-** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದ 14ನೇ ಹಣಕಾಸು ಯೋಜನೆಯಲ್ಲಿ ಐದೈದು ಲಕ್ಷ ರೂಪಾಯಿಗಳನ್ನು ಹಿಡಿಯುತ್ತಿದ್ದಾರಲ್ಲಾ....

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಒಂದೇ ವರ್ಷದಲ್ಲಿ ಈ ಸರ್ಕಾರ ಬಿಡುಗಡೆ ಮಾಡಿರುವುದು....

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾನಾಯಕರೆ, ನಿನ್ನೆಯ ದಿವಸ ನಡೆದ ಕಾರ್ಯಕಲಾಪಗಳ ಸಮಿತಿ ಸಭೆಯಲ್ಲಿ ನಿರ್ಣಯವಾಗಿದ್ದು ಇದೇನಾ? ನಿಮಗೆ ತಾಕತ್ತು ಇದ್ದರೆ ಅವರನ್ನು (ಉಗ್ರಪ್ಪನವರನ್ನು) ಕೂರಿಸಿ. ನಿಮಗೆ ತಾಕತ್ತಿಲ್ಲವೆಂದರೆ ಬಿಟ್ಟುಬಿಡಿ. ನೋಡಿ ಅವರು ಇದೇ ರೀತಿ ಮಾತನಾಡುತ್ತಿದ್ದರೆ ಹೇಗೆ?

**ಶ್ರೀ ವಿ.ಎಸ್.ಉಗ್ರಪ್ಪ:-** ಬೌದ್ಧಿಕ ದೀವಾಳಿತನ ಎಷ್ಟರಮಟ್ಟಿಗೆ ಆಗಿದೆ ಎಂದರೆ...

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ಸಾಕು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ. ನಾನಿನ್ನು ಈಲ್ಡ್ ಆಗುವುದಿಲ್ಲ. ನಾನು ಈಲ್ಡ್ ಆಗದೇ ಇದ್ದರೂ ಸಹ ಅವರು ಎದ್ದು ನಿಂತು ಮಾತನಾಡಿದರೆ ಅವರಿಗೆ ತಲೆಯ ಮೇಲೆ ಹೊಡೆದು ಕೂರಿಸುವ ಜವಾಬ್ದಾರಿ ಮೇಷ್ಟ್ರದ್ದು. ಅಂದರೆ ಮಾನ್ಯ ಸಭಾನಾಯಕರ ಜವಾಬ್ದಾರಿ, ಅದನ್ನು ಮಾಡಿ. ಇನ್ನು Multi Village Water Supply Scheme ಬಗ್ಗೆ ಹೇಳುವುದಾದರೆ, 2015-16ನೇ ಸಾಲಿನಲ್ಲಿ

unedited copy

total cost 8,377 ಕೋಟಿ ರೂಪಾಯಿಗೆ 1147 ಕೋಟಿ ರೂಪಾಯಿ expenditure. Expenditure during the year 2015-16, upto November, ಮೊನ್ನೆಯ ತನಕ ಆಗಿರುವುದು 401 ಕೋಟಿ ರೂಪಾಯಿ. Probable expenditure from December, 2015 to March, 2016 is Rs.234 crores. Total expenditure upto March, 2016 is 1,783 crores. Balance amount on 1st April for 2016-17 is 6,593 crores. ಈ ಹಣವನ್ನು ಇವರು ಎಲ್ಲಿಂದ ತರುತ್ತಾರೆ? ಮಾನ್ಯ ಮುಖ್ಯಮಂತ್ರಿಗಳು ನಾನು ಎಲ್ಲಿಂದ ಆದರೂ ಹಣವನ್ನು ತಂದು ಮೂರು ವರ್ಷಗಳ ಅವಧಿಗೆ 10,000 ಕೋಟಿ ರೂಪಾಯಿಯನ್ನು ಕುಡಿಯುವ ನೀರಿನ ಸಲುವಾಗಿ ಇಡುತ್ತೇನೆಂದು ಹೇಳಿದ್ದಾರೆ. ಇದನ್ನು ನಾನು ಮೆಚ್ಚುತ್ತೇನೆ. ಮೂರು ವರ್ಷಗಳಿಗೆ 10,000 ಕೋಟಿ ರೂಪಾಯಿ ಎಂದು ಹೇಳಿ ಮೂಲೆಯಲ್ಲಿ ಜೇನುತುಪ್ಪವನ್ನು ತೋರಿಸಿ ಇಲ್ಲಿ 50 ಕೋಟಿ ರೂಪಾಯಿಯನ್ನು ಕೊಡಲಿಲ್ಲವೆಂದರೆ ನಾವೇನು ಮಾಡೋಣ ಹೇಳಿ. ಶೇಕಡ 10ರಷ್ಟು ಹಣವನ್ನು ಸಹ ಕೊಟ್ಟಿಲ್ಲ. ನಾನು ಇಷ್ಟು ಹೊತ್ತಿನವರೆವಿಗೂ ಬಜೆಟ್‌ನಲ್ಲಿ ಎಷ್ಟೆಷ್ಟು ಹೇಳಿದ್ದಾರೆಂದು ಹೇಳಿದೆ. ನಾವು ಇನ್ನು ಎರಡು ವರ್ಷಗಳ ಕಾಲ ಕಾಯಬೇಕು, ಕಾಯುತ್ತೇವೆ ನಮಗೆ ಬೇರೆ ದಾರಿ ಇಲ್ಲ. ಮೂರು ವರ್ಷಗಳಿಗೆ 10,000 ಕೋಟಿ ರೂಪಾಯಿ ಬೇಡ, ಇದೇ ತಿಂಗಳಿನಲ್ಲಿ ಮಂಡನೆಯಾಗುವ ಬಜೆಟ್‌ನಲ್ಲಿ ಕಡೇಪಕ್ಷ 2,500 ಕೋಟಿ ರೂಪಾಯಿಯನ್ನು ಕುಡಿಯುವ ನೀರಿನ ಸಲುವಾಗಿ ಕೊಡಿಸಿ. ಮೂರು ವರ್ಷಕ್ಕೆ 10,000 ಕೋಟಿ ರೂಪಾಯಿ ಎಂದರೆ ಒಂದು ವರ್ಷಕ್ಕೆ ಸುಮಾರು 3,300 ಕೋಟಿ ರೂಪಾಯಿಯಾಗುತ್ತದೆ. ಮುಂದಿನ ಬಜೆಟ್‌ನಲ್ಲಿ 2,500 ಕೋಟಿ ರೂಪಾಯಿಯನ್ನಾದರೂ ಸಹ ಇರಿಸಿದರೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಒಂದಿಷ್ಟು ಆಸಕ್ತಿ ಇದೆ ಇದೆ ಎಂದು ನಮ್ಮೆಲ್ಲರಿಗೂ ಸಮಾಧಾನವಾಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ,...

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ಯಾರಿಗೂ ಈಲ್ಡ್ ಆಗುವುದಿಲ್ಲ.

(ಮುಂದು)

unedited copy

(ಪೀಠದಲ್ಲಿ ಉಪಸಭಾಪತಿಗಳ ಉಪಸ್ಥಿತಿ)

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–**ಇಡೀ ದೇಶಕ್ಕೆ ಈ ಸಲ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಎಷ್ಟು ಇಟ್ಟಿದೆ ಹೇಳಿ. ದಯಮಾಡಿ ಹೇಳಿ. . .

**ಶ್ರೀ ಕೆ.ಎಸ್.ಈಶ್ವರಪ್ಪ:–**ದಯವಿಟ್ಟು ನೀವು ಕುಳಿತುಕೊಳ್ಳಿ. ನೀವು ಭಾಷಣ ಮಾಡುವಾಗ ಅದನ್ನು ಬೇಕಾದರೆ ಹೇಳಿ. ಮಾನ್ಯ ಸಭಾಪತಿಗಳೆ, ಈ ರೀತಿ ಮಧ್ಯದಲ್ಲಿ ನಿಂತು ಮಾತನಾಡುತ್ತಿದ್ದರೆ ನಾವು ಸದನದಿಂದ ಹೊರ ನಡೆಯಬೇಕಾಗುತ್ತದೆ. (ಗೊಂದಲ)

**ಉಪಸಭಾಪತಿಗಳು:–** ಮಾನ್ಯ ಉಗ್ರಪ್ಪನವರೇ ಕುಳಿತುಕೊಳ್ಳಿ . . . (ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–**ಹೀಗೆ ಮಾಡಿದರೆ ನಡೆಯುವುದಿಲ್ಲ, ನಾವು ಹೋಗುತ್ತಿದ್ದೇವೆ. . . .

**ಶ್ರೀ ಕೆ.ಬಿ.ಶಾಣಪ್ಪ:–** ಒಬ್ಬ ವಿರೋಧ ಪಕ್ಷದ ನಾಯಕರು ಮಾತನಾಡಬೇಕಾದರೆ ಈ ರೀತಿ ನಡೆದುಕೊಳ್ಳುವುದು ಸರಿಹೋಗುವುದಿಲ್ಲ. Are you superior to anybody else? (ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:–** ಹೇಗೆ ಮಾತನಾಡಬೇಕು ಎಂಬುದನ್ನು ಮೊದಲು ಅವರಿಗೆ ಕಲಿಸಿ, ನಂತರ ಅವರನ್ನು ಕರೆದುಕೊಂಡು ಬನ್ನಿ . . . (ಗೊಂದಲ)

**(ಈ ಹಂತದಲ್ಲಿ ಮಾನ್ಯ ರಾಮಚಂದ್ರಗೌಡರವರನ್ನು ಬಿಟ್ಟು ಮಿಕ್ಕ ಎಲ್ಲಾ ಬಿಜೆಪಿ ಪಕ್ಷದ ಸದಸ್ಯರು ಸದನದಿಂದ ಹೊರ ನಡೆದರು)**

**ಶ್ರೀ ರಾಮಚಂದ್ರಗೌಡ:–** ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರದ ಕಡೆ ಕೈ ತೋರಿಸಬಾರದು. ನಾವು ಹೇಳುವುದನ್ನು ಹೇಳುತ್ತೇವೆ, ನೀವೇನನ್ನು ಮಾಡುತ್ತೀರೋ ಅದನ್ನು ಮಾಡಬೇಕು. We have a say and you have a way. This is most uncalled for.

unedited copy

**ಶ್ರೀ ವಿ.ಎಸ್.ಉಗ್ರಪ್ಪ:-**ನೀವು, ಮೂರು ಸಾವಿರ ಕೋಟಿ ಇಡಬೇಕು ಎಂದು ಹೇಳಿದಿರಿ, ಅದಕ್ಕೆ ನಾನು ಕೇಂದ್ರ ಸರ್ಕಾರ ಎಷ್ಟು ಇಟ್ಟಿದೆ ಎಂದು ಕೇಳಿದೆ .. . (ಗೊಂದಲ)

**ಶ್ರೀ ರಾಮಚಂದ್ರಗೌಡ:-** ನೀವು ಮಾತನಾಡುವಾಗ ಅದನ್ನು ಹೇಳಿ. ಹಾಗಾದರೆ ಕೇಂದ್ರ ಸರ್ಕಾರ ಕೊಡದೇ ಇದ್ದರೆ ರಾಜ್ಯ ಸರ್ಕಾರವೂ ಕೊಡುವುದಿಲ್ಲವೇ? ನೀವೇನು ಕೊಡುತ್ತೀರೋ ಕೊಡಿ. ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರ ಎಂದು ಹೇಳಬಾರದು. ಸದನ ನಡೆಯಬೇಕೋ ಬೇಡವೋ ಹೇಳಿ

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ರಾಮಚಂದ್ರಗೌಡರೇ ತಾವು ಹಿರಿಯ ಸದಸ್ಯರಾಗಿದ್ದೀರಿ. ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಹೊರಗೆ ಹೋಗಿದ್ದಾರೆ. ದಯವಿಟ್ಟು ಅವರನ್ನು ಒಳಗೆ ಕರೆಸಿ. Hon'ble Member has not said it with any bad intention.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಗಳೆ, it is not the question of bad intention. ಮಾಧ್ಯದಲ್ಲಿ ಮಾತಾಡದಂತೆ ದಯವಿಟ್ಟು ತಿಳಿಸಿ. ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರವನ್ನು ತರುವುದು ಬೇಡ. ನಾವು ರಾಜ್ಯ ಸರ್ಕಾರದ ಬಗ್ಗೆ ಮಾತನಾಡೋಣ. (ಗೊಂದಲ) ಇದು ಹಿರಿಯರ ಸದನ. This is Upper House and we have to behave properly.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಗಳೆ, ಸಂಸದೀಯ ವ್ಯವಸ್ಥೆಯಲ್ಲಿ ಇವರೊಂದು ಹೇಳಿದಾಗ ಅವರೊಂದು ಪ್ರತಿಕ್ರಿಯೆ ಕೊಡುತ್ತಾರೆ ಅದು ಸಹಜ. ಅದು ಅತಿ ಆಗಬಾರದು ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ. ವಿರೋಧ ಪಕ್ಷದ ನಾಯಕರ ವಿಚಾರಗಳನ್ನು ಕೇಳಬಾರದು ಎನ್ನುವ ಉದ್ದೇಶ ನಮ್ಮದಲ್ಲ. ಅವರು ಒಳ್ಳೆಯ ಸಲಹೆಗಳನ್ನು ಕೊಡುತ್ತಾರೆ, ಮಾರ್ಗದರ್ಶನ ಕೊಡುತ್ತಾರೆ. ನಮ್ಮಲ್ಲಿರುವ ಲೋಪದೋಷಗಳನ್ನು ಅವರು ಹೇಳಿದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಮಗೆ ಸಹಾಯವಾಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲೂ ಮತ್ತು ಎಲ್ಲ ಸದಸ್ಯರಲ್ಲೂ, ಸದನದ ಒಳಗೆ ಬರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ರಾಮಚಂದ್ರಗೌಡರೇ ದಯಮಾಡಿ ತಾವು ಅವರನ್ನು ಕರೆಸಿಬಿಡಿ.

**ಶ್ರೀ ಬಸವರಾಜ ಹೊರಟ್ಟಿ:-**ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ? . . .

unedited copy

**ಶ್ರೀ ಎಸ್.ಆರ್.ಪಾಟೀಲ್:–**ನಿಮ್ಮ ವಿಚಾರವನ್ನು ಒಪ್ಪಿದ್ದೇನೆ. ಆಳುವ ಪಕ್ಷದ ನಮ್ಮ ಸದಸ್ಯರಿಗಾಗಲಿ, ಸಚಿವರಿಗಾಗಲಿ ಅವರ ಮಾತುಗಳನ್ನು ಕೇಳಬಾರದು ಎನ್ನುವ ಉದ್ದೇಶವಿಲ್ಲ. ಅವರು ಕೊಡುವಂತಹ ಸಲಹೆಗಳನ್ನು ನಾವು ಸ್ವೀಕಾರ ಮಾಡುತ್ತೇವೆ, ರಚನಾತ್ಮಕ ಟೀಕೆಗಳನ್ನು ಸ್ವಾಗತ ಮಾಡುತ್ತೇವೆ. ಆ ಸಂದರ್ಭದಲ್ಲಿ ಒಬ್ಬರಿಬ್ಬರೋ react ಮಾಡಿದಾಗ ಈ ಮಟ್ಟದಲ್ಲಿ ಕೋಪಗೊಂಡು ಸದನ ಬಿಟ್ಟು ಹೊರಗೆ ಹೋಗುವ ಕೆಲಸ ಮಾಡಬಾರದು.

**ಶ್ರೀ ಬಸವರಾಜ ಹೊರಟ್ಟಿ:–** ಎಲ್ಲದಕ್ಕೂ react ಮಾಡಬಹುದೇ? . . .

**ಶ್ರೀ ಎಸ್.ಆರ್.ಪಾಟೀಲ್:–**ಎಲ್ಲದಕ್ಕೂ react ಮಾಡಬಾರದು. . .

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಉಗ್ರಪ್ಪನವರು ಎಲ್ಲದಕ್ಕೂ react ಮಾಡುತ್ತಾರೆ . . .(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–**ಎಲ್ಲದಕ್ಕೂ react ಮಾಡಬಾರದು. . .

**ಶ್ರೀ ವಿ.ಎಸ್.ಉಗ್ರಪ್ಪ:–**ನಾನು ಎಲ್ಲದಕ್ಕೂ react ಮಾಡುವುದಿಲ್ಲ. ವಿರೋಧ ಪಕ್ಷದ ನಾಯಕರು ಕುಡಿಯುವ ನೀರಿನ ಬಗ್ಗೆ ಮಾತನಾಡುತ್ತಾ ಮೂರು ಸಾವಿರ ಕೋಟಿ ಇಡಬೇಕು ಎಂದು ಹೇಳಿದಾಗ, ಕೇಂದ್ರ ಸರ್ಕಾರ ಕುಡಿಯುವ ನೀರಿಗೆ ಎಷ್ಟು ಇಟ್ಟಿದೆ ಎಂದು ಕೇಳಿದೆ . . . (ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–**ಸಭಾಪತಿಯವರ ಮುಖಾಂತರ ನಾನು ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಹೊರಗೆ ಹೋಗಿರುವವರನ್ನು ಕರೆಸಿ.

**ಶ್ರೀ ಬಸವರಾಜ ಹೊರಟ್ಟಿ:–** ನಿಮ್ಮ ಪರವಾಗಿ ನಾನೂ ಹೋಗಿ ವಿರೋಧ ಪಕ್ಷದ ನಾಯಕರನ್ನು ಮತ್ತು ಸದಸ್ಯರುಗಳನ್ನು ಒಳಗೆ ಬರಲು ರಿಕ್ವೆಸ್ಟ್ ಮಾಡುತ್ತೇನೆ. ದಯಮಾಡಿ ಸಹಕಾರ ಮಾಡಿ.

**(ಮಾನ್ಯ ರಾಮಚಂದ್ರಗೌಡರು ಮತ್ತು ಮಾನ್ಯ ಹೊರಟ್ಟಿಯವರು ಹೊರಗಿದ್ದವರನ್ನು ಒಳಗೆ ಕರೆತರಲು ಸದನದಿಂದ ಆಚೆ ಹೋದರು)**

unedited copy

**ಶ್ರೀ ಆರ್.ವಿ.ವೆಂಕಟೇಶ್:–** ಸದನದಲ್ಲಿ ಮಾತನಾಡುತ್ತಿರುವಾಗ ಕೆಲವು ಸಲ ಪ್ರತಿಕ್ರಿಯೆಗಾಗಿ ಮಾನ್ಯ ಸಚಿವರುಗಳೂ ಕೂಡ ಮಧ್ಯದಲ್ಲಿ ನಿಂತು ಮಾತನಾಡಬೇಕಾಗುತ್ತದೆ. ಅವರು ಮಾತನಾಡಲು ಎದ್ದಾಗ, ಕುಳಿತುಕೊಳ್ಳಿ ಎಂದು ಹೇಳಿಬಿಟ್ಟರೆ ಸದಸ್ಯರ ಪ್ರಶ್ನೆಗೆ ಉತ್ತರ ಕೊಡುವವರು ಯಾರು?

**ಉಪಸಭಾಪತಿಗಳು:–** ತಾವು ಈಕಡೆಯಿಂದ ಮಾತನಾಡುವಾಗ ಅವರು ಕೇಳಿಸಿಕೊಂಡಿಲ್ಲವೇ? ನಿಮಗೂ ಮಾತನಾಡುವುದಕ್ಕೆ ಅವಕಾಶ ಇದೆ. ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶ ಸಿಗುತ್ತದೆ. ನಿಮ್ಮ ಸರದಿ ಬಂದಾಗ ನೀವು ಮಾತನಾಡಿ, ಆಗ ನಿಮ್ಮ ವಿಚಾರಗಳನ್ನು ಹೇಳಿ.

**ಡಾ: ಮತ್ತಿಕಟ್ಟಿ ವೀರಣ್ಣ:–**ಮಾನ್ಯ ಸಭಾಪತಿಗಳೆ, ಮಾತನಾಡುವಾಗ ಒಂದು ಪದ್ಧತಿ ಇರುತ್ತದೆ. ಈ ಸದನದಲ್ಲಿ ಎಷ್ಟು ಜನ ವಿರೋಧ ಪಕ್ಷದ ನಾಯಕರಾಗಿ ಹೋಗಿದ್ದಾರೆ ಎನ್ನುವುದನ್ನು ತಾವೂ ನೋಡಿದ್ದೀರಿ. ಅಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದವರು ಈಕಡೆ ಸಚಿವರಾಗಿ, ಸಭಾನಾಯಕರಾಗಿ ಕೆಲಸ ಮಾಡಿದ್ದಾರೆ. ಮಾತನಾಡುವಾಗ ಇರಿಟೇಷನ್ ಆಗಬಾರದು, ಲಕ್ಷ್ಮಣ ರೇಖೆಯನ್ನು ದಾಟಿ ಹೋಗಬಾರದು. ಮಾನ್ಯ ಸದಾನಂದಗೌಡರು ವಿರೋಧ ಪಕ್ಷದ ನಾಯಕರಾಗಿದ್ದಾಗ ಹೀಗೆ ಆಗುತ್ತಿತ್ತೆ ನೀವೇ ಹೇಳಿ. ಮಾನ್ಯ ಉಪಸಭಾಪತಿಗಳೇ ತಾವೂ ಕೂಡ ಸುಮಾರು 15–20 ವರ್ಷದಿಂದ ಸದನದಲ್ಲಿದ್ದೀರಿ. ಈ ರೀತಿ ಆಗಿದ್ದನ್ನು ನೀವು ನೋಡಿರಲಾರಿರಿ. ಸ್ವಲ್ಪ ಸ್ವಲ್ಪಕ್ಕೂ ಸಿಟ್ಟಿಗೇಳುತ್ತಾರೆ, ಅದನ್ನು ಖುಷಿಯಾಗಿ ತೆಗೆದುಕೊಳ್ಳಬೇಕು. ಸರ್ಕಾರ ಸತ್ತಿದೆ, ಸರ್ಕಾರ ದಿವಾಳಿಯಾಗಿದೆ, ಹುಚ್ಚು ಹಿಡಿದಿದೆ ಎಂದೆಲ್ಲಾ ಕಟುವಾಗಿ ಸರ್ಕಾರವನ್ನು ಟೀಕೆ ಮಾಡುವಾಗ ಅದಕ್ಕೆ ಪ್ರತಿಕ್ರಿಯೆಯಾಗಿ ಬರುವುದನ್ನು ಸಹಿಸಲು ಶಕ್ತಿ ಇರಬೇಕು. ಅದು ನಾಯಕತ್ವ. ಸಣ್ಣ ಸಣ್ಣ ವಿಚಾರಗಳಿಗೆ ಈ ರೀತಿ ಮಾಡುವುದು ತಪ್ಪು.

**ಉಪಸಭಾಪತಿಗಳು:–** ಮಾನ್ಯ ಮತ್ತಿಕಟ್ಟಿಯವರೇ ಸದನದಲ್ಲಿ ಮಾನ್ಯ ಸಭಾನಾಯಕರಿದ್ದಾರೆ. ಅವರು ಉತ್ತರ ಕೊಡುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರು ಸದನದ ಒಳಕ್ಕೆ ಬಂದು ತಮ್ಮ ಸ್ಥಾನದಲ್ಲಿ ಆಸೀನರಾದರು)**

**ಶ್ರೀ ಬಸವರಾಜ ಹೊರಟ್ಟಿ:–**ಮಾನ್ಯ ಸಭಾನಾಯಕರೆ, ತಾವು ಈ ಮಂತ್ರಿಗೂ ಸ್ಕ್ರೂ ಹಾಕಿ. . .

unedited copy

**ಶ್ರೀ ರಮಾನಾಥ್ ರೈ:-** ನೀವು ಸರ್ವಜ್ಞ ಇರಬಹುದು. ನಾನು ಆರು ಸಲ ಗೆದ್ದು ಬಂದಿದ್ದೇನೆ . . .

**ಶ್ರೀ ಬಸವರಾಜ ಹೊರಟ್ಟಿ:-** ನಾನು ಸರ್ವಜ್ಞ ಎಂದು ಹೇಳುತ್ತಿಲ್ಲ. ನಾನೂ ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. . .

**ಶ್ರೀ ಬಿ.ರಮಾನಾಥ್ ರೈ:-** ನೀವು ಸರ್ವಜ್ಞನಾಗಿರಬಹುದು, ನಮಗೆ ತಿಳುವಳಿಕೆ ಕಡಿಮೆ ಇರಬಹುದು. . . . .

**ಉಪಸಭಾಪತಿಗಳು:-** ಮಾನ್ಯ ಸಚಿವರೇ ದಯವಿಟ್ಟು ಕುಳಿತುಕೊಳ್ಳಿ . . .

**ಶ್ರೀ ಬಿ.ರಮಾನಾಥ್ ರೈ:-** ನನಗೂ ಮಾತನಾಡುವುದಕ್ಕೆ ಸ್ವಾತಂತ್ರ್ಯ ಇದೆ. ಸದನ ನಡೆಯುವಾಗ ಯಾರ್ಯಾರು ಏನೇನು ಎಷ್ಟೆಷ್ಟು ಮಾತನಾಡಿದ್ದಾರೆ ಎನ್ನುವುದನ್ನು ಕಡತ ತೆಗೆಸಿ ನೋಡಿ. ನಾನೊಬ್ಬನೇ ಮಧ್ಯದಲ್ಲಿ ಮಾತನಾಡುವವನಲ್ಲ . . . (ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:-** ದಯವಿಟ್ಟು ಹಾಗೆ ಮಾತನಾಡಬೇಡಿ. ಮಂತ್ರಿಯಾದವರು ಸರಿಯಾಗಿ ಮಾತನಾಡಬೇಕು, ಸೆನ್ಸ್ ಇರಬೇಕು . . . (ಗೊಂದಲ)

**ಶ್ರೀ ಬಿ.ರಮಾನಾಥ್‌ರೈ:-**ನೀವು ಮಧ್ಯ ಪ್ರವೇಶ ಮಾಡಿ ಮಾತನಾಡಿದಷ್ಟು ಯಾರೂ ಮಾತನಾಡಿಲ್ಲ. ನಮಗೆ ಗೊತ್ತಿದೆ, ಅದು ದಾಖಲೆಯಲ್ಲಿದೆ. . . .(ಗೊಂದಲ)

**ಶ್ರೀ ರಾಮಚಂದ್ರ ಗೌಡ:-** ಮಾನ್ಯ ಸಭಾಪತಿಗಳೆ, I am on a point of order. ನನ್ನ point of order ಏನೆಂದರೆ, ಈ ಸದನದ ಸದಸ್ಯರು ಅಲ್ಲದವರು, ವಿಶೇಷವಾಗಿ ಮಂತ್ರಿಗಳು ಅವರ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡುವುದು ಪದ್ಧತಿ. ಇತರೇ ಮಂತ್ರಿಗಳು ಬೇರೆ ಸಂದರ್ಭದಲ್ಲಿ ಮಾತನಾಡಬಾರದು. ಈ ಸದನದ ಸದಸ್ಯರು ಮಂತ್ರಿಗಳಾಗಿದ್ದರೆ ಅಂಥವರು ಯಾವುದು ಬೇಕಾದರೂ ಮಾತನಾಡಬಹುದು, ಚರ್ಚೆ ಮಾಡಬಹುದು. ಈ ಸದನದ ಸದಸ್ಯರಲ್ಲದವರು ಅವರ ಇಲಾಖೆಗೆ ಸಂಬಂಧಪಟ್ಟಂಥ ವಿಚಾರ ಬಂದಾಗ ಮಾತ್ರ ಮಾತನಾಡಬೇಕು, ಬೇರೆ ಸಂದರ್ಭದಲ್ಲಿ ಮಾತನಾಡಬಾರದು.

(ಮುಂದು . . . )

unedited copy

(ಉಪಸಭಾಪತಿಯವರ ಉಪಸ್ಥಿತಿ)

ಶ್ರೀ ರಾಮಚಂದ್ರಗೌಡ(ಮುಂದು):-

ಬೇರೆ ಸಮಯದಲ್ಲಿ ಮಾತನಾಡಬಾರದು. ಇದು ಈ ಸದನದ ಪದ್ಧತಿ. ಅದನ್ನು ನಾನು point of order ನಲ್ಲಿ raise ಮಾಡಿದ್ದೇನೆ. ಅವರು ಅರಣ್ಯ ಇಲಾಖೆಗೆ ಸಂಬಂಧಿಸಿದ ಹಾಗೆ ಮಾತನಾಡಬಹುದು. Otherwise, he should not speak.

**ಶ್ರೀ ವಿ.ಎಸ್.ಉಗ್ರಪ್ಪ:-** ದಯಮಾಡಿ ತಾವು ಬೆಳಕು ಚೆಲ್ಲಿ, ಯಾವ ನಿಯಮಾವಳಿಯ ಪ್ರಕಾರ ಆ ರೀತಿ ಇದೆ?

**ಶ್ರೀ ರಾಮಚಂದ್ರಗೌಡ:-** ನೀವು ಸದನದ ಸದಸ್ಯರು, ನೀವು ಮಾತನಾಡಬಹುದು. This is my point of order.

**ಶ್ರೀ ಆರ್.ವಿ.ವೆಂಕಟೇಶ್:-** ಯಾವ ನಿಯಮಾವಳಿಯಲ್ಲಿ ಇದೆ? ಅವರು ಅದನ್ನು ಕೋಟ್ ಮಾಡಲಿ. This is your own rule.

**ಶ್ರೀ ರಾಮಚಂದ್ರಗೌಡ:-** ಸದನದಲ್ಲಿ ನಡೆದು ಬಂದ ಹಾದಿಯನ್ನು ನಾನು ಹೇಳುತ್ತಿದ್ದೇನೆ.

**ಉಪಸಭಾಪತಿಯವರು:-** ರಾಮಚಂದ್ರಗೌಡರವರೇ, ಕುಳಿತುಕೊಳ್ಳಿ. ಬಸವರಾಜ ಹೊರಟ್ಟಿಯವರು ಮಾತನಾಡುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಮಂತ್ರಿಗಳಿಗೆ ಮಾತನಾಡಬೇಡಿ ಎಂದು ಹೇಳುವುದಿಲ್ಲ. ಅವರು ಮಾರ್ಗದರ್ಶನ ಮಾಡಲಿ. ಮಂತ್ರಿಗಳಾಗಿರುವಂಥವರು ದೊಡ್ಡವರಾಗಿರಲಿ ಸಣ್ಣವರಾಗಿರಲಿ ಮಾರ್ಗದರ್ಶನ ಮಾಡಲಿ.

unedited copy

ಆದರೆ ಶಾಸಕರ ಜೊತೆಯಲ್ಲಿ ಪ್ರತಿಯೊಂದಕ್ಕೂ ಜಿಗಿದಾಡಿ ಎದ್ದೆದ್ದು ನಿಂತರೆ ಸರಿಯಾಗುವುದಿಲ್ಲ. ಒಂದೊಂದು ಸಲ ಆ ರೀತಿ ಆಗುತ್ತದೆ. ಪ್ರತಿ ಸಲ ಆ ರೀತಿ ಮಾಡಿದರೆ ಸರಿಯಾಗುವುದಿಲ್ಲ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಯಾವ ನಿಯಮಾವಳಿಯಲ್ಲಿದೆ ಎಂಬುದನ್ನು ಹೇಳಿ?

**ಉಪಸಭಾಪತಿಯವರು:–** ಮಂತ್ರಿಗಳೇ, ತಾವು ಮಾತನಾಡುವುದು ಯಾವುದು ರೆಕಾರ್ಡ್‌ಗೆ ಹೋಗುವುದಿಲ್ಲ.

**Sri B.J. PUTTASWAMY:** Habitually intervene ಆಗಬಾರದು ಅಷ್ಟೆ.

**ಉಪಸಭಾಪತಿಯವರು:–** ಪುಟ್ಟಸ್ವಾಮಿಯವರೇ ದಯಮಾಡಿ ಕುಳಿತುಕೊಳ್ಳಿ. ಮಂತ್ರಿಗಳೇ, ತಾವು ಮಾತನಾಡುವುದು ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಯಾವ ಮಂತ್ರಿಗಳಿಗೂ ಮಾತನಾಡಬೇಡಿ ಎಂದು ಹೇಳುವುದಿಲ್ಲ. ಯಾವ ಖಾತೆ ಇರಲಿ, ಬಿಡಲಿ ಮಾತನಾಡಬೇಕಾಗುತ್ತದೆ. ಆದರೆ ನಾನು ಹೇಳುವುದೇನೆಂದರೆ, ಮಾರ್ಗದರ್ಶನ ಮಾಡುವ ರೀತಿಯಲ್ಲಿ ಮಂತ್ರಿಗಳು ಇರುತ್ತಾರೆ. ಹೆಚ್ಚು ಕಡಿಮೆಯಾದರೆ ಹೇಳಬೇಕು. ಪ್ರತಿಯೊಂದು ಹಂತದಲ್ಲಿಯೂ ಶಾಸಕರಿಗಿಂಥ ಅವರೇ ಎದ್ದೆದ್ದು ಜಿಗಿದಾಡಿದರೆ ಸದನದಲ್ಲಿ ಸರಿಯಾಗುವುದಿಲ್ಲ ಎನ್ನುವುದು ನನ್ನ ಅನಿಸಿಕೆ. ಅದಕ್ಕೆ ನಾನು ನೀವು ಹಗಲೆಲ್ಲಾ ಏಳಬೇಡಿ, ಅದಕ್ಕೆ ನಿಮಗೆ screw ಹಾಕಬೇಕಾಗುತ್ತದೆ ಎಂದು ಹೇಳಿದೆ. ಕೆಟ್ಟ ಉದ್ದೇಶದಿಂದ ನಾನು ಹೇಳಲಿಲ್ಲ. ನನ್ನ ವಿನಂತಿ ಏನೆಂದರೆ, ಮಂತ್ರಿಗಳಿದ್ದವರು ಕೂಡ ಗಂಭೀರತೆಯಿಂದ ಕುಳಿತುಕೊಳ್ಳಬೇಕು. ನಾವಲ್ಲ, ಹೊರಗಿನವರು ಕೇಳುವ ರೀತಿಯಲ್ಲಿ ಆಗಬಾರದು ಎನ್ನುವ ಸದುದ್ದೇಶದಿಂದ

unedited copy

ಹೇಳಿದ್ದೇನೆಯೇ ಹೊರತು ಯಾವುದೇ ದುರುದ್ದೇಶದಿಂದ ಹೇಳಿಲ್ಲ. ದಯಮಾಡಿ ಇದನ್ನು ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

**ಉಪಸಭಾಪತಿಯವರು:–** ಮಾನ್ಯ ಮಂತ್ರಿಗಳೇ, ಈಗ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡುತ್ತಿದ್ದಾರೆ. ಆಡಳಿತ ಪಕ್ಷದ ಸದಸ್ಯರಿಗೂ ಕೂಡ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇದೆ. ಆ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡಿದಂತಹ ವಿಚಾರದ ಕುರಿತು ಮಾತನಾಡುವುದಕ್ಕೆ ಅದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ, ಅದನ್ನು ಟೀಕೆ ಮಾಡುವುದಕ್ಕೆ ಅಥವಾ ಅದಕ್ಕೆ ಸಮಜಾಯಿಷಿ ಕೊಡುವುದಕ್ಕೆ ಎಲ್ಲದ್ದಕ್ಕೂ ಸೂಕ್ತವಾದ ಅವಕಾಶ ಇದೆ. ದಯಮಾಡಿ ಈ ಸಂದರ್ಭದಲ್ಲಿ ಮಧ್ಯೆ ಎದ್ದು ನಿಂತು ಅವರಿಗೆ ತಾವು obstruction ಮಾಡಬಾರದು. ನಾನು ವಿನಂತಿ ಮಾಡುವುದೇನೆಂದರೆ ತಾವು ಸಾಂದರ್ಭಿಕವಾಗಿ ತಮಾಷೆಯಾಗಿ ಏನಾದರು ಮಾತನಾಡುವಂಥದ್ದು ಬಹಳ ಉಚಿತವಾದಂಥದ್ದು ಕಂಡುಬಂದಲ್ಲಿ ತಾವು ಮಾಡಿ ಅದಕ್ಕೆಲ್ಲಾ ಅವಕಾಶ ಇದೆ. ರಾಜ್ಯಪಾಲರ ಭಾಷಣದ ಮೇಲೆ ತುಂಬಾ ಚೆನ್ನಾಗಿ ಚರ್ಚೆಯಾಗುತ್ತಿದೆ. ಈ ನಾಡಿನ ಜನರಿಗೆ ಒಳ್ಳೆಯದಾಗಬೇಕೆಂದು ಈ ಸದನದ ಮೂಲಕ ನಾವೆಲ್ಲರೂ ಬಯಸುತ್ತಿದ್ದೇವೆ. ಆದ್ದರಿಂದ ಆ ರೀತಿಯ interruption ಮಾಡಬೇಡಿ. ತಮಗೆ ಅವಕಾಶ ಬಂದಾಗ ಅವರು ಮಾತನಾಡಿದ ವಿಚಾರಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಗಮನಿಸಬೇಕು. ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ 475 ಮುಂದುವರಿದ ಕಾಮಗಾರಿಗಳಿಗೆ ಎಸ್ಟಿಮೇಟ್ ಆಗಿರುವುದು 8377 ಕೋಟಿ, ಮಾರ್ಚ್‌ವರೆಗೆ ಖರ್ಚಾಗಿರುವುದು 1783 ಕೋಟಿ ರೂಪಾಯಿ. ಪ್ರಗತಿ ಏಕೆ ಆಗುತ್ತಿಲ್ಲವೆಂದರೆ ಹಣ ಇಲ್ಲ. ಗುತ್ತಿಗೆದಾರರು ಕೆಲಸ ಮಾಡುತ್ತಿಲ್ಲ. ಈಗ ತೀರ್ಮಾನ ಮಾಡಿದ್ದಕ್ಕೆ ಒಟ್ಟು ಎಷ್ಟು ಹಣ ಬೇಕೆಂದರೆ 6593 ಕೋಟಿ ರೂಪಾಯಿ ಬೇಕು. ಈ ಯೋಜನೆ ಮುಗಿಸುವುದಕ್ಕೆ ಹಣ ಬೇಕು ಎಂದಾಗ ಗುತ್ತಿಗೆದಾರರಿಗೆ ಈಗಿನ ಬಾಕಿ 600 ಕೋಟಿ ರೂಪಾಯಿ ಇದೆ. ಏಕೆಂದರೆ ಕುಡಿಯುವ ನೀರು ಇಲ್ಲ ಹಾಹಾಕಾರ ಎಂದಾಗ ಕುಡಿಯುವ ನೀರು ಭಗವಂತನ ದಯೆಯಿಂದ ಮಳೆ ಮೇಲಿಂದಾದರೂ ಉದುರಿ ಬಂದಿತೇ, ಅದು ಇಲ್ಲ. ದುಡ್ಡು ಏನು ಮೇಲಿಂದ ಉದುರಿ

ಬೀಳುತ್ತದೆಯೇ ಎಂದು ನಾವು ತಮಾಷೆ ಮಾಡುತ್ತೇವೆ. ಮಳೆಯೂ ಮೇಲಿಂದ ಉದುರಿ ಬೀಳುತ್ತಿಲ್ಲ. ಸರ್ಕಾರದ ಕರ್ತವ್ಯ ಇದೆ, ಸರ್ಕಾರ ಗುತ್ತಿಗೆದಾರರಿಗೆ 600 ಕೋಟಿ ರೂಪಾಯಿ ಕೊಟ್ಟರೆ ಅಲ್ಲಿ ತಕ್ಷಣ ಕೆಲಸ ಪ್ರಾರಂಭ ಮಾಡುತ್ತಾರೆ. ಅವನು ಎಲ್ಲಿಂದ ತರುತ್ತಾನೆ? ಬ್ಯಾಂಕ್, ಸಾಲಸೋಲ ಏನೇನೋ ಮಾಡಿಕೊಂಡು ಸಣ್ಣಪುಟ್ಟ ಗುತ್ತಿಗೆದಾರರು ಗುತ್ತಿಗೆಯನ್ನು ತೆಗೆದುಕೊಂಡುಬಿಟ್ಟಿರುತ್ತಾರೆ. 600 ಕೋಟಿ ರೂಪಾಯಿ ಬಾಕಿ. ನಾನು ಮೈಸೂರುದೊಂದೆ ಹೇಳುತ್ತೇನೆ, Multi-village Scheme ಬಗ್ಗೆ ಹೇಳುತ್ತೇನೆ. 450 ಕೋಟಿ ರೂಪಾಯಿ ಯೋಜನೆಗೆ ಕಬಿನಿ ನದಿಯಿಂದ ನೀರು ಪಡೆದರೆ 200 ಗ್ರಾಮಕ್ಕೆ ನೀರು ಸಿಗುತ್ತದೆ. 450 ಕೋಟಿ ರೂಪಾಯಿ ಯೋಜನೆ. ಚಾಮರಾಜನಗರದಲ್ಲಿ ಈ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳು ದತ್ತು ತೆಗೆದುಕೊಂಡಿದ್ದಾರೆ. ಗುತ್ತಿಗೆದಾರರ ಬಾಕಿ ಎಷ್ಟು? ಗುತ್ತಿಗೆದಾರರ ಬಾಕಿ 100 ಕೋಟಿ ರೂಪಾಯಿ. ಎಲ್ಲಿಂದ ಕೆಲಸ ಮಾಡುತ್ತಾನೆ? ಅವನು ಕೆಲಸ ನಿಲ್ಲಿಸಿಬಿಟ್ಟಿದ್ದಾನೆ. ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಿ ಎಂದು ಹೇಳುತ್ತಾರೆ, ಏನು ಚರ್ಚೆ ಮಾಡುವುದು? ಹಣವನ್ನು ಬಿಡುಗಡೆ ಮಾಡಿದರೆ ಸ್ವಾಭಾವಿಕವಾಗಿ ಕೆಲಸ ಆಗುತ್ತದೆ. ಕೆಲವು ಕಡೆ ಅಧಿಕಾರಿಗಳು ಹಣ ಬಿಡುಗಡೆ ಮಾಡಿದ್ದಾರೆ. ಅಧಿಕಾರಿಗಳು ಕೂಡ ಒಂದು ರೀತಿ, ಅವರಿಗೆ ಪದ ಬಳಸಬೇಕೋ ಗೊತ್ತಿಲ್ಲ. ಕೆಲಸ ಮಾಡುತ್ತಿಲ್ಲ, ಆರಾಮವಾಗಿದ್ದಾರೆ. ನೀವು ಆರಾಮವಾಗಿದ್ದೀರಿ ಅವರು ಆರಾಮವಾಗಿದ್ದಾರೆ. ಹೇಗೆ ನೀರು ಸಿಗುತ್ತದೆ? ನಾನು ಅದಕ್ಕೋಸ್ಕರ ಹೇಳಿದೆ. ಸರ್ಕಾರ ಈ ತಿಂಗಳಿನಲ್ಲಿ ಮಂಡಿಸುವ ಬಜೆಟ್‌ನಲ್ಲಿ ಹಣವನ್ನು ಬಿಡುಗಡೆ ಮಾಡಬೇಕು. ಕನಿಷ್ಟ ಒಂದೊಂದು ವಿಧಾನ ಸಭಾ ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಯಂತೆ ಬಿಡುಗಡೆ ಮಾಡಲಿ. ಎಂಎಲ್‌ಎ ಮತ್ತು ಎಂಎಲ್‌ಸಿ ಗಳಿಗೆ, ಇತ್ತೀಚೆಗೆ ಚುನಾವಣೆಯಲ್ಲಿ ಗೆದ್ದವರನ್ನೊಳಗೊಂಡಂತೆ, ತಾಲ್ಲೂಕು ಪಂಚಾಯ್ತಿ ಸದಸ್ಯರುಗಳಿಗೆ ಒಂದು ಸಣ್ಣ ಸಮಿತಿಯನ್ನು ಮಾಡಿ ಅವರು ಎಲ್ಲಿಗೆ ಹೇಳುತ್ತಾರೆಯೋ ಅಲ್ಲಿಗೆ ಅಂದರೆ ಅವರು ಬೋರ್‌ವೆಲ್ ತೆಗೆಯಲು ಬಳಸುತ್ತಾರೆಯೋ ಅಥವಾ ಇನ್ನೇನು ಕಾಮಗಾರಿಗಳಿಗಾಗಿ ಹಣವನ್ನು ಬಳಸುತ್ತಾರೆಯೋ ಅದನ್ನು ಅವರಿಗೆ ಬಿಡಿ. ಒಂದು ವಿಧಾನ ಸಭಾ ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿ ಕೊಡುವುದಕ್ಕೆ ಕಷ್ಟವಾಗುತ್ತದೆಯೇ? ಈ ದಿಕ್ಕಿನಲ್ಲಿ ದಯಮಾಡಿ ಸರ್ಕಾರ ಚಿಂತನೆಯನ್ನು ಮಾಡಬೇಕೆನ್ನುವಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ.

unedited copy

ಇನ್ನೊಂದು ವಿಚಾರವೆಂದರೆ, ಸರ್ಕಾರ ರಾಜ್ಯಪಾಲರ ಬಳಿಯೂ ಸಹ ಸುಳ್ಳು ಹೇಳಿಸಿಬಿಟ್ಟಿದ್ದಾರೆ. ಸುಮಾರು 21 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎಂದು ಹೇಳಿಸಿದ್ದಾರೆ. ಆಗಿರುವುದು ಎಷ್ಟೆಂದರೆ ಕೇವಲ 5.6 ಲಕ್ಷ ಮಾತ್ರ. ಆದರೆ ಇವರ ಗುರಿ ಇದ್ದುದು 10 ಲಕ್ಷ ಶೌಚಾಲಯಗಳು ಎಂದು. ಇದರಲ್ಲಿ ಪ್ರಿಂಟ್ ಮಾಡುವಾಗ ತಪ್ಪಾಗಿದೆಯೋ ಏನೋ ಗೊತ್ತಿಲ್ಲ.

**Sri S.R. PATIL:** I have noticed it. ಅದು print mistake ಆಗಿದೆ. ಅದನ್ನು ನಮ್ಮ ಉತ್ತರದಲ್ಲಿ rectify ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನನಗೆ ಆಶ್ಚರ್ಯವಾಯಿತು. ತಮಗೆ ಗೊತ್ತಿರಲಿ, 10 ಲಕ್ಷ ಶೌಚಾಲಯಗಳ ನಿರ್ಮಾಣದ ಗುರಿಯನ್ನಿಟ್ಟುಕೊಂಡಿದ್ದಕ್ಕೆ ಕೇವಲ 5.6 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ. ಒಂದು ಶೌಚಾಲಯಕ್ಕೆ 12,000 ರೂಪಾಯಿಯಂತೆ ಪೂರ್ಣ ಹಣವನ್ನು ಕೇಂದ್ರ ಸರ್ಕಾರ ಕೊಡುತ್ತಿದೆ. ಹೀಗಿರುವಾಗ 10 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಲು ತೊಂದರೆ ಏನು? ಬಡವರು ಇಲ್ಲವೇ? ಶೌಚಾಲಯ ಎಂದ ತಕ್ಷಣ ನಾವೆಲ್ಲಾ ರಾಜಕಾರಣಿಗಳು ಸಂಜೆಯ ಸಮಯದಲ್ಲಿ ಕಾರಿನಲ್ಲಿ ಹಳ್ಳಿಗಳ ಕಡೆಗೆ ಹೋಗುತ್ತಿದ್ದರೆ ಗ್ರಾಮೀಣ ಹೆಣ್ಣುಮಕ್ಕಳಿಗೆ ಶೌಚಾಲಯವಿಲ್ಲದೇ ಪರದಾಡುವುದು ತಿಳಿಯುತ್ತದೆ. ಸ್ವಂತ ನಮ್ಮ ಅಕ್ಕ-ತಂಗಿಯರೇ ಆಗಿದ್ದರೆ ಅವರ ಪರಿಸ್ಥಿತಿ ಏನಾಗುತ್ತಿತ್ತು ಎನ್ನುವುದನ್ನು ಯೋಚಿಸಿ. ವಾಹನ ಬೆಳಕು ಬಿದ್ದರೆ ತಕ್ಷಣವೇ ನಿಂತು ಬಿಡುತ್ತಾರೆ. ನಮ್ಮ ಹೆಣ್ಣುಮಕ್ಕಳು ಬೀದಿಗೆ ಬಂದಿದ್ದರೂ ಸಹ ಅವರಿಗೆ ನಾವು ಶೌಚಾಲಯಗಳನ್ನು ನಿರ್ಮಾಣ ಮಾಡಿಸಿಕೊಡಲು ನಮಗೆ ಆಗುತ್ತಿಲ್ಲವೆಂದು ಹೊಟ್ಟೆ ಉರಿಯುತ್ತದೆ. ಕೇಂದ್ರ ಸರ್ಕಾರದಿಂದ ಒಂದು ಯೂನಿಟ್‌ಗೆ 12,000 ರೂಪಾಯಿಯನ್ನು ಕೊಟ್ಟರೂ ಸಹ 10 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಲು ಇವರಿಗೆ ಏನು ತೊಂದರೆ ಇದೆ? ಇವರು ಕೇವಲ 5.6 ಲಕ್ಷ ಶೌಚಾಲಯಗಳನ್ನು ಮಾತ್ರ ನಿರ್ಮಾಣ ಮಾಡುತ್ತಾರಲ್ಲಾ ಇದಕ್ಕೆ ಏನು ಹೇಳಬೇಕು. ಎಸ್‌ಸಿ-ಎಸ್‌ಟಿಗಳಿಗೆ ರಾಜ್ಯ ಸರ್ಕಾರದಿಂದ 3,000 ರೂಪಾಯಿ ಕೊಟ್ಟು ಒಟ್ಟು 15,000 ರೂಪಾಯಿಯನ್ನು ಕೊಡುತ್ತಾರೆ. ಆ ಹೆಣ್ಣುಮಕ್ಕಳಲ್ಲಿಯೂ ಸಹ

unedited copy

ಜಾತಿಯನ್ನು ತರಬೇಕೇ? ಎಸ್‌ಸಿ–ಎಸ್‌ಟಿ ಹೆಣ್ಣುಮಕ್ಕಳಿಗೆ 15,000 ರೂಪಾಯಿ ಮತ್ತು ಬೇರೆ ಬಡ ಹೆಣ್ಣುಮಕ್ಕಳಿಗೆ 12,000 ರೂಪಾಯಿಯಂತೆ ಕೊಡುತ್ತಾರೆ. ಶೌಚಾಲಯ ನಿರ್ಮಾಣ ಕಾರ್ಯದಲ್ಲಿಯೂ ಸಹ ಜಾತಿಯನ್ನು ತರುವಂಥ ಪರಿಸ್ಥಿತಿ ನಿರ್ಮಾಣವಾದರೆ ನಾವು ಎಲ್ಲಿದ್ದೇವೆ, ಏನು ಪರಿಸ್ಥಿತಿ ಇದೆ? ದಯಮಾಡಿ ಇದರಲ್ಲಿ ಎಲ್ಲಾ ಹೆಣ್ಣುಮಕ್ಕಳಿಗೂ ಸಹ ರಾಜ್ಯ ಸರ್ಕಾರದಿಂದ 3,000 ರೂಪಾಯಿಯನ್ನು ಕೊಡುವಂಥ ಒಂದು ವ್ಯವಸ್ಥೆಯನ್ನು ಬರುವಂಥ ಬಜೆಟ್‌ನಲ್ಲಿ ಘೋಷಣೆ ಮಾಡಬೇಕೆನ್ನುವ ಪ್ರಾರ್ಥನೆಯನ್ನು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮಾಡುತ್ತೇನೆ.

ಇನ್ನು ಬರಗಾಲದ ಬಗ್ಗೆ ಹೇಳುವುದಾದರೆ, ರಾಜ್ಯದ 136 ತಾಲ್ಲೂಕುಗಳಲ್ಲಿ ಮುಂಗಾರು ಅವಧಿಯಲ್ಲಿ ಹಾಗೂ 62 ತಾಲ್ಲೂಕುಗಳು ಹಿಂಗಾರು ಅವಧಿಯಲ್ಲಿ ಪ್ರತಿಕೂಲ ಹವಾಮಾನ ಪರಿಸ್ಥಿತಿ ಹಾಗೂ ಬರದ ಛಾಯೆಗಳಾಗಿದ್ದು, ನಾವು ಏನೇನು ಮಾಡಿದ್ದೇವೆಂದು ಎಷ್ಟು ಕೋಟಿ ರೂಪಾಯಿಗಳ ವಿಮೆ, ಹವಾಮಾನ, ಸುಮಾರು 63,500 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ಕೃಷಿಯನ್ನು ಅಳವಡಿಸಿದ್ದು, ಸುಮಾರು 53,000 ಜನರ ರೈತರಿಗೆ ಪ್ರಯೋಜನವಾಗಿದೆ ಎನ್ನುತ್ತಾರೆ. ಇದನ್ನು ಇಲ್ಲಿ mention ಮಾಡಿದ್ದಾರೆ.

(ಮುಂದು)

unedited copy

042/03-03-2016/4-20/bkp-ak

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**

ಹಾಗೂ ಬರದ ಛಾಯೆಗಳಾಗಿದ್ದಾಗ್ಯೂ ನಾವು ಏನೇನು ಮಾಡಿದ್ದೇವೆ, ಎಷ್ಟು ಕೋಟಿ ರೂಪಾಯಿಗಳನ್ನೂ ಖರ್ಚು ಮಾಡಿದ್ದೇವೆ, ಇದರ ವಿಮೆ, ಹವಾಮಾನ, 63,500 ಹೆಕ್ಟೇರು ಪ್ರದೇಶವೂ ಸಾವಯವ ಕೃಷಿಯನ್ನು ಅಳವಡಿಸಿದ್ದು, 53 ಸಾವಿರ ಜನರಿಗೆ ಪ್ರಯೋಜನ, ಇದನ್ನು ನಮೂದು ಮಾಡಿದ್ದಾರೆ. ಆದರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಬರಗಾಲ ಇರುವಂತಹ ಸಂದರ್ಭದಲ್ಲಿ ಎಷ್ಟು ಬೆಳೆ ನಾಶವಾಗಿದೆ, ಅದಕ್ಕೆ ರಾಜ್ಯ ಸರ್ಕಾರದಿಂದ ಎಷ್ಟು ದುಡ್ಡು ಕೊಡಬೇಕು, ಎಷ್ಟು ಕೊಟ್ಟಿದ್ದೀರಿ, ಕೇಂದ್ರ ಎಷ್ಟು ದುಡ್ಡು ಬಂದಿದೆ, ಅದರಲ್ಲಿ ಎಷ್ಟು ದುಡ್ಡನ್ನು ಕೊಡಲಾಗಿದೆ, ಈ ಮಾತನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರೆ ಸರಿಯಿತ್ತು ಎಂದು ನನಗೆ ಅನಿಸುತ್ತದೆ. ಈ ಬರಗಾಲದ ಬಗ್ಗೆ ಇವತ್ತು ಪ್ರಸ್ತಾಪ ಮಾಡಿ, ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರ್ಕಾರ 1,540 ಕೋಟಿ ರೂಪಾಯಿಗಳನ್ನು ಈ ಬರಗಾಲಕ್ಕೋಸ್ಕರ ಹಣವನ್ನು ಬಿಡುಗಡೆ ಮಾಡಿದೆ. ರಾಜ್ಯಪಾಲರ ಭಾಷಣದಲ್ಲಿ ಒಂದು ಅಭಿನಂದನೆ ಸಲ್ಲಿಸಬಹುದಿತ್ತೇನೋ ಎಂದು ನನಗೆ ಅನಿಸುತ್ತದೆ. ಏಕೆಂದರೆ, ಕೇಂದ್ರದಿಂದ ಅಷ್ಟು ದುಡ್ಡು ಬಂದಂತಹ ಸಂದರ್ಭದಲ್ಲಿ ಒಂದು ಅಭಿನಂದನೆಯನ್ನು ಸಲ್ಲಿಸಿದ್ದರೆ, ನಾವು ಮತ್ತೆ ಕೇಂದ್ರಕ್ಕೆ ಹೋದಂತಹ ಸಂದರ್ಭದಲ್ಲಿ ಇಷ್ಟು ಹಣವನ್ನು ಕೊಟ್ಟಿದ್ದೀರಿ, ಸಂತೋಷ, ಮತ್ತೆ ಇನ್ನಷ್ಟು ಹಣವನ್ನು ಕೊಡಿ ಎಂದು ಕೇಳಲಿಕ್ಕೆ ನಮಗೆ ಅನುಕೂಲವಾಗುತ್ತಿತ್ತು. ಕೇಂದ್ರ ಸರ್ಕಾರದ 1,540 ಕೋಟಿ ರೂಪಾಯಿಗಳು ರಾಜ್ಯಕ್ಕೆ ಬಂದಿದೆ. ಇದನ್ನು ಮಾನ್ಯ ಕೃಷಿ ಸಚಿವರು ಡಿಸೆಂಬರ್ ಒಳಗೆ ರೈತರಿಗೆ ಪರಿಹಾರವನ್ನು ಕೊಡುತ್ತೇವೆಂದು ಹೇಳಿದರು. ಕೇಂದ್ರದಿಂದ ದುಡ್ಡು ಬಂದು ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಿಗೆ ಬಂದಿದ್ದೇವೆ, ಕೇಂದ್ರದಿಂದ ಬಂದಂತಹ ಹಣವನ್ನು ಪೂರ್ಣವಾಗಿ ಹಂಚಿಲ್ಲ. ಎರಡನೆಯದಾಗಿ, ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಹೇಳಬೇಕಾಗಿದೆ. ಕೇಂದ್ರದಿಂದ 1,540 ಕೋಟಿ ರೂಪಾಯಿಗಳು ಏನು ಬಂದಿದೆ, ನಮ್ಮ ರಾಜ್ಯ ಸರ್ಕಾರದಿಂದ ಒಂದು ಹತ್ತು ಪೈಸೆ ಏನಾದರೂ ಕೊಟ್ಟಿದ್ದೇವೆಂದು ತಾವು ಹೇಳಿದರೆ ಸಂತೋಷ. ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಆ ವಿಚಾರವನ್ನು ನಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳುತ್ತೇವೆ.

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:–** ಆಯಿತು, ಉತ್ತರದಲ್ಲಿ ಹೇಳಿ. ನಾನು ಅದೇ ವಿಷಯವನ್ನು ಕೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ರಾಜ್ಯದಲ್ಲಿ ಬರಗಾಲ ಬಂದಂತಹ ಸಮಯದಲ್ಲಿ ರಾಜ್ಯ ಸರ್ಕಾರ ಎಷ್ಟು ಹಣವನ್ನು ವಿನಿಯೋಗ ಮಾಡಿದೆ, ಮತ್ತೆ, ನಾವು ಕೇಂದ್ರಕ್ಕೆ ಹೋದಂತಹ ಸಂದರ್ಭದಲ್ಲಿ ನಾವು ಬೆಳೆ ನಷ್ಟ 10 ಸಾವಿರ ಕೋಟಿ ರೂಪಾಯಿಗಳು ಇದ್ದಂತಹ ಸಂದರ್ಭದಲ್ಲಿ ಕಾನೂನುಬದ್ಧವಾಗಿ ಮೂರುಸಾವಿರ ಚಿಲ್ಲರೆ NDRF, SDRF norms ಪ್ರಕಾರ ಕೊಡಬೇಕೆನ್ನುವುದು ಗೌರವಾನ್ವಿತ ಈ ರಾಷ್ಟ್ರದ ಪ್ರಧಾನ ಮಂತ್ರಿಗಳಿಗೆ ಹೇಳಿದ್ದೆವು. ಅದರ ಬಗ್ಗೆ ಮೂರು ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳಲ್ಲಿ 15 ನೂರು ಚಿಲ್ಲರೆ ಕೋಟಿ ರೂಪಾಯಿಗಳು ನಮಗೆ ಬಂದಿದೆ. ಅದಕ್ಕಿಂತ ಪೂರ್ವದಲ್ಲಿ ನಮ್ಮ ರಾಜ್ಯ ಸರ್ಕಾರ ಈ ಬರಗಾಲ ನಿವಾರಣೆಗೆ ಎಷ್ಟು ಹಣವನ್ನು ವಿನಿಯೋಗ ಮಾಡಿದ್ದೇವೆಂದು ಹೇಳಿ ಉತ್ತರದಲ್ಲಿ ನಾವು ಒದಗಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಒಂದು ರಾಜ್ಯ ಸರ್ಕಾರ ಬರಗಾಲ ಬಂದಂತಹ ಸಂದರ್ಭದಲ್ಲಿ ರೈತರ ಪರವಾಗಿ ನಾವು ಇದ್ದೇವೆಂದು ತೋರಿಸಬೇಕಾದರೆ ಕೇಂದ್ರದಿಂದ ಬಂದಂತಹ ದುಡ್ಡು 1,540 ಕೋಟಿ ರೂಪಾಯಿಗಳು ಎಂದು ನಾನು ಹೇಳಿದೆ. ಇದು 2015–16ಕ್ಕೆ ಸಿಮೀತವಾಗಿ ಹೇಳಿದೆ. ಹಿಂದೆ, ರಾಜ್ಯಕ್ಕೆ ಬರಗಾಲ ಬಂದಿಲ್ಲವೇ? ಬರಗಾಲ ಬಂದಿದೆ. ಆಗ ಕೇಂದ್ರದಿಂದ ಎಷ್ಟೆಷ್ಟು ದುಡ್ಡು ಬಂತು. ತಾವು ದಯವಿಟ್ಟು ಗಮನಿಸಬೇಕು. 2015–2016 ರಲ್ಲಿ 1,540 ಕೋಟಿ ರೂಪಾಯಿಗಳು ಬಂದರೆ 2009–10 ರಲ್ಲಿ 53 ಕೋಟಿ ರೂಪಾಯಿಗಳು ಬಂದಿದೆ. 2010–11 ರಲ್ಲಿ 70 ಕೋಟಿ ರೂಪಾಯಿಗಳು ಬಂದಿದೆ. 2011–12 ರಲ್ಲಿ 242 ಕೋಟಿ ರೂಪಾಯಿಗಳು, 2012–13 ರಲ್ಲಿ 397 ಕೋಟಿ ರೂಪಾಯಿಗಳು, 2013–14 ರಲ್ಲಿ 169 ಕೋಟಿ ರೂಪಾಯಿಗಳು. ಬರ ಇದೆ ಎಂದು ಹೇಳಿ, 2012–13 ರಲ್ಲಿ ಕೇಂದ್ರ ಸರ್ಕಾರಕ್ಕೆ ಕೋರಿದಂತಹ ಹಣ, 11,489 ಕೋಟಿ ರೂಪಾಯಿಗಳು. ಆದರೆ, ಕೇಂದ್ರದಿಂದ ಬಂದಂತಹ ಹಣ 397 ಕೋಟಿ ರೂಪಾಯಿಗಳು. ಆಗ ಇಷ್ಟು ಹಣ ಬೇಕೆಂದು ಏನು ಬೇಡಿಕೆ ಇಟ್ಟಿದ್ದೀರಿ, ಆಗ ಬರ ಇರಲಿಲ್ಲವೇ? ಇಡೀ ರಾಜ್ಯ ರಾಮರಾಜ್ಯವಾಗಿತ್ತೇ? ಅದಕ್ಕೋಸ್ಕರ ನಾನು ಜವಾಬ್ದಾರಿಯಿಂದ ಹೇಳುತ್ತೇನೆ. ನೀವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಬರ ಇರಲಿಲ್ಲ, ಸಂಪೂರ್ಣವಾಗಿ ಜಾನುವಾರುಗಳಿಗೆ ತೊಂದರೆಯಿರಲಿಲ್ಲ, ಒಂದು ಬೆಳೆಯೂ ನಷ್ಟವಾಗಲಿಲ್ಲವೆಂದು ನೀವು ತುಂಬಾ ಸ್ಪಷ್ಟವಾಗಿ ಹೇಳಿ.

unedited copy

ನಾನು ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ನಷ್ಟವಾಗಿತ್ತು, ಎಷ್ಟೆಷ್ಟು ಹಣಕ್ಕೆ ಮನವಿಯನ್ನು ಸಲ್ಲಿಸಿದ್ದೀರಿ ಎನ್ನುವ ಮಾಹಿತಿಯೂ ಸಹ ಇದೆ. ನಾನು ಏತಕ್ಕೆ ಈ ವಿಚಾರವಾಗಿ ಹೇಳುತ್ತಿದ್ದೇನೆಂದರೆ, 2014–15 ರಲ್ಲಿ ಕೇಂದ್ರ ಸರ್ಕಾರದಿಂದ ಬಂದಂತಹ ನೆರವು 139 ಕೋಟಿ ರೂಪಾಯಿಗಳು. ಆದರೆ, ಈ ವರ್ಷ ಬಂದಿರುವಂತಹ ಹಣ 1,540 ಕೋಟಿ ರೂಪಾಯಿಗಳು. 2009 ರಿಂದ ಇಲ್ಲಿಯವರೆಗೆ ಬಂದಿರುವುದು ಎಷ್ಟು ಹಣ ಆಗುತ್ತದೆ, ಅಷ್ಟು ಹಣವೂ ಸಹ ಈ ವರ್ಷದಲ್ಲಿಯೇ ಅಷ್ಟು ಹಣ ಬಂದಿದೆ. ಅದಕ್ಕೋಸ್ಕರ ನಾನು ಹೇಳಿದೆ. ಕೇಂದ್ರ ಸರ್ಕಾರದಿಂದ ಹಣ ಬಂದಂತಹ ಹಣವನ್ನು ಇವರು ಹಂಚಬೇಕಲ್ಲವೇ? ನನಗೆ ಗೊತ್ತಿಲ್ಲ, ನೀವು ಈ ಹಣವನ್ನು ಆಯಾಯಾ ಜಿಲ್ಲೆಗಳಿಗೆ ಹಣವನ್ನು ಕಳುಹಿಸಿದ್ದೀರಿ, ನೀವು ಈ ಹಣವನ್ನು ಬೆಂಗಳೂರಿನಿಂದ ಹಣವನ್ನು ಕಳುಹಿಸಿಲ್ಲವೆಂದು ನಾನು ಹೇಳುವುದಿಲ್ಲ. ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಕಳುಹಿಸಿದ್ದೀರಿ ಎನ್ನುವುದು ನನಗೆ ಗೊತ್ತಿದೆ. ಆದರೆ, ಆ ಅಧಿಕಾರಿಗಳಿಗೆ ಏನು ಕೆಲಸ? 1,540 ಕೋಟಿ ರೂಪಾಯಿಗಳಲ್ಲಿ ಅವರು ಹಂಚಿರುವುದು 1,300 ಕೋಟಿ ರೂಪಾಯಿಗಳು ಮಾತ್ರ. ನಿನ್ನೆಯವರೆಗೆ ತಂದಿರುವಂತಹ ಅಂಕಿ–ಅಂಶ ಇದಾಗಿದೆ. ಇವರು ಏನು ಕೆಲಸ ಮಾಡುತ್ತಾರೆ? ರೈತರು ಸಾಯುತ್ತಿರಬೇಕಾದರೆ, ಅಧಿಕಾರಿಗಳು ಮಜಾ ಮಾಡುತ್ತಿದ್ದಾರೆಯೇ, ಅವರು ಮಜಾ ಮಾಡುತ್ತಿರುವುದನ್ನು ನೋಡಿಕೊಂಡು ಕುಳಿತುಕೊಳ್ಳುವುದಕ್ಕೆ ಸರ್ಕಾರ ಇದೆಯೇ? ಅವರ ಬೆಳೆ ವಿಮೆ ಕೊಡಲಿಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೇ? ಅದಕ್ಕೋಸ್ಕರ ಈ ಬರಗಾಲ ಬಂದಂತಹ ಸಂದರ್ಭದಲ್ಲಿ ಈ ರೀತಿಯಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಏನಿದೆ, ದಯವಿಟ್ಟು ಇದರ ಕಡೆ ಗಮನಕೊಡಿ. ಯಾರ್ಯಾರಿಗೆ ದುಡ್ಡು ಹೋಗಿದೆ, ತಕ್ಷಣ ಆ ರೈತರಿಗೆ ತಲುಪಿಸುವಂತಹ ವ್ಯವಸ್ಥೆಯನ್ನು ಮಾಡಿ. ಕೇಂದ್ರ ಸರ್ಕಾರದಿಂದ ಬಂದಂತಹ 1,540 ಕೋಟಿ ರೂಪಾಯಿಗಳಲ್ಲಿ 68% ರಷ್ಟು ಹಣವನ್ನು ಮಾತ್ರ ರೈತರಿಗೆ ಕೊಟ್ಟಿರುವುದಾಗಿದೆ. ಉದಾಹರಣೆಗೆ ಒಣ ಬೇಸಾಯಕ್ಕೆ ಒಂದು ಹೆಕ್ಟೇರ್‌ಗೆ 6,800 ರೂಪಾಯಿಗಳನ್ನು ಕೊಡಬೇಕು. ಇವರು ಕೊಟ್ಟಿರುವುದು 4,224 ರೂಪಾಯಿಗಳು. ನೀರಾವರಿ ಜಮೀನಿಗೆ ಒಂದು ಹೆಕ್ಟೇರ್‌ಗೆ 13,500 ರೂಪಾಯಿಗಳಾಗಿದ್ದು, ಇವರು ಕೊಟ್ಟಿರುವುದು 9,180 ರೂಪಾಯಿಗಳು. ತೋಟಗಾರಿಕೆಗೆ ಇವರು 18,000 ರೂಪಾಯಿಗಳನ್ನು ಕೊಡಬೇಕು. ಇವರು ಕೊಟ್ಟಿರುವುದು 12,224 ರೂಪಾಯಿಗಳು. ಕೇಂದ್ರದಿಂದ ಏನು ಹಣ ಬಂತು, ಅದನ್ನು ಮಾತ್ರ ಕೊಟ್ಟರು. 68% ಮಾತ್ರ. ಇವರದ್ದು 32% ಏನು ಕೊಡಬೇಕು, ಅದರಲ್ಲಿ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಅದಕ್ಕೆ ಮುಂಚಿತವಾಗಿ ಖರ್ಚು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದು ನನಗೆ ಗೊತ್ತಿಲ್ಲ. ಆದರೆ, ಬೆಳೆ ನಾಶಕ್ಕೆ ಕೊಡಬೇಕಾದ ಪರಿಹಾರ

unedited copy

ರಾಜ್ಯ ಸರ್ಕಾರದ್ದು ಇದೆ. ರಾಜ್ಯ ಸರ್ಕಾರದಿಂದ ಇವತ್ತಿನವರೆಗೂ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಅದಕ್ಕೆ ಬೇಕಾದಂತಹ ಇನ್ನು 738 ಕೋಟಿ ರೂಪಾಯಿಗಳನ್ನು .. .

ಈ ವಿಚಾರವಾಗಿ ಯಾರು ಬರೆದುಕೊಳ್ಳುತ್ತೀರೋ ಬರೆದುಕೊಳ್ಳಿ. ಈ ರಾಜ್ಯಪಾಲರ ವಂದನಾ ನಿರ್ಣಯವನ್ನು ಶ್ರೀಯುತ ವೀರಣ್ಣನವರು ಮೂವ್ ಮಾಡಿದ್ದು, ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರುವುದರಿಂದ, ಕೃಷಿ ಸಚಿವರು ಮತ್ತು ಸಭಾನಾಯಕರು ಇಲ್ಲದೇ ಇರುವಾಗ ಅವರೇ ನೋಟ್ ಮಾಡಿಕೊಳ್ಳಬೇಕು.

**(ಈ ಹಂತದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸದನಕ್ಕೆ ಹಾಜರಾದರು)**

2278 ಕೋಟಿ ರೂಪಾಯಿಗಳಿಗೆ ನೀರು ಇಲ್ಲದೇ ಇರುವಾಗ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಬಂದು ನೀರನ್ನು ಕೊಡುತ್ತೇವೆಂದು ಹೇಳಿದರು. ಸರ್ಕಾರ ಅವರಿಗೆ ದುಡ್ಡು ಕೊಡಲಿಲ್ಲವೆಂದರೆ ಅವರು ಏನು ಮಾಡುತ್ತಾರೆ,

**ಡಾ॥ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ,. . .

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಶ್ರೀ ಮತ್ತಿಕಟ್ಟಿ ವೀರಣ್ಣನವರೆ, ನೀವು ನಿಂತುಕೊಳ್ಳಬೇಡಿ, ಕುಳಿತುಕೊಳ್ಳಿ. ಶ್ರೀಯುತ ಹೆಚ್.ಕೆ.ಪಾಟೀಲ್‌ರವರು ಅವರ ವಿಷಯ ಇದ್ದಂತಹ ಸಂದರ್ಭದಲ್ಲಿ ಇಲ್ಲಿಗೆ ಬಂದಿದ್ದರೆ ಚೆನ್ನಾಗಿತ್ತು. ಅವರಿಗೆ ಆಸಕ್ತಿ ಇತ್ತು. ಅವರಿಗೆ ಕೆಲಸ ಮಾಡಬೇಕೆನ್ನುವ ಆಸಕ್ತಿ ಇದ್ದುದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸಿದೆ. 7000 R.O. Plant ಮಾಡಬೇಕೆನ್ನುವ ಗುರಿ ಏನಿತ್ತು, ಅದರ ಬಗ್ಗೆ ನಿಜವಾಗಿಯೂ ಸಹ ನಾನು ಮೆಚ್ಚಿದೆ. ಆದರೆ, ಅವರಿಗೆ ದುಡ್ಡು ಕೊಡಲಿಲ್ಲವೆಂದರೆ ಅವರು ಹೇಗೆ ತರುತ್ತಾರೆ? ಇವರ ಮತ್ತು ಮುಖ್ಯಮಂತ್ರಿಗಳ ಸಂಬಂಧ ಏನು ಎಂದು ನನಗೆ ಗೊತ್ತಿಲ್ಲ. ನಾನು ಅದರ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ನೋಡೋಣ, ಇನ್ನು 4 ದಿವಸಗಳ ಕಾಲ ನೋಡಿದರೆ ಗೊತ್ತಾಗುತ್ತದೆ. ಈಗ ಆರ್ಥಿಕ ಮಂತ್ರಿ ಕುಡಿಯುವ ನೀರಿಗೆ ರಾಜ್ಯದಲ್ಲಿ ಬರಗಾಲ ಬಿದ್ದು ಜನರು ಸಾಯುತ್ತಾ ಬಿದ್ದಿರುವ ಸಂದರ್ಭದಲ್ಲಿ ಕುಡಿಯಲಿಕ್ಕೆ ನೀರು ಇಲ್ಲವೆಂದು ಇವರೇ ಹೇಳಿ, ಎಲ್ಲವನ್ನು ಬಿಟ್ಟು, ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಿ ಎಂದ ಮೇಲೆ ಅವರು ಅಷ್ಟೊಂದು ಕಷ್ಟಪಟ್ಟು ಕೆಲಸ ಮಾಡಲಿಕ್ಕೆ ಹೋದಂತಹ ಸಂದರ್ಭದಲ್ಲಿ ಅವರಿಗೆ ದುಡ್ಡು ಕೊಡಲಿಲ್ಲವೆಂದರೆ ಅವರು ಏನು ಮಾಡುತ್ತಾರೆ?

unedited copy

**ಶ್ರೀ ನಾರಾಯಣ ಸ ಭಾಂಡಗೆ:–** ಅವರ ಊರಾದ ಗದಗನಲ್ಲಿ 33 ದಿವಸಗಳಾದರೂ ಕುಡಿಯಲಿಕ್ಕೆ ನೀರನ್ನು ಕೊಟ್ಟಿಲ್ಲ.

**ಉಪ ಸಭಾಪತಿಯವರು:–** ಶ್ರೀಯುತ ನಾರಾಯಣ ಸಾ ಭಾಂಡಗೆ ಅವರೆ, ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಅದಕ್ಕೋಸ್ಕರ ನಾನು ಹೇಳಿದೆ. ನಾನು ಈ ವಿಚಾರದಲ್ಲಿ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಅದನ್ನು ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್‌ರವರು ಗಮನಿಸಬೇಕು. ನಮ್ಮ ಎಲ್ಲಾ ವಿಧಾನ ಪರಿಷತ್ತಿನ ಶಾಸಕರು, ಮಾರ್ಚ್ ಬಜೆಟ್‌ನಲ್ಲಿ ದಯವಿಟ್ಟು ಪ್ರಕಟಿಸಿ, ಕುಡಿಯುವ ನೀರಿನ ಬಗ್ಗೆ ಅವರ ಸರ್ಕಾರ ಒಂದು R.O. ಘಟಕಕ್ಕೆ ಎಷ್ಟು ಹಣ ಬೇಕು, ಅಂದರೆ, ಸುಮಾರು 300 ಕೋಟಿ ರೂಪಾಯಿಗಳನ್ನು ಹಾಕಿದರೆ ಈ 6000 ಘಟಕಕ್ಕೂ ನಿಮ್ಮ ಜವಾಬ್ದಾರಿ ತಪ್ಪಿ ಹೋಯಿತು. ಇನ್ನು, 300 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದಿಂದ ಕೊಡಿ. ನಾವು ಕೂಡ ವಿಧಾನ ಪರಿಷತ್ತಿನ ಶಾಸಕರು, ಅವರು ಜವಾಬ್ದಾರಿ ತೆಗೆದುಕೊಳ್ಳಲಿ, ನಾವು ಜವಾಬ್ದಾರಿ ತೆಗೆದುಕೊಳ್ಳುತ್ತೇವೆ. ಮಾರ್ಚ್, ಏಪ್ರಿಲ್ ಮೊದಲ ವಾರದಲ್ಲಿ ನಮಗೆ ಬರಬೇಕಾದ ಶಾಸಕರ ನಿಧಿಯನ್ನು ಸರ್ಕಾರ ರಿಲೀಸ್ ಮಾಡಲಿ, ನಮ್ಮ ಮೊದಲ ವರ್ಷದ 50 ಲಕ್ಷ ರೂಪಾಯಿಗಳನ್ನು ದಯವಿಟ್ಟು ಇದಕ್ಕೆಂದೇ ತೆಗೆದುಕೊಳ್ಳಲಿ. ಅವರು ಕೊಡಬೇಕು. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಮಾಡುವುದರಿಂದ ಒಂದಿಷ್ಟು ದುಡ್ಡು ಸಿಗುತ್ತದೆ. ನೀವು ಏನು ಕನಸನ್ನು ಕಟ್ಟಿದ್ದೀರಿ, ದೇವರ ಸಾಕ್ಷಿಯಾಗಿ ನಿಮ್ಮ ರಾಜೀನಾಮೆಯನ್ನು ನಾವು ಕೇಳುವುದಿಲ್ಲ. ನಿಮ್ಮ ಪರಿಸ್ಥಿತಿ ಏನಿದೆ ಎಂದು ನೋಡಿದರೆ ಗಾಬರಿಯಾಗುತ್ತದೆ. ಮಾರ್ಚ್ 31ಕ್ಕೆ 7 ಸಾವಿರ ಘಟಕಗಳನ್ನು ಮುಗಿಸಲಿಲ್ಲವೆಂದರೆ ರಾಜೀನಾಮೆ ಕೊಡುತ್ತೇವೆಂದು ಹೇಳಿದ್ದೀರಿ. ಕೊಡಬೇಡಿ. ಒಂದಿಷ್ಟು ನಿಮಗೆ ಕಳಕಳಿ ಇದೆ. ಮಾಡಬೇಕೆಂದು ಆಸಕ್ತಿ ಇದೆ. ದುಡ್ಡು ಇಲ್ಲವೆಂದರೆ ಏನು ಮಾಡುತ್ತೀರಿ?

**ಮುಂದು. . .**

unedited copy

(ಉಪ ಸಭಾಪತಿಯವರ ಉಪಸ್ಥಿತಿ)

ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದುದು ...

ಇದು ತಿರುಕನ ಕನಸಿನಂತಾಗುತ್ತದೆ. ರಾತ್ರಿ ಕನಸಿನಲ್ಲಿ ಕೈಯಲ್ಲಿ ಬಂಗಾರದ ತಟ್ಟೆ ಇದ್ದಂತೆ ತಿರುಕನಿಗೆ ಕನಸು ಬಿದ್ದಿರುತ್ತದೆ, ಬೆಳಿಗ್ಗೆ ಎದ್ದು ನೋಡಿದರೆ ಯಥಾಪ್ರಕಾರ ತೂತಾಗಿರುವಂತಹ ಅಲ್ಯೂಮಿನಿಯಂ ತಟ್ಟೆ ಅವನ ಮುಂದಿರುತ್ತದೆ. ನಿಮ್ಮ ಪರಿಸ್ಥಿತಿ ಕೂಡ ಅದೇರೀತಿಯಾಗಿದೆ. ನಿಮಗೆ ಕನಸಿದೆ, ಆ ಕನಸು ಈಡೇರಬೇಕಾದರೆ ಸರ್ಕಾರದಿಂದ ಒಂದಷ್ಟು ದುಡ್ಡು ಕೊಡಬೇಕು. ಸರ್ಕಾರಕ್ಕೆ ದುಡ್ಡು ಕೊಡುವುದಕ್ಕಾಗುತ್ತಿಲ್ಲ, 3 ಏಜೆನ್ಸಿಗಳು, ಅವು ಸೊಸೈಟಿಗಳಿರಬಹುದು, ನೀವು ಆ ಏಜೆನ್ಸಿಗಳನ್ನು ಕರೆದು ನಿಮಗೆ ಇವತ್ತಿನವರೆಗೆ ಕೂಡ ಹಣವನ್ನು ಕೊಡುವುದಕ್ಕಾಗಲಿಲ್ಲ, ನಿಮ್ಮೊಂದಿಗೆ ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕಾಗಲಿಲ್ಲ, ವರ್ಕ್ ಆರ್ಡರ್ ಕೊಡುವುದಕ್ಕಾಗಲಿಲ್ಲ, ಅಗ್ರಿಮೆಂಟ್ ಪ್ರಕಾರ 10% ಅಡ್ವಾನ್ಸ್ ಏನು ಕೊಡಬೇಕೋ ಅದನ್ನು ಕೊಡುವುದಕ್ಕಾಗಲಿಲ್ಲ. ನೆನ್ನೆ ದಿವಸ 50 ಕೋಟಿ ರಿಲೀಸ್ ಮಾಡಿಸಿದ್ದು, ಅದನ್ನು ಕೊಡುತ್ತೇವೆ. ತಕ್ಷಣವೇ ಚಾಲನೆಗೊಳಿಸಿ ಎಂದು ನೀವು ಅವರನ್ನು ಕೂರಿಸಿಕೊಂಡು ಆ ಕೆಲಸವನ್ನು ಮಾಡಿಸಬೇಕಾಗುತ್ತದೆ. ಈ ಪ್ರಾಜೆಕ್ಟ್ ಆಗಲ್ಲ ಬಿಡು ಎಂದು ಗ್ರಾಮ ಪಂಚಾಯತಿಯವರು ಅಂದುಕೊಂಡುಬಿಟ್ಟಿದ್ದಾರೆ, ಕಂಟ್ರಾಕ್ಟರ್‌ಗಳು ಕೂಡ ಅಂದುಕೊಂಡುಬಿಟ್ಟಿದ್ದಾರೆ, ಹಾಗೆಂದುಕೊಂಡು ಎಷ್ಟು ಜನ ಮಂತ್ರಿಗಳು, ಶಾಸಕರು ಅಂದುಕೊಂಡಿದ್ದಾರೆಯೋ, ಮುಖ್ಯಮಂತ್ರಿಗಳು ಕೂಡ ಅಂದುಕೊಂಡಿದ್ದಾರೆಯೋ ಏನೋ ನನಗೆ ಗೊತ್ತಿಲ್ಲ. ಈ ಪ್ರಾಜೆಕ್ಟ್ ಮಾಡಬೇಕು ಎಂದು ನಿಮಗೆ ಕಳಕಳಿ ಇದೆಯಲ್ಲಾ, ನೀವು Reverse Osmosis Plant ಗೆ 600 ಕೋಟಿ ರೂಪಾಯಿಗಳಲ್ಲಿ 300 ಕೋಟಿ ರೂಪಾಯಿಗಳನ್ನು ಈ ಆಯವ್ಯಯದಲ್ಲಿ ತೆಗೆದಿರಿಸಿದರೆ ಖಂಡಿತ ಅದು ಯಶಸ್ವಿಯಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಈ ಬಗ್ಗೆ ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ.

ಕುಡಿಯುವ ನೀರಿನ ಯೋಜನೆ ಬಗ್ಗೆ ಸರ್ಕಾರ ಗಮನ ಹರಿಸಬೇಕಾಗುತ್ತದೆ. ಮಲ್ಟಿ ವಿಲೇಜ್ ಸ್ಕೀಂ, ಶೌಚಾಲಯದ ಬಗ್ಗೆ ಕೂಡ ನಾನು ಈಗಾಗಲೇ ಮಾತನಾಡಿದ್ದೇನೆ. ರಾಜ್ಯದಲ್ಲಿ 21 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಿರುವುದಾಗಿ ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗಿದೆ. ಆದರೆ ಅಷ್ಟು ಶೌಚಾಲಯಗಳು ನಿರ್ಮಾಣವಾಗಿಲ್ಲ, ಆ ಮಾಹಿತಿ ತಪ್ಪಾಗಿದೆ ಎಂದು ಈಗಾಗಲೇ ಉತ್ತರ ಕೊಟ್ಟಿದ್ದಾರೆ.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಆ ಮಾಹಿತಿ ತಪ್ಪಾಗಿದೆ, ಅದನ್ನು ಕರೆಕ್ಷನ್‌ಗೆ ಕೂಡ ಕಳುಹಿಸಿಕೊಟ್ಟಿದ್ದೇವೆ.

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ ಆ ವಿಚಾರದಲ್ಲಿ ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದಿಂದ ಒಂದು ಶೌಚಾಲಯಕ್ಕೆ 12,000 ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ, ಆದರೆ ರಾಜ್ಯ ಸರ್ಕಾರದ ಪಾಲು ಒಂದು ರೂಪಾಯಿ ಕೂಡ ಇಲ್ಲ.

**ಶ್ರೀ ಹೆಚ್.ಕೆ.ಪಾಟೀಲ್:–** ಅದರಲ್ಲಿ ಕೇಂದ್ರ ಸರ್ಕಾರದ್ದಷ್ಟೇ ಅಲ್ಲದೆ ನಮ್ಮ ದುಡ್ಡೂ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಆಯಿತು ಸರ್, ನಾನು ಹೇಳುವುದನ್ನು ಕೂಡ ಸ್ವಲ್ಪ ಕೇಳಿ ಸರ್. ಅದರಲ್ಲಿ ಒಂದು ಸಂಗತಿ ಬಗ್ಗೆ ನನಗೆ ಸಮಾಧಾನವಾಗಲಿಲ್ಲ, ಏಕೆಂದರೆ ಇಡೀ ಸಮಾಜದಲ್ಲಿ ಎಲ್ಲ ಹೆಣ್ಣುಮಕ್ಕಳು ಕೂಡ ಗೌರವದಿಂದ ಇರುವಂತಾಗಬೇಕು. ಎಸ್.ಸಿ./ಎಸ್.ಟಿ. ಜನಾಂಗದವರಿದ್ದರೆ ಮಾತ್ರ ಕೇಂದ್ರ ಸರ್ಕಾರದಿಂದ ಬರುವ 12,000 ರೂಪಾಯಿಗಳ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ 3,000 ರೂಪಾಯಿಗಳನ್ನು ಭರಿಸುತ್ತೇವೆ ಎಂದರೆ ಹೇಗೆ? ಹೆಣ್ಣು ಮಕ್ಕಳ ಹೆಸರಿನಲ್ಲಿ ನೀಡುವ ಶೌಚಾಲಯಕ್ಕೂ ಕೂಡ ಜಾತಿಯ ಹೆಸರನ್ನು ತರುವುದು ಬೇಡ. ಎಲ್ಲರಿಗೂ 3,000 ರೂಪಾಯಿಗಳಂತೆ ಭರಿಸಲಿ. ಎಸ್.ಸಿ./ಎಸ್.ಟಿ. ಜನಾಂಗದ ಹೆಣ್ಣುಮಕ್ಕಳಿಗೂ ಮಾಡಿ, ಎಲ್ಲ ಬಡವರಿಗೂ ಮಾಡಿ. ರಸ್ತೆಯಲ್ಲಿ ಹೋಗುವಂತಹ ಸಂದರ್ಭದಲ್ಲಿ ಬಹಿರ್ದೆಸೆಗೆ ಹೋಗುವ ಹೆಣ್ಣುಮಕ್ಕಳು ಎಸ್.ಸಿ./ಎಸ್.ಟಿ. ಜನಾಂಗದವರೇ ಅಥವಾ ಮುಂದುವರೆದ ಜನಾಂಗದವರೇ ಎಂದು ಪರಿಶೀಲಿಸುತ್ತೀರಾ? ಆ ರೀತಿ ಮಾಡುವುದಕ್ಕಾಗುತ್ತದೆಯೇ? ಅದು ಒಳ್ಳೆಯದಲ್ಲ. ಆದ್ದರಿಂದ ಶೌಚಾಲಯದ ವಿಚಾರದಲ್ಲಿ ಜಾತಿಯನ್ನು ತರುವುದು ಬೇಡ. ಇನ್ನೂ 3,000 ಸೇರಿಸಿಬಿಡಿ, ಮುಖ್ಯಮಂತ್ರಿಗಳಿಗೆ ತಿಳಿಸಿ ಎಲ್ಲಾ ಶೌಚಾಲಯಗಳಿಗೆ ಕೂಡ 15,000 ಮಾಡಿ. ಅದರಲ್ಲೇನೂ ಇಲ್ಲ. ಹಾಗೆಂದು ಇದನ್ನು ಕಡಿಮೆ ಮಾಡಬೇಡಿ, ನಾನು ಹೇಳಿದೆ ಎಂದು ಎಸ್.ಸಿ./ಎಸ್.ಟಿ. ಹೆಣ್ಣು ಮಕ್ಕಳ ಶೌಚಾಲಯಕ್ಕೆ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆ ಮಾಡಲು ಉದ್ದೇಶಿಸಿರುವ 3,000 ರೂಪಾಯಿಗಳಿಗೆ ಕಲ್ಲು ಹಾಕಿಬಿಡಬೇಡಿರಿ. ಅದರ ಜೊತೆಗೆ ಎಲ್ಲ ಶೌಚಾಲಯಗಳಿಗೂ ಸೇರಿಸಬೇಕೆನ್ನುವುದಷ್ಟೇ ನನ್ನ ವಿನಂತಿಯಾಗಿದೆ.

ಡಿಸೆಂಬರ್ ತಿಂಗಳಿನೊಳಗೆ ನಷ್ಟ ಪರಿಹಾರವನ್ನು ಕೊಡುವುದಾಗಿ ಏನು ತಿಳಿಸಿದ್ದೀರಿ, ಕೇಂದ್ರ ಸರ್ಕಾರದಿಂದ ಬಂದಿರುವ ಹಣದಲ್ಲಿ ಅದು ಕೂಡ ಪೂರ್ಣವಾಗಿ ಹಂಚಿಕೆಯಾಗಿಲ್ಲ. 2278 ಕೋಟಿಗೆ 1540 ಕೋಟಿ ಕೇಂದ್ರ ಸರ್ಕಾರದಿಂದ ಬಂದಿದೆ, 738 ಕೋಟಿ ರೂಪಾಯಿ ರಾಜ್ಯ ಸರ್ಕಾರದ ಪಾಲನ್ನು ಸೇರಿಸಬೇಕಾಗುತ್ತದೆ. ದಯವಿಟ್ಟು ತಕ್ಷಣ ರೈತರಿಗೆ ಅನ್ಯಾಯ ಮಾಡದೆ ರಾಜ್ಯ ಸರ್ಕಾರದಿಂದ ಹಾಕಬೇಕಾದಂತಹ 738 ಕೋಟಿ ರೂಪಾಯಿ ಹಾಕಿ ಆ ಪರಿಹಾರವನ್ನು ರೈತರಿಗೆ ಕೊಡಬೇಕೆಂದು ನಾನು

unedited copy

ಪ್ರಾರ್ಥಿಸುತ್ತೇನೆ. ಇದಲ್ಲದೆ ಈ ಹಣವನ್ನೇ ಖರ್ಚು ಮಾಡಿಲ್ಲ, ಹಾಗಿರುವಾಗ ಬರಪರಿಹಾರಕ್ಕೆ ಇನ್ನೂ 2290 ಕೋಟಿ ರೂಪಾಯಿ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲು ರಾಜ್ಯ ಸರ್ಕಾರ ತೀರ್ಮಾನಿಸಿರುವುದಾಗಿ ತಿಳಿದುಬಂದಿದೆ. ಈಗಾಗಲೇ ಕೊಟ್ಟಿರುವ ಹಣವನ್ನೇ ಖರ್ಚು ಮಾಡಿಲ್ಲ, ಮೊದಲು ಅದನ್ನು ಖರ್ಚು ಮಾಡಿ Utilization Certificate ಕಳುಹಿಸಿದರೆ ಮತ್ತೆ ಬೇಡಿಕೆಯನ್ನಿಟ್ಟಾಗ ಕೊಡುತ್ತಾರೆ. ಕೊಟ್ಟಿದ್ದನ್ನೇ ಖರ್ಚು ಮಾಡಿಲ್ಲ, ಮತ್ತೆ ಡಿಮಾಂಡ್ ಇಟ್ಟರೆ ಹೇಗೆ? ಕೇಂದ್ರದಿಂದ ನಮಗೆ ಅನುದಾನ ಬಂದಿಲ್ಲ ಎಂದು ಆ ಶಲ್ಟರ್‌ನಲ್ಲಿ ರಾಜ್ಯದಲ್ಲಿ ಅಭಿವೃದ್ಧಿಯಾಗುವುದನ್ನು ದಯವಿಟ್ಟು ತಡೆಯಬೇಡಿ. ಇದು ನನ್ನ ಪ್ರಾರ್ಥನೆ, ಈ ದಿಕ್ಕಿನಲ್ಲಿ ತಾವು ಗಮನಿಸಬೇಕೆಂಬುದು ನನ್ನ ವಿನಂತಿಯಾಗಿದೆ.

ಹೆಚ್.ಕೆ.ಡಿ.ಬಿ. ಬಗ್ಗೆ ಏನು ಹೇಳಬೇಕೆಂಬುದೇ ನನಗೆ ಗೊತ್ತಾಗುತ್ತಿಲ್ಲ. ಬಹಳ ಅನ್ಯಾಯವಾಗಿದೆ, ಇಷ್ಟೊಂದು ಅನ್ಯಾಯ ಇಡೀ ದೇಶದಲ್ಲಿ ಎಲ್ಲಿಯೂ ಆಗಿರಲಿಕ್ಕಿಲ್ಲ. "ನನ್ನ ಸರ್ಕಾರ ಹೈದ್ರಾಬಾದ್-ಕರ್ನಾಟಕ ಪ್ರದೇಶವನ್ನು ಅಭಿವೃದ್ಧಿಪಡಿಸಲು ಬದ್ಧವಾಗಿದೆ. ಸಂವಿಧಾನದ ಅನುಚ್ಛೇದ 370(ಜೆ)ಯ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಷ್ಟೇ ಅಲ್ಲದೆ, ಪ್ರದೇಶಾಭಿವೃದ್ಧಿ ಸಾರ್ವಜನಿಕ ಉದ್ಯೋಗಗಳಲ್ಲಿ ಮೀಸಲಾತಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿಯಂತಹ 3 ಅಂಶಗಳುಳ್ಳ ಕಾರ್ಯನೀತಿಯನ್ನು ಅನುಷ್ಠಾನಗೊಳಿಸುತ್ತಿದೆ. ಈ ಪ್ರದೇಶದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಂಡಿದೆ. 30,000 ಖಾಲಿ ಹುದ್ದೆಗಳ ಪೈಕಿ 9,600 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 12,000 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ." ಇದು ಹೈದ್ರಾಬಾದ್-ಕರ್ನಾಟಕದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿರುವಂತಹ ಒಂದು ಅಂಶವಾಗಿದ್ದು, ಈಗ 30,000ಕ್ಕೆ ಬಂದುಬಿಟ್ಟಿರಿ. ದಿನಾಂಕ:29ನೇ ನವೆಂಬರ್ 2014ರ ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ ನೋಡಿ, 'ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಕಲಬುರಗಿ ಸಂಪುಟ ಸಭೆಯ ನಿರ್ಧಾರ, 50,000 ಹುದ್ದೆಗಳ ಭರ್ತಿ, ರಾಜ್ಯದಲ್ಲಿ ಮಂಜೂರಾತಿಯಾಗಿರುವ ಸರ್ಕಾರಿ ಹುದ್ದೆಗಳು 7.5 ಲಕ್ಷ, ಈಗಿರುವ ನೌಕರರ ಸಂಖ್ಯೆ 5.56 ಲಕ್ಷ, ಖಾಲಿ ಹುದ್ದೆಗಳು 1.94 ಲಕ್ಷ, ಈ ಪೈಕಿ ಹೈದ್ರಾಬಾದ್-ಕರ್ನಾಟಕ ಜಿಲ್ಲೆಗಳಲ್ಲಿ ಖಾಲಿ ಇರುವುದು ಅಂದಾಜು 50,000 ಹುದ್ದೆಗಳಾಗಿದ್ದು, ಇದನ್ನು ಡಿಸೆಂಬರ್‌ನೊಳಗೆ ಗುರುತಿಸಬೇಕು, ಜನವರಿ 15ರಂದು ನೇಮಕಾತಿ ಪ್ರಕ್ರಿಯೆ ಆರಂಭ. 370(ಜೆ) ಮೀಸಲಾತಿ ಅನ್ವಯ ಜೂನ್ 2015ರೊಳಗೆ ಎಲ್ಲ ಹುದ್ದೆಗಳ ಭರ್ತಿ.' ಕಲಬುರಗಿಯಲ್ಲಾದ ವಿಶೇಷ ಸಚಿವ ಸಂಪುಟದಲ್ಲಿ ತೆಗೆದುಕೊಳ್ಳಲಾದ ಈ ತೀರ್ಮಾನಕ್ಕೆ ಒಂದು ಪೈಸೆಯಷ್ಟಾದರೂ ಬೆಲೆ ಕೊಡಿ. ಪತ್ರಿಕೆಗಳಲ್ಲಿ ಪ್ರಚಾರ ಪಡೆಯುವುದಕ್ಕಾಗಿ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆಯೆ?

unedited copy

“50,000 ಹುದ್ದೆಗಳ ಭರ್ತಿ” ಎಂಬುದಾಗಿ ಪತ್ರಿಕೆಯ ಬ್ಯಾನರ್ ಹೆಡ್‌ಲೈನ್‌ನಲ್ಲಿ ವರದಿಯಾಗಿದೆ. ಇದನ್ನು ನೋಡಿ ಹೈದ್ರಾಬಾದ್-ಕರ್ನಾಟಕ ಭಾಗದ ಯುವ ಜನತೆಗೆ ಖುಷಿಯೋ ಖುಷಿ. ಆ ಭಾಗದ ಅಭಿವೃದ್ಧಿಗಾಗಿ ಎಷ್ಟು ಖರ್ಚು ಮಾಡಿದ್ದೀರಿ? ಬಹಳ ನೊಂದು ಹೇಳುತ್ತಿದ್ದೇನೆ, ದಿನಾಂಕ:02/02/2016ರಂದು ಕರ್ನಾಟಕ ವಿಧಾನ ಮಂಡಲದಲ್ಲಿ ರಾಜ್ಯಪಾಲರು ಮಾಡಿರುವ ಭಾಷಣದ 5ನೇ ಕಂಡಿಕೆಯಲ್ಲಿ ‘2014–15ನೇ ಸಾಲಿನಲ್ಲಿ 600 ಕೋಟಿ ರೂಪಾಯಿಗಳು,’ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನೆಂದರೆ, ‘ವಿಶೇಷ ಅನುದಾನ ಒದಗಿಸಲಾಗಿದೆ. 2013–14ನೇ ಸಾಲಿನಲ್ಲಿ 150 ಕೋಟಿ ರೂಪಾಯಿಗಳು, 2014–15ನೇ ಸಾಲಿನಲ್ಲಿ 1000 ಕೋಟಿ ರೂಪಾಯಿಗಳು, 2015–16ನೇ ಸಾಲಿನಲ್ಲಿ ಮತ್ತೆ 1000 ಕೋಟಿ ರೂಪಾಯಿಗಳು. ಅಂದರೆ, ಕಳೆದ 3 ವರ್ಷಗಳಲ್ಲಿ 2150 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದ್ದು, ಇಲ್ಲಿಯವರೆಗೆ ಅಂದರೆ ದಿನಾಂಕ:31.01.2016ರವರೆಗೆ ಬಿಡುಗಡೆ ಮಾಡಿರುವ ಅನುದಾನ 830 ಕೋಟಿ ರೂಪಾಯಿಗಳು. ಅದರಲ್ಲಿ 812 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಅಂದರೆ 2150 ಕೋಟಿ ರೂಪಾಯಿಗಳಲ್ಲಿ ಖರ್ಚಾಗಿರುವುದು 412 ಕೋಟಿ ರೂಪಾಯಿಗಳು.’ ಇದು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಬಗ್ಗೆ ಸರ್ಕಾರಕ್ಕಿರುವಂತಹ ಪ್ರೀತಿ, ಕಾಳಜಿ.

2013–14ನೇ ಸಾಲಿನ 150 ಕೋಟಿ ರೂಪಾಯಿಗಳಿಗೆ ಇನ್ನೂ ಪ್ಲಾನ್ ಎಸ್ಟಿಮೇಟ್ ಆಗಿಲ್ಲ, 2014–15ನೇ ಸಾಲಿನ 1,000 ಕೋಟಿಗೆ ಪ್ಲಾನ್ ಎಸ್ಟಿಮೇಟ್ ಆಗಿಲ್ಲ. ಹಾಗಿದ್ದರೆ ಈ ಸಾಲಿನ ಆಯವ್ಯಯವನ್ನು ಹೇಗೆ ಮಂಡನೆ ಮಾಡುತ್ತೀರಿ? 2150 ಕೋಟಿ 3 ವರ್ಷಕ್ಕೆ ಇಟ್ಟುಕೊಂಡಿರುವಂತಹ ಹಣ, ಈ 3 ವರ್ಷದಲ್ಲಿ ಪ್ಲಾನ್, ಎಸ್ಟಿಮೇಟ್, ಕಾಂಟ್ರಾಕ್ಟ್ ಎಲ್ಲ ಸೇರಿಕೊಂಡು ಖರ್ಚು ಮಾಡಿರುವುದು 412 ಕೋಟಿ ರೂಪಾಯಿಗಳು.

(ಮುಂದುವರೆದಿದೆ ...

unedited copy

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ಈಗ ನೀವೇ ಕೊಟ್ಟಿರುವ ಪಟ್ಟಿಯ ಪ್ರಕಾರ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವಂತಹ ಸ್ಟೇಟ್‌ಮೆಂಟಿನಲ್ಲಿ 371(ಜೆ) ಮೀಸಲಾತಿಯ ಅನ್ವಯ ಜೂನ್ 2015ರ ವೇಳೆಗೆ ಎಲ್ಲಾ ಹುದ್ದೆಗಳು ಭರ್ತಿ. ಜೂನ್ 2015 ಆಗಿ ಹೋಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ 2016 ಕಳೆಯಿತು ಈಗ ಫೆಬ್ರವರಿ. ಅಂದರೆ 8 ತಿಂಗಳು ಕಳೆಯಿತು. ಇವರು ಕೊಡುತ್ತಿರುವಂತಹ ಸ್ಟೇಟ್‌ಮೆಂಟಿನಲ್ಲಿ 9,400 ಹುದ್ದೆಗಳು ಭರ್ತಿಯಾಗಿವೆ. ಅಂದರೆ 50 ಸಾವಿರ ಹುದ್ದೆಗಳಲ್ಲಿ 9,400 ಹುದ್ದೆಗಳು ಭರ್ತಿಯಾಗಿವೆ. ಇನ್ನು 12 ಸಾವಿರ ಹುದ್ದೆಗಳು ಪ್ರಗತಿಯಲ್ಲಿವೆ. ಈ ರೀತಿ ಏಕೆ ಸ್ಟೇಟ್‌ಮೆಂಟ್ ಕೊಡುತ್ತೀರಿ? ಏಕೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಳ್ಳುತ್ತೀರಿ? ಕ್ಯಾಬಿನೆಟ್ ಡಿಸಿಷನ್‌ಗೆ ಬೆಲೆ ಇಲ್ಲವೆ? ಪಾವಿತ್ರ್ಯತೆ ಇಲ್ಲವೆ? ಅಲ್ಲದೆ ರಾಜ್ಯಪಾಲರ ಭಾಷಣದಲ್ಲಿಯೂ ಹೇಳಿಸುತ್ತೀರಿ.

**ಶ್ರೀ.ಎನ್.ಎಸ್.ಬೋಸ್‌ರಾಜ್:-** ಪತ್ರಿಕೆಯಲ್ಲಿ ಬಂದಿರುವುದರ ಬಗ್ಗೆ ಹೇಳಬೇಡಿ. ರಾಜ್ಯಪಾಲರ ಭಾಷಣದಲ್ಲಿ ಬಂದಿದ್ದರೆ ತೋರಿಸಿ. ಉತ್ಪ್ರೇಕ್ಷೆ ಮಾಡಿ ಹೇಳಬೇಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಕೇವಲ ಪ್ರಜಾವಾಣಿ ಪತ್ರಿಕೆಯಲ್ಲಿ ಮಾತ್ರ ಬಂದಿಲ್ಲ. ಎಲ್ಲಾ ಪತ್ರಿಕೆಗಳಲ್ಲಿಯೂ ಸಹ 50 ಸಾವಿರ ಹುದ್ದೆಗಳು ಎಂದು ಬಂದಿದೆ. ಅದು ಸುಳ್ಳಾಗಿರಬೇಕು.

**ಶ್ರೀ ಎನ್.ಎಸ್.ಬೋಸ್‌ರಾಜ್:-** ಮಾನ್ಯ ವಿರೋಧ ಪಕ್ಷದ ನಾಯಕರೆ, 31 ಸಾವಿರ ಹುದ್ದೆಗಳಲ್ಲಿ 12 ಸಾವಿರ ಹುದ್ದೆಗಳು ಆಗಿವೆ ಎಂದು ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈಗ ರಾಜ್ಯಪಾಲರ ಭಾಷಣದಲ್ಲಿ 30 ಸಾವಿರ ಹುದ್ದೆ ಎಂದು ಹೇಳಿದ್ದೀರಿ. ಪ್ರಜಾವಾಣಿ ಪತ್ರಿಕೆಯಲ್ಲಿ 50 ಸಾವಿರ ಹುದ್ದೆ ಎಂದು ಹೇಳಿದ್ದೀರಿ. ಕೇವಲ ಪ್ರಜಾವಾಣಿ ಪತ್ರಿಕೆಯಲ್ಲಿ ಮಾತ್ರ ಬಂದಿಲ್ಲ, ಎಲ್ಲಾ ಪತ್ರಿಕೆಗಳಲ್ಲಿಯೂ 50 ಸಾವಿರ ಹುದ್ದೆ ಎಂದು ಬಂದಿದೆ. ಸಚಿವ ಸಂಪುಟದ ಸಭೆಯನ್ನು ಮುಗಿಸಿಕೊಂಡು ಬಂದು ಪತ್ರಿಕಾ ಘೋಷ್ಠಿಯನ್ನು ನಡೆಸಿ ಹೇಳಿದಂತಹ ಸ್ಟೇಟ್‌ಮೆಂಟ್ ಹಾಕುತ್ತಾರೆಯೇ ವಿನಃ ಅವರಿಗೇನು ಕೈ ಕಡಿಯುತ್ತಿರುವುದಿಲ್ಲ. ಅವರು ಏನು ಬರೆದಿದ್ದಾರೋ ಅದನ್ನು ಹೇಳುತ್ತಿದ್ದೇನೆ. ಅದನ್ನು ನೀವು ಅಲ್ಲ ಎಂದು ಹೇಳುತ್ತೀರಾ? "ಅಲ್ಲ" ಎಂದು ಹೇಳುವುದಾದರೆ "ಅಲ್ಲ" ಎಂದು ಹೇಳಿ. ಆಯಿತು, ನಿಮ್ಮ ಪ್ರಕಾರವೇ 30,000 ಖಾಲಿ ಹುದ್ದೆಗಳು ಇವೆ ಎಂದು ಹೇಳುತ್ತೇನೆ. ನೀವೇ

unedited copy

ಕೊಟ್ಟಿರುವಂತಹ ಉತ್ತರದಲ್ಲಿ ಜೂನ್ 2015ಕ್ಕೆ 30 ಸಾವಿರ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿತ್ತಲ್ಲವೆ? ಆದರೆ 9,400 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇದಕ್ಕೆ ಏನು ಹೇಳುತ್ತೀರಿ?

**ಶ್ರೀ ಎನ್.ಎಸ್.ಬೋಸ್‌ರಾಜ್:–** ನೋಟಿಫಿಕೇಶನ್ ಆಗಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇನ್ನು ಎರಡು ವರ್ಷಕ್ಕೆ ನೋಟಿಫಿಕೇಶನ್ ಆಗುತ್ತದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ,..

**ಶ್ರೀ ಕೆ.ಬಿ.ಶಾಣಪ್ಪ:–** ಏಕೆ ಎಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದೀರಿ, ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನೀವುಗಳು ಸುಮ್ಮನೆ ಇರಿ. ಮಾನ್ಯ ಸಚಿವರುಗಳಿಗೆ ಉತ್ತರ ಕೊಡುವುದಕ್ಕೆ ಶಕ್ತಿ ಇದೆ, ಯೋಗ್ಯತೆ ಇದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ, ಮಾನ್ಯ ಮಂತ್ರಿಗಳಿಗೆ, ಮಾನ್ಯ ಕೃಷಿ ಸಚಿವರುಗಳಿಗೆ ಉತ್ತರ ಕೊಡುವುದಕ್ಕೆ ಯೋಗ್ಯತೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವರುಗಳು ಉತ್ತರ ಕೊಟ್ಟು ಸಚಿವರುಗಳು ಅಯೋಗ್ಯರು ಎಂದು ಇವರೇ ಹೇಳುತ್ತಿದ್ದಾರೆ. ದಯವಿಟ್ಟು ನೀವು ಉತ್ತರ ಕೊಡಬೇಡಿ. ಮಾನ್ಯ ಸಚಿವರುಗಳು ಉತ್ತರ ಕೊಡುತ್ತಾರೆ ನೀವುಗಳು ಸುಮ್ಮನಿರಿ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಬಿ.ಶಾಣಪ್ಪನವರು ಹೈದ್ರಾಬಾದ್ ಕರ್ನಾಟಕದ ಒಬ್ಬ ಹಿರಿಯ ನಾಯಕರು. ಅವರನ್ನೇ ಬೇಕಾದರೆ ಕೇಳಿ. 30 ಸಾವಿರ .....

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಅವರು ಉತ್ತರ ಕೊಡುವಾಗ ಬೇಕಾದರೆ ಹೇಳಲಿ. ಅವರು ಎಷ್ಟು ಮಾಡಿದ್ದಾರೆ ಎಂಬುದಕ್ಕೆ ಉತ್ತರ ಕೊಡಲಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಬಿಡುವುದಿಲ್ಲ ಸರ್. ನಾನು ಇವರನ್ನು ಬಿಟ್ಟು ಬಿಟ್ಟು ಸಭಾತ್ಯಾಗ ಮಾಡುವಂತಹ ಸ್ಥಿತಿ ಬಂತು. ನಾನು ತುಂಬಾ ಸಲ ಚರ್ಚೆ ಆಗಲಿ ಎಂದು ಬಿಟ್ಟೆ. ಒಬ್ಬರಿಗಿಂತ ಒಬ್ಬರು ವೀರರು, ಶೂರರು. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ನೀವು ಹಿರಿಯರು ಎಂದು ನಿಮ್ಮ ಮಾತನ್ನು ಕೇಳಿದೆ. ಇದರಲ್ಲಿ ತುಂಬಾ ಮನಸ್ಸಿಗೆ ನೋವಾದಂತಹ ವಿಷಯವೇನೆಂದರೆ, ರಾಜ್ಯಪಾಲರ ಭಾಷಣದಲ್ಲಿ

unedited copy

"ಕರ್ನಾಟಕ ಆರ್ಥಿಕವಾಗಿ ದೂರದೃಷ್ಟಿಯುಳ್ಳ ರಾಜ್ಯಗಳಲ್ಲಿ ಒಂದು. 14ನೇ ಹಣಕಾಸು ಆಯೋಗದಿಂದಾಗಿ ಕೇಂದ್ರದಿಂದ ಪ್ರಾಪ್ತವಾಗುವ ತೆರಿಗೆ ನಿಧಿಯಲ್ಲಿ ರಾಜ್ಯಗಳ ಪಾಲು ಶೇಕಡಾ 32 ರಿಂದ ಶೇಕಡಾ 42ಕ್ಕೆ ಏರಿಕೆಯಾಗಿದ್ದರೂ, ರಾಜ್ಯ ಯೋಜನೆಗೆ ಕೇಂದ್ರದ ನೆರವು ಮತ್ತು ಇತರ ಕೇಂದ್ರದ ಅನುದಾನಗಳಲ್ಲಿ ಕಡಿತ ಉಂಟಾಗಿದೆ. ಇದರಿಂದ ರಾಜ್ಯಕ್ಕೆ ಆಗುವ ಸಂಪನ್ಮೂಲಗಳ ಹಂಚಿಕೆ ಒಟ್ಟಾರೆ ಕಡಿಮೆಯಾಗಿದೆ" ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ರಾಜ್ಯಪಾಲರನ್ನು ಬಳಸಿಕೊಂಡು ಕೇಂದ್ರದ ಬಗ್ಗೆ ಈ ಅಭಿಪ್ರಾಯವನ್ನು ಕೊಟ್ಟಿದೆ. ಇದು ಸರಿಯೇ? ಈ ವಿಷಯವನ್ನು ತಮಗೆ ಬಿಡುತ್ತೇನೆ. ಅದರ ಬಗ್ಗೆ ನಾನು ವಿವರಕ್ಕೆ ಹೋಗುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದಿಂದ 14ನೇ ಹಣಕಾಸಿನ ಆಯೋಗದ ಶಿಫಾರಸ್ಸಿನಂತೆ ಕೇಂದ್ರದಿಂದ ಪ್ರಾಪ್ತವಾಗುವ ತೆರಿಗೆಯ ನಿಧಿಯಲ್ಲಿ ರಾಜ್ಯದ ಪಾಲನ್ನು ಶೇಕಡ 32 ರಿಂದ ಶೇಕಡ 42ಕ್ಕೆ ಏರಿಕೆ ಮಾಡಿ ರಾಜ್ಯಗಳಿಗೆ ಹೆಚ್ಚು ಅನುದಾನವನ್ನು ಕೇಂದ್ರಸರ್ಕಾರ ನೀಡುತ್ತಿದೆ.

2015–2016ನೇ ಸಾಲಿನಲ್ಲಿ ಅಂದರೆ ದಿನಾಂಕ:01.04.2015ರಿಂದ 14ನೇ ಹಣಕಾಸಿನ ಆಯೋಗದ ಶಿಫಾರಸ್ಸು ಜಾರಿಗೆ ಬಂದಿದ್ದು, ಈ ಸಾಲಿನಲ್ಲಿ ರಾಜ್ಯಗಳಿಗೆ ಹಿಂದಿನ ಸಾಲುಗಳಿಗಿಂತ ಅಂದರೆ 13ನೇ ಹಣಕಾಸು ಆಯೋಗ ಈ ಸಾಲಿನಲ್ಲಿ ಹೆಚ್ಚುವರಿಯಾಗಿ ಎರಡು ಲಕ್ಷದ ನಲವತ್ತಾರು ಸಾವಿರದ ಇಪ್ಪತ್ತ ನಾಲ್ಕು ಕೋಟಿ ರೂಪಾಯಿ ಅನುದಾನ ಬಿಡುಗಡೆಯಾಗಿರುತ್ತದೆ. ಹಿಂದಿನದಕ್ಕೆ ಹೋಲಿಕೆ ಮಾಡಿದರೆ ಇದು ಜಾಸ್ತಿ. ಮೊನ್ನೆ ದಿವಸ ಮಂಡಿಸಿದ ಆಯವ್ಯಯದಲ್ಲಿ ಕೇಂದ್ರ ಸರ್ಕಾರ 2016–17ನೇ ಸಾಲಿಗೆ ಹಿಂದಿನ ಸಾಲಿಗಿಂತ ಅಂದರೆ, ಎರಡು ಲಕ್ಷದ ನಲವತ್ತಾರು ಸಾವಿರದ ಇಪ್ಪತ್ತ ನಾಲ್ಕು ಕೋಟಿ ರೂಪಾಯಿಗಿಂತಲೂ ಈ ಸಾಲಿನಲ್ಲಿ ತೊಂಬತ್ತೊಂಭತ್ತು ಸಾವಿರದ ಆರು ನೂರ ಎಂಭತ್ತೊಂದು ಸಾವಿರ ಕೋಟಿ ರೂಪಾಯಿ ಹೆಚ್ಚಿಗೆ ನಮಗೆ ಲಭ್ಯವಾಗಿದೆ. ಇಡೀ ದೇಶಕ್ಕೆ ಆಗಿರುವಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯಕ್ಕೆ ಇದರಲ್ಲಿ ಹೆಚ್ಚಿಗೆ ಆಗಿರುವುದಿಲ್ಲವೆ? ಈ ಹಿಂದೆ ಬರುತ್ತಿದ್ದಂತಹ ಅನುದಾನದಲ್ಲಿ ಸ್ಪೆಸಿಫಿಕ್ ಆಗಿ ಇಂತಹ ಪ್ರಾಜೆಕ್ಟ್‌ಗೆ ಬಳಸಿಕೊಳ್ಳಿ ಎಂದು ಹೇಳುತ್ತಿದ್ದರು. ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯ. ಆದರೆ ಈಗ ಆ ರೀತಿ ಇಲ್ಲ. ಕೇಂದ್ರದಿಂದ ಕರ್ನಾಟಕ ರಾಜ್ಯಕ್ಕೆ ಎಷ್ಟು ಅನುದಾನ ಬರುತ್ತದೋ ಆ ಅನುದಾನದಲ್ಲಿ ನೀವು ಯಾವ ಪ್ರಾಜೆಕ್ಟ್‌ಗಾದರು ಹಣವನ್ನು ಬಳಸಿಕೊಳ್ಳಬಹುದು. ಉದಾಹರಣೆಗೆ ಹೇಳಬೇಕೆಂದರೆ R.O (Reverse Osmosis) Project ಗೆ ಹಣ ಇಲ್ಲ. ರಾಜ್ಯ ಸರ್ಕಾರ ಕೊಡಲಿಲ್ಲ. ಆ ಸಮಯದಲ್ಲಿ ಕೇಂದ್ರ ಸರ್ಕಾರದಿಂದ ಬಂದಂತಹ ಅನುದಾನವನ್ನು ಬಳಸಿಕೊಳ್ಳುವುದಕ್ಕೆ ಪೂರ್ಣ ಅಧಿಕಾರ ಅವರಿಗೆ ಇರುತ್ತದೆ. ಆದ್ಯತೆಯ ಮೇರೆಗೆ ನಾವು ಆ ಹಣವನ್ನು ಬಳಸಿಕೊಳ್ಳಬಹುದು. ಈ ವಿಷಯ ಮಾನ್ಯ ಹೆಚ್.ಕೆ.ಪಾಟೀಲರಿಗೆ

unedited copy

ತಿಳಿದಿದೆ. ಈ ರೀತಿ ಇರಬೇಕಾದರೆ ರಾಜ್ಯಪಾಲರನ್ನು ಬಳಸಿಕೊಂಡು ಕೇಂದ್ರ ಸರ್ಕಾರದ ಬಗ್ಗೆಯೇ ನಿಮ್ಮ ಅಭಿಪ್ರಾಯ ಸರಿಯೇ ಎನ್ನುವಂತಹ ಅಭಿಪ್ರಾಯವನ್ನು ನಿಮಗೆ ಬಿಡುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ ಕೇಂದ್ರದ ಬಜೆಟ್ ಅನ್ನು ಗಮನಿಸಿದ್ದಲ್ಲಿ ಹಲವಾರು ಯೋಜನೆಗಳನ್ನು ಘೋಷಿಸಿ ಈ ಕಳಕಂಡ ಅನುದಾನವನ್ನು ಹಂಚಿಕೆ ಮಾಡಲಾಗಿದೆ ಎಂದು ಇದೆ. ಇದರಲ್ಲಿ ನಮಗೂ ಸಹ ಸಿಕ್ಕಿದೆ. ಇದರ ಬಗ್ಗೆ ಒಂದೆರಡು ಉದಾಹರಣೆಯನ್ನು ಕೊಡಬಯಸುತ್ತೇನೆ. 89 ನೀರಾವರಿ ಯೋಜನೆಗಳು ಬಹಳ ವರ್ಷದಿಂದ ಪ್ರಗತಿಯಲ್ಲಿದ್ದು ಅವುಗಳನ್ನು ಪೂರ್ಣಗೊಳಿಸಲು ಮುಂದಿನ 5 ವರ್ಷಗಳಲ್ಲಿ 86,500 ಕೋಟಿ ರೂಪಾಯಿಗಳನ್ನು ಮತ್ತು 2016–2017ನೇ ಸಾಲಿಗೆ 17,000 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದ್ದು ಮುಂದಿನ ವರ್ಷದಲ್ಲಿ 23 ಯೋಜನೆಗಳು ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಇಡೀ ದೇಶದಲ್ಲಿ 23 ಯೋಜನೆಗಳನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳುತ್ತಿದೆ. ನಮ್ಮ ರಾಜ್ಯಕ್ಕೆ ಇಟ್ಟಿರುವಂತಹ ದುಡ್ಡು ಅಲ್ಲದೆಯೇ ನಮಗೆ ಎಕ್ಸ್‌ಟ್ರಾ ಬರುತ್ತಿರುವುದೇನು? ಈ 23 ಯೋಜನೆಗಳಲ್ಲಿ ನಮ್ಮ ರಾಜ್ಯಕ್ಕೆ ಸೇರಿರುವಂತಹ 2 ಯೋಜನೆಗಳಿವೆ. ಮೊದಲನೆಯದಾಗಿ ಅಪ್ಪರ್ ತುಂಗಾ ಪ್ರಾಜೆಕ್ಟ್. ಇನ್ನೊಂದು ಭೀಮಾ ಲಿಫ್ಟ್ ಇರಿಗೇಶನ್. ಈ ಎರಡು ಪ್ರಾಜೆಕ್ಟ್‌ಗಳಿಗೆ ಸುಮಾರು 800 ಕೋಟಿ ರೂಪಾಯಿಗಳಷ್ಟು ಹಣ ಎಕ್ಸ್‌ಟ್ರಾ ಬರುತ್ತಿದೆ. ಇನ್ನು ಅನೇಕ ಪ್ರಾಜೆಕ್ಟ್‌ಗಳಿವೆ. ಆದರೆ ಅವುಗಳ ವಿವರಕ್ಕೆ ನಾನು ಹೋಗುವುದಿಲ್ಲ. ಇಷ್ಟೆಲ್ಲಾ ಬಂದಿದ್ದರೂ ಸಹ ಕೇಂದ್ರ ಸರ್ಕಾರದಿಂದ ಏನು ಬಂದಿದೆ ಎಂದು ಕೇಳುತ್ತಾರೆ. ಇನ್ನು ಗ್ರಾಮೀಣ ರಸ್ತೆಗಳಿಗೆ 27,000 ಕೋಟಿ ರೂಪಾಯಿಗಳು 2016–2017ನೇ ಸಾಲಿನಲ್ಲಿ ರೈತರಿಗೆ ಬ್ಯಾಂಕಿನ ಮೂಲಕ ನೀಡಿರುವ ಸಾಲದ ಗುರಿ 9.00 ಲಕ್ಷ ಕೋಟಿ ರೂಪಾಯಿಗಳು. ಹೊಸದಾಗಿ ಪಸಲ್ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಹಿಂದೆ ಇದ್ದಂತಹ ಯೋಜನೆಯಲ್ಲಿ ಹೋಬಳಿಗೆ ಅಥವಾ ತಾಲ್ಲೂಕಿಗೆ ಅಥವಾ ಜಿಲ್ಲೆಗೆ ತೊಂದರೆಯಾಗಿದ್ದರೆ ಮಾತ್ರ ರೈತರಿಗೆ ವಿಮೆ ಸಿಗುತ್ತಿತ್ತು. ಆದರೆ ಈಗ ಆ ರೀತಿ ಇಲ್ಲ. ಒಬ್ಬ ರೈತರಿಗೆ ತೊಂದರೆಯಾದರೂ ಸಹ ಈ ಪಸಲ್ ಯೋಜನೆ ಸಿಗುತ್ತದೆ. ಎರಡನೆಯದಾಗಿ, ಕೇವಲ ಒಬ್ಬ ರೈತ ನಾಟಿ ಮಾಡಿರುತ್ತಾನೆ, ಆಗ ಮಳೆ ಕೈ ಕೊಟ್ಟರೆ ಅದಕ್ಕೂ ಸಹ ವಿಮೆ ಸಿಗುತ್ತದೆ. ಪೂರ ಭತ್ತ ಜೋಡಿಸಿ ಇಟ್ಟಿರುತ್ತಾನೆ, ಆ ಸಮಯದಲ್ಲಿ ಮಳೆ ಬರುತ್ತದೆ ಆಗ ರೈತನಿಗೆ ನಷ್ಟ ಉಂಟಾಗುತ್ತದೆ. ಆಗಲೂ ಸಹ ಒಬ್ಬನ್ನೇ ಒಬ್ಬ ರೈತನಿದ್ದರೂ ಸಹ ಆತನಿಗೂ ವಿಮೆ ಸಿಗುತ್ತದೆ. ಈ ರೀತಿ ಹೊಸ ಪಸಲ್ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಗ್ರಾಮಪಂಚಾಯಿತಿಗಳು ಮುನಿಸಿಪಾಲಿಟಿಗೆ ನೀಡುವ ಸಹಾಯ ಧನ ಎರಡು ಲಕ್ಷ ಎಂಭತ್ತೇಳು ಲಕ್ಷ ಕೋಟಿ ರೂಪಾಯಿಗಳನ್ನು ಮುಂದಿನ ನಾಲ್ಕು ವರ್ಷಕ್ಕೆ ಮೀಸಲಿಟ್ಟಿದ್ದಾರೆ. ಉದ್ಯೋಗದ ಖಾತ್ರಿಗೆ 38,500. ಗ್ರಾಮಗಳಿಗೆ ವಿದ್ಯುತ್ ನೀಡಲು 8,500. ಬಿಪಿಎಲ್

ಕುಟುಂಬಗಳಿಗೆ ಮಹಿಳೆಯರ ಹೆಸರಿನಲ್ಲಿ ಎಲ್‌ಪಿಜಿ ಅಡಿಗೆ ಅನಿಲ ಸಂಪರ್ಕ ನೀಡಲು ಎರಡು ಸಾವಿರ ಕೋಟಿ. ನಾನು ಏಕೆ ಈ ವಿಷಯಗಳೆಲ್ಲವನ್ನೂ ಹೇಳುತ್ತಿದ್ದೇನೆಂದರೆ, ಕೇಂದ್ರ ಸರ್ಕಾರದಿಂದ ಒಟ್ಟಾರೆಯಾಗಿ ಬರುವುದರಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳು ಕಡಿಮೆಯಾಗಿದೆಯೆಂದು ಇವರು ಹೇಳುತ್ತಿದ್ದಾರೆ. ಆದರೆ ಮೊದಲನೆಯದಾಗಿ, ಈ ಹಣವನ್ನು ಇಡೀ ಕರ್ನಾಟಕ ರಾಜ್ಯದ ಯಾವುದೇ ಪ್ರಾಜೆಕ್ಟ್‌ಗೆ, ಯಾವುದೇ ಇಲಾಖೆಗಾದರು ಬಳಸಿಕೊಳ್ಳುವಂತಹ ಅವಕಾಶವಿದೆ. ಎರಡನೆಯದಾಗಿ, ಇಡೀ ದೇಶಕ್ಕೆ ಇಟ್ಟಿರುವಂತಹ ಅನೇಕ ಯೋಜನೆಗಳಲ್ಲಿ ಕರ್ನಾಟಕ್ಕೂ ಸಹ ಅದರಲ್ಲಿ ಪಾಲಿದೆ. ವಿಶೇಷವಾಗಿ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿಗೆ ಅವಕಾಶವಿದೆ. ಅದಕಾರಣ, ಕೇಂದ್ರ ಸರ್ಕಾರವನ್ನು ಪರೋಕ್ಷವಾಗಿ ರಾಜ್ಯಪಾಲರ ಮುಖಾಂತರ ಟೀಕೆ ಮಾಡಿರುವುದಕ್ಕೆ ನನಗಂತೂ ತುಂಬಾ ಬೇಸರವಾಗಿದೆ. ಈ ವಿಷಯವನ್ನು ನಾನು ತಮಗೆ ಬಿಡುತ್ತೇನೆ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ, ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ ಕುಡಿಯುವ ನೀರಿಗೆ ಆದ್ಯತೆ ಕೊಡಿ. ನಮ್ಮ ದುಡ್ಡು ತೆಗೆದುಕೊಳ್ಳಿ. ನಾಳೆ ಬಜೆಟ್‌ನಲ್ಲಿ ರಾಜ್ಯ ಸರ್ಕಾರಕ್ಕೆ 300 ಕೋಟಿ ರೂಪಾಯಿಗಳನ್ನು ವಿಶೇಷವಾಗಿ R.O (Reverse Osmosis) ಘಟಕಕ್ಕೆ ತೆಗೆದುಕೊಳ್ಳಿ. Multi Village Scheme ಅನ್ನು time bound ಮಾಡಿ. ಅಂದರೆ ಎರಡು ವರ್ಷಕ್ಕೆ, ಮೂರು ವರ್ಷಕ್ಕೆ ನಿಗದಿಪಡಿಸಿ.

(ಮುಂದು)

unedited copy

**ಶ್ರೀ ಕೆ.ಎಸ್.ಈಶ್ವರಪ್ಪ**(ಮುಂದು):– ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿಯ ಕಬಿನಿ ಬಗ್ಗೆ ಹೇಳಿಬಿಡುತ್ತೇನೆ. ಇದು 450 ಕೋಟಿ ರೂ.ಗಳ ಯೋಜನೆ. 100 ಕೋಟಿ ರೂ.ಗಳಷ್ಟು ಗುತ್ತಿಗೆದಾರರ ಬಾಕಿ ಇದೆ. ಇದು ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರ. 100 ಕೋಟಿ ರೂ.ಗಳಷ್ಟು ಗುತ್ತಿಗೆದಾರನ ಬಾಕಿ ಇಟ್ಟುಕೊಂಡರೆ ಅವರು ಕೆಲಸ ಮಾಡಲು ಎಲ್ಲಿಂದ ಹಣ ತರುತ್ತಾರೆ. ದಯಮಾಡಿ ಈ Multi-Village Scheme ಗಳಿಗೆ ಹಣವನ್ನು ಧಾರಾಳವಾಗಿ ಇಟ್ಟುಕೊಳ್ಳಿ. ಏಕೆಂದರೆ ಈಗಾಗಲೇ ರಾಜ್ಯದಲ್ಲಿ ಕುಡಿಯುವ ನೀರಿಗೆ ತುಂಬಾ ಬರವಿದೆ. ನಾನು ಪತ್ರಿಕೆಯಲ್ಲಿ ಓದಿದೆ, "ರಾಜ್ಯದಲ್ಲಿ ಈ ವರ್ಷವು ಬರ ತೀವ್ರ" ವಿಜಯವಾಣಿ ಪತ್ರಿಕೆಯಲ್ಲಿ ಬಂದಿದೆ. ಮಾನ್ಯ ಸಭಾನಾಯಕರೆ ತಾವು ಪತ್ರಿಕೆಗಳನ್ನು ಓದಬೇಕು. " ಜಿಲ್ಲೆಗಳ ಪ್ರಗತಿ ಪರಿಶೀಲನೆ ಮರೆತ ಸಚಿವರು" 20ನೇ ಜನೆವರಿ 2016ರ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಬಂದಿರುವ ವಿಚಾರ. " ನೆಪ ಮಾತ್ರಕ್ಕೆ ಭೇಟಿ, ಮುಖ್ಯ ಮಂತ್ರಿ ಸಿದ್ದರಾಮಯ್ಯನವರಿಗೆ ತವರು ಪ್ರೇಮ" ಇತ್ತ ಕಡೆ ಕಾರ್ಯದರ್ಶಿಯವರು ಗಮನ ಹರಿಸುತ್ತಿಲ್ಲ, ಅತ್ತ ಸಚಿವರು ನಿಗಾವಹಿಸುತ್ತಿಲ್ಲ. "ಜಿಲ್ಲೆಗಳ ಪಗ್ರತಿ ಪರಿಶೀಲನೆಗೆಂದು ಜಿಲ್ಲೆಗಳಿಗೆ ಭೇಟಿ ನೀಡಿದ ಸಚಿವರ ಸಂಖ್ಯೆ ತೀರಾ ವಿರಳ" ಆ ಸಚಿವರುಗಳ ಹೆಸರು ಇದೆ. ಆದರೆ ನಾನು ಹೆಸರುಗಳನ್ನು ಓದಲು ಹೋಗುವುದಿಲ್ಲ. " ಉತ್ತರ ಕರ್ನಾಟಕದ ಹೆಬ್ಬಾಗಿಲು ಎನ್ನಿಸಿಕೊಂಡಿರುವ ಹಾವೇರಿ ಜಿಲ್ಲೆಗೆ 10 ಸಚಿವರುಗಳೂ ಭೇಟಿ ನೀಡಿರುವುದಿಲ್ಲ. 14 ಸಚಿವರು ಜಿಲ್ಲೆಗೆ ಭೇಟಿ ನೀಡಿದ್ದರೂ ಇಲಾಖೆಯ ಪ್ರಗತಿ ಪರಿಶೀಲನೆ ಮಾಡಿರುವುದಿಲ್ಲ" 10 ಸಚಿವರು ಈವರೆಗೆ ಜಿಲ್ಲೆಗೆ ಭೇಟಿನೆ ಕೊಟ್ಟಿರುವುದಿಲ್ಲ. ಯಾವ–ಯಾವ ಮಂತ್ರಿಗಳು ಜಿಲ್ಲೆಗೆ ಹೋಗೆ ಇಲ್ಲ ಅಂತವರ ಹೆಸರುಗಳನ್ನು ಕೊಟ್ಟಿದ್ದಾರೆ. ಅವರವರ ಕ್ಷೇತ್ರಗಳೆ ಅವರಿಗೆ ಜಿಲ್ಲೆಗಳು. " 33 ಸಚಿವರ ಪೈಕಿ 15 ಸಚಿವರು ಇದುವರೆಗೆ ಉತ್ತರ ಕರ್ನಾಟಕದ ಕಡೆಗೆ ಮುಖ ಮಾಡಿರುವುದಿಲ್ಲ, 4 ಸಚಿವರು ಬಂದರು ಪ್ರಗತಿ ಪರಿಶೀಲನೆ ಮಾಡಿರುವುದಿಲ್ಲ. ಗೋವಾದಿಂದ ಮಂಗಳೂರಿಗೆ ಹೋಗುವಾಗ, ಹುಬ್ಬಳ್ಳಿಯಿಂದ ಮಂಗಳೂರಿಗೆ ಹೋಗುವಾಗ ಮಾರ್ಗ ಮಧ್ಯೆ ಸಿಲುಕಿ ಪ್ರವಾಸಿ ಮಂದಿರದಲ್ಲಿ ವಿಶ್ರಾಂತಿ ಪಡೆದು ಹೋಗಿದ್ದಾರೆ" " ಶಿವಮೊಗ್ಗ ಜಿಲ್ಲೆಗೆ ಇವತ್ತಿನವರೆಗೆ 9 ಸಚಿವರು ಬಂದೇ ಇಲ್ಲ" "ಮಂತ್ರಿಗಳಿಗೆ ಹುಬ್ಬಳ್ಳಿ–ಧಾರವಾಡ ನಿಲ್ದಾಣ ಮಾತ್ರ" " ಚಿಕ್ಕಮಗಳೂರಿಗೆ ಬಾರದ 7 ಮಂತ್ರಿಗಳು" ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಪತ್ರಿಕೆಯವರು ಕೆಲಸವಿಲ್ಲದೆ ಇದನ್ನು ಬರೆದಿಲ್ಲ, ನಾನು ಕೆಲಸವಿಲ್ಲದೆ ಇದನ್ನು ಓದುತ್ತಿಲ್ಲ. ಆದರೆ ನಿಮ್ಮ ಮಂತ್ರಿಗಳು ಕೆಲಸವಿಲ್ಲದೆ ಉಳಿದುಕೊಂಡು ಬಿಟ್ಟಿದ್ದಾರೆ ಅದು ಬೇಜಾರು ನನಗೆ. ಯಾರು ಕೇಳುವವರು ಇವರನ್ನು. ಇಲಾಖೆ ದುಡ್ಡು ಕೊಡುವುದಿಲ್ಲ ಇವರು ಹೋಗುವುದಿಲ್ಲ, ಇಲಾಖೆಯಲ್ಲಿ ಎಂಟಾಣೆ ಹಣ ಇಲ್ಲ ಏನು ಕೆಲಸ ಮಾಡುವುದು ಎಂದು ಅಧಿಕಾರಿಗಳು

ಮೀಟಿಂಗ್ ಮಾಡುವುದಿಲ್ಲ. ಜಿಲ್ಲೆಗಳಿಗೆ ಮಂತ್ರಿಗಳು ಹೋಗುವುದಿಲ್ಲ. 20 ಜನೆವರಿ 2016ರ ವಿಜಯವಾಣಿ ಪತ್ರಿಕೆಯನ್ನು ನಾನು ಏಕೆ ತೆಗೆದು ಇಟ್ಟುಕೊಂಡಿದ್ದೆನೆ ಎಂದರೆ, ಇದರಲ್ಲಿ ಜಿಲ್ಲೆಗೆ ಹೋಗದೆ ಇರುವ ಮಂತ್ರಿಗಳ ಹೆಸರನ್ನು ಕೊಟ್ಟಿದ್ದಾರೆ. ಹೆಸರನ್ನು ಓದಿ ಎಂದರೆ ಓದಿ ಬಿಡುತ್ತೇನೆ. ಸಚಿವ ಸಂಪುಟದ ಎಲ್ಲಾ ಸ್ನೇಹಿತರು ನನ್ನ ಆತ್ಮೀಯ ಸ್ನೇಹಿತರು. ಖಂಡಿತವಾಗಿ ಟೀಕೆ ಮಾಡಬೇಕು ಎನ್ನುವುದು ನನ್ನ ಉದ್ದೇಶವಲ್ಲ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ನಿಮಗೆ ತಿಳಿದ ಹಾಗೆ ಮಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ತಿಳಿದ ಹಾಗೆ ಮಾಡಿ ಎಂದರೆ, ಹೆಸರುಗಳನ್ನು ಹೇಳಿದ ಮೇಲೆ ಆ ಮಂತ್ರಿಗಳನ್ನು ಕಿತ್ತು ಹಾಕಿ ತಾವು ಮಂತ್ರಿಗಳಾಗಬೇಕು ಎನ್ನುವುದು ನಿಮ್ಮ ಆಸೆಯೇ? ತಿಳಿದ ಹಾಗೆ ಮಾಡಿ ಎಂದರೆ ಓದಿ ಬಿಡಲಿ ಎಂದು ಅರ್ಥ. ಸುಮ್ಮನೆ ಕುಳಿತುಕೊಳ್ಳಿ ಎಂದರೆ ಕೂಡದೆ ಕುಳಿತಲ್ಲೇ ಏನೊ ಮಾತನಾಡುತ್ತಾರೆ. ನಾನು ಇಲ್ಲಿಯವರೆಗೆ ಮಾತನಾಡಿರುವುದು ಟೀಕೆ ಮಾಡುವುದಕ್ಕೆ ಅಲ್ಲ, ಕೇಂದ್ರದಿಂದ ಅನುದಾನ ಬಂದಿದೆ, ನಿಮ್ಮ ಹಣವನ್ನು ಹಾಕಿ. ಕುಡಿಯುವ ನೀರಿನ ವಿಚಾರದಲ್ಲಿ ಮಾರ್ಚ್ 31ಕ್ಕೆ 6000 ಘಟಕ ಮಾಡಲಿಲ್ಲ ಎಂದು ಮಾನ್ಯ ಎಚ್.ಕೆ.ಪಾಟೀಲ್‌ರವರೆ ರಾಜೀನಾಮೆ ಕೊಟ್ಟು ಬಿಟ್ಟಿರಾ ಮತ್ತೆ, ಖಂಡಿತವಾಗಿ ಹಾಗೆ ಮಾಡಬೇಡಿ. ಏಕೆಂದರೆ ಇಷ್ಟೊಂದು ಒಳ್ಳೆಯ ಯೋಜನೆಯನ್ನು ತಂದಿದ್ದೀರಿ. ಬಿಸಲರಿಗಿಂತ ಒಳ್ಳೆಯ ನೀರನ್ನು 2 ರೂ.ಗಳಿಗೆ 20 liter ಕೊಡುತ್ತೇವೆ ಎಂದರೆ ಯಾರು ಬೇಡ ಎಂದು ಹೇಳುತ್ತಾರೆ. ರಾಜ್ಯ ಸರ್ಕಾರದಿಂದ ಹಣ ತೆಗೆದುಕೊಳ್ಳಿ, ನಮ್ಮ ಕಡೆಯಿಂದಲೂ ನಾವು ಹಣ ಕೊಡಲು ತಯಾರಿದ್ದೇವೆ. ಎಚ್‌ಕೆಡಿಬಿ ಬಗ್ಗೆ ಮಾತನಾಡಲು ಕಾಂಗ್ರೆಸ್ ಸರ್ಕಾರಕ್ಕೆ ಏನು ಅಧಿಕಾರವಿಲ್ಲ. 2150 ಕೋಟಿ ರೂ.ಗಳಲ್ಲಿ 152 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ ಎಂದರೆ ಇದಕ್ಕೆ ಏನಾದರೂ ಅರ್ಥವಿದೆಯೇ? 50,000 ಹುದ್ದೆಗಳು ಎಂದು ಹೇಳುತ್ತಾರೆ, ಆದರೆ 50,000 ಹುದ್ದೆಗಳು ಎಂದು ನಾವು ಹೇಳೆ ಇಲ್ಲ, 30,000 ಎಂದು ಹೇಳಿ ಇದೊಂದು ರೀತಿಯಲ್ಲಿ ಭಂಡತನವನ್ನು ತೋರಿಸಿದ್ದಾರೆ. ಆಯಿತು 30,000 ಎಂದೆ ಇಟ್ಟುಕೊಂಡರು, ಇವರು ಕೊಟ್ಟಿರುವುದು 9400 ಹುದ್ದೆಗಳನ್ನು. ಸರ್ಕಾರ ಇದೆಯಾ ಇಲ್ಲಿ? ಫೆಸಿಪಿಕ್ ಆಗಿ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಬಜೆಟ್ **ಭಾಷಣದಲ್ಲಿ** ನಾನು ಎಲ್ಲವನ್ನು ಮಾತನಾಡುತ್ತೇನೆ. ಟೀಕೆ ಮಾಡಲು ನಾನು ಹೇಳುತ್ತಿಲ್ಲ. ಆದರೆ ಟೀಕೆ ಎಂದು ನೀವು ಅಂದುಕೊಂಡರೆ ಅಂದುಕೊಳ್ಳಿ. ಆದರೆ ಇದನ್ನು ಬಲಪಡಿಸುವ, ರಾಜ್ಯಪಾಲರ ಭಾಷಣಕ್ಕೆ ಗೌರವ ಕೊಡುವ ದಿಕ್ಕಿನಲ್ಲಿ ದಯಮಾಡಿ ಗಮನಿಸಿ. ಕುಡಿಯುವ ನೀರಿಗೆ, Multi-Village Scheme ಗಳಿಗೆ,

ಬೇರೆ-ಬೇರೆ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಕೊಡಿ. ಅಧಿಕಾರಿಗಳನ್ನು ಕರೆಯಿಸಿ, ಎಚ್.ಕೆ.ಪಾಟೀಲ್‌ರವರೆ ಏಜೆನ್ಸಿಗಳನ್ನು ಕರೆಯಿಸಿ. ಮೊನ್ನೆ ನಾನು ಏಜೆನ್ಸಿಯವರನ್ನು ಕರೆಯಿಸಿದೆ. ಟೆಂಡರ್ ಕರೆದಿದ್ದಾರೆ, ಎಲ್ಲಾ ಕೆಲಸವಾಗಿದೆ, ಅಗ್ರಿಮೆಂಟ್ ಮಾಡಿಕೊಂಡು 10% ಹಣವನ್ನು ಕೊಟ್ಟು work order ಅನ್ನು ನಮಗೆ ಕೊಟ್ಟುಬಿಟ್ಟರೆ ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದರು. ನಿಮ್ಮ ಅಧಿಕಾರಿಗಳ ಜೊತೆಯಲ್ಲಿಯು ನಾನು ಮಾತನಾಡಿದೆ. ಅವರು ತಕ್ಷಣ ನಿಮ್ಮ ಸಹಕಾರದಿಂದ ಹಣವನ್ನು ಬಿಡುಗಡೆ ಮಾಡಿದರು. ನಿಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. 50ಕೋಟಿಯಲ್ಲಿ 10% ಹೋಗುತ್ತದೆ ಹೋಗಲಿ ಕೆಲಸವಾಗುತ್ತದೆ. ಇನ್ನು ಡೊವಾಕ್‌ಗೆ ಹಣ ಕೊಡುತ್ತೀರೊ ಇಲ್ಲವೊ ನೋಡಿ. ತಾವು ಇನ್ನೊಂದು ಕೆಲಸ ಮಾಡಬೇಕು, ಅದು ಏನು ಎಂದರೆ, 50% ಪಂಚಾಯಿತಿಗಳು 50% ರಾಜ್ಯ ಸರ್ಕಾರ ಎನ್ನುವುದನ್ನು ತೆಗೆದು ಬಿಡಿ. ನಿಮ್ಮ ಕ್ಷೇತ್ರವಾದ ಗದಗದಲ್ಲಿ ಏಕೆ 6 ಘಟಕವಾಯಿತು? ಏಕೆ ಆಯಿತು ಎಂದರೆ ಆಗ ನೀವು 100% ಹಣವನ್ನು ಕೊಟ್ಟಿದ್ದೀರಿ. ಹೀಗಾಗಿ ಆರು ಘಟಕ ಮೊದಲನೆಯ ವರ್ಷ 2013-14ರಲ್ಲಿ ಆಯಿತು, 2014-15ನೇ ಸಾಲಿನಲ್ಲಿ 50=50 ಎಂದು ಹೇಳಲಾಯಿತು. 2015-16ನೇ ಸಾಲಿನಲ್ಲಿಯು 50=50 ಎಂದು ಹೇಳಿದ್ದರೆ ಗ್ರಾಮಪಂಚಾಯಿತಿಯವರು ಎಲ್ಲಿಂದ ತರುತ್ತಾರೆ. ಈಗ ಏನೊ ಸ್ವಲ್ಪ ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆ. ಅದರಲ್ಲಿಯು ನೀವು ವಿದ್ಯುತ್‌ಗಾಗಿ ಕಟ್ ಮಾಡಿಕೊಳ್ಳುತ್ತೀರಿ. ಬೇರೆಯದಕ್ಕೆ ಅವರು ಏನು ಮಾಡಬೇಕು. ದಯಮಾಡಿ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ, 300 ಕೋಟಿ ಇರುವುದು 600 ಕೋಟಿ ರೂ.ಗಳಾಗಿ ಮಾಡಲು ಆಗುತ್ತದೆಯೇ ನೋಡಿ. ಒಳ್ಳೆಯ ಯೋಜನೆ ಸರ್ ನೀವು 6000 ಘಟಕಗಳನ್ನು ಮಾಡಿಬಿಟ್ಟರೆ ನಿಮಗೆ ಸನ್ಮಾನ ಮಾಡುತ್ತೇನೆ. 1600 ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ನಾನು ತರಿಸಿರುವ ವರದಿ ಪ್ರಕಾರ 1600 ಅಲ್ಲ 1000 ರವರೆಗೆ ಆಗಿರಬಹುದು. ಇನ್ನು 600 ಪ್ರಗತಿಯಲ್ಲಿ ಇರಬಹುದು. 1600 ಅಂದುಕೊಳ್ಳಬಹುದು. ಈ 5400ರನ್ನು ಈ ವರ್ಷದಲ್ಲಿ ಮುಗಿಸುತ್ತೀರಾ? ಯಾವುದೆ ಕಾರಣಕ್ಕೂ ಹೊಸದಾಗಿ ಏನು ಹಾಕಿಕೊಳ್ಳಬೇಡಿ. ಸುಮ್ಮನೆ ಪೇಪರ್ ಹಾಳು, 2000 ಕೋಟಿ, 4000 ಕೋಟಿ ಎನ್ನುವುದು ಏನು ಆಗುವುದಿಲ್ಲ. ಸಮಯ ಹಾಳು ಮತ್ತು ಗಂಟಲು ಹೋಗುತ್ತದೆ ಅಷ್ಟೆ. ಏನು ಲಾಭವಿಲ್ಲ. ಆದ್ದರಿಂದ ಈ ವರ್ಷ ಹೊಸದು ಏನು ಬೇಡ. ನನಗೆ ಎಷ್ಟೆ ಕಷ್ಟವಾದರೂ ಸಾಲ ಮಾಡಿಯಾದರು ಹಣ ತಂದು ಈ ಯೋಜನೆಯನ್ನು ಮಾಡುತ್ತೇನೆ ಎಂದು ತಾವು ಹೇಳಿದ್ದೀರಿ. ಇದಕ್ಕಾಗಿ 2016-17ಕ್ಕೆ ಎರಡುವರೆ ಸಾವಿರ ಕೋಟಿ ರೂ.ಗಳನ್ನು ಇಟ್ಟುಕೊಳ್ಳಿ.

unedited copy

ಶ್ರೀ ಎಚ್.ಕೆ.ಪಾಟೀಲ್:- ಬೇಕಾಗಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಬೇಕಾಗಿಲ್ಲ ಎಂದರೆ ಯೋಜನೆಗಳು ಹಾಗೆ ಬಿದ್ದಿವೆಯಲ್ಲ. ಕಡಿಮೆಯಾದರೆ ಕಡಿಮೆ ತೆಗೆದುಕೊಳ್ಳಿ ನನಗೇನು. ನಿಮ್ಮ ಒಳ್ಳೆಯದಕ್ಕೆ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಮತ್ತು ನಿಮ್ಮ ಮಧ್ಯೆ ಒಳ್ಳೆಯ ಸಂಬಂಧವಿದ್ದರೆ ನೀವು ಅವರಿಗೆ ವಿವರಿಸಿದರೆ ಹಣವನ್ನು ಅವರು ಕೊಡಬಹುದು. ಕೊಡಬೇಕು ಎಂದು ನನಗೆ ಆಸೆ. ಬರಿ ಪುಕ್ಕಸಟೆ ನೀವು ಇಬ್ಬರು ಚೆನ್ನಾಗಿದ್ದಿರಿ ಎಂದು ಹೇಳಲು ನಾನು ನಿಂತಿದ್ದೇನೆಯೇ ಈಗ? ತಿಳಿಸಿ ಹೇಳಿದರೆ ಮುಖ್ಯಮಂತ್ರಿಗಳು ಹಣವನ್ನು ಕೊಡಬಹುದು. ರೇವಣ್ಣನವರು ಉಗ್ರಪ್ಪನವರು ಮುಖ್ಯಮಂತ್ರಿಗಳಿಗೆ ಬಹಳ ಹತ್ತಿರದಲ್ಲಿ ಇರುತ್ತಾರೆ ಅವರು ಹೋಗಿ ಹೇಳುತ್ತಾರೆ.

**ಶ್ರೀ ಎಚ್.ಕೆ.ಪಾಟೀಲ್:-** ನೀವೆ ನನ್ನ ಸಹಾಯಕ್ಕೆ ಬರಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವೆ ಉತ್ತರವನ್ನು ಕೊಡುತ್ತಿರಿ ಆಗ ಹೇಳಿ. ನಿಮಗೆ ಸಹಾಯ ಮಾಡಲು ಬಂದರೆ ಯಾರಾನಾದರು ಸಾಯಿ ಹೊಡೆದು ಬಿಡುತ್ತೀರಿ.

ಶ್ರೀ ವಿ.ಎಸ್.ಉಗ್ರಪ್ಪ:- ಮಾನ್ಯ ಮುಖ್ಯಮಂತ್ರಿಗಳಿಗೆ ಯಾರಾದರು ತುಂಬಾ ಹತ್ತಿರದಲ್ಲಿ ಇದ್ದಾರೆ ಎಂದರೆ ಅವರು ಈಶ್ವರಪ್ಪನವರು. ಇದು ಸತ್ಯ. ಅಕ್ಷರಸ ಸತ್ಯ. ನಾನು ಕಣ್ಣಾರೆ ನೋಡಿದ್ದೇನೆ. ಈಶ್ವರಪ್ಪನವರು ಇಲ್ಲಿ ಸುಳ್ಳು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಎಚ್.ಕೆ.ಪಾಟೀಲ್‌ರವರೆ ನೀವು ಎದ್ದು ಹೋಗುವ ಹಾಗೆ ಇಲ್ಲ, ಕುಳಿತುಕೊಂಡು ಕೇಳಬೇಕು. ಮಾತನಾಡುವ ಹಾಗೆಯು ಇಲ್ಲ. ದಯಮಾಡಿ ಕುಳಿತುಕೊಳ್ಳಿ. ನಾನು ಕೊಟ್ಟಿರುವ ಸಲಹೆಗಳಲ್ಲಿ ಯಾವುದಾದರು ಟೀಕೆ ಇದೆಯೇ ಮಾನ್ಯ ಎಸ್.ಆರ್.ಪಾಟೀಲ್‌ರವರೆ ನೀವೆ ಹೇಳಿ. ನಿಮಗೆ ಯೋಗ್ಯತೆ ಇಲ್ಲ ಎಂದು ಟೀಕೆ ಮಾಡಿದ್ದೇನೆ. ಅನೇಕ ವಿಚಾರದಲ್ಲಿ ಟಾರಗೆಟ್ ಮುಟ್ಟಲು ಆಗಲಿಲ್ಲ, ಸುಮ್ಮನೆ ಸಮಯವನ್ನು ಹೀಗೆ ಕಳೆದ್ದಿರಿ ಎಂದು ಹೇಳಿದ್ದೇನೆ.

ಶ್ರೀ ಎಸ್.ಆರ್.ಪಾಟೀಲ್:- ಟೀಕೆ ಮಾಡಿ ಎಂದು ನಾವೇ ಹೇಳಿದ್ದೇವೆ, ಟೀಕೆ ಮಾಡಿ ನೀವು.

ಶ್ರೀ ಕೆ.ಎಸ್.ಈಶ್ವರಪ್ಪ:- ನೀವು ಬೇಡ ಎಂದರು ನಾವು ಟೀಕೆ ಮಾಡುತ್ತೇವೆ. ಬೇಡ ಎನ್ನಲು ನೀವು ಯಾರು? ನನ್ನ ಪಾಯಿಂಟ್ ಅದು ಅಲ್ಲ.

**ಶ್ರೀ ಎಚ್.ಎಂ.ರೇವಣ್ಣ:-** ಎರಡು ನೀವೆ ಹೇಳುತ್ತೀರಿ.

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ನಾನು ಬರಗಾಲದ ಬಗ್ಗೆ ತುಂಬಾ ಸ್ಪಷ್ಟವಾಗಿ ಹೇಳಿದ್ದೆನೆ. ಕೇಂದ್ರದಿಂದ ಬಂದ ಹಣಕ್ಕೆ ನಿಮ್ಮ ಹಣವನ್ನು ಸೇರಿಸಿ, 738 ಕೋಟಿ ರೂ.ಗಳನ್ನು ಸೇರಿಸಬೇಕೆಂದು ರೈತರು ಹಾಳಾಗಿ ಹೋಗುತ್ತಿದ್ದಾರೆ. ಆ ಹಣವನ್ನು ಸೇರಿಸುವುದು ನಿಮ್ಮ ಕರ್ತವ್ಯ. ಹಿಂದೆ ಮಾಡಿಬಿಟ್ಟಿದ್ದೆವೆ ಎಂದು ಹೇಳಿದರು.

(ಮುಂದು)

unedited copy

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು)**

ಬೆಳೆ ನಷ್ಟ ಆದ ರೈತರಿಗೆ ಹಣ ಕೊಡಬೇಕಾದ್ದು ಅವರ ಕರ್ತವ್ಯ ಅದನ್ನು ಮಾಡಲಿ. ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದು, ಅದರ ಬಗ್ಗೆ ಗಮನಿಸಲಿ. HKDB (Hyderabad Karnataka Development Board) ಬಗ್ಗೆ ಭಾಷಣ ಮಾಡಬಾರದು. ಮಾನ್ಯ ಬೋಸರಾಜ್‌ರವರು ಹೇಳಿದಂತೆ ರೂ.30 ಸಾವಿರಗಳನ್ನು ತುಂಬಲಿ. ರೂ.50 ಸಾವಿರ ಎಂದು ಸುಳ್ಳು ಪ್ರಕಟಣೆ ಮಾಡಿರುವ ಪತ್ರಿಕೆಗಳಿಗೆ ನೋಟೀಸ್ ಕೊಡಲಿ. ಇವರು ಹೇಳುತ್ತಿರುವುದು ಸತ್ಯವೇ? ಅಥವಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸತ್ಯವೇ? ಪತ್ರಿಕಾ ಗೋಷ್ಟಿಯಲ್ಲಿ ಮಂತ್ರಿಗಳು ಹೇಳಿರುವುದನ್ನು ಇಲ್ಲ ಎಂದರೆ ಹೇಗೆ? ನೀರಿನ ಸಮಸ್ಯೆ ಬಗೆಹರಿಸಲು ಮಾನ್ಯ ಹೆಚ್.ಕೆ. ಪಾಟೀಲರಿಗೆ ಇರುವಷ್ಟು ಆಸಕ್ತಿ ರಾಜ್ಯ ಸರ್ಕಾರದಿಂದಲೂ ಬರಬೇಕು. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈಗ ಸದನಕ್ಕೆ ಬಂದಿದ್ದು, ಗ್ರಾಮಾಂತರ ಮತ್ತು ಲೋಕೋಪಯೋಗಿ ಸಚಿವರು ಪಾತ್ರ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಮಹತ್ವ ಪಡೆದಿದೆ. ರಸ್ತೆಗಳ ಬಗ್ಗೆ SCP and TSP ನಲ್ಲಿ ಎಲ್ಲಾ ಇಲಾಖೆಗಳಲ್ಲಿ ಹಣ ಇದ್ದು, ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಅಧಿಕಾರಿಗಳನ್ನು ಕರೆದು '30-40 ಪರ್ಸೆಂಟ್ ಖರ್ಚು ಮಾಡಿದ್ದೀರಿ, ನಾಚಿಕೆಯಾಗುವುದಿಲ್ಲವೇ? 'ಎಂದು ಬಾಯಿಗೆ ಬಂದ ಹಾಗೆ ಬಯ್ದರು. ಆದರೆ ನಾಚಿಕೆ ಯಾರಿಗೆ ಆಗಬೇಕು? 30-40 ಪರ್ಸೆಂಟ್ ಖರ್ಚು ಮಾಡಿರದಿದ್ದರೆ ಅಧಿಕಾರಿಗಳ ಮೇಲಿರುವ ಮಂತ್ರಿಗಳು ಸಭೆ ಮಾಡಿಲ್ಲವೇ? ಸಭೆ ಮಾಡಿದಾಗ ಮಂತ್ರಿಗಳ ಮಾತನ್ನು ಕೇಳಿಲ್ಲವೇ? ಅವರ ಮಾತನ್ನು ಕೇಳಿರದಿದ್ದರೆ ಅಂತಹ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಿ. ಮಂತ್ರಿಗಳ ಮಾತಿಗೆ ಕವಡೆ ಕಿಮ್ಮತ್ತು ಇಲ್ಲ ಎಂದರೆ ಮಂತ್ರಿಗಳು ರಾಜೀನಾಮೆ ಕೊಡಲಿ. ಇದೇನಿದು? ಎಲ್ಲಿದೆ ಸರ್ಕಾರ!. ಇದು SCP and TSP. ಅವರ ಭಾಷಣದಲ್ಲಿ ದಲಿತರು, ಹಿಂದುಳಿದವರು ಅಲ್ಪಸಂಖ್ಯಾತರ ಬಗ್ಗೆ ಬಿಟ್ಟರೆ ಬೇರೆ ಏನೂ ಇಲ್ಲ. ಆ ಹಣ 30-40 ಪರ್ಸೆಂಟ್ ಖರ್ಚು ಮಾಡಿದರೆ ಹೇಗೆ? ಗ್ರಾಮಾಂತರ ಪ್ರದೇಶ ಇರಬಹುದು, ನಗರ ಪ್ರದೇಶ ಇರಬಹುದು, ಗ್ರಾಮಾಂತರ ಪ್ರದೇಶಗಳಲ್ಲಿ ಲೋಕೋಪಯೋಗಿ ರಸ್ತೆಗಳು ಇವೆ. ದಯವಿಟ್ಟು ಅದಕ್ಕೆ ಬೇಕಾಗಿರುವ ಹಣ ಇಟ್ಟುಕೊಳ್ಳಲಿ. ಅನೇಕ ಹಳ್ಳಿಗಳಲ್ಲಿ ಧೂಳು ತುಂಬಿರುತ್ತದೆ. ಮೊನ್ನೆ ಗ್ರಾಮ ಪಂಚಾಯಿಯಲ್ಲಿ ಫಸ್ಟ್ ಕ್ಲಾಸ್ ಭಾಷಣ ಮಾಡಿದ್ದು, ಸೀದಾ ಕಾರಿನಲ್ಲಿ ಹೋಗಿ ಭಾಷಣ ಮಾಡಿ ಬರುತ್ತಾರೆ. ಮಾನ್ಯ ಐವಾನ್ ಡಿಸೋಜಾರವರು ಎಷ್ಟರಮಟ್ಟಿಗೆ ಗೆದ್ದಿದ್ದೇವೆ

unedited copy

ಎಂಬ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅವರು 12 ಕಡೆ ಗೆದ್ದಿದ್ದು, ನಾವೆಲ್ಲರೂ ಸೇರಿ ಅಷ್ಟು ಗೆದ್ದಿದ್ದೇವೆ ಎಂದು ಬಹಳ ಚೆನ್ನಾಗಿ ಹೇಳಿದರು. ಮಾನ್ಯ ಸಭಾಪತಿಯವರೇ, ನಾನು ಒಂದು ಅಂಶವನ್ನು ಟಿ.ವಿ.ಯಲ್ಲಿ ನೋಡಿದೆ. ಇನ್ನು ಮೇಲೆ ನಮಗೆಲ್ಲರಿಗೂ ಚುನಾವಣೆ ಬಹಳ costly ಆಗುತ್ತದೆ. ನಾನು ಆ ಪಕ್ಷ, ಈ ಪಕ್ಷ ಎಂದು ಹೇಳುವುದಿಲ್ಲ. ಕಾಸ್ಟ್ಲೀ ಎಂದರೆ ನಾವು ರೂ.100 ಕೊಟ್ಟರೆ ಅವರು ರೂ.200 ಕೊಡುತ್ತಾರೆ. ಅವರು ರೂ.200 ಕೊಟ್ಟರೆ ಇನ್ನೊಬ್ಬರು ರೂ.300 ಕೊಡುತ್ತಾರೆ. ಮತದಾರರು ಹಾಗೆ ಆಗಿಬಿಟ್ಟಿದ್ದಾರೆ. ನಾನು ಟಿ.ವಿಯಲ್ಲಿ ಕಣ್ಣಿಂದ ನೋಡಿದೆ. ನಾನು ಕಾಂಗ್ರೆಸ್, ಬಿಜೆಪಿ ಎಂದು ಹೋಗುವುದಿಲ್ಲ. ಟಿ.ವಿ.ಯಲ್ಲಿ ರೆಕಾರ್ಡ್ ಮಾಡಿ ತೋರಿಸುತ್ತಾರೆ. ಒಬ್ಬ ಅಭ್ಯರ್ಥಿಗೆ ಒಂದು ಓಟಿಗೆ ಒಂದೂಕಾಲು ಲಕ್ಷ ರೂಪಾಯಿಗಳನ್ನು ಕೊಟ್ಟು, ಭಗವಂತ ಮತ್ತು ತಂದೆ-ತಾಯಿಗಳ ಮೇಲೆ ಆಣೆ ಪ್ರಮಾಣ ಮಾಡಿಸಿಕೊಳ್ಳುತ್ತಾರೆ. ಇವರು ತಂದೆ-ತಾಯಿಗಳ ಮೇಲೆ ಆಣೆ ಮಾಡಿಸಿ ಮೌಢ್ಯದ ಬಗ್ಗೆ ಬಿಲ್ ತರುವುದಕ್ಕೆ ಹೊರಟಿದ್ದಾರೆ. ಚುನಾವಣೆ ಎಲ್ಲಿದೆ? ಹಾಗಾದರೆ ಚುನಾವಣೆ ಏಕೆ ಬೇಕು? ಇನ್ನು ಮೇಲೆ ನಾವೆಲ್ಲರೂ ತೀರ್ಮಾಣ ಮಾಡಿಬಿಡೋಣ. ಇಲ್ಲಿ ಯಾರೂ ಬಂದು ಕುಳಿತುಕೊಳ್ಳುವಂತಿಲ್ಲ. ಟಾಟಾ, ಬಿರ್ಲಾ, ಅಂಬಾನಿ, ಅದಾನಿ ಯಂತರ ಯಾರ ಹತ್ತಿರ ದುಡ್ಡು ಇದೆಯೋ, ಅಂತಹವರು ಚುನಾವಣೆ ನಿಲ್ಲಬೇಕು ಎಂದು resolution ಮಾಡೋಣ. ಇದು ಬರೀ ಹೇಳುವ ಭಾಷಣ ಆಗಬಾರದು. ಈಗ ಇಬ್ಬರೂ ಸಚಿವರಿಗೆ ಮನವಿ ಮಾಡುವುದೇನೆಂದರೆ,

**ಡಾ: ವೀರಣ್ಣ ಮತ್ತಿಕಟ್ಟಿ:-** ಅದಾನಿ ಎಂದರೆ .....

**ಶ್ರೀ ಕೆ.ಎಸ್. ಈಶ್ವರಪ್ಪ:-** ಅದಾನಿ ಎಂದರೆ ಗೊತ್ತಿಲ್ಲವೇ? ಅವರಿಗೆ ರಾಜೀವ್ ಗಾಂಧಿ ಸೋನಿಯಾ ಗಾಂಧಿ ಬಿಟ್ಟರೆ ಯಾರೂ ಗೊತ್ತಿಲ್ಲ, ನಾನೇನು ಮಾಡಲಿ? ಕೋಟಿ ಕೋಟಿ ಹಣ ಇರುವವರನ್ನು ಕರೆದುಕೊಂಡು ಬಂದು ಕೂರಿಸುವ ಪರಿಸ್ಥಿತಿ ಬರುತ್ತದೆ. ಮಾನ್ಯ ಮಹದೇವಪ್ಪನವರ ಜವಾಬ್ದಾರಿ ಜಾಸ್ತಿ ಇದೆ. ಈ ಸಾರಿ ಕೇಂದ್ರ ಸರ್ಕಾರ ರಸ್ತೆಗಳಿಗೆ ಸಾಕಷ್ಟು ಹಣ ಕೊಡುತ್ತದೆ ಎಂದು ಹೇಳಿದ್ದಾರಂತೆ, ಅದು ನನಗೆ ಗೊತ್ತಿಲ್ಲ. ಬಜೆಟ್ ನೋಡಿದೆ. ಆದ್ದರಿಂದ ಮಾನ್ಯ ಹೆಚ್.ಕೆ. ಪಾಟೀಲರು ಮತ್ತು ಮಾನ್ಯ ಮಹದೇವಪ್ಪನವರು ರಸ್ತೆಗಳಿಗೆ ಒತ್ತು ಕೊಡಲಿಲ್ಲ ಎಂದರೆ ಅವರು ಏಕೆ ಮಂತ್ರಿಯಾಗಿರಬೇಕು? ನಾಲ್ಕೈದು ಕೋಟಿ ರೂಪಾಯಿಗಳ ಗ್ರಾಮಾಂತರ ಪ್ರದೇಶದ ಕೊಡುವುದಕ್ಕೆ ಆಗಲಿಲ್ಲ ಎಂದಾಗ ಆ ಮಂತ್ರಿ ಹತ್ತಿರ ಎಂಟಾಣೆ ಕೆಲಸ ಆಗುವುದಿಲ್ಲ,

unedited copy

ಏಕೆ ಹೋಗಬೇಕು ಎಂದನಿಸುವುದಿಲ್ಲವೇ? ಕಾಂಗ್ರೆಸ್, ಜೆಡಿ(ಎಸ್) ಬಿಜೆಪಿ ಬಿಟ್ಟುಬಿಡಲಿ, ಅವರಿಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ದುಡ್ಡು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದರೆ ಮಂತ್ರಿಗಳಾಗಿ ಏಕೆ ಇರುತ್ತಾರೆ? ಹಣವನ್ನು ತರುವುದಿಲ್ಲ, ಹಳ್ಳಿಗಳಲ್ಲಿ ಪ್ರವಾಸ ಮಾಡುವುದಿಲ್ಲ. ಚುನಾವಣೆಯಲ್ಲಿ ಬರೀ ದುಡ್ಡಿನಲ್ಲಿ ಜನರನ್ನು ಖರೀದಿ ಮಾಡಿ ಗೆದ್ದು ಮಂತ್ರಿಯಾಗಬೇಕು ಎಂದರೆ ಇದೇನು ಪ್ರಜಾಪ್ರಭುತ್ವ ವ್ಯವಸ್ಥೆಯೇ? ಗ್ರಾಮೀಣ ಅಥವಾ ನಗರ ಪ್ರದೇಶ ಇರಬಹುದು, ದಯವಿಟ್ಟು SCP and TSP ಹಣವನ್ನು ಪೂರ್ಣ ಬಳಸಿಕೊಳ್ಳಬೇಕು. ಅದಲ್ಲದೇ ಸಾಮಾನ್ಯ ರಸ್ತೆಗಳನ್ನು ಸರಿಪಡಿಸುವಲ್ಲಿಯೂ ಪ್ರಯತ್ನ ಮಾಡಬೇಕೆಂದು ತಿಳಿಸುತ್ತೇನೆ. ನಾವು ಟೀಕೆ ಮಾಡಿದ್ದೂ ಹೌದು, ಸಲಹೆಗಳನ್ನು ಕೊಟ್ಟಿದ್ದೂ ಹೌದು. ಬಜೆಟ್‌ನಲ್ಲಿ ನೋಡುತ್ತೇನೆ. ಬಜೆಟ್‌ನಲ್ಲಿ ಕುಡಿಯುವ ನೀರಿಗೆ, ರಸ್ತೆಗಳಿಗೆ, ಹೆಣ್ಣುಮಕ್ಕಳಿಗೆ, HKDB ಹಾಗೂ ಬೆಳೆ ವಿಮೆಗೆ ಹಣ ಇಟ್ಟಿಲ್ಲದಿದ್ದರೆ ಅವರನ್ನು ಸುಮ್ಮನೆ ಬಿಡುವುದಿಲ್ಲ. ಆದ್ದರಿಂದ ನಾನು ಬೆಳಕು ಚೆಲ್ಲಿರುವ ವಿಷಯಗಳ ಬಗ್ಗೆ ಸೀರಿಯಸ್ಸಾಗಿ ತೆಗೆದುಕೊಂಡಿದ್ದಾರೆ ಎಂಬ ವಿಶ್ವಾಸ ಇದೆ. ಆ ದಿಕ್ಕಿನಲ್ಲಿ ಗಮನಿಸಬೇಕು. ಈ ವರ್ಷದಲ್ಲಿ ಇನ್ನೂ 28 ದಿನಗಳ ಸಮಯ ಇದ್ದು, ಏನೇನು ಗುರಿ ಇದೆಯೋ, ಕೆಲವು ಕಡೆ ಹಣವೂ ಇದೆ, ಈ ಹಣವನ್ನು ಬಳಸಿಕೊಂಡು ರೈತರು, ಹೆಣ್ಣುಮಕ್ಕಳು ಇರಬಹುದು, ನಗರ ಅಥವಾ ಗ್ರಾಮೀಣ ಪ್ರದೇಶ ಇರಬಹುದು, ಅದರ ಅಭಿವೃದ್ಧಿ ದಿಕ್ಕಿನತ್ತ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:–** ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ಪ್ರಸ್ತಾಪದ ವಿಚಾರದ ಚರ್ಚೆ ನಾಳೆ ಮುಂದುವರೆಯುತ್ತದೆ. ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳೋಣ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಅವರು ವರದಿಯನ್ನು ಯಾವ ದಿನಾಂಕದಂದು ಮಂಡಿಸುತ್ತಾರೆ ಎಂಬ ಬಗ್ಗೆ ತಿಳಿಸಲು ಮಾನ್ಯ ಸಭಾನಾಯಕರು ಎದ್ದು ನಿಂತಿದ್ದಾರೆ, ಅದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ.

**ಶ್ರೀ ಎಸ್.ಆರ್. ಪಾಟೀಲ್:–** ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಬಂದು ಹೇಳಿಕೆ ಕೊಡುತ್ತಾರೆ ಎಂದು ಹೇಳಿದ್ದೇನೆ. ಈಗ ಕೆಳಮನೆಯಲ್ಲಿದ್ದು, ಅಲ್ಲಿಯೂ ಇಂತಹದ್ದೇ ಒಂದು ಚರ್ಚೆ ನಡೆದಿದೆ.

unedited copy

**ಉಪ ಸಭಾಪತಿಯವರು:–** ಬರುತ್ತಾರೆ, ಈಗ ಪ್ರಶ್ನೋತ್ತರ ವೇಳೆ. ಮಾನ್ಯ ಚೌಡರೆಡ್ಡಿ ತೂಪಲ್ಲಿಯವರು ಸದನದಲ್ಲಿ ಇಲ್ಲ. ನಂತರ ಶ್ರೀ ಐವಾನ್ ಡಿಸೋಜಾರವರು ಪ್ರಶ್ನೆ ಕೇಳಿ.

unedited copy

***ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು***

ಪ್ರಶ್ನೆ ಸಂಖ್ಯೆ: 352

ಉತ್ತರದ ಪ್ರತಿ ಲಗತ್ತಿಸಿದೆ.

**ಶ್ರೀ ಐವಾನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಗರಪಾಲಿಕೆ ಸದಸ್ಯರಿಗೆ ಗೌರವ ಧನ ಹೆಚ್ಚು ಮಾಡುವ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಪರಿಶೀಲನೆ ಮಾಡುವ ಬಗ್ಗೆ ಉತ್ತರದಲ್ಲಿ ತಿಳಿಸಿದ್ದರು. ಇವತ್ತು ಪುನ: ಇದೇ ಪ್ರಶ್ನೆ ಕೇಳಿರುವುದಕ್ಕೆ ಪ್ರಸ್ತಾವನೆಯನ್ನು ಆಯುಕ್ತರಿಂದ ಕೋರಿದ್ದು, ಬೆಳಗಾವಿ, ಮೈಸೂರು, ವಿಜಯಪುರ ಮಹಾನಗರ ಪಾಲಿಕೆಗಳಿಂದ ಪ್ರಸ್ತಾವನೆ ಸ್ವೀಕರಿಸಲಾಗಿದ್ದು, ಉಳಿದ ಮಹಾನಗರ ಪಾಲಿಕೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ಮಾಹಿತಿ ಪಡೆದು ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಈಗಾಗಲೇ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಭತ್ಯೆಯನ್ನು ಏರಿಸಲಾಗಿದ್ದು, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿಯೂ ಏರಿಸಲಾಗಿದೆ. ಆದರೆ ಮಹಾನಗರ ಪಾಲಿಕೆ ಸದಸ್ಯರಿಗೆ ಗೌರವ ಧನ ಏರಿಕೆಯ ಬಗ್ಗೆ ಇನ್ನೂ ಪರಿಶೀಲಿಸಲಾಗುವುದು ಎಂದು ಹೇಳುತ್ತಾರೆ. ಈಗಾಗಲೇ ಮೂರು ನಗರಪಾಲಿಕೆಗಳಿಂದ ಪ್ರಸ್ತಾವನೆ ಬಂದಿರುವ ಬಗ್ಗೆ ತಿಳಿಸಿದ್ದು, ನನಗೆ ಗೊತ್ತಿದ್ದ ಮಟ್ಟಿಗೆ ಮಂಗಳೂರು ಮಹಾನಗರ ಪಾಲಿಕೆಯಿಂದಲೂ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದಾರೆ. ಆದರೆ ಪ್ರಸ್ತಾವನೆ ಕಳುಹಿಸಿಕೊಟ್ಟು, ಅವರಿಂದ ಕೇಳಿ ಇವರು ಕೊಡುವುದಲ್ಲ. ನಗರ ಪಾಲಿಕೆಗಳಿಗೆ ಗೌರವ ಧನವನ್ನು ಎಲ್ಲಾ ಸದಸ್ಯರಿಗೆ ಕೊಡಬೇಕು ಎಂಬ ಒಂದು ಪಾಲಿಸಿ ಇರಬೇಕು. ನನ್ನ ವಿನಂತಿ ಏನೆಂದರೆ ಪರಿಶೀಲಿಸಲು ಎಷ್ಟು ಸಮಯ ಬೇಕು? ಮತ್ತು ಬೇರೆ ಮಹಾನಗರ ಪಾಲಿಕೆಗಳಿಂದ ಕೇಳಿ ಕೊಡುವುದಲ್ಲ. You should have a definite policy. ಅದನ್ನು ಕೊಡಬೇಕೋ, ಬೇಡವೋ ಎಂದು ಸರ್ಕಾರ, ಇಲಾಖೆ ತೀರ್ಮಾನ ಮಾಡಬೇಕು. ಅವರ ಹತ್ತಿರ ಕೇಳಿ ಕೊಡುವುದೇ? ಕೋಳಿ ಕೇಳಿ ಮಸಾಲೆ ಅರೆಯಲು ಆಗುತ್ತದೆಯೇ? ನಾನು ಎಷ್ಟೋ ಸಮಯದಿಂದ ಒತ್ತಾಯ ಮಾಡುತ್ತಿದ್ದೇನೆ. ನಗರಾಭಿವೃದ್ಧಿ ಇಲಾಖೆ ಕೆಲಸ ಮಾಡುವುದರಲ್ಲಿ ಹಿಂದೆ ಬಿದ್ದಿದೆ ಎಂದು ನನ್ನ ಭಾವನೆ. ಅಧಿಕಾರಿಗಳು ಕೆಲಸ ಮಾಡುವುದಿಲ್ಲವೋ? ನಗರಾಭಿವೃದ್ಧಿ ಇಲಾಖೆಯಲ್ಲಿ ಎಷ್ಟೋ ಯೋಜನೆಗಳು ಬಾಕಿ ಇವೆ, ಯಾವ ಯೋಜನೆಗಳು ಕಾರ್ಯಗತ

unedited copy

ಆಗುತ್ತಿಲ್ಲ ಎಂದು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ. ಇನ್ನೂ ಎಷ್ಟು ಸಮಯ ಬೇಕು ಮತ್ತು ಯಾವಾಗ ಕೊಡುತ್ತಾರೆ ಎಂಬುದನ್ನು ತಿಳಿಸಲಿ.

(ಮುಂದು)

unedited copy

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ವಿನಯಕುಮಾರ್ ಸೊರಕೆ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದರಿ ವಿಚಾರವನ್ನು ಕಳೆದ ಬಾರಿಯೂ ಸದನದಲ್ಲಿ ಪ್ರಸ್ತಾಪ ಮಾಡಿದ್ದರು. ದಿನಾಂಕಃ24.11.2015ರಲ್ಲಿ ಎಲ್ಲ ಜಿಲ್ಲಾಧಿಕಾರಿಗಳಿಗೆ ಮತ್ತು ಪಾಲಿಕೆಗಳ ಆಯುಕ್ತರಿಗೆ ಪತ್ರವನ್ನು ಬರೆದಿದ್ದೇವೆ. ಬೆಳಗಾವಿ, ಮೈಸೂರು ಮತ್ತು ವಿಜಯಪುರ ಮಹಾನಗರಪಾಲಿಕೆಯವರು ಗೌರವಧನ ಹೆಚ್ಚು ಮಾಡುವುದರ ಬಗ್ಗೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಕಳುಹಿಸಿ ಕೊಟ್ಟಿದ್ದಾರೆ. ಉಳಿದ ಕಡೆಗಳಿಂದ ಆದಷ್ಟು ಬೇಗ ಮಾಹಿತಿಯನ್ನು ತರಿಸಿಕೊಂಡು ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೂ ಸಹ ಗೌರವಧನವನ್ನು ಹೆಚ್ಚು ಮಾಡುವ ಅವಕಾಶಗಳು ಇವೆ. ಬಿ.ಬಿ.ಎಂ.ಪಿ.ಯಲ್ಲಿ ಈಗಾಗಲೇ ಹೆಚ್ಚು ಮಾಡಿದ್ದಾರೆ. ನಾವು ಯಾವುದೇ ಕೆಲಸ ಮಾಡಬೇಕಾದರು ಅಲ್ಲಿನ ಸ್ಥಳೀಯ ಆಡಳಿತವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಅವರ ಅಭಿಪ್ರಾಯವನ್ನು ಕೇಳಿದ್ದೇವೆ. ಆದಷ್ಟು ಬೇಗ ಅವರುಗಳಿಂದ ಮಾಹಿತಿಯನ್ನು ತರಿಸಿಕೊಂಡು ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಅವರಿಗೆ ಹೆಚ್ಚಿನ ಗೌರವಧನವನ್ನು ಕೊಡಬೇಕಾಗಿಲ್ಲ, ನಗರಪಾಲಿಕೆಯವರು ತಮ್ಮ ಸ್ವಂತ ಆರ್ಥಿಕ ಸಂಪನ್ಮೂಲದಿಂದ ಕೊಡುತ್ತಾರೆ. ಸರ್ಕಾರ ಪಾಲಿಕೆಗಳಿಗೆ 'ಅದನ್ನು ಕೊಡಿ' ಎಂದು ಹೇಳಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ, ಮಂಗಳೂರು ನಗರಪಾಲಿಕೆಗೆ ತಿಂಗಳಿಗೆ ಪ್ರಸ್ತುತ 2 ಲಕ್ಷ 25 ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಅದನ್ನು ಪರಿಷ್ಕರಿಸಿ 1000 ರೂಪಾಯಿಗಳನ್ನು ಪ್ರತಿ ಸದಸ್ಯರಿಗೆ ಹೆಚ್ಚಿಗೆ ಕೊಟ್ಟರೂ ಸಹ 7 ಲಕ್ಷ ರೂಪಾಯಿಗಳನ್ನು ಮಾತ್ರ ನಗರಪಾಲಿಕೆ ಕೊಡಬೇಕಾಗುತ್ತದೆ. ರಾಜ್ಯದ ಅನುದಾನವನ್ನು ಬಿಟ್ಟು ಪ್ರತಿ ನಗರಪಾಲಿಕೆಗೂ 90 ರಿಂದ 92 ಕೋಟಿ ರೂಪಾಯಿಗಳಷ್ಟು ಸ್ವಂತ ಆದಾಯವಿದೆ. ಈಗ ಕನಿಷ್ಠ ಒಬ್ಬ ಸದಸ್ಯರಿಗೆ 2000 ರೂಪಾಯಿಗಳನ್ನು ಕೊಟ್ಟರೂ ಸಹ ಅವರಿಗೆ ಹೆಚ್ಚಿಗೆ ಬರುವುದು 2 ಲಕ್ಷ 25 ಸಾವಿರ ರೂಪಾಯಿಗಳು ಮಾತ್ರ. ಅದನ್ನು ಕೊಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಈ ಬಗ್ಗೆ ಮಾನ್ಯ ಸಚಿವರು ಈಗಲೇ ಭರವಸೆ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ನಾನು ಮಾಹಿತಿ ಕೋರಿ ಮೂರು ತಿಂಗಳಾಗಿದೆ.

unedited copy

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಹಣವನ್ನು ಬಿಡುಗಡೆ ಮಾಡಬೇಕಾಗಿಲ್ಲ. ನಗರಾಡಳಿತದಲ್ಲಿ, ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅವರದೇ ಆಗಿರುವ ಸಂಪನ್ಮೂಲಗಳಿವೆ. ಯಾವ ನಗರಪಾಲಿಕೆ ಎಷ್ಟು ಹಣ ಕೊಡಬೇಕೆನ್ನುವ ಸುತ್ತೋಲೆಯನ್ನು ಸರ್ಕಾರ ಹೊರಡಿಸಿದರೆ ಸಾಕಾಗುತ್ತದೆ. ಅವರ ಹತ್ತಿರ ಸಂಪನ್ಮೂಲ ಇದೆ. ಗೌರವಧನ ಹೆಚ್ಚು ಮಾಡುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಇದನ್ನು ಬಿಟ್ಟು ಸ್ಥಳೀಯ ಸಂಸ್ಥೆಗಳಿಂದ ವರದಿ ತರಿಸುವುದು, ಎಷ್ಟು ತೆರಿಗೆ ವಸೂಲಿ ಮಾಡುತ್ತಿದ್ದೀರಿ ಎಂದು ಕೇಳುವುದು ನ್ಯಾಯಸಮ್ಮತವಲ್ಲ. ಅವರುಗಳು 'ನಿಮ್ಮ ಸಂಬಳವನ್ನು ಹೆಚ್ಚು ಮಾಡಿಕೊಳ್ಳುವಾಗ ಯಾರನ್ನೂ ಕೇಳುವುದಿಲ್ಲ. ನಮ್ಮ ಸಂಬಳ ಹೆಚ್ಚು ಮಾಡಿ ಎಂದು ಕೇಳಿದರೆ ತೆರಿಗೆ ಎಷ್ಟು ಸಂಗ್ರಹ ಮಾಡುತ್ತೀರಿ? ಎಂದು ಸರ್ಕಾರ ಕೇಳುತ್ತಿದೆ. ಇದು ಸರಿಯೇ?' ಎಂದು ಕೇಳುತ್ತಿದ್ದಾರೆ. ಹಿಂದಿನ ಬಾರಿ ಈ ಬಗ್ಗೆ ಪ್ರಸ್ತಾಪ ಮಾಡಿದಾಗ, ಮಾನ್ಯ ಸಚಿವರು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ 25 ಜನ ಸದಸ್ಯರ ಸಭೆ ಕರೆಯುತ್ತೇವೆಂದು ಹೇಳಿದ್ದರು. ಈಗ ಮಾನ್ಯ ಐವನ್ ಡಿ'ಸೋಜಾ ಅವರನ್ನು ಸೇರಿದಂತೆ ನಮ್ಮೆಲ್ಲರನ್ನು ಕರೆದು ಒಂದು ತಿಂಗಳೊಳಗೆ ಸಭೆ ನಡೆಸಿ ಆ ಸಭೆಯಲ್ಲಿ ಒಂದು ತೀರ್ಮಾನ ಮಾಡಿ, ಸರ್ಕಾರ ಆದೇಶವನ್ನು ಹೊರಡಿಸಲಿ. ಅದನ್ನು ಬಿಟ್ಟು ಅವರ ತೆರಿಗೆಯನ್ನು ಆಧಾರ ಮಾಡುವುದು ಸರಿಯಲ್ಲ ಎನ್ನುವುದು ನನ್ನ ಭಾವನೆಯಾಗಿದೆ. 'ಇನ್ನೊಂದು ತಿಂಗಳಲ್ಲಿ ಮೀಟಿಂಗ್ ಕರೆಯುತ್ತೇನೆ, ಇದಕ್ಕೆ ಬೇಕಾದ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ' ಎನ್ನುವ ಭರವಸೆಯನ್ನು ಮಾನ್ಯ ಸಚಿವರು ಈಗ ನೀಡಬೇಕಾಗಿದೆ.

**ಶ್ರೀ ವಿನಯಕುಮಾರ್ ಸೊರಕೆಃ–** ಸನ್ಮಾನ್ಯ ಸಭಾಪತಿಯವರೇ, ಸ್ಥಳೀಯ ಆಡಳಿತದವರೇ ಅದನ್ನು ನಿಭಾಯಿಸಬೇಕೆನ್ನುವ ಕಾರಣಕ್ಕಾಗಿ ಅವರ ಅಭಿಪ್ರಾಯವನ್ನು ಕೇಳುತ್ತಿದ್ದೇವೆ. ನಾವೇ ಆ ಹೆಚ್ಚಿನ ಮೊತ್ತವನ್ನು ಕೊಡುವುದಾಗಿದ್ದರೆ ಅವರ ಅಭಿಪ್ರಾಯವನ್ನು ಕೇಳುವ ಅವಶ್ಯಕತೆ ಇರಲಿಲ್ಲ. ಆದ್ದರಿಂದ ಆದಷ್ಟು ಶೀಘ್ರವಾಗಿ ಅವರಿಂದ ವರದಿಯನ್ನು ತರಿಸಿಕೊಂಡು ಆದಷ್ಟು ಬೇಗ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಒಂದು ತಿಂಗಳೊಳಗೆ ಒಂದು ಸಭೆಯನ್ನು ಕರೆಯುತ್ತೇವೆ ಎನ್ನುವ ಮಾತನ್ನಾದರು ಅವರು ಹೇಳಬೇಕಾಗುತ್ತದೆ.

unedited copy

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಯಾವಾಗ ಸರ್ಕಾರ ಆದೇಶವನ್ನು ನೀಡುತ್ತದೆ ಎನ್ನುವುದನ್ನು ಅವರು ತಿಳಿಸಬೇಕಾಗುತ್ತದೆ.

**ಶ್ರೀ ವಿನಯಕುಮಾರ್ ಸೊರಕೆ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳ ಸಭೆಯನ್ನು ಮತ್ತು ಸ್ಥಳೀಯ ಆಡಳಿತ ಹಾಗೂ ಮೇಯರ್‌ರವರ ಸಭೆಯನ್ನು ಕರೆದು ಒಂದು ತಿಂಗಳೊಳಗಾಗಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

unedited copy

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:322**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಶ್ವತ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಎರಡು ಪ್ರಶ್ನೆಗಳಿಗೆ ಮಾನ್ಯ ಸಚಿವರು 'ಹೌದು' 'ಪರಿಶೀಲನೆಯಲ್ಲಿದೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಹಿಂದೆ ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು ಬಾಪೂಜಿ ನಗರದಲ್ಲಿ ಬಹಳ ಸಮಸ್ಯೆಯಿದೆ, ಅದು ಜಂಕ್ಷನ್ ಸ್ಥಳವಾಗಿದೆ. ಮೆಕ್ರಿ ಸರ್ಕಲ್‌ನಲ್ಲಿ ಏನು ಸ್ಟೀಲ್ ಬ್ರಿಡ್ಜ್ ಇದೆ. ಅದೇ ರೀತಿ ಮೈಸೂರು ರಸ್ತೆಯಲ್ಲಿ ಮಾಡುತ್ತೇವೆ' ಎನ್ನುವ ಉತ್ತರವನ್ನು ಹೇಳಿದ್ದರು. ಈಗ ಅದನ್ನು ಬಿ.ಡಿ.ಎ.ಗೆ ರೆಫರ್ ಮಾಡಿದ್ದಾರೆ. ಆ ಬಗ್ಗೆ ನನಗೆ ಪತ್ರ ಸಹ ಬಂದಿದೆ. ಬಾಪೂಜಿನಗರದಲ್ಲಿ ಬಹಳಷ್ಟು ಸಮಸ್ಯೆ ಇದೆ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹಾಗೂ ಮಾನ್ಯ ಲೋಕೋಪಯೋಗಿ ಸಚಿವರು ಪ್ರತಿದಿನ ಆ ರಸ್ತೆಯಲ್ಲಿಯೇ ಓಡಾಡುತ್ತಾರೆ. ಅಲ್ಲಿದ್ದ 'U' ಟರ್ನ್ ಅನ್ನು ಸಹ ನಿಲ್ಲಿಸಿದ್ದಾರೆ. ಮಾನ್ಯ ಸೋಮಣ್ಣನವರು ಸಚಿವರಾಗಿದ್ದ ಸಂದರ್ಭದಲ್ಲಿ ವೆಸ್ಟ್ ಆಫ್ ಕಾರ್ಡ್‌ರೋಡ್‌ನಿಂದ ಬರುತ್ತಿದ್ದ ಬ್ರಿಡ್ಜ್ ಅನ್ನು ಬಾಪೂಜಿನಗರದ ಹತ್ತಿರ ಸ್ಟಾಫ್ ಮಾಡಿದ್ದಾರೆ. ಅದನ್ನು ಸ್ಯಾಟಲೈಟ್ ಬಸ್‌ಸ್ಟ್ಯಾಂಡ್‌ವರೆಗೆ ವಿಸ್ತರಣೆ ಮಾಡಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಮೊನ್ನೆ ದಿನ ಚಾಮರಾಜನಗರ ಬಸ್‌ಗೆ ಪ್ರಯಾಣಿಕರು ಇಲ್ಲವೆಂದು ಕಂಡೆಕ್ಟರ್ 'ಚಾಮರಾಜನಗರ.. . . . ಚಾಮರಾಜನಗರ' ಎಂದು ಪ್ರಯಾಣಿಕರನ್ನು ಕರೆಯುತ್ತಿದ್ದ ಸಂದರ್ಭದಲ್ಲಿ ಒಂದು ಟಿಪ್ಪರ್ ಆತನ ಮೇಲೆ ಹರಿದು ಕಂಡೆಕ್ಟರ್ ಸ್ಥಳದಲ್ಲಿಯೇ ಮೃತ ಹೊಂದಿದ್ದಾನೆ. ಅಲ್ಲಿ ರೋಡ್ ಕ್ರಾಸ್ ಮಾಡುವುದಕ್ಕೂ ಸಮಸ್ಯೆಯಾಗಿದೆ. ಐದು ಹೊರ ರಾಜ್ಯಗಳಿಗೆ ಹೋಗುವ ಬಸ್‌ಗಳು ಸ್ಯಾಟಲೇಟ್ ಬಸ್ ಸ್ಟ್ಯಾಂಡ್‌ಗೆ ಬರುತ್ತವೆ. ಬಾಪೂಜಿನಗರ, ಬ್ಯಾಟರಾಯನಪುರ, ವಿಜಯನಗರ, ಕವಿಕಾ ಲೇಔಟ್, ಆರ್.ಪಿ.ಸಿ. ಲೇಔಟ್ ಇದೊಂದು ಜಂಕ್ಷನ್ ಪ್ಲೇಸ್ ಆಗಿದೆ. ಅಲ್ಲಿ 'U' ಟರ್ನ್ ಇಲ್ಲ. ಅಲ್ಲಿ ಗಾಳಿ ಆಂಜನೇಯನ ದೇವಸ್ಥಾನ ಮತ್ತು ಸ್ಯಾಟಲೈಟ್ ಬಸ್ ನಿಲ್ದಾಣವಿದೆ. ಟಿಂಬರ್ ಯಾರ್ಡ್ ಲೇಔಟ್ ಅದರ ಪಕ್ಕದಲ್ಲಿಯೇ ಬರುತ್ತದೆ. ಇದು ಬಹಳ ತುರ್ತಾಗಿ ಆಗಬೇಕಾಗಿರುವ ಕೆಲಸವಾಗಿರುವುದರಿಂದ ಮಾನ್ಯ ಸಚಿವರು 'ಪರಿಶೀಲನೆಯಲ್ಲಿದೆ' ಎನ್ನುವ ಉತ್ತರವನ್ನು ಕೊಡುವುದಕ್ಕೆ ಬದಲಾಗಿ ಈ ಸಮಸ್ಯೆ ಪರಿಹಾರವಾಗುವ ರೀತಿಯಲ್ಲಿ ಸೂಕ್ತ ಉತ್ತರವನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

unedited copy

**ಶ್ರೀ ರಾಮಚಂದ್ರಗೌಡಃ–** ಸನ್ಮಾನ್ಯ ಸಭಾಪತಿಯವರೇ, ಅಲ್ಲಿ 'ವೃಷಭಾವತಿ' ಎನ್ನುವ ಬಹಳ ದೊಡ್ಡ ನದಿ ಹರಿಯುತ್ತಿತ್ತು. ಈಗ ಅದು ದೊಡ್ಡ ಮೋರಿಯಾಗಿದೆ. ಮಳೆಗಾಲದಲ್ಲಿ ಅಲ್ಲಿ ಓಡಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮೈಸೂರಿಗೆ ಹೋಗುವ ಜನರಿಗೆ ಬಹಳ ತೊಂದರೆಯಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರ ಪತ್ರವನ್ನು ಕಳುಹಿಸಿದೆ. ಆ ಪ್ರಾಧಿಕಾರದಿಂದ ಯಾವ ಪ್ರತಿಕ್ರಿಯೆ ವ್ಯಕ್ತವಾಗಿದೆ ಎನ್ನುವುದನ್ನು ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕೆಂದು ವಿನಂತಿಸಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು 19ನೇ ಜುಲೈ 2015ರಲ್ಲಿ 'ಗಾಳಿ ಆಂಜನೇಯಸ್ವಾಮಿ ದೇವಾಲಯದಿಂದ ಸ್ಯಾಟಲೈಟ್ ಬಸ್ ನಿಲ್ದಾಣದವರೆಗೆ ಮೇಲ್ಸೇತುವೆ ನಿರ್ಮಾಣ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತಿನ ಉತ್ತರದಲ್ಲಿ 'ಪರಿಶೀಲನೆಯಲ್ಲಿದೆ' ಎಂದು ಕೊಟ್ಟಿದ್ದಾರೆ. ರಾಜ್ಯದ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟ ಮೇಲೆ ಈಗ 'ಪರಿಶೀಲನೆಯಲ್ಲಿದೆ' ಎನ್ನುವ ಉತ್ತರವನ್ನು ಕೊಡಲಾಗಿದೆ. ಸರ್ಕಾರ ಯಾವ ರೀತಿ ಬದಲಾಯಿಸಿ ಉತ್ತರ ಕೊಡುತ್ತದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ದಯವಿಟ್ಟು ಈ ಕೆಲಸವನ್ನು ಬೇಗ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಜೆ.ಜಾರ್ಜ್ಃ–** ಸನ್ಮಾನ್ಯ ಸಭಾಪತಿಯವರೇ, ಮೈಸೂರು ರೋಡ್‌ನ ಬಾಪೂಜಿ ನಗರದಲ್ಲಿ ದಿನೇ ದಿನೇ ವಾಹನ ದಟ್ಟಣೆ ಹೆಚ್ಚಾಗುತ್ತಿದೆ ಎನ್ನುವುದು ನನಗೂ ಗೊತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಬಿ.ಡಿ.ಎ.ಯವರಿಗೆ ಸೂಚನೆಯನ್ನು ಕೊಟ್ಟಿದ್ದಾರೆ. 'ಪರಿಶೀಲನೆಯಲ್ಲಿದೆ' ಎನ್ನುವ ಉತ್ತರವನ್ನು ಈಗ ಕೊಟ್ಟಿರುವ ಕಾರಣವೇನೆಂದರೆ, ಯಾವುದೇ ಒಂದು ಪ್ರಾಜೆಕ್ಟ್ ತೆಗೆದುಕೊಳ್ಳಬೇಕಾದರೂ ಅದಕ್ಕೆ ಡಿ.ಪಿ.ಆರ್., ಮುಂತಾದ ಪ್ರಕ್ರಿಯೆಗಳು ನಡೆಯಬೇಕಾಗುತ್ತದೆ. ಅದರ ಪರಿಶೀಲನೆ ಕಾರ್ಯ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಬಿ.ಡಿ.ಎ. ಯವರಿಗೆ ಸೂಚನೆಯನ್ನು ಕೊಟ್ಟಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮೆಲ್ಲ ಸಮಸ್ಯೆಗಳು ಪರಿಹಾರವಾಗಬೇಕಾದರೆ, ಪಿ.ಆರ್.ಆರ್. ರೋಡ್, ರಿಂಗ್ ರೋಡ್ ಮತ್ತು ಎಲಿವೇಟೆಡ್ ಕಾರಿಡಾರ್ ಆಗಬೇಕಾಗುತ್ತದೆ. ಉತ್ತರ–ದಕ್ಷಿಣ ಎಲಿವೇಟೆಡ್ ಕಾರಿಡಾರ್ ಅದು ಸುಮಾರು 18 ಕಿ.ಮೀ. ಬರುತ್ತದೆ. ಪೂರ್ವ–ಪಶ್ಚಿಮದ ಎಲಿವೇಟೆಡ್ ಕಾರಿಡಾರ್ 19 ಕಿ.ಮೀ. ಬರುತ್ತದೆ. ಪೂರ್ವ–ಪಶ್ಚಿಮ ಎಲಿವೇಟೆಡ್ ಕಾರಿಡಾರ್(2) 27 ಕಿ.ಮೀ. ಬರುತ್ತದೆ. ಸಂಪರ್ಕ ಏರ್ಪಡಿಸುವ ಕಾರಿಡಾರ್ ಸುಮಾರು 09

unedited copy

ಕಿ.ಮೀ.ನಷ್ಟು ಬರುತ್ತದೆ. ಮೊದಲ ಮೂರು ಎಲಿವಿಯೇಡೆಟ್ ಕಾರಿಡಾರ್ ಆರು ಪಥಗಳ ರಸ್ತೆಯಲ್ಲಿ ಬರುತ್ತದೆ. ಪೂರ್ವ–ಉತ್ತರ ಸಂಪರ್ಕ ಕಾರಿಡಾರ್(2) ಮತ್ತು ಪೂರ್ವ– ಪಶ್ಚಿಮ ಸಂಪರ್ಕ ಕಾರಿಡಾರ್ ಇದು ಕಲ್ಯಾಣನಗರದಲ್ಲಿ ಬರುತ್ತದೆ. ಇದಕ್ಕೆ ಡಿ.ಪಿ.ಆರ್.ಗೆ ಟೆಂಡರ್ ಕರೆದಿದ್ದೇವೆ. ಟೆಂಡರ್ ಪ್ರತಿಷ್ಠಿತ ಅಮೆರಿಕನ್ ಕಂಪನಿಯವರ ಪಾಲಾಗಿದೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಸಹ ನಾವು ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಇದು ಆದರೆ, ಮಧ್ಯ ಬೆಂಗಳೂರಿನ ಸಮಸ್ಯೆ ಪರಿಹಾರವಾಗುತ್ತದೆ. ಎಲಿವೇಟೆಡ್ ಕಾರಿಡಾರ್ ಅಥವಾ ಮಾನ್ಯ ಮುಖ್ಯಮಂತ್ರಿಗಳು ಬಿ.ಡಿ.ಎ.ಗೆ ರೆಫರ್ ಮಾಡಿರುವ ಯೋಜನೆ ಈ ಎರಡಲ್ಲಿ ಯಾವುದಾದರೊಂದನ್ನು ಮಾಡಿಯೇ ಮಾಡುತ್ತೇವೆ.

**ಶ್ರೀ ಅಶ್ವತ್ ನಾರಾಯಣಃ–** ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ತಾವು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಈ ಬಗ್ಗೆ ಚರ್ಚೆ ಮಾಡಿರುವುದು ಪತ್ರಿಕೆಗಳಲ್ಲಿ ಬಂದಿತ್ತು. ನಾನು ಸಹ ಅದನ್ನು ಓದಿದ್ದೇನೆ. ಇದು ಆಗುವುದಕ್ಕೆ ಇನ್ನೂ 5–10 ವರ್ಷಗಳ ಕಾಲಾವಕಾಶ ಬೇಕಾಗುತ್ತದೆ. ಮೆಟ್ರೋ ರೀತಿಯಲ್ಲಿ ಎಷ್ಟು ವರ್ಷಕ್ಕೆ ಪೂರ್ಣಗೊಳ್ಳುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಎಲಿವೇಟೆಡ್ ಕಾರಿಡಾರ್ ಬರುವುದಕ್ಕೂ ಮೈಸೂರು ರಸ್ತೆಯಲ್ಲಿ ಸ್ವಲ್ಪ ಸಮಸ್ಯೆಯಿದೆ. ಇದು ತುಂಬಾ ದೂರವೇನೂ ಇಲ್ಲ, ಒಂದು ಕಿಲೋಮೀಟರ್‌ನಷ್ಟು ಆಗುವುದಿಲ್ಲ. ಗಾಳಿ ಆಂಜನೇಯಸ್ವಾಮಿ ದೇವಸ್ಥಾನದಿಂದ ಈಗಾಗಲೇ ಇರುವಂತಹ ಫ್ಲೈಓವರ್‌ನಿಂದ ಸ್ಯಾಟಲೈಟ್ ಬಸ್‌ಸ್ಟ್ಯಾಂಡ್‌ನಿಂದ ಗುಡ್ಡದಹಳ್ಳಿಯವರೆಗೆ ಮಾಡಿದರೆ ಟಿಂಬರ್ ಯಾರ್ಡ್ ಲೇಔಟ್, ಬಾಪೂಜಿನಗರ ಜಂಕ್ಷನ್, ಕ.ವಿ.ಕಾ.ಲೇಔಟ್‌ಗಳಲ್ಲಿ ಆಗುತ್ತಿರುವ ತೊಂದರೆ ನಿವಾರಣೆಯಾಗುತ್ತದೆ. ಈಗ ತಾತ್ಕಾಲಿಕವಾಗಿ ಚಾಲುಕ್ಯ ಸರ್ಕಲ್‌ನಿಂದ ಏನು ಸ್ಟೀಲ್ ಬ್ರಿಡ್ಜ್ ನಿರ್ಮಾಣ ಮಾಡಲಾಗುತ್ತಿದೆ. ಅದರ ಜೊತೆಯಲ್ಲಿಯೇ ಇದನ್ನು ಕೈಗೆತ್ತಿಗೊಂಡರೆ ತ್ವರಿತವಾಗಿ ಕೆಲಸವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

(ಮುಂದುವರಿದಿದೆ)

unedited copy

(48) 03-03-2016 5.20 MD-VS

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಶ್ವಥ್‌ನಾರಾಯಣ (ಮುಂದು):-**

ದಯಮಾಡಿ ಇದರ ಕಡೆಗೆ ಗಮನ ಹರಿಸಬೇಕು ಮತ್ತು ಈ ಸಾರಿ ಬಜೆಟ್‌ನಲ್ಲಿ ಆದರೂ fund allocation ಮಾಡಿದರೆ ಖಂಡಿತವಾಗಿ ಕೆಲಸಗಳಾಗಿ ಇದರಿಂದ ಜನರಿಗೆ ಅನುಕೂಲವಾಗುತ್ತದೆ. ದಯವಿಟ್ಟು ಇದು ಬಜೆಟ್‌ನಲ್ಲಿಯಾದರೂ ಆಗುವ ರೀತಿಯಲ್ಲಿ ಹೇಳಬೇಕೆಂದು ನಾನು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಬಿಡಿಎ ಗೆ ಕಾಗದವನ್ನು ಬರೆದಿದ್ದಾರೆ. ನಾನೇನು ಹೇಳುತ್ತೇನೆಂದರೆ, ಈ elevated corridor ಬರುವಂಥ ಸಂದರ್ಭದಲ್ಲಿ ಇದನ್ನು ಮಾಡಿದರೂ ಸಹ alignment ಸರಿಯಾಗಿ ಆಗಬೇಕು. ಅದನ್ನು ಪರಿಶೀಲನೆ ಮಾಡಬೇಕು. ಬಹುಶಃ ಅದೇನಾದರೂ ವಿಳಂಬವಾದರೆ ಆದಷ್ಟು ಬೇಗನೇ ಇದನ್ನು ತೆಗೆದುಕೊಳ್ಳಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಈ ವಿಚಾರದಲ್ಲಿ ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

**ಉಪ ಸಭಾಪತಿಯವರು:-** ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಮಾನ್ಯ ಗೃಹ ಸಚಿವರು ಈ ದಿನ 5 ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ. ಅವರು ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

*"ಸಭಾಪತಿಯವರಿಗೆ,*

*ಈ ದಿನ ಫ್ರೀಡಂ ಪಾರ್ಕ್‌ನಲ್ಲಿ ರೈತರು ವಿಧಾನ ಸೌಧ ಮುತ್ತಿಗೆ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು ರಾಜ್ಯದ ವಿವಿಧ ಮೂಲೆಗಳಿಂದ ಅಸಂಖ್ಯಾತ ರೈತರು ಬೆಂಗಳೂರಿನಲ್ಲಿ ಜಮಾವಣೆಗೊಂಡಿರುತ್ತಾರೆ. ಈ ಸಂಬಂಧ ಕಾನೂನು ಸುವ್ಯವಸ್ಥೆಯ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಈ ದಿನ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ವಿಧಾನ ಪರಿಷತ್ತಿನ ಕಾರ್ಯಕಲಾಪದ ವಿಷಯಗಳನ್ನು ನಾಳೆಗೆ ಮುಂದೂಡುವಂತೆ ತಮ್ಮಲ್ಲಿ ಈ ಮೂಲಕ ಕೋರುತ್ತೇನೆ."*

unedited copy

ಎಂದು ಮಾನ್ಯ ಗೃಹ ಸಚಿವರು ಒಂದು ಪತ್ರವನ್ನು ಕಳುಹಿಸಿದ್ದಾರೆ. ಆದ್ದರಿಂದ 5 ಪ್ರಶ್ನೆಗಳಿಗೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಕೊಡಿಸಲು ಇವತ್ತಿನ ಬದಲಾಗಿ ಶನಿವಾರದಂದು ತೆಗೆದುಕೊಳ್ಳಲಾಗುವುದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾವು ಸಚಿವರಿಗೆ ಕೇಳಿರುವಂಥ ಪ್ರಶ್ನೆಗಳಿವೆ. ಮಾನ್ಯ ಸಚಿವರೆ ಒಂದು ಪತ್ರವನ್ನು ಬರೆದು ನಾಳೆಯ ದಿವಸ ತೆಗೆದುಕೊಳ್ಳಬೇಕೆಂದು ಹೇಳಿರುವುದರಿಂದ ಇದನ್ನು ನಾಳೆಗೆ ತೆಗೆದುಕೊಳ್ಳಿ.

**ಉಪ ಸಭಾಪತಿಯವರು:–** ನಮ್ಮ ಸಂಪ್ರದಾಯದ ಪ್ರಕಾರ ಇದು ನಾಳೆಯ ಕಾರ್ಯಕಲಾಪದಲ್ಲಿ ಬರುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರೇ ಅವರ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದ ಇದನ್ನು ತಡೆ ಹಿಡಿಯಲಾದ ಪ್ರಶ್ನೆಗಳು ಎಂದು ಮಾಡಿ ಗೃಹ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನಾಳೆಯ ದಿವಸ ತೆಗೆದುಕೊಳ್ಳಿ.

**ಉಪ ಸಭಾಪತಿಯವರು:–** ಆಯಿತು, ನಾಳೆಯ ದಿವಸ ತೆಗೆದುಕೊಳ್ಳೋಣ.

unedited copy

(48) 03-03-2016 5.20 MD-VS

**ಚುಕ್ಕೆ ಪ್ರಶ್ನೆ ಸಂಖ್ಯೆ: 336 ಮತ್ತು 350**

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಸರ್ಕಾರ ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದೆ. ಇದು ಕಾಲ್ಪನಿಕ ವೇತನ ಬಡ್ತಿಯ ಸಮಸ್ಯೆಯಾಗಿದ್ದು, ಇಡೀ ರಾಜ್ಯದಲ್ಲಿಯೇ ಬಹಳ ದೊಡ್ಡ ಸಮಸ್ಯೆಯಾಗಿದೆ. ಬಹುತೇಕ ಅನುದಾನಿತ ಶಿಕ್ಷಣ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ವರ್ಗಕ್ಕೆ ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ನಮ್ಮ ಪ್ರಶ್ನೆ ನೇರವಾಗಿದೆ. ಹಿಂದೆ ವಿಧೇಯಕವನ್ನು ತರುವಂಥ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವರು ಇಲ್ಲಿ ವಾರ್ಷಿಕವಾಗಿ 285 ಕೋಟಿ ರೂಪಾಯಿ ಮಿತಿಗೆ ಒಳಪಟ್ಟು ಈ ಸಮಸ್ಯೆಯನ್ನು ಪರಿಹರಿಸುವುದಾಗಿ ಹೇಳಿರುತ್ತಾರೆ. ಈಗಾಗಲೇ ಮಾನ್ಯ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯ ಸಮಿತಿಯ ಶಿಫಾರಸ್ಸುಗಳು ಬಂದಿವೆ. ನಾನೂ ಸಹ ಆ ಸಮಿತಿಯ ಸದಸ್ಯನಾಗಿದ್ದೆ. ಸಮಿತಿಯ ಶಿಫಾರಸ್ಸುಗಳ ಪ್ರಕಾರ ವಾರ್ಷಿಕವಾಗಿ 351.80 ಕೋಟಿ ರೂಪಾಯಿಯ ಹೊರೆ ಬರುತ್ತದೆಂದು ಈಗಾಗಲೇ ನಾವು ವರದಿಯನ್ನು ಕೊಟ್ಟಿದ್ದೇವೆ. ಸರ್ಕಾರದಿಂದಲೂ ಕೂಡ ವಾರ್ಷಿಕವಾಗಿ 359.86 ಕೋಟಿ ರೂಪಾಯಿಯಷ್ಟು ಹೊರೆ ಬರುತ್ತದೆಂದು ಹೇಳಿದ್ದಾರೆ. ಆದರೆ ನ್ಯಾಯಾಲಯಕ್ಕೆ ವಿವರಗಳನ್ನು ಸಲ್ಲಿಸುವಂಥ ಸಂದರ್ಭದಲ್ಲಿ 5,081 ಕೋಟಿ ರೂಪಾಯಿ ಬೇಕು ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದು ಹೇಗೆ ಎನ್ನುವ ವಿವರಣೆ ಬೇಕು.

ಇನ್ನು ಎರಡನೆಯದಾಗಿ ಸರ್ಕಾರ ಹೇಳಬೇಕಾದರೆ ಇದು ನ್ಯಾಯಾಲಯದಲ್ಲಿದೆ ಎನ್ನುವ ಮಾತನ್ನು ಹೇಳುತ್ತದೆ. ಧಾರವಾಡ ಉಚ್ಚ ನ್ಯಾಯಾಲಯದ ತೀರ್ಪು ಏನು ಬಂದಿದೆ, ಅದರ ಮೇಲೆ ನ್ಯಾಯಾಲಯಕ್ಕೆ ಹೋಗಿರುವವರು ಇವರೇ. ಪರಿಹಾರವನ್ನು ಕೊಡಬೇಕೆನ್ನುವ ಮನಸ್ಸಿದ್ದರೆ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಏನು ಹಾಕಿದ್ದಾರೆ ಅದನ್ನು ವಾಪಸ್ ತೆಗೆದುಕೊಂಡು ಪರಿಹಾರವನ್ನು ಕೊಡಲಿ. ಈ ಎರಡು ವಿಚಾರಗಳಿಗೆ ಸರ್ಕಾರ ಉತ್ತರವನ್ನು ಕೊಟ್ಟರೆ ನಾನು ಮುಂದಿನ ಪ್ರಶ್ನೆಗಳಿಗೆ ಹೋಗುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೆ, ನಾನು ಲಿಖಿತವಾಗಿ ಕೊಟ್ಟಿರತಕ್ಕಂಥ ಉತ್ತರದಲ್ಲಿ ಮಾನ್ಯ ಸದಸ್ಯರು ಕೇಳಿರುವಂಥ ಎಲ್ಲಾ ಪ್ರಶ್ನೆಗಳಿಗೆ ಸಂಪೂರ್ಣವಾದ ಉತ್ತರವನ್ನು ಕೊಟ್ಟಿದ್ದೇನೆ. ಕಾಲ್ಪನಿಕ ವೇತನವನ್ನು ನಿಗದಿ ಪಡಿಸಿರುವುದು 359.86 ಕೋಟಿ ರೂಪಾಯಿಗಲ್ಲ, ಅದು ಒಟ್ಟಾರೆ 5,081 ಕೋಟಿ

unedited copy

ರೂಪಾಯಿ ಆಗುತ್ತದೆ ಎನ್ನುವುದನ್ನು ಲೆಕ್ಕ ಮಾಡಿದ್ದಾರೆ. ಕಾಲ್ಪನಿಕ ವೇತನವನ್ನು ನಿಗದಿ ಪಡಿಸುವುದಕ್ಕೆ ಪ್ರತಿ ವರ್ಷ ಬೇಕಾಗಿರುವ ಹೆಚ್ಚುವರಿ ವೇತನ 359.86 ಕೋಟಿ ರೂಪಾಯಿ, ಬಾಕಿ ವೇತನ 3,083.54 ಕೋಟಿ ರೂಪಾಯಿ. ಪಿಂಚಣಿ ಸೌಲಭ್ಯವನ್ನು ಸಹ ಲೆಕ್ಕ ಹಾಕಿದರೆ 1,637.61 ಕೋಟಿ ರೂಪಾಯಿಯಾಗುತ್ತದೆ. ಅಂದರೆ ಒಟ್ಟು ಸುಮಾರು 5,081 ಕೋಟಿ ರೂಪಾಯಿ ಬೇಕಾಗುತ್ತದೆ. ಈ ಹಣಕಾಸಿನ ಇತಿಮಿತಿಯ ಹಿನ್ನೆಲೆಯಲ್ಲಿ, ಇರುವ ಇತಿಮಿತಿಯ ಹಿನ್ನೆಲೆಯಲ್ಲಿ ಈಗಾಗಲೇ ನಾವು ಇದೇ ಸದನದಲ್ಲಿ ಒಂದು ಕಾಯ್ದೆಯನ್ನು ಸಹ ತಂದು ಅದು ಅನುಮೋದನೆಗೊಂಡು ಜಾರಿಯಲ್ಲಿದೆ. ಅದರ ಜೊತೆಗೆ ಸಿಂಗಲ್ ಬೆಂಚ್ ಕೊಟ್ಟಂಥ ಜಡ್ಜ್‌ಮೆಂಟ್‌ಗೆ ಡಿವಿಜನ್ ಬೆಂಚ್‌ನಲ್ಲಿ ತಡೆಯಾಜ್ಞೆಯಾಗಿದೆ. ನಾವೇ ಹೋಗಿದ್ದೇವೆ. 5,000 ಕೋಟಿ ರೂಪಾಯಿ ವಿಚಾರವಾಗಿ ಹೇಳುವುದಾದರೆ, ನಾವು ಕಾಯ್ದೆಯನ್ನು ಮಾಡಿದ್ದು ಸಹ ಅದೇ ಉದ್ದೇಶಕ್ಕಾಗಿಯೇ. ಕಾಯ್ದೆಯನ್ನು ಜಾರಿ ಮಾಡಿ ಅದು ಸಹ ಈಗ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯಾಗಿರುವುದರಿಂದ.... ಮಾನ್ಯ ಸದಸ್ಯರ ಕಾತುರತೆ ನಮಗೆ ಅರ್ಥವಾಗುತ್ತದೆ. ಆದರೆ ಈ ರೀತಿಯಾಗಿ ಒಂದು ಕಡೆ ಕಾನೂನು ಆಗಿದೆ, ಇನ್ನೊಂದು ಕಡೆ ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ. ಅದು ಇತ್ಯರ್ಥವಾಗುವವರೆವಿಗೂ ಸಹ ಕಾಯೋಣ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಇಲ್ಲಿ ಬಹಳ ಸ್ಪಷ್ಟವಾಗಿದೆ. ಈ ಕಾನೂನನ್ನು ತರುವಂಥ ಸಂದರ್ಭದಲ್ಲಿ ತಾವು ಸಹ ಇದ್ದೀರಿ ಮತ್ತು ಇಲ್ಲಿರುವಂಥ ಶಿಕ್ಷಕ ಮತ್ತು ಪದವೀಧರರ ಕ್ಷೇತ್ರದ ಎಲ್ಲಾ ಸದಸ್ಯರುಗಳು, ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲರೂ ಸೇರಿ ನಾವು ಚರ್ಚೆ ಮಾಡಿರತಕ್ಕಂಥಾದ್ದು. ಕಾನೂನನ್ನು ತಕ್ಷಣಕ್ಕೆ ತರಲು ಏನು ಕಾರಣ ಎಂಬುದಕ್ಕೆ ಅದರ ಹಿನ್ನೆಲೆ ತಮಗೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಫೆಬ್ರವರಿ 18ನೇ ತಾರೀಖಿನಂದು ಉಚ್ಚ ನ್ಯಾಯಾಲಯದಲ್ಲಿ contempt proceedings ಆಗುವುದಿತ್ತು. ಅದಕ್ಕೆ ಸರ್ಕಾರ ಈ ಸಮಸ್ಯೆ ಪರಿಹರಿಸಲಿಕ್ಕೆ ನಾವು ತಯಾರಿದ್ದೇವೆಂದು ಹೇಳಿತು. 285 ಕೋಟಿ ರೂಪಾಯಿಯವರೆವಿಗೂ ಕೊಡುವುದಾದರೆ ಕೊಡುತ್ತೇವೆಂದು ಹೇಳಿದರು. ಸರ್ಕಾರ ಹೇಳಿರುವುದಕ್ಕೂ ನಾವು ಹೇಳಿರುವುದಕ್ಕೂ ಬಹಳ ವ್ಯತ್ಯಾಸವಿಲ್ಲ. ಸರ್ಕಾರ ಹೇಳಿರುವುದು 285 ಕೋಟಿ ರೂಪಾಯಿ, ಈಗ ಬೇಕಾಗಿರುವುದು 359 ಕೋಟಿ ರೂಪಾಯಿ. ಸರ್ಕಾರ ಹಿಂಬಾಕಿಯನ್ನು ಕೊಡುವ ಅಗತ್ಯವಿಲ್ಲವೆಂದು ಆ ದಿನವೇ ಎಲ್ಲಾ ಶಿಕ್ಷಕ ಸಂಘಟನೆಯವರು ಬಂದು ಬರೆದು ಕೊಟ್ಟಿದ್ದಾರೆ. ಎಲ್ಲಾ ಶಿಕ್ಷಕ ಸಂಘಟನೆಯವರು ನಮಗೆ ಹಿಂಬಾಕಿ

unedited copy

ಬೇಕಿಲ್ಲ, prospective effect ಆಗಿ ಕೊಡುವಂಥಾದ್ದು ಮಾಡಿ ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಇಷ್ಟೇ. ನಿಮ್ಮ ನೀತಿ ಏನು? 359.86 ಕೋಟಿ ರೂಪಾಯಿ ಆದರೆ ಸರ್ಕಾರ ಇದನ್ನು ಪರಿಹರಿಸಲಿಕ್ಕೆ ಸಿದ್ಧರಿದ್ದಾರೆಯೇ? Prospective ಆಗಿ ಈ ಸಮಸ್ಯೆಯನ್ನು ಪರಿಹರಿಸುತ್ತೇವೆಂದು ಒಂದು ಅಫಿಡವಿಟ್‌ನ್ನು ಹಾಕಿ ಇದನ್ನು ವಾಪಸ್ ತೆಗೆದುಕೊಂಡರೆ ಇದರಲ್ಲಿ ಯಾವ ಪ್ರಶ್ನೆಯೂ ಇಲ್ಲ. 356 ಕೋಟಿ ರೂಪಾಯಿ ಒಂದು ವರ್ಷಕ್ಕೆ ಬರುತ್ತದೆ. ಶಿಕ್ಷಣ ಕ್ಷೇತ್ರಕ್ಕೆ ಸುಮಾರು 20,000 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇರತಕ್ಕಂಥಾದ್ದರಲ್ಲಿ 356 ಕೋಟಿ ರೂಪಾಯಿ ಯಾವ ಲೆಕ್ಕ? ದಯಮಾಡಿ ಸರ್ಕಾರ ಈ 356 ಕೋಟಿ ರೂಪಾಯಿಯನ್ನು ಕೊಡುತ್ತದೆಯೇ? ಸರ್ಕಾರ ರಿಟ್ ಪಿಟಿಶನ್ ಅನ್ನು ವಾಪಸ್ ತೆಗೆದುಕೊಳ್ಳಲಿ ಎನ್ನುವುದು ನನ್ನ ಒಂದು ಸಲಹೆಯಾಗಿದೆ.

**ಶ್ರೀ ಬಸವರಾಜ ಹೊರಟ್ಟಿ :–** ಮಾನ್ಯ ಸಭಾಪತಿಯವರೆ, ಬಾಕಿ ವೇತನವನ್ನು ಕೇಳುವ ಹಾಗಿಲ್ಲವೆಂದು ನಾವು ಹಿಂದೆ ಸಭೆಯಲ್ಲಿ ಹೇಳಿದ್ದೇವೆ. ಇನ್ನು ಪಿಂಚಣಿ ಸೌಲಭ್ಯದ ಬಗ್ಗೆ ಹೇಳುವುದಾದರೆ, it is a continuous process. ನಿವೃತ್ತಿಯಾದವರಿಗೆ ಸರ್ಕಾರ ಪಿಂಚಣಿಯನ್ನು ಕೊಡುತ್ತಾ ಹೋಗುತ್ತದೆ. ಇವರೇನು ಹೆಚ್ಚಿಗೆ ಕೊಡಬೇಕಾಗಿಲ್ಲ. ಇವೆರಡನ್ನು ಸಹ ತೆಗೆದರೆ 2,008 ಕೋಟಿ ರೂಪಾಯಿ ಆಗುತ್ತದೆ. ಅಂದರೆ 5,081 ಕೋಟಿ ರೂಪಾಯಿಯಲ್ಲಿ ಸುಮಾರು 3,083 ಕೋಟಿ ರೂಪಾಯಿ ತೆಗೆದರೆ ಸುಮಾರು 2,008 ಕೋಟಿ ರೂಪಾಯಿ. 2008 ಕೋಟಿ ರೂಪಾಯಿಯಲ್ಲಿ 1,637 ಕೋಟಿ ರೂಪಾಯಿ ತೆಗೆದರೆ ಸುಮಾರು 371 ಕೋಟಿ ರೂಪಾಯಿ ಉಳಿಯುತ್ತದೆ. ನಾವು ಮಾಡಿದ್ದು ಅಷ್ಟೇ ಇದೆ. ಸರ್ಕಾರದವರು ನ್ಯಾಯಾಲಯದ ಬಗ್ಗೆ ಹೇಳುತ್ತಾರೆ. ಸರ್ಕಾರ ಹಿಂದೆಲ್ಲಾ ಹಣವನ್ನು ಕೊಟ್ಟಿದೆ. ನ್ಯಾಯಾಲಯಕ್ಕೆ ಹೋದಾಗ ಕೊಡಬೇಕೆಂದು ಆಗಿದೆ. ಉಚ್ಛ ನ್ಯಾಯಾಲಯದಲ್ಲಿ, ಸರ್ವೋಚ್ಛ ನ್ಯಾಯಾಲಯದಲ್ಲಿ ಆಗಿದೆ. ಏಕೆ ಸುಮ್ಮನೆ Special Leave Petition ಹಾಕಿ ಮತ್ತೊಂದು ಮಾಡುತ್ತೀರಿ. ಸರ್ಕಾರ ಸ್ಪಷ್ಟವಾಗಿ ಹೇಳಲಿ. ಇದು ಹಳೆಯ ಪ್ರಕರಣ ಹೊಸ ಪ್ರಕರಣವಲ್ಲ. ಹಿಂದೆಲ್ಲಾ ಸರ್ಕಾರಗಳು ಏಕೆ ಮಾಡಲಿಲ್ಲ? ನೀವು ವಿಧೇಯಕವನ್ನು ಏಕೆ ತರಲಿಲ್ಲ, ನೀವೇಕೆ ವಿಧೇಯಕವನ್ನು ತಂದಿರಿ ಎಂದು ಕೇಳುತ್ತಾರೆ. ಸರ್ಕಾರ ಬೇರೆ ಬೇರೆ ಉದ್ದೇಶಗಳಿಗೋಸ್ಕರ ಇಷ್ಟೆಲ್ಲಾ ಹಣವನ್ನು ಕೊಡುತ್ತದೆ. ಸಾವಿರಾರು ಕೋಟಿ ರೂಪಾಯಿಯ ಸಾಲವನ್ನು ಮನ್ನಾ ಮಾಡುತ್ತದೆ. ಶಿಕ್ಷಕ ಸಂಘಟನೆಯವರು ಬಾಕಿಯನ್ನು ಕೇಳುವುದಿಲ್ಲವೆಂದು ಬರೆದು ಕೊಟ್ಟಿದ್ದಾರೆ. ಇನ್ನು ಪಿಂಚಣಿಯ ಲೆಕ್ಕದ ಬಗ್ಗೆ ಹೇಳುವುದಾದರೆ. ಮುಂದೆ ಅವರು ಯಾವಾಗ

ಸಾಯುತ್ತಾರೆಂದು ಸರ್ಕಾರದವರು ಲೆಕ್ಕಾ ಹಾಕಿದ್ದಾರೆ. ಒಬ್ಬ ಸರ್ಕಾರಿ ನೌಕರ ನಿವೃತ್ತಿಯನ್ನು ಹೊಂದಿದ ನಂತರ ಅವನು ಯಾವಾಗ ತೀರಿಕೊಳ್ಳುತ್ತಾನೆಂದು ತಿಳಿಯದೇ ಇವರು ಪಿಂಚಣಿಯನ್ನು ಹೇಗೆ ಲೆಕ್ಕಾ ಮಾಡುತ್ತಾರೆ? ಇವರಿಗೆ ಅಂಕಿ–ಅಂಶಗಳನ್ನು ನೀಡಿದ ಅಧಿಕಾರಿಗಳೇ ನಮ್ಮ ಸಮಿತಿಗೂ ಬಂದು ವರದಿಯನ್ನು ಕೊಟ್ಟಿದ್ದಾರೆ. ಈಗ ಅದೇ ಅಧಿಕಾರಿಗಳು ಸರ್ಕಾರಕ್ಕೂ ಸಹ ಮಾಹಿತಿಯನ್ನು ಕೊಟ್ಟಿದ್ದಾರೆ. ಇದರಲ್ಲಿ ಯಾವುದು ಸತ್ಯ? ಇದೇ ಆರ್ಥಿಕ ಇಲಾಖೆಯವರು, ಇದೇ ಶಿಕ್ಷಣ ಇಲಾಖೆಯವರು ಬಂದು ನಮಗೆ ಮಾಹಿತಿಯನ್ನು ಕೊಟ್ಟಿರುವುದು ಇಷ್ಟು. 371.84 ಕೋಟಿ ರೂಪಾಯಿ ಮಾಡಿದವರು ಇವರ ಮಾತನ್ನು ಕೇಳಿಯೇ ಮಾಡಿದ್ದೇವೆ. ಈಗ ಸರ್ಕಾರ ಉತ್ತರವನ್ನು ಕೊಡಲು ಸಹ ಅದೇ ಅಧಿಕಾರಿಗಳೇ ವಿವರಗಳನ್ನು ನೀಡಿದ್ದಾರೆ. ಇದರಲ್ಲಿ ಯಾವುದು ಸರಿ? ಉತ್ತರವನ್ನು ಕೊಡಬೇಕಾದರೆ ಮಾನ್ಯ ಸಚಿವರು ವಿಚಾರ ಮಾಡಲಿ. ನಮ್ಮ ಸಮಿತಿಗೆ ಅಧಿಕಾರಿಗಳನ್ನು ಸುಮಾರು 10 ಸಾರಿ ಸಭೆಯನ್ನು ಕರೆದಿದ್ದೇವೆ. ಆರ್ಥಿಕ ಇಲಾಖೆಯವರು, ಶಿಕ್ಷಣ ಇಲಾಖೆಯವರು ಎಲ್ಲರೂ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಈಗ ಸರ್ಕಾರಕ್ಕೆ ಉತ್ತರವನ್ನು ಕೊಡುವವರು ಸಹ ಇವರೇ. ಹೀಗಾದರೆ ನಾವು ಯಾರನ್ನು ನಂಬಬೇಕು. ಇದು ಅವರ ತಪ್ಪೋ ಅಥವಾ ನಮ್ಮ ತಪ್ಪೋ. ನಮಗೊಂದು ರೀತಿ ಸರ್ಕಾರಕ್ಕೆ ಒಂದು ರೀತಿ ಉತ್ತರವನ್ನು ಕೊಟ್ಟಿರುವುದು ಸರಿಯಲ್ಲ. ಹಾಗಾಗಿ ದಯಮಾಡಿ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಸುಮ್ಮನೆ ಇದನ್ನು ಬಹಳಷ್ಟು ಎಳೆದುಕೊಂಡು ಹೋಗುವುದು ಸರಿಯಲ್ಲ. ಬಹಳಷ್ಟು ಜನರು ನಿವೃತ್ತಿಯನ್ನು ಹೊಂದಿದ್ದಾರೆ. ಅವರಿಗೆ 4,000, 5,000 ರೂಪಾಯಿ ಕಡಿತವಾಗಿದೆ. ಇದು ಸರಿಯಾದುದಲ್ಲ. ಅದಕ್ಕೆ ನಾನೇನು ಹೇಳುತ್ತೇನೆಂದರೆ, ತಪ್ಪು ಮಾಹಿತಿಯನ್ನು ಪಡೆದುಕೊಳ್ಳುವುದು ಬೇಡ. ಈಗ ನಾವೇನು ವರದಿಯನ್ನು ಕೊಟ್ಟಿದ್ದೇವೆಯೋ ಆ ವರದಿಯನ್ನು ಸರ್ಕಾರ ಒಪ್ಪಿಕೊಂಡರೆ ನಮಗೆ ಅಷ್ಟೇ ಸಾಕು. ಇವರ 5,000 ಕೋಟಿ ರೂಪಾಯಿ ಬೇಡ. ಅಷ್ಟರಲ್ಲಿಯೇ ನಾವು ಮಾಡುತ್ತೇವೆ. ಸರ್ಕಾರ 285 ಕೋಟಿ ರೂಪಾಯಿಗಳಿಗೆ ಒಪ್ಪಿಕೊಂಡಿದೆ. ಮುಖ್ಯಮಂತ್ರಿಗಳು ಒಂದು ಸಾರಿ ಆಯಿತು 300 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು. ನಾವೆಲ್ಲರೂ ಮನವಿಯನ್ನು ಮಾಡಿಕೊಂಡ ನಂತರ 351.81 ಕೋಟಿ ರೂಪಾಯಿ ಆಗಿದೆ. ಇನ್ನೊಂದು 50 ಕೋಟಿ ರೂಪಾಯಿಗಳನ್ನು ಕೊಡಿ. ಎಷ್ಟೆಷ್ಟೋ ಕೋಟಿ ರೂಪಾಯಿ ಧಾನವನ್ನು ಮಾಡುತ್ತಾರೆ. ಸರ್ಕಾರಕ್ಕೆ ಇದೊಂದನ್ನು ಮಾಡುವುದಕ್ಕಾಗುವುದಿಲ್ಲವೇ?

(ಮುಂದು)

unedited copy

(ಪೀಠದಲ್ಲಿ ಉಪಸಭಾಪತಿಗಳ ಉಪಸ್ಥಿತಿ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:-ಮಾನ್ಯ ಸಭಾಪತಿಗಳೆ, ಸುಪ್ರೀಂ ಕೋರ್ಟ್ ಆದೇಶ pay continue and consequential benefits ಎಂದು ಹೇಳುತ್ತದೆ. ತುಂಬಾ ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಅದು ನ್ಯಾಯವಾಗಿದೆ ಎಂದು ಕೋರ್ಟ್‌ಗಳಿಗೆ ಮನವರಿಕೆಯಾಗಿದೆ. They are admitted to Grant-in-Aid services and hence they are asking for continuation of pay and consequential benefits. ನೀವು ಇದಕ್ಕೆ ಪಿಂಚಣಿ ಲೆಕ್ಕ ಹಾಕಿ, ಅರಿಯರ್ಸ್ ಲೆಕ್ಕ ಹಾಕಿ ರೂ. 5 ಸಾವಿರ ಕೋಟಿ ಎಂದು ತೋರಿಸಿದರೆ ಯಾರಿಗಾದರೂ ಗಾಬರಿ ಆಗುತ್ತದೆ. ನಾವು ಆವತ್ತಿನಿಂದ ಕೇಳುತ್ತಿರುವುದೇನು . . . ರೂ. 285 ಕೋಟಿ ಎಂದು ಹೇಳಿದ್ದನ್ನು ಮಾನ್ಯ ಮಂತ್ರಿಗಳು ಸದನದಲ್ಲಿ ಒಪ್ಪಿಕೊಂಡಿದ್ದರು, ಮಾನ್ಯ ಮುಖ್ಯಮಂತ್ರಿಗಳು ಇನ್ನೂ 20-30 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದ್ದರು. ಸಮಿತಿ ರಚನೆಯಾಯಿತು. ರೂ. 351 ಕೋಟಿಗೆ ಆಗುತ್ತದೆ ಎಂದು ಹೇಳಿದರು. ನಾವೆಲ್ಲ ಅವರ ಪರವಾಗಿ ನಿಮ್ಮ ಹತ್ತಿರ, ಒಂದೇ ಸಲಕ್ಕೆ ಇವೆಲ್ಲವನ್ನೂ ಸೆಟ್ಲ್ ಮಾಡಿ ಎಂದು ಮನವಿ ಮಾಡುತ್ತೇವೆ. ಅವರ pay continue and consequential benefits ಏನಿದೆ ಅದನ್ನು ಮುಂದಿನವರಿಗೆ ಕೊಡಬೇಡಿ, ಆದರೆ ಈಗ ಯಾರೆಲ್ಲ ಇದ್ದಾರೆ ಅವರಿಗೆ ಮಾತ್ರ ಕೇಳುತ್ತಿರುವಂಥದ್ದು. ರೂ. 3083 ಕೋಟಿಗಳನ್ನು ಬಾಕಿ ಎಂದು ತೋರಿಸಿದರೆ, ರೂ. 1637 ಕೋಟಿ ಪಿಂಚಣಿ ಎಂದು ತೋರಿಸಿದರೆ ಗಾಬರಿ ಆಗುತ್ತದೆ. ಇದನ್ನು ತೋರಿಸುವ ಅವಶ್ಯಕತೆ ಇಲ್ಲ. ನಾಳೆ 7ನೇ ವೇತನ ಆಯೋಗ ರಚನೆಯಾದರೆ 10 ವರ್ಷದ್ದು ಲೆಕ್ಕ ಹಾಕುತ್ತಾರೆಯೇ ಅಥವಾ ಒಂದು ವರ್ಷದ್ದು ಲೆಕ್ಕ ಹಾಕುತ್ತಾರೆಯೇ? ಇಲ್ಲೂ ಕೂಡ ಒಂದು ವರ್ಷದ್ದಷ್ಟೇ ರೂ. 351 ಕೋಟಿ ಆಗುತ್ತಿದೆ. ದಯವಿಟ್ಟು ದೊಡ್ಡ ಮನಸ್ಸು ಮಾಡಿ ಶಿಕ್ಷಕರ ಹಲವಾರು ವರ್ಷಗಳ ಸಮಸ್ಯೆಗೆ ಪರಿಹಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು**:-ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು. ನನಗೆ ಒಂದು ಆಶ್ಚರ್ಯವಾಗುತ್ತಿದೆ, ಮಾನ್ಯ ಸಚಿವರು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಹೊರಟ್ಟಿಯವರು ಸಲ್ಲಿಸಿರುವ ವರದಿಯಲ್ಲಿ ನಾನೂ ಕೂಡ ಒಬ್ಬ ಸಿಗ್ನೇಟರಿ ಆಗಿದ್ದೇನೆ, ಆ ಸಮಿತಿಯ ಸದಸ್ಯನಾಗಿದ್ದೇನೆ. ನಿಖರವಾದ ಅಧ್ಯಯನವನ್ನು ಮಾಡಿ, ಅದರಲ್ಲಿ ಎಲ್ಲಾ ವರದಿಗಳನ್ನು . . . ತಮಗೇನು ಇವತ್ತು

unedited copy

ಅಧಿಕಾರಿಗಳು ವರದಿ ಒಪ್ಪಿಸಿದ್ದಾರೆ, ಆ ವರದಿಯ ದಾಖಲೆಗಳು ನಮ್ಮ ಹತ್ತಿರವೂ ಇದೆ. ಈ ಕುರಿತು ಮೊದಲು ಅಧಿಕಾರಿಗಳು ತೋರಿಸಿದ ವರದಿಯಲ್ಲಿ ರೂ. 10 ಸಾವಿರ ಕೋಟಿ ಎಂದು ತೋರಿಸಿದರು. ಮಾನ್ಯ ಕಾರ್ಣಿಕ್‌ರವರು ಸರಿಯಾಗಿ ಸಬ್‌ಮಿಷನ್ ಮಾಡಿದರು. ಇಲ್ಲಿ correct submission ತೆಗೆದುಕೊಂಡಿದ್ದರೆ ನಿಮಗೆ ರೂ. 10 ಸಾವಿರ ಕೋಟಿ ಆಗುತ್ತಿತ್ತು. ಆದರೆ ಅವರ ಬೇಡಿಕೆ ಇರುವುದು pay continue and consequential benefits. ಅದಕ್ಕೆ ರೂ. 351 ಕೋಟಿ ಆಗುತ್ತದೆ. ತಾವು ಸುಮಾರು ರೂ. 5 ಸಾವಿರ ಕೋಟಿ ಎಂದು ತೋರಿಸುತ್ತಿದ್ದೀರಿ. ಅದು ಹೇಗೆ ವರದಿ ಬಂತೋ ನಮಗೂ ಗೊತ್ತಾಗುತ್ತಿಲ್ಲ. They are demanding only fitment and continuation of pay. We are really surprised to know the statement made by the Hon.Minister today. We have already submitted before the Government on 15/4/2015 that it incurs an expenditure of Rs.351 crores. ಮಾನ್ಯ ಮುಖ್ಯಮಂತ್ರಿಗಳೂ ಸಹ ರೂ. 300 ಕೋಟಿಯ ತನಕ ಕೊಡುತ್ತೇವೆ ಎಂದು ಸದನದಲ್ಲಿ ಹೇಳಿದ್ದಾರೆ. ಹಾಗಾಗಿ ಮಾನ್ಯ ಮಂತ್ರಿಗಳಲ್ಲಿ, ಈ ಬೇಡಿಕೆ ಬಹಳ ಸೂಕ್ತವಾಗಿದೆ, ನ್ಯಾಯಬದ್ಧವಾಗಿದೆ, ಸುಪ್ರೀಂ ಕೋರ್ಟ್‌ನ ಆದೇಶವನ್ನು ಪಾಲನೆ ಮಾಡಬೇಕಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು 2014ರಲ್ಲಿ ಕಾನೂನು ತಂದಾಗ ಸೆಕ್ಷನ್ 23ಕ್ಕೆ ಸಂಬಂಧಪಟ್ಟಂತೆ ವ್ಯಾಲಿಡಿಟಿಯನ್ನು ಛಾಲೆಂಜ್ ಮಾಡಿದರು. ಹಾಗಾಗಿ struck down ಮಾಡಿದ ಮೇಲೆ ಕೊಡಲೇ ಬೇಕಾಗುತ್ತದೆ. ಹಾಗಾಗಿ ನಮ್ಮ ಮನವಿಯನ್ನು ಸ್ವೀಕರಿಸಬೇಕು ಮತ್ತು ಮೊತ್ತ ಏನು ರೂ. 351 ಕೋಟಿ ಆಗುತ್ತದೆ ಅದನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಪ್ರೊ:ಎಸ್.ವಿ.ಸಂಕನೂರ್:–** ಮಾನ್ಯ ಸಭಾಪತಿಗಳೆ, ಇದೇ ರೀತಿಯ ಸಮಸ್ಯೆ ಆಂಧ್ರಪ್ರದೇಶದಲ್ಲಿದ್ದಾಗ ಆ ಸರ್ಕಾರದವರು 2000ನೇ ಇಸವಿಯಲ್ಲಿ ಒಂದು ವಿಧೇಯಕವನ್ನು ತಂದರು. ಆಗ ಅದನ್ನು 1980ರಿಂದ retrospective ಆಗಿ ತಂದರು. ಅದನ್ನು ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದಾಗ, ಯಾವುದೇ ವಿಧೇಯಕವನ್ನು ಯಾವಾಗ ಮಂಡಿಸುತ್ತಾರೋ ಆವತ್ತಿನಿಂದ prospective ಆಗಿ ಜಾರಿಗೆ ತರಬೇಕೆಂದು ಕೋರ್ಟ್ ಆದೇಶ ಕೊಟ್ಟಿದೆ. ಆಂಧ್ರಪ್ರದೇಶ ಸರ್ಕಾರದವರು ಅಲ್ಲಿನ ಶಿಕ್ಷಕರ ಸಮಸ್ಯೆಯನ್ನು ಅರಿತುಕೊಂಡು ಯಾವತ್ತು ವಿಧೇಯಕವನ್ನು ತಂದು ಪಾಸ್ ಮಾಡಿದರೋ ಆವತ್ತಿನಿಂದ ಜಾರಿ ಮಾಡಿದ್ದಾರೆ.

unedited copy

ಅನುದಾನರಹಿತ ಅವಧಿಯನ್ನು ಪರಿಗಣಿಸಿ ಎಲ್ಲಾ ಸವಲತ್ತುಗಳನ್ನು ಕೊಟ್ಟಿದ್ದಾರೆ. ಆಂಧ್ರಪ್ರದೇಶ ಸರ್ಕಾರದವರು ಶಿಕ್ಷಕರಿಗೆ ಯಾವರೀತಿ ಸೌಲಭ್ಯಗಳನ್ನು ಕೊಟ್ಟಿದ್ದಾರೋ ಅದೇರೀತಿ ಸೌಲಭ್ಯಗಳನ್ನು ಸರ್ಕಾರ ಈ ಶಿಕ್ಷಕರಿಗೆ ಕೊಡಬೇಕು. ಇದು 26 ವರ್ಷಗಳ ಸಮಸ್ಯೆಯಾಗಿದೆ. ದಯವಿಟ್ಟು ಸರ್ಕಾರ ಪರಿಶೀಲಿಸಬೇಕು.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಗಳೆ, ನನ್ನ ಈ ಪ್ರಶ್ನೆ ಚುಕ್ಕೆ ಗುರುತಿನ ಪ್ರಶ್ನೆಯಾಗಿದೆ. ನನಗೆ ಮಾತನಾಡುವುದಕ್ಕೆ ಒಂದು ಅವಕಾಶ ಕೊಡಿ.

**ಶ್ರೀ ಎಸ್.ಆರ್.ಪಾಟೀಲ್:–**ಮಾನ್ಯ ಸಭಾಪತಿಗಳೆ, ಈ ರೀತಿ ಮಾತನಾಡುವುದಾದರೆ ಇದನ್ನು ಅರ್ಧ ಗಂಟೆಗೆ ಕನ್‌ವರ್ಟ್ ಮಾಡಿಬಿಡಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–**ಮಾನ್ಯ ಸಭಾಪತಿಗಳೆ, ರೂ. 285 ಕೋಟಿ ಕೊಡುತ್ತೇವೆ ಎಂದು ಸದನದಲ್ಲಿ ಒಪ್ಪಿಕೊಂಡಂಥ ಸರ್ಕಾರ ಇದು ಕೋರ್ಟ್‌ನಲ್ಲಿ ಸ್ಟೇ ಇದೆ ಎಂದು ಹೇಳಿದರೆ ಇದರಿಂದ ನಮ್ಮ ಸದನಕ್ಕೆ ಅಗೌರವವಾಗುತ್ತದೆ. ಶಿಕ್ಷಕರು ಗುಣಮಟ್ಟದ ಶಿಕ್ಷಣವನ್ನು ಕೊಡಬೇಕಾದರೆ ಅವರಿಗೆ ಮೂಲಭೂತವಾಗಿ ಸಿಗಬೇಕಾದ ವೇತನ ಪರಿಷ್ಕರಣೆಯನ್ನು ಮಾಡಿ ಕೊಡಬೇಕು ಎಂದು ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:–**ಮಾನ್ಯ ಸಭಾಪತಿಗಳೆ ಈ ರೂ. 285 ಕೋಟಿಗಳಿಗೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡುತ್ತೇವೆ ಎಂದು ಹಿಂದಿನ ಸಚಿವರು ಹೇಳಿದ್ದಾರೆ. ಆದರೆ ಅದು ಅಷ್ಟಕ್ಕೆ ನಿಲ್ಲುತ್ತದೆಯೇ? ' Back wages and pensionary benefits ಏನಿದೆ, ಅವುಗಳನ್ನು ಕೇಳುವುದಿಲ್ಲ ಎಂದು ತಿಳಿದುಕೊಳ್ಳುವ ಹಾಗೆಯೇ ಇಲ್ಲ. ನೀವು ಏನೇ ಮಾಡಿದರೂ ಕೂಡ . . .ಈಗ ನಾವು ಬಹಳ ದೂರ ಹೋಗಿದ್ದೇವೆ. ಲೆಜಿಸ್ಲೇಷನ್ ತಂದಾಗಿದೆ. ಕೋರ್ಟ್‌ನಲ್ಲೂ ಚಾಲೆಂಜ್ ಮಾಡಿದ್ದೇವೆ, ಅಲ್ಲೂ ಸ್ಟೇ ಇದೆ. ಇದು ಕೋರ್ಟ್‌ನಲ್ಲಿ ಇತ್ಯರ್ಥ ಆಗುವವರೆಗೆ ಕಾದು ನಂತರ ತೀರ್ಮಾನಕ್ಕೆ ಬರುವುದು ಒಳ್ಳೆಯದು.

**ಶ್ರೀ ಅರುಣ ಷಹಾಪುರ:–** ಮಾನ್ಯ ಸಭಾಪತಿಗಳೆ, ಇಷ್ಟೂ ಜನ ಸದಸ್ಯರು ಮಾತನಾಡಿದ್ದರೂ ಅದಕ್ಕೆ ಕೆಲವೇ ಸಾಲುಗಳಲ್ಲಿ ಉತ್ತರ ಕೊಟ್ಟು ಸುಮ್ಮನಾಗಿಬಿಟ್ಟರು. ಸರ್ಕಾರ ಒಂದು ಈ ಒಂದು ಪ್ರಯತ್ನ ಮಾಡಲಿ.

unedited copy

ಕೋರ್ಟ್‌ನಲ್ಲೇ ಬೇಕಾದರೆ 'Compromise Petition' ರೀತಿಯಲ್ಲಿ ಒಂದು ಅಫಿಡೆವಿಟ್ ಹಾಕಲಿ. ಆಂಧ್ರಪ್ರದೇಶದ ಮಾಹಿತಿಯನ್ನು ಅಧಿಕಾರಿಗಳಿಂದ ತರಿಸಿಕೊಳ್ಳಲಿ. ಸುಮಾರು 25 ವರ್ಷಗಳಿಂದ ಕಾಡುತ್ತಿರುವ ಸಮಸ್ಯೆಯನ್ನು ಬಗೆಹರಿಸುವ ಅವಕಾಶ ನಿಮ್ಮ ಕೈಯಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳೇ ರೂ. 300 ಕೋಟಿ ಕೊಡುತ್ತೇನೆ ಎಂದು ಹೇಳುವಾಗ ತಾವು ಮಂತ್ರಿಯಾಗಿ ಇನ್ನು ರೂ. 60 ಕೋಟಿಗೆ ಮಾತ್ರ ಪ್ರಯತ್ನ ಪಡಬೇಕಿದೆ. ಆಂಧ್ರಪ್ರದೇಶದಿಂದ ಮಾಹಿತಿ ತರಿಸಿಕೊಂಡು ಅದೇರೀತಿಯ compromising petition ಕೋರ್ಟಿಗೆ ಹಾಕೋಣ. ಆ ನಂತರ ಈ ಎಲ್ಲಾ ಸಂಗತಿಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಮನಸ್ಸು ಮಾಡಬೇಕು.

**ಉಪಸಭಾಪತಿಗಳು:–** ಮಾನ್ಯ ಸಚಿವರೆ ತಾವು ಹೊಸದಾಗಿ ಈ ಖಾತೆ ವಹಿಸಿಕೊಂಡಿದ್ದೀರಿ. ಹಿಂದೆ ಇದ್ದ ಉನ್ನತ ಶಿಕ್ಷಣ ಸಚಿವರು ಇದೇ ಸದನದಲ್ಲಿ ಈ ವಿಷಯಕ್ಕೆ ಸೀಮಿತವಾಗಿ ರೂ. 285 ಕೋಟಿಗಳನ್ನು ಕೊಡುತ್ತೇವೆ ಎಂದು ತಾತ್ವಿಕವಾಗಿ ಒಪ್ಪಿಗೆ ಸೂಚಿಸಿದ್ದರು. ಆ ಹಿನ್ನೆಲೆಯಲ್ಲಿ ನಾವೂ ಕೂಡ ಈ ಸದನದಲ್ಲಿ ಆ ವಿಧೇಯಕಕ್ಕೆ ಒಪ್ಪಿಗೆ ಕೊಟ್ಟೆವು. ಆದರೆ ಈ ದಿನ; ಕೇವಲ ರೂ. 351 ಕೋಟಿ ಇದ್ದು, ಈ ನಿಟ್ಟಿನಲ್ಲಿ ಅಧಿಕಾರಿಗಳು ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಕೇವಲ ರೂ. 351 ಕೋಟಿಗಳನ್ನು ವಾರ್ಷಿಕವಾಗಿ ಕೊಟ್ಟರೆ ಇನ್ನಾವುದೇ ಬೇಬಾಕಿಗಳನ್ನು ನಾವು ಕೇಳುವುದಿಲ್ಲ ಎಂದು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವಂತಹ ಮತ್ತು ಯಾವುದೇ ಸವಲತ್ತುಗಳಿಲ್ಲದೇ ಇರುವಂತಹ, ತೊಂದರೆ ಅನುಭವಿಸುತ್ತಿರುವಂತಹ ಶಿಕ್ಷಕ ಬಂಧುಗಳು ಹೇಳಿದ್ದಾರೆ. ನಾವು ಈ ನಿಟ್ಟಿನಲ್ಲಿ ಬರೆದು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಮಾನ್ಯ ಹೊರಟ್ಟಿಯವರ ನೇತೃತ್ವದಲ್ಲಿ ಏನು ಇತ್ಯರ್ಥವಾಗಿದೆ ಅದನ್ನು ಕೊಡಿ ಎಂದೇನು ಒಕ್ಕೊರಲಿನಿಂದ ಕೇಳುತ್ತಿದ್ದಾರೆ ದಯಮಾಡಿ ಅದಕ್ಕೆ ಸ್ಪಂದಿಸಿ. ಪ್ರತಿಯೊಬ್ಬ ಶಿಕ್ಷಕರು ಕೋರ್ಟಿಗೆ ಹೋಗಿ ಆದೇಶ ತೆಗೆದುಕೊಂಡು ಬಂದು ಇದನ್ನು ಪಡೆಯುವಂಥದ್ದು ಯಾವುದೇ ಜನಪರ ಸರ್ಕಾರದ ಕಾಳಜಿಯಾಗಿರುವುದಿಲ್ಲ. ದಯವಿಟ್ಟು ತಾವು ದೊಡ್ಡ ಮನಸ್ಸು ಮಾಡಿ ಮಾನ್ಯ ಮುಖ್ಯಮಂತ್ರಿಗಳ ಮನವೊಲಿಸಿ ರೂ. 351 ಕೋಟಿ ರೂಪಾಯಿಗಳನ್ನು ಕೊಡಿಸಿ, ಈ ಒಂದು ದೊಡ್ಡ ಸಮಸ್ಯೆಗೆ ಇತಿಶ್ರೀ ಹಾಕಬೇಕೆಂದು ನಾನು ಒತ್ತಾಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

unedited copy

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಗಳೆ, ನಾನು ಆಗಲೇ ಹೇಳಿದ ಹಾಗೆ ಈಗಾಗಲೇ ನಾವು ಬಹಳ ದೂರ ಹೋಗಿದ್ದೇವೆ. ರೂ. 5 ಸಾವಿರ ಕೋಟಿಗಳಿಗೆ back wages and pensionary benefitsಅನ್ನು ಕೂಡ ಅಲಾಯಿದೆಯಾಗಿ ನೋಡುವುದಕ್ಕೆ ಸಾಧ್ಯವಿಲ್ಲ. ನೀವು ಒತ್ತಾಯ ಮಾಡುತ್ತಿರುವುದು ನನಗೆ ಅರ್ಥವಾಗುತ್ತಿದೆ. ಈಗ ನಾನು ಯಾವುದೇ ಸ್ಪಷ್ಟವಾದ ಭರವಸೆ ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಲೆಜಿಸ್ಲೇಷನ್ ಆಗಿದೆ ಮತ್ತು ಇದು ಕೋರ್ಟ್‌ನಲ್ಲಿ ಕೂಡ ಇದೆ. ಕೋರ್ಟ್‌ನಲ್ಲಿ ತೀರ್ಮಾನ ಆಗುವವರೆಗೂ ಕಾಯೋಣ. ಇದು ಕಮಿಟ್‌ಮೆಂಟ್ ಅಲ್ಲ. ಹೇಗೂ 11ನೇ ದಿನಾಂಕದಂದು ನಾವೆಲ್ಲರೂ ಸೇರುತ್ತಿದ್ದೇವೆ. ಆಗ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಬಹುದು. ಏಕೆಂದರೆ ಹಣಕಾಸಿನ ಇತಿಮಿತಿಯನ್ನೂ ನಾವು ನೋಡಬೇಕಾಗುತ್ತದೆ. ಹಣಕಾಸು ಇಲಾಖೆಯ ಒಪ್ಪಿಗೆ ಇಲ್ಲದೇ ಇದನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಇರುವುದು ಇದೊಂದೆ ಸಮಸ್ಯೆಯಲ್ಲ, ಬೇಕಾದಷ್ಟು ಸಮಸ್ಯೆ ಇದೆ. ಆ ಸಮಸ್ಯೆಗಳಲ್ಲಿ ಇದೊಂದು ಸಮಸ್ಯೆ ಎಂದು ಭಾವಿಸಿ ಚರ್ಚೆ ಮಾಡೋಣ.

**ಶ್ರೀ ಬಸವರಾಜ ಹೊರಟ್ಟಿ:-** 11ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ. ಆ ಸಭೆಯಲ್ಲಿ ತಾವು ಹೆಚ್ಚಿಗೆ ಮಾಹಿತಿ ಕೊಡಿ. ಅಲ್ಲಿ ಚರ್ಚೆ ಮಾಡಿ ಏನು ಆಗುತ್ತದೆ ಎನ್ನುವುದನ್ನು ನೋಡಿ ತೀರ್ಮಾನ ಮಾಡೋಣ. 11ನೇ ತಾರೀಖಿನಂದು ನಡೆಯುವ ಸಭೆಯಲ್ಲಿ ತಾವೂ ಇರುತ್ತೀರಿ. ತಾವು ಈ ಕುರಿತು ಮಾಹಿತಿ ತರಿಸಿ, ಚರ್ಚೆ ಮಾಡೋಣ.

(ಮುಂದು .. . )

unedited copy

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ನಮಗೆ ಹೊರೆ ಬರತಕ್ಕಂಥದ್ದು ಐದು ಸಾವಿರ ಕೋಟಿ ರೂಪಾಯಿ ಎಂದು ಈಗ ಅವರು ಹೇಳುತ್ತಿದ್ದಾರೆ. ನಾವು ಕೋರ್ಟ್‌ನಲ್ಲಿ ಅಫಿಡವಿಟ್ ಫೈಲ್ ಮಾಡುತ್ತೇವೆಂದು ಹೇಳುತ್ತಿದ್ದೇವೆ. ಇವೆಲ್ಲಾ ವಿಚಾರ ಇರುವುದರಿಂದ ನಾವು 11ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇದರ ಬಗ್ಗೆಯೂ ಚರ್ಚೆ ಮಾಡುತ್ತೇವೆ.

**ಶ್ರೀ ರಾಮಚಂದ್ರಗೌಡ:–** ಈ 11ನೇ ತಾರೀಖಿನೊಳಗಾಗಿ ಆಂಧ್ರ ಸರ್ಕಾರದಲ್ಲಿ ಏನು ಮಾಡಿದ್ದಾರೆ ಅದರ ಮಾಹಿತಿಯನ್ನು ತಾವು ತರಿಸಿಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ:–** ಮಾಹಿತಿಯನ್ನು ತರಿಸಿಕೊಳ್ಳುತ್ತೇವೆ.

**ಉಪಸಭಾಪತಿಯವರು:–** ಈಗ ಕಾನೂನು ಸಚಿವರು ತುರ್ತಾಗಿ ನಿರ್ಗಮಿಸಬೇಕಾಗಿರುವುದರಿಂದ ಕಾನೂನು ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇನೆ.

unedited copy

ಚುಕ್ಕೆ ಪ್ರಶ್ನೆ ಸಂಖ್ಯೆ:280
ಉತ್ತರ ಲಗತ್ತಿಸಲಾಗಿದೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ವಿಶೇಷವಾಗಿ ಪದವಿ ಕಾಲೇಜುಗಳಲ್ಲಿ ಖಾಲಿ ಹುದ್ದೆ ಭರ್ತಿ ಮಾಡುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರ ಪರಿಶೀಲನೆಯಲ್ಲಿದೆ ಎನ್ನುವ ಉತ್ತರ ಕೊಟ್ಟಿದ್ದಾರೆ. ಹಲವಾರು ಬಾರಿ ಪರಿಶೀಲನೆಯಲ್ಲಿದೆ ಎನ್ನುವ ಉತ್ತರ ಬಂದಿದೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿರುವಂತಹ ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಖಾಲಿ ಇರುವಂತಹ ಹುದ್ದೆಗಳಿಗೆ ಯಾವ ಕಾಲಮಿತಿಯಲ್ಲಿ ಭರ್ತಿ ಮಾಡುತ್ತಾರೆ ಎನ್ನತಕ್ಕಂಥ ಸ್ಪಷ್ಟ ಉತ್ತರ ಕೊಟ್ಟರೆ ಬಹಳ ಉಪಯೋಗವಾಗುತ್ತದೆ. ಈಗ ಸರ್ಕಾರಿ ಕಾಲೇಜುಗಳಲ್ಲಿ ಮತ್ತು ಖಾಸಗಿ ಕಾಲೇಜುಗಳಲ್ಲಿ ಕೂಡ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಆ ಕಾಲೇಜುಗಳಿಗೆ ಸ್ವಂತ ಕಟ್ಟಡ ಇಲ್ಲ, ಸಿಬ್ಬಂದಿ ಕೊರತೆ ಇದೆ. ಈ ತರಹದ ವ್ಯವಸ್ಥೆಯಲ್ಲಿ ಉನ್ನತ ಶಿಕ್ಷಣದ ಬಗ್ಗೆ ಇಷ್ಟು ನಿಷ್ಕಾಳಜಿಯನ್ನು ವಹಿಸಿದರೆ ಸರಿಯಾಗುವುದಿಲ್ಲ. ದಯವಿಟ್ಟು ಯಾವ ಕಾಲಮಿತಿಯಲ್ಲಿ ಆ ಹುದ್ದೆಗಳನ್ನು ಭರ್ತಿ ಮಾಡುತ್ತಾರೆ ಎನ್ನುವ ಉತ್ತರವನ್ನು ಮಾನ್ಯ ಸಚಿವರಿಂದ ನಿರೀಕ್ಷೆ ಮಾಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾನು ಕೊಟ್ಟಿರುವ ಉತ್ತರ 'ಈ' ನಲ್ಲಿ ಕೊಟ್ಟಿದ್ದೇನೆ. ಸರ್ಕಾರದ ಸುತ್ತೋಲೆ ಪ್ರಕಾರ 2009ರ ನಂತರ ಯಾವುದೇ ಹೊಸ ಹುದ್ದೆಗಳನ್ನು ಸೃಜಿಸುವ ಹಾಗೂ ಭರ್ತಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ. ತದನಂತರ ಯಾವುದೇ ರೀತಿಯಲ್ಲೂ ಕೂಡ ಅದು ಮಾರ್ಪಾಟು ಆಗಿಲ್ಲ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ದಿನಾಂಕ: 01.03.2001 ರಿಂದ ನಿವೃತ್ತಿ/ರಾಜೀನಾಮೆ/ತೆಗೆದು ಹಾಕುವಿಕೆ/ವಜಾ ಹಾಗೂ ಮರಣಗಳಿಂದ ಖಾಲಿಯಾಗುವ ಬೋಧಕೇತರ ಹುದ್ದೆಗಳು ಹಾಗೂ ಅನುಮೋದನೆಯಾಗದ ಬೋಧಕೇತರ ಹುದ್ದೆಗಳು ಶಾಶ್ವತ ಅನುದಾನ ರಹಿತವೆಂದು ತಿಳಿಸಲಾಗಿರುವುದರಿಂದ ಬೋಧಕೇತರ

unedited copy

ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿಲ್ಲ ಎನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. 15 ವರ್ಷಗಳಿಂದ ಈ ತರಹದ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ಕಾಲೇಜುಗಳಲ್ಲಿರತಕ್ಕಂಥ ಪರಿಸ್ಥಿತಿ ಯಾವ ರೀತಿ ಇರಬಹುದು, ಮಕ್ಕಳ ಪರಿಸ್ಥಿತಿ ಯಾವ ರೀತಿ ಇರಬಹುದು? ಬಿಎಸ್ಸಿ, ಬಿಎ, ಬಿಎಡ್ ನಡೆಸುತ್ತಿರುವ ಅನೇಕ ಖಾಸಗಿ ಶೈಕ್ಷಣಿಕ ಸಂಸ್ಥೆಗಳಿದ್ದರೂ ಕೂಡ ಅಲ್ಲಿ ಬೋಧಕ ಹುದ್ದೆಗಳು ಇಲ್ಲದಿದ್ದರೆ ಯಾವ ರೀತಿಯ ಶಿಕ್ಷಣವನ್ನು ಮಾನ್ಯ ಸಚಿವರು ಅವರ ಕಡೆಯಿಂದ ಅಪೇಕ್ಷೆ ಮಾಡುತ್ತಾರೆ? ದಯವಿಟ್ಟು ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಈ ರೀತಿ ಖಾಲಿ ಹುದ್ದೆಗಳನ್ನು ಸೃಷ್ಟಿಯಲ್ಲಿಟ್ಟುಕೊಂಡು ಆ ಸಂಸ್ಥೆಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಇದರ ವ್ಯತಿರಿಕ್ತ ಪರಿಣಾಮ ಅಲ್ಲಿರತಕ್ಕಂಥ ಮಕ್ಕಳ ಮೇಲೆ ಉಂಟಾಗುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ. ದಯವಿಟ್ಟು ಯಾವ ಕಾಲಮಿತಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡುತ್ತಾರೆ ಎನ್ನುವ ವಿಚಾರವನ್ನು ಸ್ಪಷ್ಟಪಡಿಸಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನಾನು ಒಂದು ಸಂಗತಿಯನ್ನು ಹೇಳಬಯಸುತ್ತೇನೆ. ನನ್ನ ಮತ ಕ್ಷೇತ್ರದಲ್ಲಿ ಧಾರವಾಡದ ವ್ಯಾಪ್ತಿಯೊಳಗೆ ಪರಿಸ್ಥಿತಿ ಏನಿದೆ ಎಂಬುದನ್ನು ಹೇಳುತ್ತೇನೆ. ಬಸವೇಶ್ವರ ವಿದ್ಯಾವರ್ಧಕ ಸಂಘ ಬಾಗಲಕೋಟೆ, ಅವರ ಕಲಾ ಕಾಲೇಜಿಗೆ ಹೋಗಿದ್ದೆ. 8 ಖಾಯಂ ಹುದ್ದೆ, 62 ಹುದ್ದೆಗಳು ತಾತ್ಕಾಲಿಕ ಹುದ್ದೆಗಳು, ಕಳೆದ 15 ವರ್ಷಗಳಿಂದ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಕೆಎಲ್‌ಇ ಸಂಸ್ಥೆಯ ಬಗ್ಗೆ ನನ್ನ ಹತ್ತಿರ ವಿವರ ಇದೆ. 255 ಹುದ್ದೆಗಳ ಶಿಕ್ಷಕರು ಮಾತ್ರ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ 256 ಹುದ್ದೆಗಳು ಖಾಲಿ ಇವೆ. ನಾವು ಗುಣಮಟ್ಟದ ಶಿಕ್ಷಣವನ್ನು ತರಬೇಕೆಂದು ಯೋಚನೆ ಮಾಡುತ್ತೇವೆ, ಈ ರೀತಿಯಾದರೆ ಯಾವ ಗುಣಮಟ್ಟದ ಶಿಕ್ಷಣ ಬರುವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡಿ? ಅಲ್ಲಿ 50 ಪರ್ಸೆಂಟ್ ಶಿಕ್ಷಕರೇ ಇಲ್ಲ. ಅಲ್ಲಿ ಎಲ್ಲಾ ತಾತ್ಕಾಲಿಕ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು. ವರ್ಕ್‌ಲೋಡ್ ದೃಷ್ಟಿಯಿಂದ 9702 ಗಂಟೆಗಳ ಕೆಲಸದ ಒತ್ತಡ ಇದ್ದರೆ 5211 ಗಂಟೆಗಳ ಕೆಲಸದ ಒತ್ತಡಕ್ಕೆ ಶಿಕ್ಷಕರು ಇಲ್ಲ. ಇದು ಭಾರಿ ಗುಣಮಟ್ಟದ ಶಿಕ್ಷಣ ಸಂಸ್ಥೆ ಅವರು ಹೇಗೂ ನಡೆಸಿಕೊಂಡು ಹೋಗುತ್ತಾರೆ ಎನ್ನುವ ಪರಿಸ್ಥಿತಿ ನಡೆಯುವುದಿಲ್ಲ. ಆ ಸಂಸ್ಥೆಗಳು ದೊಡ್ಡದು ಇದೆ ಎಂದರೆ

unedited copy

ಅದು ನಡೆಯದಿರುವ ಪರಿಸ್ಥಿತಿ ಇದೆ. ಆ ಸಂಸ್ಥೆಗಳನ್ನು ಬಂದ್ ಮಾಡುವ ಪರಿಸ್ಥಿತಿ ಇದೆ. ದಯವಿಟ್ಟು ಯಾವಾಗ ಹುದ್ದೆಗಳನ್ನು ಭರ್ತಿ ಮಾಡುತ್ತಾರೆ ಎಂದು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, 4274 ಹುದ್ದೆಗಳು ಖಾಲಿ ಇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ತಾವು ವಿಚಾರ ಮಾಡಿ, ನಮ್ಮ ಉತ್ತರ ಕರ್ನಾಟಕದಲ್ಲಿ ಬರೀ ಖಾಸಗಿ ಶಿಕ್ಷಣ ಸಂಸ್ಥೆಗಳಿವೆ. ಅವರು ಹೇಗೆ ಕಾಲೇಜು ನಡೆಸಬೇಕು? ಹೆಚ್ಚು ಶುಲ್ಕ ತೆಗೆದುಕೊಳ್ಳುವ ಹಾಗಿಲ್ಲ, ಡೊನೇಷನ್ ಕೊಟ್ಟು ಬರುವ ಹಾಗಿಲ್ಲ, ಸರ್ಕಾರಿ ಕಾಲೇಜು ಎಲ್ಲಾ ಕಡೆ ಆಗಿವೆ. ಇಷ್ಟು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಕಾಲೇಜುಗಳನ್ನು ಹೇಗೆ ನಡೆಸುವುದಕ್ಕಾಗುತ್ತದೆ? ಶಿರಸಿಯಲ್ಲಿ M.M. Arts and Science College ಎಂದು ಕಾಲೇಜು ಇದೆ. 69 ಜನ ಖಾಸಗಿ ಅತಿಥಿ ಉಪನ್ಯಾಸಕರು, 13 ಜನರು ಖಾಯಂ ಉಪನ್ಯಾಸಕರು ಇದ್ದಾರೆ. ಸರ್ಕಾರ ತಪ್ಪು ತಿಳಿದುಕೊಳ್ಳಬಾರದು. ಆದಷ್ಟು ಮೆಜಾರಿಟಿ ಕಮ್ಯುನಿಟಿಯವರ ಕಾಲೇಜುಗಳೇನಿವೆ ಅವುಗಳನ್ನು ಮುಚ್ಚಿಸ್ಬಬೇಕೆನ್ನುವ ಹುನ್ನಾರ ಇದಾಗಿದೆ ಎಂದು ಅಲ್ಲಿ ಎಲ್ಲರು ಸ್ಪಷ್ಟವಾಗಿ ಹೇಳುತ್ತಾರೆ. ಅವರ ಮುಂದೆ ಹೇಳುತ್ತಿಲ್ಲ. ಈ ಪರಿಸ್ಥಿತಿ ಏಕೆ ತರುತ್ತಾರೆ? ಅವರು ಸರ್ಕಾರಿ ಕಾಲೇಜನ್ನು ನಡೆಸುತ್ತಾರೆಯೇ? ಈ ಎಲ್ಲಾ ಕಾಲೇಜುಗಳನ್ನು ಸರ್ಕಾರ ತೆಗೆದುಕೊಂಡುಬಿಡಲಿ. ರಾಷ್ಟ್ರೀಕರಣ ಮಾಡಿಬಿಡಲಿ. 4000-5000 ಹುದ್ದೆಗಳನ್ನು ಖಾಲಿ ಇಟ್ಟುಕೊಂಡು, ಅವರು ದಯಮಾಡಿ ಹೇಳಲಿ, ಇದು ತಪ್ಪು. ಇದರ ಪರಿಣಾಮ ಶಿಕ್ಷಣದ ಮೇಲೆ ಆಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಹುದ್ದೆಗಳನ್ನು ಭರ್ತಿ ಮಾಡಿ. ಕೇವಲ 6000-7000 ಹುದ್ದೆಗಳು ಇವೆ. ಅಂತಹದ್ದರಲ್ಲಿ 4274 ಹುದ್ದೆಗಳು ಖಾಲಿ ಇವೆ. ಅರ್ಧಕ್ಕಿಂತ ಹೆಚ್ಚು ಹುದ್ದೆಗಳು, ಅಂದರೆ ಶೇಕಡಾ 75ರಷ್ಟು ಹುದ್ದೆಗಳು ಖಾಲಿ ಇವೆ. ಅವರು ಹೇಗೆ ಕಾಲೇಜುಗಳನ್ನು ನಡೆಸಬೇಕು? ಮಾನ್ಯ ಸಚಿವರು ಕಡತವನ್ನು ತೆಗೆದು ನೋಡಲಿ. ನಾನು ಶಿಕ್ಷಣ ಮಂತ್ರಿಯಾಗಿದ್ದಾಗ ಸರ್ಕಾರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಜಾಹೀರಾತನ್ನು ಹೊರಡಿಸಿತ್ತು. ಖಾಸಗಿ ಮಠಮಾನ್ಯಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಕ್ರೈಸ್ತ ಮಿಶಿನರಿಯವರು, ಆಂಗ್ಲ, ಉರ್ದು, ಶಾಲಾ ಕಾಲೇಜುಗಳನ್ನು ಪ್ರಾರಂಭ ಮಾಡಿದರೆ ಸರ್ಕಾರ ನಿಮಗೆ ಸಹಾಯಧನ ಕೊಡುತ್ತದೆ, ಸರ್ಕಾರದ ಸಹಾಯಕ್ಕೆ ಬನ್ನಿ ಎಂದು ಜಾಹೀರಾತನ್ನು ಕೊಟ್ಟಿತ್ತು.

unedited copy

ಅದರಂತೆ ಪ್ರಾರಂಭ ಮಾಡಿದರು. 1969 ರಿಂದ ಇಲ್ಲಿಯವರೆಗೆ ಹೇಗೆ ನಡೆಯಬೇಕು? ಖಾಸಗಿ ಶಾಲಾ ಕಾಲೇಜುಗಳು ಮತ್ತು ಸರ್ಕಾರಿ ಶಾಲಾ ಕಾಲೇಜು ಇವೆ. ಎರಡರ ನಡುವೆ ಪೈಪೋಟಿ ಇರಲಿ. ಉತ್ತಮ ಗುಣಮಟ್ಟ ಇರಬೇಕೆಂದು ಮಾಡಿದ್ದೀರಿ. ಆದರೆ, ಉಪನ್ಯಾಸಕರನ್ನು ನೇಮಕ ಮಾಡುವುದಕ್ಕೆ ಆರ್ಥಿಕ ಮಿತವ್ಯಯ ಇದೆ ಎಂದರೆ ಹೇಗೆ? ಬೇರೆಯದಕ್ಕೆ ಆರ್ಥಿಕ ಮಿತವ್ಯಯ ಇಲ್ಲವೇ? ನಾವು ಹೇಳಿದರೆ ತಪ್ಪಾಗುತ್ತದೆ. ಮಂತ್ರಿಗಳು ಫ್ಲೈಟ್, ಹೆಲಿಕಾಪ್ಟರ್‌ನಲ್ಲಿ ಓಡಾಡುವ ಲೆಕ್ಕ ನೋಡಿದರೆ ಅದರಲ್ಲಿ ಹತ್ತು ಕಾಲೇಜುಗಳು ನಡೆಯುತ್ತವೆ. ದಯಮಾಡಿ ಇದು ಸರಿಯಲ್ಲ. ಇಲ್ಲಿಯವರೆಗೆ ಇವರದೆಲ್ಲಾ ಫ್ಲೈಟ್‌ನಲ್ಲಿ ಓಡಾಡಿರುವ ಖರ್ಚು 500 ಕೋಟಿ ರೂಪಾಯಿ ಆಗಿದೆ. ಅದನ್ನು ಬಿಟ್ಟು ಇದನ್ನು ಮಾಡಲಿ. ಮಾನ್ಯ ಜಯಚಂದ್ರರವರೇ, ತಾವು ಮಂತ್ರಿಗಳಾಗಿದ್ದೀರಿ, ವಿಚಾರ ಮಾಡಿ. ನಮ್ಮದೇನು ಕಾಲೇಜುಗಳಿಲ್ಲ. ಕಾಲೇಜುಗಳನ್ನು ತೆರೆದಿರುವಂತಹ ದೊಡ್ಡ ದೊಡ್ಡ ಮಠಮಾನ್ಯಗಳಿರಬಹುದು, ಸಂಸ್ಥೆಗಳಿರಬಹುದು, ಆಂಗ್ಲೊ ಇಂಡಿಯನ್ಸ್ ಪ್ರಾರಂಭಿಸಿರುವ ಕಾಲೇಜುಗಳು ಇರಬಹುದು, ಉರ್ದು ಕಾಲೇಜುಗಳು ಇರಬಹುದು, ಕ್ರೈಸ್ತ ಮಿಶಿನರಿಯವರು ಪ್ರಾರಂಭಿಸಿರುವ ಕಾಲೇಜುಗಳು ಇರಬಹುದು, ಎಲ್ಲರಿಗೂ ಆರ್ಥಿಕ ಮಿತವ್ಯಯವನ್ನು ತಂದಿದ್ದಾರೆ. ಆ ಆರ್ಥಿಕ ಮಿತವ್ಯಯವನ್ನು ತೆಗೆಯಿರಿ, ಅವಶ್ಯ ಇದ್ದಲ್ಲಿ ಅನುಮೋದನೆ ಕೊಡಿ ಎಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇಲ್ಲವಾದರೆ ಎಲ್ಲಾ ಕಾಲೇಜುಗಳು ಬಂದ್ ಆಗುತ್ತವೆ. ಉತ್ತರ ಕರ್ನಾಟಕದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಯುವುದೇ ಇಲ್ಲ. ಆರ್ಥಿಕ ಮಿತವ್ಯಯ ತೆಗೆದು ಅನುಮೋದನೆ ನೀಡದಿದ್ದರೆ ಈಗ ಇದ್ದಂತಹ ಕಾಲೇಜುಗಳನು ಸಹ ಮುಚ್ಚುತ್ತಾರೆ ಎಂದು ಹೇಳಬಯಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ವಿನಂತಿ ಮಾಡುತ್ತೇನೆ. ಅಲ್ಲಿ ತುಂಬುವವರೆಗೆ ಆ ಹುದ್ದೆಗೆ ಅತಿಥಿ ಉಪನ್ಯಾಸಕರುಗಳನ್ನು ತುಂಬುವುದಕ್ಕೆ ಅವಕಾಶ ಮಾಡಿಕೊಡಿ. ಸರ್ಕಾರಿ ಕಾಲೇಜುಗಳಲ್ಲಿ ಇರುವ ಹುದ್ದೆಗಳಿಗೆ ಹೇಗೆ ಅತಿಥಿ ಉಪನ್ಯಾಸಕರುಗಳನ್ನು ತುಂಬುತ್ತಿದ್ದಾರೆಯೋ ಅದೇ ರೀತಿ ಖಾಸಗಿ ಅನುದಾನಿತ ಕಾಲೇಜುಗಳಲ್ಲಿಯೂ ಅತಿಥಿ ಉಪನ್ಯಾಸಕರುಗಳನ್ನು ತುಂಬುವುದಕ್ಕೆ ಅವಕಾಶ ಮಾಡಿಕೊಡಿ. ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಮಕ್ಕಳಿಗೆ ಪಾಠ ಮಾಡುವುದಕ್ಕೆ ಕಷ್ಟ ಆಗುತ್ತಿದೆ.

unedited copy

ಖಾಲಿ ಹುದ್ದೆಗಳನ್ನು ಭರ್ತಿ ಮಾಡುವವರೆಗೆ ಅತಿಥಿ ಉಪನ್ಯಾಸಕರುಗಳನ್ನು ತುಂಬುವುದಕ್ಕೆ ಅವರಿಗೂ ಅವಕಾಶ ಮಾಡಿಕೊಡಿ.

**ಶ್ರೀ ಎಸ್.ವಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಸ್ಯಾಂಕ್ಷನ್ ಆದಂತಹ ಮತ್ತು ಗ್ರಾಂಟ್‌ಗೆ ಅಡ್ಮಿಟ್ ಆದಂತಹ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಕೇಳುತ್ತಿದ್ದೇವೆ. ಗ್ರಾಂಟ್ ಆಗಿದೆ. ಆರ್ಥಿಕ ಇಲಾಖೆಯಿಂದ ಕ್ಲಿಯರೆನ್ಸ್ ಆಗಿದೆ. ಹೊಸ ಪೋಸ್ಟ್ ಕೇಳುತ್ತಿಲ್ಲ. Sanctioned posts, ಮತ್ತು ಗ್ರಾಂಟ್‌ಗೆ ಅಡ್ಮಿಟ್ ಆದ ಹುದ್ದೆಗಳ ಬಗ್ಗೆ ಕೇಳುತ್ತಿದ್ದೇವೆ. ಆರ್ಥಿಕ ಇಲಾಖೆಯಿಂದ ಕ್ಲಿಯರೆನ್ಸ್ ಆಗಿರುವ ಪೋಸ್ಟ್‌ನ್ನು ಕೇಳುತ್ತಿದ್ದೇವೆ. ಅದನ್ನು ಕೊಡುವುದಿಲ್ಲವೆಂದರೆ ಹೇಗೆ? ಸೆಕೆಂಡರಿ ಶಿಕ್ಷಣಕ್ಕೆ ಕೊಟ್ಟಿದ್ದಾರೆ, ಡಿಗ್ರಿ ಕಾಲೇಜುಗಳಿಗೆ ಕೊಡುವುದಿಲ್ಲವೆಂದರೆ ಹೇಗೆ?

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ. 2009 ರಿಂದ ಇದುವರೆಗೆ ಆರ್ಥಿಕ ಮಿತವ್ಯಯ ಇರುವುದರಿಂದ ಅದನ್ನು ನಾವು ತುಂಬುವುದಕ್ಕೆ ಸಾಧ್ಯವಾಗಿಲ್ಲ. ಇದೇ ಪರಿಸ್ಥಿತಿ ಸರ್ಕಾರಿ ಕಾಲೇಜುಗಳಲ್ಲಿಯೂ ಕೂಡ ಇದೆ. ಅಲ್ಲಿ ಶಾಶ್ವತವಾಗಿ ಇರುವಂಥದ್ದು ಸುಮಾರು 4300 ಹುದ್ದೆಗಳು.

(ಮುಂದು)

unedited copy

**ಶ್ರೀ ಟಿ.ಬಿ.ಜಯಚಂದ್ರ(ಮುಂದು. . )**

2013–14ನೇ ಸಾಲಿನಲ್ಲಿ 12,000–13,000 ಜನ ಅತಿಥಿ ಉಪನ್ಯಾಸಕರುಗಳನ್ನು ಇಟ್ಟುಕೊಂಡು ಪಾಠ ಮಾಡುವಂತಹ ಪರಿಸ್ಥಿತಿ ಇತ್ತು. ಒಂದೊಂದು ಕಾಲೇಜಿನಲ್ಲಿ 6–7 ಜನ ಇದ್ದರೆ ಅತಿಥಿ ಉಪನ್ಯಾಸಕರುಗಳು 40–50 ಜನ ಇರುವಂತಹ ಪರಿಸ್ಥಿತಿ ಇದೆ. ಆದರೆ, ಎಲ್ಲೋ ಒಂದು ಕಡೆಗೆ ಶಿಕ್ಷಣದ ದೃಷ್ಟಿಯಿಂದ ಇದನ್ನು ಮರು ಪರಿಶೀಲನೆ ಮಾಡುವಂತಹ ಅವಶ್ಯಕತೆ ಇದೆ. ಆದರೆ, ನಿಮಗೆಲ್ಲರಿಗೂ ಗೊತ್ತಿರುವಂತೆ ಹಣಕಾಸಿನ ಇತಿಮಿತಿಯಲ್ಲಿಯೇ, ಚೌಕಟ್ಟಿನಲ್ಲಿಯೇ ಮಾತನಾಡಬೇಕಾಗುತ್ತದೆ. ದಯಮಾಡಿ ತಾವು ಇದನ್ನು ಗಮನಿಸಬೇಕು. ಅದಕ್ಕೋಸ್ಕರ ಈ ಟೀಚಿಂಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಹಣಕಾಸು ಇಲಾಖೆಯಲ್ಲಿ ನಾನು ಕುಳಿತುಕೊಂಡು ಚರ್ಚೆ ಮಾಡಿ ಪರಿಹಾರವನ್ನು ಕಂಡು ಹಿಡಿಯುವಂತಹ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಶಿಕ್ಷಣವನ್ನು ಹೇಗೆ ಕೊಡುತ್ತೀರಿ? ಅಲ್ಲಿ ಶಿಕ್ಷಣವನ್ನು ಹೇಗೆ ಮಾಡಬೇಕೆಂದು ಹೇಳಿ. ಶಿಕ್ಷಣ ಕೊಡುವಲ್ಲಿ ಹಣಕಾಸಿನ ವಿಷಯವನ್ನು ತೋರಿಸಿದರೆ ಹೇಗೆ? ಹಾಗಾದರೆ, ಎಲ್ಲಾ ಕಾಲೇಜುಗಳನ್ನು ಕ್ಲೋಸ್ ಮಾಡಿ. ನಿಮ್ಮ ಸರ್ಕಾರದ ಅವಧಿಯಲ್ಲಿ ಒಬ್ಬ ನಿಯೋಜನೆ ಮೇರೆಗೆ ಬಂದಿರುವ ಒಬ್ಬರು ಪ್ರಿನ್ಸಿಪಾಲರು ಇದ್ದರೆ 13 ಮಂದಿ ಅತಿಥಿ ಉಪನ್ಯಾಸಕರು ಇದ್ದಾರೆ. ನೀವು ಏತಕ್ಕೆ ಕಾಲೇಜುಗಳನ್ನು ನಡೆಸುತ್ತೀರಿ? ಹಾಗೆಯೇ ಇವುಗಳನ್ನು ಬಿಟ್ಟು ಬಿಡಿ. ನೀವು ಶಿಕ್ಷಣ ಕೊಡುವಲ್ಲಿ ಅಸಹಾಯಕರಾದರೆ ಇರುವಂತಹ ಕಾಲೇಜುಗಳನ್ನು ಬಂದ್ ಮಾಡಿ. ಅವುಗಳ ಸ್ಥಳದಲ್ಲಿ ಬೇರೆ ಬೇರೆ ಅಂದರೆ ಗೆಸ್ಟ್‌ಹೌಸ್‌ಗಳನ್ನು ಮಾಡಿ. ನೀವು ಈ ಬಗ್ಗೆ ವಿಚಾರ ಮಾಡಬೇಕಲ್ಲವೇ? ದಯಮಾಡಿ, ಮಾನ್ಯ ಸಚಿವರು ತಪ್ಪು ತಿಳಿದುಕೊಳ್ಳಬಾರದು. ನೀವು ಶಿಕ್ಷಣವನ್ನು ಹೇಗೆ ಕೊಡುತ್ತೀರಿ ಎನ್ನುವುದನ್ನು ಹೇಳಿ. 14072 ಮಂದಿ ಅತಿಥಿ ಉಪನ್ಯಾಸಕರುಗಳಿದ್ದರೆ ಸರ್ಕಾರಿ ಕಾಲೇಜುಗಳನ್ನು ನಡೆಸುತ್ತೀರಿ. ಹೇಗೆ ನಡೆಸುತ್ತೀರಿ, ಇದು ತಪ್ಪು ಅಲ್ಲವೇ? 18–20 ವರ್ಷಗಳಾದರೂ ಉಪನ್ಯಾಸಕರುಗಳನ್ನು ತುಂಬಲಿಲ್ಲವೆಂದರೆ ಹೇಗೆ? ಸರ್ಕಾರಿ ಕಾಲೇಜುಗಳಲ್ಲಿಯೇ ಈ ರೀತಿ ಆದರೆ, ಖಾಸಗಿ ಕಾಲೇಜುಗಳಲ್ಲಿ ಯಾವ ರೀತಿ ಇರುತ್ತದೆ ಎನ್ನುವುದನ್ನು ನೋಡಿದರೆ ನೀವು ಶಿಕ್ಷಣವನ್ನು ಯಾವ ರೀತಿಯಲ್ಲಿ ಕೊಡುತ್ತೀರಿ? ಯಾರಿಗೂ ಶಿಕ್ಷಣ ಬೇಡವೆಂದು ಬಿಟ್ಟು ಬಿಡಿ. ನೀವು ಬೇರೆ ಕಡೆಗೆ ಕಡಿತ ಮಾಡಿ, ಬೇರೆ ಕಡೆಯಿಂದ ಏಕನಾಮಿ ತೆಗೆದುಕೊಳ್ಳಿ. ಶಿಕ್ಷಣವನ್ನು ಸರಿಯಾಗಿ ಕೊಡಿ.

unedited copy

051/03-03-2016/5-50/bkp-gr

(ಗೊಂದಲ)

**ಶ್ರೀ ರಾಮಚಂದ್ರಗೌಡ:–** ಮಕ್ಕಳನ್ನು ಓದಿಸಲಿಕ್ಕೆ ಆಗುವುದಿಲ್ಲವೆನ್ನುವುದು ಏನು ಇದೆ, ಅದೇ ರೀತಿಯಲ್ಲಿ ಸರ್ಕಾರದಲ್ಲಿ ಬಡತನ ಇದೆ, ನಾವು ಟೀಚರ್‌ಗಳನ್ನು ಅಪಾಯಿಂಟ್ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿದಂತಾಗುತ್ತದೆ. ನೋಡಿ, ವಿದ್ಯಾ ಇಲಾಖೆಗೆ ಆರ್ಥಿಕತೆಯನ್ನು ಅಡ್ಡ ತೆಗೆದುಕೊಂಡು ಬಂದರೆ, ಬಹಳ ಕಷ್ಟವಾಗಿ ಬಿಡುತ್ತದೆ. ಮುಂದಿನ ಪೀಳಿಗೆಗೆ ತೊಂದರೆಯಾಗಿಬಿಡುತ್ತದೆ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಜನರು ಹೇಳಿದ ಹಾಗೆ ಅಲ್ಲಿ ಸರ್ಕಾರಿ ಶಾಲಾ–ಕಾಲೇಜುಗಳಿಲ್ಲ. ಈ ಭಾಗದಲ್ಲಿ ಇರುವಷ್ಟು, ಅಲ್ಲಿ ಇರುವುದಿಲ್ಲ. ಖಾಸಗಿಯವರೆ, ಶಾಲಾ–ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಸರ್ಕಾರ ಮಾಡತಕ್ಕಂತಹ ಕರ್ತವ್ಯವನ್ನು ಖಾಸಗಿ ಸಂಸ್ಥೆಗಳು, ಮಠ–ಮಾನ್ಯಗಳು ಇರಬಹುದು, ಬೇರೆ ಬೇರೆ ಸಂಸ್ಥೆಗಳಿರಬಹುದು, ನಮ್ಮ ಕೆಎಲ್‌ಇ ಇರಬಹುದು, ಇವರುಗಳು ಶಾಲಾ–ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಊರಿನೊಳಗೆ ಎಲ್ಲರೂ ಸೇರಿ ಒಂದು ಸಂಸ್ಥೆ ಮಾಡಿ, ಆ ಭಾಗದ ಮಕ್ಕಳಿಗೆ ಶಿಕ್ಷಣ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ನಾನು ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ ಇಲ್ಲಿ ಸರ್ಕಾರಿ ಕಾಲೇಜುಗಳು, ಸರ್ಕಾರಿ ಶಿಕ್ಷಣ ಸಂಸ್ಥೆಗಳು ಜಾಸ್ತಿ ಇವೆ. ಅಲ್ಲಿ ಇಲ್ಲಿಗೆ ಹೋಲಿಕೆ ಮಾಡಿದರೆ 20% ಸಹಿತ ಇರುವುದಿಲ್ಲ. ಆ ದೃಷ್ಟಿಯಿಂದ ಶಿಕ್ಷಣ ಅತ್ಯಂತ ಮಹತ್ವಪೂರ್ಣವಾದಂತಹದ್ದಾಗಿದೆ. ಮಾನವ ಸಂಪನ್ಮೂಲವನ್ನು ಉನ್ನತೀಕರಿಸುವಲ್ಲಿ ಶಿಕ್ಷಣ ಎಲ್ಲಕ್ಕಿಂತ ಬಹಳ ಮುಖ್ಯವಾದುದಾಗಿದೆ. ಅದ್ದರಿಂದ, ನೀವು ಆರೋಗ್ಯಕ್ಕೆ ಹೇಗೆ ಆದ್ಯತೆಯನ್ನು ಕೊಡುತ್ತೀರೋ ಅದೇ ರೀತಿಯಲ್ಲಿ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಅದಕ್ಕೆ ಆರ್ಥಿಕ ಮಿತಿಯನ್ನು ತೆಗೆಯಬೇಕು. ಇದು ಸದನದ ಎಲ್ಲರ ಒಕ್ಕೊರಲಿನ ಅಭಿಪ್ರಾಯವಾಗಿದೆ. ಸರ್ಕಾರ ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಒಂದೇ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಎಲ್ಲಾ ಶಿಕ್ಷಣ ಪ್ರತಿನಿಧಿಗಳು ಮಾತನಾಡುತ್ತಿದ್ದಾರೆ. ಅವರೆಲ್ಲರೂ ಧರಣಿ ಮಾಡಿರುವುದು ತಮಗೆ ಗೊತ್ತಿದೆ. ಧರಣಿ ಮಾಡಿದ ಮೇಲೆ ಅವರ ಬೇಡಿಕೆಯನ್ನು ಅಬಾಲಿಷ್ ಮಾಡಿ, ಅವರನ್ನು ಕಿತ್ತು ಹಾಕುತ್ತೇವೆಂದು ಹೇಳಿ, ಆರ್ಡರ್ ಸಹಿತ ಮಾಡಿದಿರಿ. ಅದು ಅಷ್ಟು ಸುಲಭವಲ್ಲ. ಯಾವ ರೀತಿ ಪರಿಸ್ಥಿತಿ ಇದೆ ಎಂದರೆ 19 ಜನರು ಅತಿಥಿ ಉಪನ್ಯಾಸಕರು ನಮ್ಮ ಮನೆಗೆ ಬಂದರು.

unedited copy

**ಡಾ॥ ಮತ್ತಿಕಟ್ಟಿ ವೀರಣ್ಣ:–** ವಿರೋಧ ಪಕ್ಷದ ನಾಯಕರು ಈ ವಿಚಾರವಾಗಿ ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸರ್, ಬರಗಾಲ ಹೋಗುತ್ತದೆ, ಗ್ಯಾರಂಟಿ ಮಳೆ ಬರುತ್ತದೆ. 19 ಜನರ ಅತಿಥಿ ಉಪನ್ಯಾಸಕರು ಒಟ್ಟಿಗೆ ನಮ್ಮ ಮನೆಗೆ ಬಂದರು. ಸರ್, ಇವರೊಬ್ಬರೆ, ಕಾಯಂ ಪ್ರಿನ್ಸಿಪಾಲರು, ಇನ್ನುಳಿದ 18 ಜನರು ಅತಿಥಿ ಉಪನ್ಯಾಸಕರು. ನಾವು ಅಷ್ಟು ಜನರು ಮಂಜೂರಾದ ಹುದ್ದೆಗಳ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಅದಕ್ಕೆ ಮಾನ್ಯ ಶ್ರೀ ಜಯಚಂದ್ರವರಿಗೆ ಹೇಳಲಿಕ್ಕೆ ಬಯಸುತ್ತಿದ್ದೇನೆ. ಯಾರ್‍ಯಾರಿಗೆ ಇಂತಹ ಅಧಿಕಾರ ಸಿಕ್ಕುತ್ತದೋ ಬಿಡುತ್ತದೋ ಗೊತ್ತಿಲ್ಲ. ಇದು ತಮಾಸೆ ಅಲ್ಲ. ಎಲ್ಲರಿಗೂ ಇಂತಹ ಅವಕಾಶ ಸಿಕ್ಕುವುದಿಲ್ಲ. ಎಷ್ಟು ಕುಟುಂಬಗಳಿವೆ ಎಂದು ಲೆಕ್ಕ ಹಾಕಿ. 20–25 ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರುವವರಿಗೆ ನೀವು ಅವರನ್ನು ಅನಾಥರನ್ನಾಗಿ ಬಿಟ್ಟು ಬಿಡಿ ಎಂದರೆ ನ್ಯಾಯ ಅಲ್ಲ. ನಿಮ್ಮ ಕಡೆಯಿಂದ ಏನು ಮಾಡಲಿಕ್ಕೆ ಸಾಧ್ಯವೋ, ಅತಿ ಹೆಚ್ಚು ಪ್ರಯತ್ನ ಮಾಡಿ. ಹೆಚ್ಚು ಸಂಬಳ ಕೊಡುತ್ತೀರೋ, ಖಾಯಂ ಆಗಿ ತುಂಬುತ್ತೀರೋ ಏನು ಮಾಡುತ್ತೀರೋ ಮಾಡಿ.

ಹಿಂದೆ ಶ್ರೀಯುತ ಶಂಕರಮೂರ್ತಿಯವರು ಇದ್ದಂತಹ ಸಂದರ್ಭದಲ್ಲಿ ಒಂದಿಷ್ಟು ಜಾಸ್ತಿ ಸಂಬಳ ಮಾಡಿದರು, ಶ್ರೀಯುತ ಬಸವರಾಜ ಹೊರಟ್ಟಿಯವರು ಒಂದಿಷ್ಟು ಜಾಸ್ತಿ ಸಂಬಳ ಮಾಡಿದರು. ಡಾ॥ ವಿ.ಎಸ್.ಆಚಾರ್ಯರವರು ಒಂದಿಷ್ಟು ಜಾಸ್ತಿ ಮಾಡಿದರು. ಆ ಒಂದು ಪಟ್ಟಿಗೆ ನೀವು ಸೇರಬೇಕು. ಅದನ್ನು ಬಿಟ್ಟು ನಮ್ಮ ಹತ್ತಿರ ದುಡ್ಡಿಲ್ಲ, ಕಾನೂನು ಹೇಳುತ್ತದೆ. . . ಕಾನೂನು ಮಂತ್ರಿಗಳು, ಜನರಿಗೆ ಈ ಕಾನೂನನ್ನು ಅನುಕೂಲವಾಗುವ ರೀತಿಯಲ್ಲಿ ಮಾಡಬೇಕು. ಈ ದಿಕ್ಕಿನಲ್ಲಿ ಇಡೀ ಸದನದ ಎಲ್ಲರೂ ಒಪ್ಪುತ್ತಾರೆ. ಇದಕ್ಕೆ ಯಾರೂ ವಿರೋಧವಿಲ್ಲ. ಜೊತೆಗೆ ನಿಮ್ಮ ಮನಸ್ಸು ಸಹ ಒಪ್ಪಿದೆ. ಇಡೀ ಸದನ ಒಪ್ಪಿರುವಂತಹ ಸಂದರ್ಭದಲ್ಲಿ ನಿಮ್ಮ ಉತ್ತರ ಏನೆಂದು ನಾವು ಕಾಯುತ್ತೇವೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ):–** ಮಾನ್ಯ ಸಭಾಪತಿಯವರೆ, ಇದು ನಿಜಕ್ಕೂ ಸಹ ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಇದರಲ್ಲಿ ಯಾರು ಕಾಯಂ ಟೀಚರ್ಸ್ ಅಥವಾ ಉಪನ್ಯಾಸಕರು ಇರುತ್ತಾರೆ, ಅವರುಗಳಿಗೆ 80 ಸಾವಿರ, 90 ಸಾವಿರ 1 ಲಕ್ಷದವರೆಗೆ ಸಂಬಳ ಇರುತ್ತದೆ. ಯಾರು ಅತಿಥಿ ಉಪನ್ಯಾಸಕರುಗಳಿದ್ದಾರೆ, ಅವರುಗಳಿಗೆ 10 ಸಾವಿರ ರೂಪಾಯಿಗಳು ಇರುತ್ತದೆ. ಬಹುಶ: ಈ ರೀತಿಯಲ್ಲಿ ತಾರತಮ್ಯ ಇದ್ದಂತಹ ಸಂದರ್ಭದಲ್ಲಿ ಆ ಅತಿಥಿ ಉಪನ್ಯಾಸಕರುಗಳು ಯಾರು ಇದ್ದಾರೆ, ಅವರುಗಳು ಎಷ್ಟರಮಟ್ಟಿಗೆ ಬದ್ಧತೆಯಿಂದ ಪಾಠವನ್ನು ಮಾಡಬಹುದು ಎನ್ನುವುದನ್ನು ಗಮನಿಸಬೇಕಾಗುತ್ತದೆ. ಈಗಾಗಲೇ ಸುಪ್ರೀಂ ಕೋರ್ಟಿನ ತೀರ್ಪು ಇದೆ. "Equal pay equal work" ಎಂದು ಹೇಳಿ

unedited copy

ಇದೆ. ಬಹುಶ: ಆ ಒಂದು ತೀರ್ಪಿನ ಹಿನ್ನೆಲೆಯಲ್ಲಿ ಆದ್ಯತೆ ಮೇಲೆ ಅವಶ್ಯಕತೆ ಇರುವುದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಇದು ಭವಿಷ್ಯದ ಮಕ್ಕಳ ದೃಷ್ಟಿಯಿಂದ ಟೀಚರ್‌ಗಳನ್ನು ಆದಷ್ಟು ಬೇಗೆ ನೇಮಕಾತಿ ಮಾಡಿಕೊಳ್ಳುವುದು ಅತ್ಯಂತ ಅವಶ್ಯಕ.

ಎರಡನೆಯದಾಗಿ, ಈ ಒಂದು ಕೆಲಸ ತಕ್ಷಣ ಆಗಲಿಲ್ಲವೆಂದರೆ it will take some time ಎಂದು. ಆದರೆ, ಇವತ್ತು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರುಗಳು ಯಾರು ಇದ್ದಾರೆ, ಬಹುಶ: ಕಾಯಂ ಉಪನ್ಯಾಸಕರುಗಳಿಗೆ ಕೊಡತಕ್ಕಂತಹ ಹತ್ತಿರ ಹತ್ತಿರ ಸಂಬಳ ಏನಿದೆ. . . ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿರುವವರು 10,000 ರೂಪಾಯಿಗಳಿಂದ 25,000 ರೂಪಾಯಿಗಳವರೆಗೆ ಹೆಚ್ಚು ಮಾಡಬೇಕೆಂದು ಕೇಳಿದ್ದಾರೆ. ಅಂದರೆ 1 ಲಕ್ಷ ರೂಪಾಯಿಗಳು ಇರುವ ಕಡೆ 4ನೇ ಒಂದು ಭಾಗದ ಹಣವನ್ನು ಕೇಳುತ್ತಿದ್ದಾರೆ. ಬಹುಶ: ಇದರ ಬಗ್ಗೆ ಮಾನ್ಯ ಜಯಣ್ಣನವರು ಅತ್ಯಂತ ಸಹಾನುಭೂತಿಯಿಂದ ಪರಿಗಣಿಸುತ್ತಾರೆಂದು ನಾನು ಭಾವಿಸಿದ್ದೇನೆ. ಬಹುಶ: ಆ ದಿಸೆಯಲ್ಲಿ ಪ್ರಯತ್ನ ಮಾಡಲಿ. ರಾಜ್ಯದ ಮಕ್ಕಳು ಅತ್ಯಂತ ಉತ್ತಮ ರೀತಿಯಲ್ಲಿ ಶಿಕ್ಷಣವನ್ನು ಪಡೆಯಲೆಂದು ಆಶಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ,

(ಗೊಂದಲ)

**ಸಭಾಪತಿಯವರು:-** ಇದಕ್ಕೆ ಎಲ್ಲರ ಸಹಕಾರ ಇದೆ ಎಂದು ಹೇಳಲಾಗಿದೆ. ಆದ್ದರಿಂದ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಇವರದ್ದು ನೈಜವಾದ ಬೇಡಿಕೆ ಇದೆ. ಒಬ್ಬ ಅತಿಥಿ ಉಪನ್ಯಾಸಕರಿಗೆ 10 ಸಾವಿರ ರೂಪಾಯಿಗಳನ್ನು ಕೊಟ್ಟು ನೀವು ಕೆಲಸ ಮಾಡುತ್ತಿದ್ದೀರಿ ಎಂದರೆ ಏನು ಮಾಡಬೇಕೆಂದು ಹೇಳಿ ಸರ್. ಆದ್ದರಿಂದ, ಈ ಹಣವನ್ನು ಖಂಡಿತವಾಗಿಯೂ ಸಹ ಏರಿಕೆ ಮಾಡಬೇಕು. ಮತ್ತೆ, ಅವರಿಗೆ ಖಾಯಂ ಮಾಡುವಾಗ ಅವರಿಗೆ ಕೃಪಾಂಕ ಕೊಡಬೇಕು.

(ಗೊಂದಲ)

**ಉಪ ಸಭಾಪತಿಯವರು:-** ಶ್ರೀಯುತ ಡಿ'ಸೋಜಾ ಅವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಭಾಪತಿಯವರೆ,

unedited copy

**ಉಪ ಸಭಾಪತಿಯವರು:-** ಶ್ರೀಯುತ ಕೊಂಡಯ್ಯಾಜೀ ರವರೆ, ಎಲ್ಲರೂ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಿಮ್ಮೆಲ್ಲರ ಪರವಾಗಿ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಉನ್ನತ ಶಿಕ್ಷಣದಲ್ಲಿ ಬಹಳ ಗಂಭೀರವಾದಂತಹ ಜ್ವಲಂತ ಸಮಸ್ಯೆಯಾಗಿದ್ದು, ಇದು ತಮ್ಮ ಎದುರಿಗೆ ಬಂದಿದೆ. ತಮ್ಮ ಸರ್ಕಾರ ದಿಟ್ಟತನದಿಂದ ಈ ಸಮಸ್ಯೆಗೆ ಪರಿಹಾರವನ್ನು ಸೂಚಿಸಬೇಕಾಗುತ್ತದೆ. ದಿಟ್ಟತನದ ಉತ್ತರವನ್ನು ಕೊಡಬೇಕೆಂದು ನಾನು ಸರ್ಕಾರದಲ್ಲಿ ಎಲ್ಲಾ ಸದಸ್ಯರ ಪರವಾಗಿ ವಿನಂತಿ ಮಾಡುತ್ತೇನೆ.

**ಶ್ರೀ ಸಂದೇಶ್ ನಾಗರಾಜು(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಚರ್ಚೆ ಮಾಡಲು ಸಾಕಷ್ಟು ಸಮಯವನ್ನು ತಾವು ಕೊಟ್ಟಿದ್ದು, ಎಲ್ಲದಕ್ಕೂ ಇದೇ ರೀತಿಯಲ್ಲಿ ಸಮಯವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಇದಕ್ಕೆ ಯಾವ ರೀತಿಯಲ್ಲಿ ಸಮಯವನ್ನು ಕೊಟ್ಟಿದ್ದೀರಿ, ಅದೇ ರೀತಿಯಲ್ಲಿ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಟ್ಟಂತೆ ಚರ್ಚೆ ಮಾಡಲೂ ಅವಕಾಶ ಕೊಡಬೇಕು.

(ಗೊಂದಲ)

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಇದಕ್ಕೆ ಸುಮಾರು ಒಂದೂವರೆ ಗಂಟೆ ಸಮಯ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದು, ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಟ್ಟಂತೆಯೂ ಸಹ ಚರ್ಚೆ ಮಾಡಲು ಇಷ್ಟೇ ಸಮಯವನ್ನು ಕೊಡಬೇಕು.

**ಉಪ ಸಭಾಪತಿಯವರು:-** ಶ್ರೀಯುತ ರವಿ ಅವರೆ, ನಿಮಗೆಲ್ಲರಿಗೂ ಅವಕಾಶ ಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

**ಮುಂದು**. . .

unedited copy

(ಉಪ ಸಭಾಪತಿಯವರ ಉಪಸ್ಥಿತಿ)

ಶ್ರೀ ಟಿ.ಬಿ.ಜಯಚಂದ್ರ(ಮುಂದುವರೆದುದು ...

12 ಸಾವಿರ, 13 ಸಾವಿರ ಅಥವಾ 14,500 ಇರಬಹುದು. ಇಷ್ಟು ಜನ ಇವತ್ತು ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಪಿಹೆಚ್‌ಡಿ ಪದವೀಧರರಿಗೆ ಕೊಡುತ್ತಿರುವುದೂ 11,500 ರೂಪಾಯಿಗಳ ವೇತನವಾದರೆ ಬೇರೆ ನೌಕರರಿಗೆ ಕೊಡುತ್ತಿರುವುದು ಕೂಡ 9,500 ರೂಪಾಯಿಗಳ ವೇತನ. ಅದು ಯಾವುದೇ ಖಾಲಿ ಹುದ್ದೆಗಳಿಗೆ ವಿರುದ್ಧವಾಗಿಲ್ಲ. ಅವರಿಗೆ 4 ಗಂಟೆಯಿಂದ 8 ಗಂಟೆ ಕೆಲಸ. 5 ರಿಂದ 10 ಗಂಟೆ ಕೆಲಸ ಎಂದು ತಾತ್ಕಾಲಿಕವಾಗಿ ಪಾಠ ಮಾಡುವುದಕ್ಕೆ ತೆಗೆದುಕೊಂಡಿರುವುದಾಗಿದೆ. ಹೀಗಾಗಿ, ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕೆನ್ನುವುದರ ಬಗ್ಗೆ ಈಗಾಗಲೇ ಧರಣಿಗಳು ಕೂಡ ನಡೆಯುತ್ತಿವೆ. ನಾವು ಎಲ್ಲೋ ಒಂದು ಕಡೆಗೆ ಅತಿಥಿ ಉಪನ್ಯಾಸಕರನ್ನು ತೆಗೆದುಕೊಂಡು ಬಗೆಹರಿಸಬೇಕೆನ್ನುವಾಗ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸಹ ಅಲಾಯಿದವಾಗಿ ನೋಡಲಿಕ್ಕೆ ಬರುವುದಿಲ್ಲ. ಸಮನಾದ ನೀತಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅದಕ್ಕಾಗಿಯೇ ನಾನು ನಿಮ್ಮೆಲ್ಲರನ್ನೂ ಮತ್ತು ಹಣಕಾಸು ಇಲಾಖೆಯವರನ್ನು ಕರೆದು ಅವರ ಜೊತೆಯಲ್ಲಿ ವಿಶೇಷವಾದ ಒಂದು ಸಭೆಯನ್ನು ಮಾಡಿ ಈ ಸಮಸ್ಯೆಯನ್ನು ಮನವರಿಕೆ ಮಾಡಿ, ಆ ಮಿತಿಯನ್ನು ತೆಗೆಸಿ ಹಾಕುವಂತಹ ಪ್ರಯತ್ನವನ್ನು ನಾವು ಮಾಡೋಣ.

(ಗೊಂದಲ)

**ಉಪ ಸಭಾಪತಿಯವರು:–** ಬೇಡ ಕುಳಿತುಕೊಳ್ಳಿ. ಶ್ರೀಯುತ ಬಸವರಾಜ ಹೊರಟ್ಟಿಯವರ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಈ ಒಂದು ಚುಕ್ಕೆ ರಹಿತ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಮತ್ತೊಂದಕ್ಕೆ ಸಮಯವನ್ನು ಕೇಳಿದ್ದಾರೆ. ಇದರಲ್ಲಿ ಯಾವುದು ಸರಿ ಎಂದು ತಿಳಿಸಬೇಕು. ಈ ಒಂದು ಕೆಲಸವನ್ನು ಮಾಡಿದ್ದಾರೆಯೇ ಎಂದು ಕೇಳಿದ್ದೇವೆ. ಅದಕ್ಕೆ ನೀವು ಸಂಬಂಧಪಟ್ಟವರನ್ನು ಸಂಪರ್ಕ ಮಾಡಿ ತಿಳಿದುಕೊಳ್ಳಬೇಕು. ಅವರ ನಂಬರ್ ಕೂಡ ಕೊಟ್ಟಿದ್ದೇವೆ.

**ಶ್ರೀ ಟಿ.ಬಿ.ಜಯಚಂದ್ರ:–** ಇದರಲ್ಲಿ ಆರೋಗ್ಯ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಎಲ್ಲಿ ಆ ರೀತಿ ಇದೆ ಎಂದು ತಾವು ಓದಿ ಹೇಳಿ.

unedited copy

**ಶ್ರೀ ಟಿ.ಬಿ.ಜಯಚಂದ್ರ:–** ಈಗಾಗಲೇ ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಹಾಗೂ ಅರೆಕಾಲಿಕ ಪ್ರೌಢಶಾಲೆಯಲ್ಲಿ ಶಾಲಾ ಶಿಕ್ಷಕಿಯರನ್ನು ಸರ್ಕಾರಿ ಆದೇಶದ ಪ್ರಕಾರ ಖಾಯಂಗೊಳಿಸಲಾಗಿದೆಯೇ? ಅದೇ ರೀತಿಯಾಗಿ ಅತಿಥಿ ಉಪನ್ಯಾಸಕರುಗಳನ್ನು ಖಾಯಂಗೊಳಿಸಲು ಸರ್ಕಾರದ ಚಿಂತನೆ ನಡೆದಿದೆ. ಈಗ ಏನಾಗಿದೆ, ಏನಾಗಿಲ್ಲ ಎನ್ನುವುದನ್ನು . . .

**ಶ್ರೀ ಬಸವರಾಜ ಹೊರಟ್ಟಿ:–** ನಿಮಗೆ ನಾನು ನಂಬರ್ ಸಹ ಕೊಟ್ಟಿದ್ದೇನೆ.

**ಉಪ ಸಭಾಪತಿಯವರು:–** ಶ್ರೀಯುತ ಹೊರಟ್ಟಿಯವರೆ, ತಾವು ಕುಳಿತುಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ:–** ಈ ಒಂದು ಮಾಹಿತಿಯನ್ನು ಇರುವಂತಹ ಕಾಲಾವಕಾಶದಲ್ಲಿ ಕೊಡುವುದಕ್ಕಾಗಿರುವುದಿಲ್ಲ. ಬೇಕೆಂದರೆ, ಇನ್ನೊಂದು ಬಾರಿ ನಾನು ಉತ್ತರವನ್ನು ಕೊಡುತ್ತೇನೆ. ನಾವು ಇದಕ್ಕೆ ಸಮಯವನ್ನು ಕೇಳಿದ್ದೇವೆ ಅಷ್ಟೆ. ನಾವು ಉತ್ತರ ಕೊಡುವುದಿಲ್ಲವೆಂದು ಹೇಳಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಇದಕ್ಕೆ ಉತ್ತರವನ್ನು ಕಳುಹಿಸಿ ಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಹೊರಗಡೆ ರೈತರು . . .

**ಉಪ ಸಭಾಪತಿಯವರು:–** ದಯಮಾಡಿ, ಕುಳಿತುಕೊಳ್ಳಬೇಕು. ಈಗ ಪ್ರಶ್ನೋತ್ತರ ಕಲಾಪ ನಡೆಯುತ್ತಿದೆ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಉತ್ತರ ಕಳುಹಿಸಿಕೊಡುವಂತಹ ಸಂಪ್ರದಾಯ ಸರಿಯಿಲ್ಲ. ಏಕೆಂದರೆ, ನಾವು ಇಲ್ಲಿ ಕೇಳುವುದರಿಂದ ಸಪ್ಲಿಮೆಂಟರಿಯಾಗಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶಗಳಿರುತ್ತವೆ. ಕೆಟ್ಟ ಸಂಪ್ರದಾಯ ಏತಕ್ಕೆ ಆಗಬೇಕು?

**ಉಪ ಸಭಾಪತಿಯವರು:–** ಶ್ರೀಯುತ ಉಗ್ರಪ್ಪನವರೆ, ದಯವಿಟ್ಟು ಕುಳಿತುಕೊಳ್ಳಿ. ನಾನು ಈ ವಿಚಾರವನ್ನು ಏತಕ್ಕೆ ಹೇಳಿದೆನೆಂದರೆ ಅವರು ಉತ್ತರವನ್ನು ಬಯಸುವುದೇ ಆದಲ್ಲಿ ಮಾನ್ಯ ಸಚಿವರು ಅವರಿಗೆ ಉತ್ತರವನ್ನು ನಂತರ ಕಳುಹಿಸಿಕೊಡಿ ಎಂದು ಹೇಳಿದೆ ಅಷ್ಟೆ. ಆದರೆ, ನೀವು . . . ಈ ರೀತಿಯಾಗಿ ಬೇಡವೆಂದರೆ ಇನ್ನೊಂದು ಅಧಿವೇಶನದಲ್ಲಿ ತೆಗೆದುಕೊಳ್ಳುತ್ತೇನೆಂದರೆ ನನ್ನದೇನೂ ಅಭ್ಯಂತರವಿಲ್ಲ.

unedited copy

**ಚುಕ್ಕೆ ಪ್ರಶ್ನೆ ಸಂಖ್ಯೆ: 260**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸೋಮಣ್ಣ ಮ.ಬೇವಿನಮರದ:–** ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಮೂರು ಪ್ರಶ್ನೆಗಳಲ್ಲಿ ಮೊದಲನೆಯ ಪ್ರಶ್ನೆಗೆ ಸರ್ಕಾರ ಸರಿಯಾದ ಉತ್ತರವನ್ನು ನೀಡಿದೆ. ಆದರೆ ನನ್ನ ಎರಡನೆಯ ಪ್ರಶ್ನೆಗೆ ಸರ್ಕಾರ 'ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಹಾವೇರಿ ಮಾನ್ಯ ಅಬಕಾರಿ ಸಚಿವರ ತವರು ಜಿಲ್ಲೆಯಾಗಿದ್ದು, ಅಲ್ಲಿನ ಅನೇಕ ತಾಲ್ಲೂಕುಗಳಲ್ಲಿ ಮತ್ತು ಅನೇಕ ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಚಟುವಟಿಕೆಗಳು ನಡೆಯುತ್ತಿವೆ. ಅಲ್ಲಿನ ಕಿರಾಣಿ ಅಂಗಡಿಗಳು, ಬೀಡಿ ಅಂಗಡಿಗಲ್ಲಿ ಮಾತ್ರವಲ್ಲದೆ ಸೈಕಲ್ ಮೇಲಿನ ವ್ಯಾಪಾರದವರು ಸಹ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡುಬರುತ್ತಿದೆ. ಸವಣೂರು ತಾಲ್ಲೂಕಿನ ಬರ್ದೂರು ಗ್ರಾಮದಲ್ಲಿ ಸೈಕಲ್ ಮೇಲೆ ಮತ್ತು ಹಾವೇರಿ ತಾಲ್ಲೂಕಿನ ತಿಮ್ಮನಹಳ್ಳಿ ಗ್ರಾಮದಲ್ಲಿ, ಬ್ಯಾಡಗಿ ತಾಲ್ಲೂಕು ಅರಬಗೊಂಡ ಮತ್ತು ಕೆಂಗೊಂಡ ಗ್ರಾಮದಲ್ಲಿ ಸೈಕಲ್ ಮೇಲೆ ಮದ್ಯ ಮಾರಾಟವನ್ನು ಮಾಡುತ್ತಿದ್ದಾರೆ.

ನಾನೇ ಸ್ವತಃ ಅಲ್ಲಿಯ ಸ್ಥಳೀಯ ಅಬಕಾರಿ ಇನ್ಸ್‌ಪೆಕ್ಟರ್‌ರವರ ಜೊತೆಯಲ್ಲಿ ಮಾತನಾಡಿ ಇಂತಿಂತಹ ಕಡೆಗಳಲ್ಲಿ ಈ ರೀತಿಯ ಪ್ರಕರಣಗಳು ನಡೆಯುತ್ತಿದ್ದು, ಅವುಗಳನ್ನು ತಡೆಗಟ್ಟಬೇಕೆಂದು ಸುಮಾರು ಎರಡು–ಮೂರು ತಿಂಗಳ ಹಿಂದೆಯೇ ತಿಳಿಸಿದ್ದೇನೆ. ಆಯಿತು, ಅದನ್ನು ನಾವು ತಡೆಗಟ್ಟುತ್ತೇವೆ ಎನ್ನುವಂತಹ ಉತ್ತರವನ್ನು ಅವರು ಅಂದು ನೀಡಿದ್ದರು. ತದನಂತರ ನಾನು ಅವರಿಗೆ ಒಂದಿಷ್ಟು ನೆನಪನ್ನು ಮಾಡಿಕೊಡುತ್ತಿದ್ದೇನೆ. ಸವಣೂರು ತಾಲ್ಲೂಕಿನ ಬರದೂರು ಗ್ರಾಮದ ಗ್ರಾಮದೇವತೆ ದೇವಸ್ಥಾನದ ಬಳಿ ಇರುವ ಶಾಲೆಯಲ್ಲಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ. ಹಾವೇರಿ ತಾಲ್ಲೂಕಿನ ತಿಮ್ಮೇನಹಳ್ಳಿಯಲ್ಲಿ ಶಾಲೆಯ ಮುಂದೆಯೇ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ತಿಳಿಸಿದಂತಹ ಸಂದರ್ಭದಲ್ಲಿ 24 ಗಂಟೆಯೊಳಗೆ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳುವುದಾಗಿ ಅಲ್ಲಿನ ಬಿ.ಇ.ಓ. ಅವರು ತಿಳಿಸಿದ್ದಾರೆ. ಅದರ ಜೊತೆಗೆ ಚುನಾವಣೆ ಪ್ರಚಾರದ ಹಿನ್ನೆಲೆಯಲ್ಲಿ ಅಲ್ಲಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಅಲ್ಲಿಯ ಸ್ಥಳೀಯ ಶಾಸಕರು ಶಾಲೆಯ ಮುಂಭಾಗದಲ್ಲಿರುವ ಮದ್ಯದ ಅಂಗಡಿಯನ್ನು ತೆರವುಗೊಳಿಸುವುದಾಗಿ ಭರವಸೆ ಕೊಡುತ್ತಾರೆ. ಅದರ ಜೊತೆಗೆ ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಶಾಲೆಯ ಮುಂದೆ ಮದ್ಯ ಮಾರಾಟ ಮಾಡುವುದು ತಪ್ಪು, 24 ಗಂಟೆಗಳೊಳಗೆ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳುವುದಾಗಿ ತಿಳಿಸುತ್ತಿದ್ದಾರೆ. ಮದ್ಯ

unedited copy

ಸೇವಿಸಿ ಅಮಲಿನಲ್ಲಿ ಬ್ರೇಕ್‌ಡಾನ್ಸ್ ಮಾಡುತ್ತಿರುವ ವ್ಯಸನಿ, ಶಾಲೆಯ ಪಕ್ಕದ ಡಬ್ಬಾ ಅಂಗಡಿಯಲ್ಲಿ ಮಾರಾಟ ಮಾಡುತ್ತಿದ್ದ ಸಾರಾಯಿ ಪಾಕೆಟ್‌ಗಳನ್ನು ಗ್ರಾಮದ ಹಿರಿಯರಾದಂತಹ ಶ್ರೀಯುತ ಸಂಗನಗೌಡರು ತೋರಿಸುತ್ತಿದ್ದಾರೆ. ತಿಮ್ಮೇನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಬಳಿ ಇರುವ ಸಾರಾಯಿ ಅಂಗಡಿಯಲ್ಲಿನ ಸಾರಾಯಿ ಕುಡಿದು ಪಾಕೆಟ್‌ಗಳನ್ನು ಶಾಲೆಯ ಕಾಂಪೌಂಡ್‌ನೊಳಗೆ ಬಿಸಾಡಿರುವುದನ್ನು ಶಾಲೆಯ ಮಕ್ಕಳು ವೀಕ್ಷಿಸುತ್ತಿರುವುದು, ಇಂತಹ ಅನೇಕ ಉದಾಹರಣೆಗಳು ಅಲ್ಲಿವೆ. ನಾನೇ ಸ್ವತಃ ಅಲ್ಲಿಯವರಿಗೆ ದೂರವಾಣಿ ಮುಖಾಂತರ ಮಾತನಾಡಿದಾಗ ಹೇಳಿದ್ದರು, ಆದರೆ ಆ ಕೆಲಸ ಕೂಡ ಆಗಿಲ್ಲ. ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಮನೋಹರ್ ಹೆಚ್.ತಹಶೀಲ್ದಾರ್:-** ಸನ್ಮಾನ್ಯ ಸಭಾಪತಿಯವರೇ, ಮೊದಲನೆಯ ಪ್ರಶ್ನೆಗೆ ನೀಡಿರುವ ಉತ್ತರವನ್ನು ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ. ಎರಡನೆಯದಾಗಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಕೇಳಿದ್ದಾರೆ. ಆ ಬಗ್ಗೆ ನಮಗೆ ದೂರು ಬಂದಿಲ್ಲ ಎಂದು ತಿಳಿಸಿದ್ದೇವೆ. ಯಾವ ಅಕ್ರಮಗಳೆಂದರೆ, ಸರ್ಕಾರಕ್ಕೆ ಪಾವತಿಸಬೇಕಾದ ಅಬಕಾರಿ ಸುಂಕ ಹಾಗೂ ಹೆಚ್ಚುವರಿ ಅಬಕಾರಿ ಸುಂಕವನ್ನು ಮುಂಗಡವಾಗಿ ಪಾವತಿಸಿದ ನಂತರ ರಾಜ್ಯದ ಏಕೈಕ ಸರ್ಕಾರಿ ಸ್ವಾಮ್ಯದ ಮದ್ಯ ವಿತರಣಾ ಘಟಕವಾದ ಕರ್ನಾಟಕ ರಾಜ್ಯ ಪಾನೀಯ ನಿಗಮದ ಡಿಪೋಗಳಿಂದ ನಾವು ಸರಬರಾಜು ಮಾಡುತ್ತೇವೆ.

(ಮುಂದುವರೆದಿದೆ ...

unedited copy

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಮನೋಹರ್ ಹೆಚ್.ತಹಶೀಲ್ದಾರ್(ಮುಂದು):**

ಯಾರು ಅಧಿಕೃತವಾದಂತಹ ಮದ್ಯ ಮಾರಾಟಗಾರರು ಇರುತ್ತಾರೋ ಅವರಿಗೇ ಹೋಗುತ್ತದೆ. ಅವರೇ ತೆಗೆದುಕೊಳ್ಳುತ್ತಾರೆ. ಅಲ್ಲಿಂದ ಅನಧಿಕೃತವಾಗಿ ಬೇರೆ ಕಡೆಗೆ ಹೋಗುತ್ತಿದೆ. ಇದು ಅಕ್ರಮವಾದಂತಹ ಮಾರಾಟ ಅಲ್ಲ. ಅಧಿಕೃತವಾದಂತಹ ಮಾರಾಟಗಾರರಿಂದ ತೆಗೆದುಕೊಂಡು ಹೋಗಿ ಬೇರೆಯವರು ಮಾರಾಟ ಮಾಡುತ್ತಾರೆ. ಅದು ನಮ್ಮ ಗಮನಕ್ಕೆ ಬಂದಿದೆ. ಅದರ ಜೊತೆಗೆ ಈಗ ಅಂಥವರಿಗೆ ನಾವು ಏನು ಮಾಡಿದ್ದೇವೆ ಎಂದರೆ, 2015-16ನೇ ಸಾಲಿನಲ್ಲಿ ಕಲಂ 15ಎ ಅಡಿಯಲ್ಲಿ 194 ಪ್ರಕರಣಗಳನ್ನು ನಾವು ದಾಖಲಿಸಲಾಗಿರುತ್ತದೆ. ಇನ್ನು ಸೀರಿಯೆಸ್ ಆಗಿ ಇದ್ದಂಥಹ 21 ಪ್ರಕರಣಗಳು ಈಗಾಗಲೇ ಕೋರ್ಟಿನಲ್ಲಿವೆ. 194 ಪ್ರಕರಣಗಳಿಗೆ ಸಂಬಂಧಪಟ್ಟಂತೆ ಇಲಾಖೆಯಿಂದ ಕ್ರಮ ತೆಗೆದುಕೊಂಡು ಎರಡು ಲಕ್ಷ, ಅರವತ್ತೇಳು ಸಾವಿರ ರೂಪಾಯಿ ದಂಡವನ್ನು ಸಹ ವಿಧಿಸಲಾಗಿದೆ. ಅದರ ಜೊತೆಗೆ 21 ಸೀರಿಯೆಸ್ ಕೇಸ್ ಏನಿವೆ, ಅವುಗಳನ್ನು ಕೋರ್ಟಿಗೆ ಕಳುಹಿಸಿದ್ದೇವೆ. ಕ್ರಮ ತೆಗೆದುಕೊಳ್ಳುತ್ತಲೇ ಇದ್ದೇವೆ. ಅದರ ಜೊತೆಗೆ ಜಾರಿ ಮತ್ತು ತನಿಖಾ ಕಾರ್ಯ ನಮ್ಮ ಇಲಾಖೆಯಿಂದ ನಿರಂತರವಾಗಿ ನಡೆಯುತ್ತಲೇ ಇದೆ. ಇದರಲ್ಲಿ ನಾವು ಯಾವುದೇ ಮುಲಾಜು ಇಲ್ಲದೆಯೇ ಇವತ್ತು ಇಷ್ಟೊಂದು ಕೇಸುಗಳನ್ನು ನಾವು ಹಾಕಿದ್ದು, ಮತ್ತು ಯಾವ ಯಾವ ಊರಿನಲ್ಲಿ ಕೇಸ್ ಹಾಕಿದ್ದೇವೆ ಎನ್ನುವುದರ ಬಗ್ಗೆಯೂ ಅನುಬಂಧ-1ರಲ್ಲಿ ಕೊಟ್ಟಿದ್ದೇವೆ. ಪ್ರತೀ ತಾಲ್ಲೂಕಿನಲ್ಲಿ ಯಾವ ಯಾವ ಹಳ್ಳಿಯಲ್ಲಿ ನಾವು ಕ್ರಮ ತೆಗೆದುಕೊಂಡಿದ್ದೇವೆ, ಎಷ್ಟೆಷ್ಟು ಕೇಸ್ ಹಾಕಿದ್ದೇವೆ ಎನ್ನುವುದರ ಬಗ್ಗೆಯೂ ಸಹ ತಮಗೆ ಸ್ಪಷ್ಟವಾದಂತಹ ಮಾಹಿತಿಯನ್ನು ಸಹ ಕೊಟ್ಟಿದ್ದೇವೆ.

ತಾವು ಕೇಳಿರುವಂತಹ ಮೂರನೇ ಪ್ರಶ್ನೆಗೆ ಅಕ್ರಮವಾಗಿ ಯಾರ‍್ಯಾರು ಮದ್ಯ ಮಾರಾಟ ಮಾಡುತ್ತಿದ್ದಾರೆ ಅವರ ಮೇಲೆ ಕ್ರಮವನ್ನು ಜರುಗಿಸುತ್ತಲೇ ಇದ್ದೇವೆ. ತಾವು ಹೇಳಿದಂತೆ ಬೀಡಿ ಅಂಗಡಿಯಲ್ಲಿಯೂ ಸಹ ಮದ್ಯ ಮಾರಾಟ ಮಾಡುತ್ತಾರೆ, ಅದೇ ರೀತಿ ಕಿರಾಣಿ ಅಂಗಡಿಯಲ್ಲಿಯೂ ಸಹ ಮದ್ಯವನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೂ ಸಹ ಬಂದಿದೆ. ಅದು ಅಧಿಕೃತವಾಗಿ ಮಾರಾಟ ಮಾಡುವುದಂಥದ್ದಲ್ಲ, ಅನಧಿಕೃತವಾದುದಲ್ಲ. ಎಲ್ಲೆಲ್ಲಿ ಈ ರೀತಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಾರೋ ಅವರ ಮೇಲೆ ಕ್ರಮ ಜರುಗಿಸುವುವಂಥದ್ದು ನಿರಾತಂಕವಾಗಿ ನಡೆದಿದೆ. ಅವರ ಮೇಲೆ ಕೇಸುಗಳನ್ನು ಸಹ ಹಾಕಿದ್ದೇವೆ. ಅದು ತಮಗೂ ಸಹ ಸ್ಪಷ್ಟವಾಗಿ ಕಾಣಿಸುತ್ತಿದೆ. ಇನ್ನೊಂದು ವಿಷಯವೇನೆಂದರೆ, ಈಗಾಗಲೇ ಗ್ರಾಮ ಸಭೆಗಳ ಮುಖಾಂತರ ನಾವು ನಿಯಮ 50ರ ಅಡಿಯಲ್ಲಿ

unedited copy

ಎಲ್ಲರಿಗೂ ತಿಳುವಳಿಕೆಯನ್ನು ಸಹ ಕೊಟ್ಟಿದ್ದೇವೆ. ಅಂದರೆ ಎಲ್ಲೆಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಅದರ ಬಗ್ಗೆ ನಮಗೆ ವರದಿಯನ್ನು ಕೊಟ್ಟರೆ ನಾವು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದೇವೆ. ಅದೇ ರೀತಿ ನಾವು ಎಷ್ಟೋ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಶಾಲಾ ಕಾಲೇಜು ಮತ್ತು ದೇವಸ್ಥಾನಗಳ ಹತ್ತಿರ ಮದ್ಯ ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೀರಿ. ಕರ್ನಾಟಕ ಅಬಕಾರಿ ಸನ್ನದುಗಳು ನಿಯಮಗಳು, 1967ರ ನಿಯಮ 5 ರಲ್ಲಿನ ನಿರ್ಬಂಧಗಳನ್ನು ಉಲ್ಲಂಘಿಸಿ ಯಾರು ಮದ್ಯದ ಅಂಗಡಿಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಾರೆ ಅವರಿಗೆ ಸ್ಪಷ್ಟವಾಗಿ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಸ್ಪಷ್ಟವಾದ ನಿರ್ದೇಶನವನ್ನು ಕೊಟ್ಟು, ಈಗಾಗಲೇ ಅವರ ಮೇಲೆ ಕೇಸನ್ನು ಸಹ ಹಾಕಿದ್ದಾರೆ. ಹಾಗೂ ಸದರಿ ಸನ್ನದುಗಳನ್ನು ಸ್ಥಳಾಂತರಿಸಿಕೊಳ್ಳಲು ಸಮಯವನ್ನು ಸಹ ಕೊಟ್ಟಿದ್ದಾರೆ. ಅಂದರೆ ಇಷ್ಟು ಸಮಯದೊಳಗಾಗಿ ಏನಾದರು ಮಾಡದೆ ಹೋದರೆ ನಿಮ್ಮ ಲೈಸೆನ್ಸ್ ಅನ್ನು ಕ್ಯಾನ್ಸಲ್ ಮಾಡುತ್ತೇವೆಂದು ಸಹ ಹೇಳಿದ್ದಾರೆ. ಆದರೆ ಅವರು ಮೇಲ್ಮನವಿ ಪ್ರಾಧಿಕಾರಿಗಳಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಹಾಗಾಗಿ ಅಲ್ಲಿ ವಿಚಾರಣೆಯ ಹಂತದಲ್ಲಿದೆ. ಒಟ್ಟು ಮೂರು ಕಡೆಗಳಲ್ಲಿ ಇವೆ. ಎಲ್ಲೆಲ್ಲಿ ಎಂದರೆ, ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನ ಪಟ್ಟಣದಲ್ಲಿ 2 ಮತ್ತು ಹಾವೇರಿ ಪಟ್ಟಣದಲ್ಲಿ 1 ಒಟ್ಟು 3 ಸನ್ನದುಗಳು ನಿಯಮಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿವೆ. ಅವುಗಳು ಯಾವುವು ಎಂದರೆ, 1. ಮೇ:ರವಿರಾಜ್ ಎಂಟರ್‌ಪ್ರೈಸಸ್, 2.ಶ್ರೀಮತಿ ಎಸ್.ಆರ್.ಕಲಾಲ, 3. ಶ್ರೀ ಎಸ್.ಕೆ.ಮೆಣಸಿನಹಾಳ. ಈ ಮೂರು ಕೇಸುಗಳಲ್ಲಿ ರೂಲ್ 5ನ್ನು ಉಲ್ಲಂಘನೆ ಮಾಡಿ ಶಾಲಾ ಕಾಲೇಜು ಮತ್ತು ಶೈಕ್ಷಣಿಕ ಕೇಂದ್ರಗಳು ಮತ್ತು ದೇವಸ್ಥಾನಗಳು ಇದ್ದ ಕಡೆ 100 ಮೀಟರ್ ದೂರದ ಅಂತರದಲ್ಲಿರಬೇಕು ಅಷ್ಟು ಅಂತರದಲ್ಲಿ ಇಲ್ಲ. ಅವುಗಳ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಒದಗಿಸಿದ್ದೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿಷಯವನ್ನು ತಿಳಿಸಿದರು. ಅಧಿಕೃತವಾಗಿ ಮಾರಾಟ ಮಾಡುವಂಥ ಮದ್ಯದ ಅಂಗಡಿಯಿಂದ, ಅಕ್ರಮವಾಗಿ ಮಾರಾಟ ಮಾಡುವಂಥವರು ತೆಗೆದುಕೊಂಡು ಹೋಗುವಾಗ ಇಂತಹ ಘಟನೆಗಳು ಆಗುತ್ತವೆ ಎಂದು ಹೇಳಿದರು. ನಾನು ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಸರ್ಕಾರದಿಂದ ಎಂ.ಎಸ್.ಐ.ಎಲ್. ಮದ್ಯದ ಅಂಗಡಿಯನ್ನು ನಡೆಸಲಾಗುತ್ತಿದೆ. ಅಲ್ಲಿ ಯಾರೋ, ಯಾವಾಗಲೋ ಯಾವುದೋ ಒಂದು ಪಾರ್ಟಿ ಇರಬಹುದು ಅಥವಾ ಮತ್ತೊಂದು ಕಾರ್ಯಕ್ರಮವಿರಬಹುದು, ಅವರು ಇವರಿಂದಲೇ ರಶೀದಿಯನ್ನು ಪಡೆದು ನಾಲ್ಕಾರು ಬಾಟಲ್‌ಗಳನ್ನು ತೆಗೆದುಕೊಂಡು ನೂರು, ಇನ್ನೂರು ಮೀಟರ್ ದೂರ

ಹೋಗುವುದರೊಳಗೆ ಪೊಲೀಸರು ಹಿಡಿದು ಕೇಸ್ ಹಾಕುತ್ತಾರೆ. ಆದರೆ ಅಧಿಕೃತವಾಗಿ ಮಾರಾಟ ಮಾಡುವಂತಹ, ಲೈಸೆನ್ಸ್ ತೆಗೆದುಕೊಂಡಿರುವಂತಹ ಅಂಗಡಿಯಿಂದ ಮದ್ಯವನ್ನು ಸೈಕಲ್ ಮೇಲೆ ತೆಗೆದುಕೊಂಡು ಹೋಗಿ ಬಸ್ ಸ್ಟ್ಯಾಂಡಿನಲ್ಲಿ, ದೇವಸ್ಥಾನದ ಆವರಣದಲ್ಲಿ, ಶಾಲಾ ಕಾಲೇಜುಗಳಲ್ಲಿ, ಮಸೀದಿಗಳಲ್ಲಿ ಮಾರಾಟ ಮಾಡುವಂಥವರ ಮೇಲೆ ಕೇಸನ್ನು ಹಾಕುತ್ತೇವೆ ಅದು ತಪ್ಪು ಎಂದು ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ಇಲ್ಲಿ ನಾಲ್ಕಾರು ಬಾಟಲ್‌ಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಲೈಸೆನ್ಸ್ ಕೊಟ್ಟಿದ್ದೀರಿ, ಆ ರೀತಿ ತೆಗೆದುಕೊಂಡು ಹೋಗುವಂಥವರ ಬಗ್ಗೆ ಪೊಲೀಸರಿಗೆ ತಿಳಿದಿರುತ್ತದೆ. ಆದರೆ ಮದ್ಯದ ಅಂಗಡಿಯಿಂದ ಮದ್ಯವನ್ನು ತೆಗೆದುಕೊಂಡು ಹೋಗಿ ಸೈಕಲ್ ಮೇಲೆ ಅದನ್ನು ಮಾರಾಟ ಮಾಡುವುದು ಪೊಲೀಸರಿಗೆ ತಿಳಿದಿರುವುದಿಲ್ಲವೆ? ಎರಡನೆಯದಾಗಿ......

**ಉಪ ಸಭಾಪತಿಯವರು:-** ಈಗ ಸರ್ಕಾರ ಏನು ಉತ್ತರ ಕೊಟ್ಟಿದೆ, ಅದಕ್ಕೆ ನೀವು ಉಪ ಪ್ರಶ್ನೆ ಏನಾದರು ಇದ್ದರೆ ಕೇಳಿ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ನನ್ನ ಮೂರನೇ ಪ್ರಶ್ನೆಗೆ ಅನುಬಂಧ-2ರಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಮೆ.ರವಿರಾಜ ಎಂಟರ್‌ಪ್ರೈಸಸ್, ಸಿಎಲ್-2 ಸನ್ನದು, ಪಾಲುದಾರಿಕೆ ಸಂಸ್ಥೆ, ಸಿ.ಟಿ.ಎಸ್. ನಂ.3323-ಇ ಹಾಗೂ ಮನೆ ನಂ:492, ವಾರ್ಡ್ ನಂ.3 ಸಿಎಲ್-2 ಸನ್ನದು ಸಾ:ರಾಣೇಬೆನ್ನೂರು ಸದರಿ ಸನ್ನದು ಕಟ್ಟಡದಿಂದ 64 ಮೀಟರ್ ಅಂತರದಲ್ಲಿ ಅಸ್ಮಾನ್-ಎ-ಹುಜೂರ ಹಜರತ್ ಸೈಯದ್ ಜಮಾಲಾ-ಶಾ-ವಲಿ ಮಸೀದಿ ಹಾಗೂ 74 ಮೀಟರ್ ಅಂತರದಲ್ಲಿ ಮೌನೇಶ್ವರ (ಶ್ರೀ ಜಗದ್ಗುರು) ದೇವಸ್ಥಾನದ ಆವರಣದಲ್ಲಿ ಶ್ರೀ ಜಗದ್ಗುರು ಮೌನೇಶ್ವರ ಪ್ರೌಢ ಶಾಲೆ, 91.70 ಮೀಟರ್ ಅಂತರದಲ್ಲಿ ಸರ್ಕಾರಿ ಪ್ರಾಥಮಿಕ ಉರ್ದು ಗಂಡುಮಕ್ಕಳ ಶಾಲೆ, ಮತ್ತು 53.50 ಮೀಟರ್ ಅಂತರದಲ್ಲಿ ಮಾರ್ಕೆಟ್, ಮಸ್ಜಿದ್ ಅಹಲೆ- ಹದೀಪ್ ಮಸೀದಿ ಬರುತ್ತಿವೆ ಎಂದು ಹೇಳುತ್ತಿದ್ದಾರೆ. ಇನ್ನು ಎರಡನೆಯದಾಗಿ, ಶ್ರೀಮತಿ ಎಸ್.ಆರ್.ಕಲಾಲ, ಸಿಎಲ್-2 ಸನ್ನದು. ಅವರದು ಇದೆ. ಅಲ್ಲಿ 100 ಮೀಟರ್ ಒಳಗಡೆ ಲೈಸೆನ್ಸ್ ಕೊಡಬಾರದು ಎಂದು ಸರ್ಕಾರ ಹೇಳುತ್ತಿದೆ. ಅಂದರೆ 100 ಮೀಟರ್ ಒಳಗೆ ಮದ್ಯದ ಅಂಗಡಿ ಇದ್ದರೆ ಅಂದರೆ ಶಾಲಾ ಕಾಲೇಜು ಇರಬಹುದು, ಮಸೀದಿ ಇರಬಹುದು, ದೇವಸ್ಥಾನಗಳಿರಬಹುದು, ಇವುಗಳು ಇದ್ದ ಕಡೆ ಲೈಸೆನ್ಸ್ ಕೊಡಬಾರದು ಎಂದು ಒಂದು ರೂಲ್ ಇದೆ ಎಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಸಚಿವರೇ ತಿಳಿಸಿದ್ದಾರೆ ಇಂಥಿಂಥ ದೇವಸ್ಥಾನ, ಇಂಥಿಂಥ ಶಾಲಾ ಕಾಲೇಜುಗಳು ಸನ್ನದು ಕಟ್ಟಡದಿಂದ 53, 74 ಮೀಟರ್ ಅಂತರದಲ್ಲಿದೆ ಎಂದು ತಿಳಿಸಿದ್ದಾರೆ. ಆದರೆ

unedited copy

ಸರ್ಕಾರ ವರ್ಷಕ್ಕೊಮ್ಮೆ ಅಥವಾ 3 ವರ್ಷಕ್ಕೊಮ್ಮೆ ರಿನೀವಲ್ ಮಾಡುತ್ತಾರೆ. ಲೈಸೆನ್ಸ್ ಯಾವಾಗಾದರು ಕೊಡಬಹುದು, ಆದರೆ ರಿನೀವಲ್ ಮಾಡುವ ಸಮಯದಲ್ಲಾದರು ಅವರಿಗೆ ಕಂಡೀಷನ್ ಹಾಕಿ ನೀವು ಇದನ್ನು ತೆಗೆಯಲಿಲ್ಲವೆಂದರೆ ನಾವು ರಿನೀವಲ್ ಮಾಡುವುದಿಲ್ಲ ಎಂದು ಹೇಳಬಹುದಲ್ಲವೆ? ಈ ವಿಷಯ ಅಧಿಕಾರಿಗಳಿಗೆ ತಿಳಿದಿರುವುದಿಲ್ಲವೆ? ಅವರಿಗೆ ಗೊತ್ತಿದ್ದರೂ ಸಹ ಅಲ್ಲಿ ಓಡಾಡುವಂತಹ ಹೆಣ್ಣು ಮಕ್ಕಳಿಗೆ, ಶಾಲಾ ಮಕ್ಕಳಿಗೆ, ಮರ್ಯಾದಸ್ಥರಿಗೆ ಅಡಚಣೆ ಮಾಡುವಂಥದ್ದಕ್ಕೆ ಇಲಾಖೆಯವರೇ ಒತ್ತನ್ನು ಕೊಡುತ್ತಾರೆ ಎಂಬುದು ನನ್ನ ಅಭಿಪ್ರಾಯ. ಆದಕಾರಣ ಮಾನ್ಯ ಸಚಿವರು ಇಂತಹ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಈ ವಿಚಾರ ಕೇವಲ ಹಾವೇರಿ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಇದೇ ವಿಚಾರದ ಬಗ್ಗೆಯೇ ಚರ್ಚೆ ನಡೆಯುತ್ತಿದೆ. ಅಕ್ರಮ ಮದ್ಯ ಮಾರಾಟ ಮಾಡುವಂಥದ್ದು ಎಲ್ಲಾ ಜಿಲ್ಲೆಗಳಲ್ಲಿಯೂ ಆಗುತ್ತಿದೆ. ಆದರೆ ಇದಕ್ಕೆ ಮೈ ಮುರಿದು, ದುಡಿದು ತಿನ್ನುವಂಥವರಿಗೆ ಈ ನಶೆ ಬೇಕಾಗಿರುತ್ತದೆ. ಸಾರಾಯಿ ಬಂದ್ ಆದಮೇಲೆ ಈ ವಿಚಾರದಲ್ಲಿ ಅವರಿಗೆ ಬಹಳ ಕಷ್ಟವಾಗಿದೆ. ಅಕ್ರಮ ಮದ್ಯ ಮಾರಾಟ ಮಾಡುತ್ತಾರೆ ಅದೇನು ಸೆಕೆಂಡ್ಸ್ ಅಥವಾ ಥರ್ಡ್ಸ್ ಅಲ್ಲ. ಪಾನೀಯ ನಿಗಮಗಳಿಂದ ಅಥವಾ ಬೇರೆ ಮದ್ಯದ ಅಂಗಡಿಯಿಂದ ತೆಗೆದುಕೊಂಡು ಹೋಗಿ ಅಲ್ಲಿ ಮಾರಾಟ ಮಾಡುತ್ತಿರುತ್ತಾರೆ. ಆದರೂ ಸಹ ಇದು ಅಕ್ರಮ ಮದ್ಯ. ಎಲ್ಲೋ ಒಂದು ಕಡೆ ಅಥವಾ ಅಂಗಡಿಯಲ್ಲಿ ಮಾರಾಟ ಮಾಡುವುದಕ್ಕೆ ಅವರಿಗೆ ಲೈಸೆನ್ಸ್ ಇರುವುದಿಲ್ಲ. ಹಾಗಾಗಿ ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಪ್ರತೀ ಗ್ರಾಮಪಂಚಾಯಿತಿಗಳಲ್ಲಿ ಪಾನೀಯ ನಿಗಮದಿಂದ ಒಂದು ಅಂಗಡಿಯನ್ನು ಕೊಡಬೇಕು. ಏಕೆಂದರೆ ಸಿಎಲ್-2 ಮಾಡುವುದರಿಂದ ಅಲ್ಲಿ ಕಷ್ಟವಾಗುತ್ತದೆ. ಸಿಎಲ್-2 ಮಾಡಿದರೆ ಅವರಿಗೆ ಲೈಸೆನ್ಸ್ ಫೀ ಕಟ್ಟುವುದಕ್ಕೆ ಆಗುವುದಿಲ್ಲ. ಹಾಗಾಗಿ ಪಾನೀಯ ನಿಗಮದಿಂದ ಪ್ರತೀ ಗ್ರಾಮಪಂಚಾಯಿತಿಗೆ ಒಂದು ಅಂಗಡಿಯನ್ನು ಇಟ್ಟರೆ ಈ ಎಲ್ಲಾ ಸಮಸ್ಯೆಗಳು ನಿವಾರಣೆಯಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸೋಮಣ್ಣನವರು ಇಂಥಿಂಥ ಪ್ರದೇಶದಲ್ಲಿ ನಾವು ಎಷ್ಟು ಸಲ ಹೇಳಿದರೂ ಕೂಡ ದೂರುಗಳನ್ನು ಕೊಟ್ಟಿದ್ದರೂ ಕೂಡ ಇಂಥ ಸ್ಥಳದಲ್ಲಿ ನಿಯಮ ಬಾಹಿರವಾಗಿ ಈ ಸನ್ನದು ನಡೆಸುತ್ತಿದ್ದಾರೆಂದು ನಿರ್ದಿಷ್ಟವಾಗಿ ಕೇಳಿದ್ದಾರೆ. ಅದನ್ನು ತೆರವುಗೊಳಿಸುವುದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದರ ಬಗ್ಗೆ ನಿರ್ದಿಷ್ಟವಾಗಿ ಉತ್ತರ ಹೇಳಿ.

unedited copy

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಈಗ ದೇವಸ್ಥಾನ, ಶಾಲಾ ಕಾಲೇಜುಗಳು, ಚರ್ಚ್, ಮಸೀದಿ ಇವುಗಳಿಂದ 100 ಮೀಟರ್ ಅಂತರದೊಳಗೆ ಮದ್ಯದ ಅಂಗಡಿ ಇರಬಾರದು, ಇಂತಹ ಕಡೆ ಮದ್ಯದ ಅಂಗಡಿಗಳನ್ನು ಪ್ರಾರಂಭಿಸಲು ಲೈಸೆನ್ಸ್ ಕೊಡಬಾರದು, ಒಂದು ವೇಳೆ ಕೊಟ್ಟರೆ ಅದು ಅಫೆನ್ಸ್ ಎಂದು ಅಬಕಾರಿ ನಿಯಮದಲ್ಲಿದೆ. ಅದು ಎಕ್ಸೈಜ್ ರಿನೀವಲ್ ಅಲ್ಲ. ಅದು ಹೊಸದಾಗಿ ಒಂದು ವರ್ಷಕ್ಕೆ ಲೈಸೆನ್ಸ್ ಕೊಡುವುದು.

(ಮುಂದು)

unedited copy

**ಶ್ರೀ ಸಂದೇಶ ನಾಗರಾಜ(ಮುಂದು)**:- ಅಂಗಡಿ ಮಾಡಿ 40 ವರ್ಷ ಆಗಿರುತ್ತದೆ ಪಕ್ಕದಲ್ಲಿ ಸ್ಕೂಲ್ ಕಟ್ಟುತ್ತಾರೆ, ದೇವಸ್ಥಾನ ಕಟ್ಟಿಸುತ್ತಾರೆ. ಅವರಿಗೆ ಏನು ರೂಲ್ಸ್ ಮಾಡುತ್ತೀರಿ? ದೇವಸ್ಥಾನವನ್ನು ಕಿತ್ತು ಹಾಕುತ್ತೀರಾ ಅಥವಾ ಅಂಗಡಿಯನ್ನು ತೆಗೆಯುತ್ತೀರಾ? ಈ ರೀತಿ ಸಮಸ್ಯೆಗಳು ಇವೆ. ಅಬಕಾರಿ ರೂಲ್ಸ್ ಬಗ್ಗೆ ಸೋಮಣ್ಣನವರು ಹೇಳಿದರು, renewal ಅಲ್ಲ ಅದು ಅಬಕಾರಿ ರೂಲ್ಸ್ ನನಗೂ ಗೊತ್ತು, ನನ್ನ ಹತ್ತಿರವು 5 ಲೈಸೆನ್ಸ್‌ಗಳು ಇವೆ.  ಪ್ರತಿ ವರ್ಷ ಹೊಸ ಲೈಸೆನ್ಸ್ ಕೊಡುವುದು.

**ಶ್ರೀ ನಾರಾಯಣಸಾ ಭಾಂಡಗೆ**:- ಶಾಲೆಯಿಂದ 100 ಮೀಟರ್ ದೂರದಲ್ಲಿ ಸೆರಾಯಿ ಅಂಗಡಿ ಇರಬಾರದು..

**ಶ್ರೀ ಸೋಮಣ್ಣ ವಿ.ಬೇವಿನಮರದ**:- ಮಾನ್ಯ ಸಭಾಪತಿಗಳೆ, ದೇವಸ್ಥಾನಕ್ಕೆ ಹೋಗಿ ಹಣ್ಣು-ಕಾಯಿ ಮಾಡಿಸಿಕೊಂಡು ದೇವರಿಗೆ ಬೇಡಿಕೊಂಡು  ಬನ್ನಿ ಎಂದು ಹೇಳುವವರು ನಮ್ಮ ಉಸ್ತುವಾರಿ ಮತ್ತು ಮುಜರಾಯಿ ಮಂತ್ರಿಗಳೆ, ಅದರ ಜೊತೆಗೆ  ಮದ್ಯೆದಂಗಡಿಗೆ ಲೈಸೆನ್ಸ್ ಕೊಡುವುದು, ಮದ್ಯ ಮಾರಾಟ ಮಾಡಲು ಅನುಕೂಲ ಮಾಡಿಕೊಡುವವರು ಅವರೆ. ಇಲ್ಲಿ ಮಾನ್ಯ ಶಿಕ್ಷಣ ಸಚಿವರು ಇದ್ದಾರೆ. ಈಗ ಶಿಕ್ಷಕರ ಬಗ್ಗೆ ಚರ್ಚೆ ಮಾಡಲಾಯಿತು. ಹಾಗೆಯೇ ಶಾಲೆಗೆ ಹೋಗುವ ಮಕ್ಕಳ ಬಗ್ಗೆಯು ಚರ್ಚೆ ಮಾಡಬೇಕು. ಶಾಲೆಗೆ ಹೋದರೆ ಶಿಕ್ಷಕರು, ಶಾಲೆಗೆ ಹೋಗದೆ ಇದ್ದರೆ ಎಂತಹ ಶಿಕ್ಷಕರು ಅವರು? ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಮತ್ತು ಅಬಕಾರಿ ಸಚಿವರು ಉತ್ತರ ಕೊಡಬೇಕೆಂದು ನನ್ನ ವಿನಂತಿ.

**ಶ್ರೀ ಮನೋಹರ ತಹಸೀಲ್ದಾರ**:- ಮಾನ್ಯ ಸಭಾಪತಿಗಳೆ, ಸಂದೇಶ ನಾಗರಾಜರವರು ಹೇಳುವುದರಲ್ಲಿಯು ಅರ್ಥವಿದೆ. ಮೊದಲು ಲೈಸೆನ್ಸ್ ಕೊಟ್ಟಿರುತ್ತಾರೆ ನಂತರ ಈ ಎಲ್ಲವು ಬಂದುಬಿಡುತ್ತವೆ. ಅವರು ಹೇಳುವುದು ನಿಜವೆ. ಆದರೂ ಕೂಡಾ ಇವರು ಹಿಂದೆ ಕೊಟ್ಟಿರುವಂತಹ ಲೈಸೈನ್ಸ್‌ಗಳು. 23 ವರ್ಷಗಳಿಂದ ಸಿಎಲ್-2 ಮತ್ತು ಸಿಎಲ್-9 ಸರ್ಕಾರ ಕೊಟ್ಟೆ ಇಲ್ಲ. ಹಿಂದಿನ ಯಾವ ಸರ್ಕಾರವು 23 ವರ್ಷಗಳಿಂದ ಕೊಟ್ಟಿರುವುದಿಲ್ಲ. ಹಿಂದೆ ಅರ್ರ್ಯಾಕ್ ಇತ್ತು ಅದು ಕೂಡಾ ರದ್ದಾಯಿತು. ಹತ್ತಿರದಲ್ಲಿಯೇ ಅದು ಸಿಗಲಿ ಎಂದು ಪಂಚಾಯಿತಿಗೆ ಒಂದು ಕೊಡಿ ಎಂದು ಕೇಳುತ್ತಿದ್ದಾರೆ. ಬೇಡಿಕೆ ಇದೆ.

**ಶ್ರೀ ಅಶ್ವಥನಾರಾಯಣ**:- ಪಂಚಾಯಿತಿಗೆ ಒಂದು ಕೊಡುವುದನ್ನು ನಾವು ಒಪ್ಪುವುದಿಲ್ಲ.

**ಶ್ರೀ ಸೋಮಣ್ಣ ವಿ.ಬೇವಿನಮರದ**:- ಅಧಿಕಾರ ನಿಮ್ಮ ಕೈಯಲ್ಲಿಯೇ ಇದೆ, ಶಾಲೆ-ಕಾಲೇಜುಗಳನ್ನು ಮುಚ್ಚಿ  ಕೀ ಹಾಕಿಬಿಡಿ. ಆ ಜಾಗದಲ್ಲಿ ಮದ್ಯಂಗಡಿಯನ್ನು ಪ್ರಾರಂಭ ಮಾಡಿ.

unedited copy

**ಶ್ರೀ ಎಸ್.ಆರ್.ಪಾಟೀಲ್:-** ಮಂತ್ರಿಗಳೆ ನೀವು ನೇರವಾಗಿ ಉತ್ತರವನ್ನು ಕೊಟ್ಟುಬಿಡಿ.

**ಶ್ರೀ ಸೋಮಣ್ಣ ವಿ.ಬೇವನಮರದ:-** ಮಾನ್ಯ ಸಭಾಪತಿಗಳೆ, 15,000 ರೂ.ಗಳನ್ನು ಶಿಕ್ಷಣಕ್ಕಾಗಿ ಏಕೆ ಇಡುತ್ತೀರಿ? ಇಡೀ ಶಾಲೆಗಳನ್ನು, ದೇವಸ್ಥಾನಗಳನ್ನು ಬಂದ್ ಮಾಡಿಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ. ಮಂತ್ರಿಗಳು ತುಂಬಾ ಹಿರಿಯರು. ಅವರಲ್ಲಿ ನಾನು ಒಂದು ಮನವಿ ಮಾಡಿಕೊಳ್ಳುತ್ತೇನೆ, ತಾವು ಉಸ್ತುವಾರಿ ಮಂತ್ರಿಗಳಾಗಿದ್ದರಿಂದ ನಿಮ್ಮ ಅಬಕಾರಿ ಎಸ್‌ಪಿ ಯವರನ್ನು, ಜಿಲ್ಲಾಧಿಕಾರಿಗಳನ್ನು ಕರೆದು ಚರ್ಚೆ ಮಾಡಿ 24 ಗಂಟೆಗಳಲ್ಲಿ ಅಕ್ರಮ ಸರಾಯಿ ದಂಧೆಯನ್ನು ನಿಲ್ಲಿಸಬೇಕೆಂದು ಆದೇಶ ಕೊಟ್ಟು ನಿಲ್ಲಿಸಲು ಆಗುವುದಿಲ್ಲವೆ ನಿಮಗೆ?

**ಶ್ರೀ ಮನೋಹರ ತಹಸೀಲ್ದಾರ:-** ಆಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆಗುತ್ತದೆ ಎನ್ನುವುದಾದ್ದರೆ ಮಾಡಿ, ಇಂತಹ ವಿಚಾರಗಳೆಲ್ಲವನ್ನು ಏಕೆ ಇಟ್ಟುಕೊಳ್ಳುತ್ತೀರಿ?

**ಶ್ರೀ ಮನೋಹರ ತಹಸೀಲ್ದಾರ:-** ಮಾನ್ಯ ಸಭಾಪತಿಗಳೆ, ಈಗಾಗಲೇ 194 ಕೇಸ್‌ಗಳನ್ನು ದಾಖಲು ಮಾಡಲಾಗಿದೆ. ಈ ರೀತಿ ಅಕ್ರಮ ಸರಾಯಿ ಧಂದೆ ಎಲ್ಲಿ ನಡೆಯುತ್ತಿದೆ ಎನ್ನುವುದು ನಮಗೆ ಕಂಡುಬಂದಿದೆ ಅಲ್ಲಿ ಕೇಸ್‌ಗಳನ್ನು ಹಾಕಲಾಗಿದೆ. ಇನ್ನು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಲು ನಾವು ಮುಂದಾಗುತ್ತೇವೆ. ಇದರಲ್ಲಿ ಎರಡು ಮಾತಿಲ್ಲ. ಬೇಡಿಕೆ ಇದೆ ಅಷ್ಟೆ, ಎಲ್ಲೇಲಿ ಮಾರಾಟ ಮಾಡುತ್ತಾರೆ ಎನ್ನುವ 197 ಹಳ್ಳಿಗಳ ಚಿತ್ರವನ್ನು ನಿಮಗೆ ಕೊಡಲಾಗಿದೆ. ಇದನ್ನು ಬಿಗಿಯಾದ ಕ್ರಮವನ್ನು ತೆಗೆದುಕೊಂಡು ಇವುಗಳನ್ನು ಬಂದ್ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ರೂಲ್ 50ರ ಕೆಳಗೆ ಈಗಾಗಲೇ ಗ್ರಾಮ ಸಭೆಗಳನ್ನು ಮಾಡಿ ಜನರಿಗೆ ತಿಳುವಳಿಕೆ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಈ ವಿಚಾರವಾಗಿ ತಿಳಿದುಕೊಂಡವರು ಇದ್ದರೆ ಇತರರಿಗೆ ತಿಳಿಸಿ ಎಂದು ಹೇಳಿದ್ದೆವೆ. ಇನ್ನು ಅಂಗಡಿಯಲ್ಲಿ ಇರುವುದನ್ನು ತೆಗೆದುಕೊಂಡು ಹೋಗಿ ಅವನು ಬೇರೆ ಕಡೆ ಮಾರಿದ್ದರೆ ಸರ್ಕಾರ ಹೇಗೆ ಜವಾಬ್ದಾರಿಯಾಗುತ್ತದೆ? ರಾಣೇಬೆನ್ನೂರಿನ ಎರಡು ಕೇಸ್‌ಗಳು ಮತ್ತು ಹಾವೇರಿಯ ಒಂದು ಕೇಸ್‌ನಲ್ಲಿ ನಾವು ಸ್ಪಷ್ಟವಾಗಿ ಶಾಲೆ-ಕಾಲೇಜುಗಳು ಎಷ್ಟು ದೂರದಲ್ಲಿವೆ ಎನ್ನುವುದನ್ನು ಹೇಳಿದ್ದೇವೆ ತಕ್ಷಣ ಅದನ್ನು ಸ್ಥಳಾಂತರಿಸಬೇಕೆಂದು ರೂಲ್ 5 ಅಡಿಯಲ್ಲಿ ನೋಟಿಸ್ ಕೊಟ್ಟರು ಅವರು ನ್ಯಾಯಾಲಯಕ್ಕೆ ಹೋಗಿ ಸ್ಟೇ ತಂದಿದ್ದಾರೆ. ಸ್ಟೇ ತೆಗೆಯುವವರೆಗೆ ಏನು ಮಾಡಲು

unedited copy

ಆಗುವುದಿಲ್ಲ. ಇದನ್ನು ನಾವು ಕೊಟ್ಟಿರುವುದಿಲ್ಲ. 23 ವರ್ಷಗಳಿಂದ ಯಾವ ಸರ್ಕಾರವು ಒಂದು ಲೈಸೆನ್ಸ್ ಕೊಟ್ಟಿರುವುದಿಲ್ಲ.

**ಶ್ರೀ ಸೋಮಣ್ಣ ವಿ.ಬೇವಿನಮರದ:–** ಶಾಲೆ–ಕಾಲೇಜು, ದೇವಸ್ಥಾನಗಳು ಸ್ಥಾಪನೆಯಾಗುವುದಕ್ಕಿಂತ ಮೊದಲೇ ಲೈಸೆನ್ಸ್ ಕೊಟ್ಟಿದ್ದರೆ ಶಾಲೆ–ಕಾಲೇಜು, ದೇವಸ್ಥಾನಗಳನ್ನು ಬಂದ್ ಮಾಡಿಬಿಡಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಪ್ರಶ್ನೋತ್ತರ ಅವಧಿಯಲ್ಲಿ ಈ ರೀತಿ ಮಾಡಿದರೆ ಹೇಗೆ? ಇದು ಪ್ರಶ್ನೋತ್ತರ ಅವಧಿಯೇ ಅಥವಾ ಪ್ರಶ್ನೋತ್ತರ ದಿನವೆ ಎನ್ನುವುದು ಗೊತ್ತಾಗುತ್ತಿಲ್ಲ.

**ಉಪಸಭಾಪತಿಯವರು:–** ದಯಮಾಡಿ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಳ್ಳಿ, ಮಾನ್ಯ ಸದಸ್ಯರಾದ ಸೋಮಣ್ಣನವರು ಏನು ಪ್ರಶ್ನೆ ಕೇಳಿದ್ದಾರೆ. ಆ ಭಾಗ ಯಾವ–ಯಾವ ಸನ್ನದಗಳು ಇವೆ, ಅವುಗಳ ವರದಿ ತರಿಸಿಕೊಂಡು ನಿಯಮಬಾಹಿರವಾಗಿದ್ದರೆ ಕೂಡಲೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಮನೋಹರ ತಹಸೀಲ್ದಾರ:–** ನಿಯಮಬಾಹಿರವಾಗಿರುವುದನ್ನು ಬಂದ್ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ.

unedited copy

**ಪ್ರಶ್ನೆ ಸಂಖ್ಯೆ: 285**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಬಹಳ ಸೊಗಸಾಗಿ ಪಾಸಿಟಿವ್ ಆಗಿ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಎಂದರೆ, ಬೆಂಗಳೂರಿನ ಪ್ರತಿ ಬಡಾವಣೆಯಲ್ಲಿ, ಪ್ರತಿ ವಾರ್ಡ್‌ನಲ್ಲಿ ಸಿನಿಮಾ ಜಾಹೀರಾತುಗಳನ್ನು ಪ್ರದರ್ಶನ ಮಾಡಲು ಫಲಕಗಳ ಅಳವಡಿಕೆಗೆ ಸ್ಥಳಗಳನ್ನು ಗುರುತಿಸಲಾಗಿದೆಯೇ ಮತ್ತು ಇದಕ್ಕೆ ಬಿಬಿಎಂಪಿ ಭರವಸೆಯನ್ನು ನೀಡಿತ್ತು. ಈಗ ಆ ಸ್ಥಳಗಳನ್ನು ಗುರುತಿಸಲಾಗಿದೆಯೇ? ಗುರುತಿಸುವ ಮತ್ತು ಪರಿಶೀಲಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು ಇದನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುತ್ತದೆ ಎಂದು ಹೇಳಿದ್ದಾರೆ. ನನ್ನ ಎರಡನೆಯ ಪ್ರಶ್ನೆ, ಕನ್ನಡ ಚಲನಚಿತ್ರಗಳು ಪ್ರಚಾರವಿಲ್ಲದೆ, ನಷ್ಟ ಅನುಭವಿಸುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಫಲಕಗಳ ಅಳವಡಿಕೆಗೆ ಸ್ಥಳಗಳನ್ನು ಶೀಘ್ರವಾಗಿ ಗುರುತಿಸಲು ಪ್ರಯತ್ತಿಸುವುದೆ ಎನ್ನುವುದಕ್ಕೆ, ಒಂದು ಮಾತನ್ನು ತುಂಬಾ ಚೆನ್ನಾಗಿ ಹೇಳಿದ್ದಾರೆ, ಚಲನಚಿತ್ರ ವಾಣಿಜ್ಯ ಮಂಡಳಿ ವತಿಯಿಂದ ಸೂಕ್ತ ಸ್ಥಳ ತಪಾಸಣೆ ಮಾಡಿ ಕ್ರಮ ಜರುಗಿಸಲಾಗುತ್ತದೆ ಎಂದು ಹೇಳಿದ್ದಾರೆ. ಜಾಹೀರಾತನ್ನು ನಂಬಿ ಬದುಕುವಂತಹ ಉದ್ಯಮ ಯಾವುದಾದ್ದರು ಇದ್ದರೆ ಅದು ಸಿನೇಮಾ. ನನಗೆ ತಿಳಿದಮಟ್ಟಿಗೆ 2009ರಲ್ಲಿ ನಾವು ಬಿಬಿಎಂಪಿ ಜೊತೆಯಲ್ಲಿ ಚರ್ಚೆ ಮಾಡಿದ್ದಾಗ, 50 hoardings ಕೊಡುತ್ತೇವೆ ಎಂದು ಹೇಳಿದರು. ಅವರು ಹೇಳಿದ ಹಾಗೆ ಎಲ್ಲ ಹುಡುಕಿ 6ತಿಂಗಳಲ್ಲಿ ಸ್ಥಳಾವಕಾಶವನ್ನು ಮಾಡಿ ಕೊಟ್ಟಿದ್ದೆವೆ.

**ಉಪಸಭಾಪತಿಯವರು:-** ನಿಮಗೆ ಏನು ಆಗಬೇಕು ಅದನ್ನು ಕೇಳಿ.

**ಶ್ರೀಮತಿ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಗಳೆ, ಪ್ರತಿ ವಾರ್ಡ್‌ನಲ್ಲಿ ನಮಗೆ 10 hoardings ಕೊಡಿ ಎಂದು ನಾವು ಕೇಳಿದ್ದೆವು. ಪೋಸ್ಟರ್‌ಗಳನ್ನು ಹಾಕಬೇಡಿ ಸೌದರ್ಯ ಹಾಳಾಗುತ್ತದೆ ಎಂದು ಹೇಳಿದ್ದಾರೆ. ಹಾಕಬೇಡಿ ಎಂದರೆ ನಾವು ಎಲ್ಲಿ ಜಾಹೀರಾತು ಹಾಕುವುದು? ಜಾಹೀರಾತುಗಳನ್ನೆ ನಂಬಿಕೊಂಡು ಬದುಕುವವರು ನಾವು. ನಮಗೆ hoardings ಕೊಡಿ. ನಾವೇ ಸ್ಥಳವನ್ನು ಹುಡುಕಿ ಇಂತಹ ಕಡೆ ಎಂದು ಕೇಳುತ್ತೇವೆ, ನೀವು ಹೇಳಿದ ಹಾಗೆಯು ಕೇಳುತ್ತೇವೆ.

(ಮುಂದು)

unedited copy

**ಶ್ರೀಮತಿ ಜಯಮಾಲಾ ರಾಮಚಂದ್ರ (ಮುಂದು)**

ಅವರು ಹೇಳಿದಂತೆ ಕಾನೂನು ಪ್ರಕಾರ ಒಪ್ಪಿಕೊಳ್ಳುತ್ತೇವೆ, ಆದ್ದರಿಂದ ನಮ್ಮ ಉದ್ಯಮಕ್ಕೆ ಒಂದು ಅವಕಾಶ ಮಾಡಿಕೊಡಬೇಕು. ಕೆಎಂಸಿ ಕಾಯ್ದೆಯಡಿ ಕ್ರಮ ಕೈಗೊಳ್ಳಲು ಎಷ್ಟು ಸಮಯ ಬೇಕು? 2009ರಿಂದ 50 hoardings ಕೊಡುತ್ತೇವೆ ಎಂದು ಇಷ್ಟು ದಿನಗಳು ಕಳೆದಿವೆ. ಇವತ್ತು ಪೋಸ್ಟರ್ ಹಾಕಬಾರದು ಎ, ಬಿ ಮತ್ತು ಸಿ ವಲಯಗಳೆಂದು ಮಾಡಲಾಗಿದೆ. ಈ ವಲಯಗಳಲ್ಲಿ ಹಾಕುವುದಕ್ಕೆ ಆಗದಿದ್ದಾಗ ನಾವು ಎಲ್ಲಿ ಹೋಗಬೇಕು? ಉದ್ಯಮವು ನಷ್ಟದಲ್ಲಿದೆ. ಒಂದು ವಾರಕ್ಕೆ ಸುಮಾರು 14ರಿಂದ 16 ಸಿನಿಮಾಗಳು ಬಿಡುಗಡೆಯಾಗುತ್ತವೆ. ದಯವಿಟ್ಟು hoardings ಹಾಕಲು ಅವಕಾಶ ಮಾಡಿಕೊಡಬೇಕು.

ಇನ್ನು ಇದರ ಜವಾಬ್ದಾರಿಯನ್ನು ವಾಣಿಜ್ಯ ಮಂಡಳಿಗೆ ಕೊಡುವ ಬಗ್ಗೆ ಕೇಳಿದ್ದೇನೆ. ಒಂದು accountability, ಪೋಸ್ಟರ್‌ಗಳ ಜವಾಬ್ದಾರಿ ಮತ್ತು ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಈ ಮಾತನ್ನು ಕೇಳಿದ್ದೇನೆ. ಕೊನೆಯ ಪ್ರಶ್ನೆ ‘ ಮೇಲಿನ ವಿಷಯಗಳ ಬಗ್ಗೆ ಸರ್ಕಾರದ ಚಿಂತನೆಗಳೇನು?’ ಎಂಬ ಪ್ರಶ್ನೆಗೆ ಉತ್ತರದಲ್ಲಿ ಖಾಲಿ ಬಿಟ್ಟಿದ್ದಾರೆ. ದಯವಿಟ್ಟು ನಮ್ಮ ಚಿತ್ರರಂಗದ ಬಗ್ಗೆ ಪ್ರೀತಿಯಿಂದ ಏನಾದರೂ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಸಭೆಯಿಂದ ಸಿನಿಮಾ ಪೋಸ್ಟರ್ಸ್ ಹಾಕುವುದಕ್ಕೆ ಪ್ರತಿಯೊಂದು ವಲಯದಲ್ಲಿ ಬೋರ್ಡ್ ಮಾಡಿಸಿದರೆ ಸರ್ಕಾರಕ್ಕೆ ಆದಾಯ ಜಾಸ್ತಿಯಾಗುತ್ತದೆ. ಬಹಳ ವರ್ಷಗಳ ಹಿಂದೆ ನಗರಸಭೆಯವರು ಬೋರ್ಡುಗಳನ್ನು ಹಾಕಿ ಬರೀ ಸಿನಿಮಾ ಪೋಸ್ಟರ್ಸ್ ಮಾತ್ರ ಹಾಕುತ್ತಿದ್ದರು. ಆಗ ಸಿನಿಮಾ ಪೋಸ್ಟರ್‌ಗಳಿಗೆ ಸ್ಟಾಂಪ್ಸ್ ಹಾಕಿಸುವ ಅವಶ್ಯಕತೆ ಬರುವುದಿಲ್ಲ. ಅದೇ ಬೋರ್ಡ್ ಮೇಲೆ ಅಂಟಿಸಬೇಕು, ಟ್ಯಾಕ್ಸ್ ಕೊಡಬೇಕು. ಅಷ್ಟನ್ನು ಮಾಡಬಹುದಾಗಿದೆ. ಆದರೆ ಈಗ ಟ್ಯಾಕ್ಸ್ ಹಾಕಿಕೊಂಡು ಬಂದು ಊರಿನವರ ಗೋಡೆ ಮೇಲೆ ಅಂಟಿಸುತ್ತಾರೆ. ನಗರ ಸಭೆಯವರು ಜನ ನೋಡುವ ಕಡೆ ಐದಾರು ಸೀಮೆಂಟ್ ಬೋರ್ಡ್‌ಗಳನ್ನು ಮಾಡಿಸಿದರೆ ಅಲ್ಲಿ ಮಾತ್ರ ಅಂಟಿಸಿದಾಗ ಜನರು ನೋಡುತ್ತಾರೆ. ನಗರ ಸಭೆಗೂ ಆದಾಯ ಬರುವುದರಿಂದ ಇದರ ಬಗ್ಗೆ ಚಿಂತನೆ ಮಾಡಬೇಕು.

unedited copy

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಜಯಮಾಲಾರವರು ಅಧ್ಯಕ್ಷರಾಗಿದ್ದಾಗ 2009ರಲ್ಲಿ ಅದರ ಬಗ್ಗೆ ಕೇಳಿದ್ದು, ಬಿಬಿಎಂಪಿ ರವರು ಒಪ್ಪಿಕೊಂಡು ಸರ್ಕಾರದವರು ಹೇಳಿದ್ದರು. ಮಾನ್ಯ ರಾಮಚಂದ್ರಗೌಡರು ಹೇಳಿದಂತೆ ಮಾಡುವ ಬಗ್ಗೆ ಒಪ್ಪಿಕೊಂಡಿದ್ದರು. ಮಾನ್ಯ ಜಯಮಾಲಾರವರು ಅವರ ಪಕ್ಷದಲ್ಲಿಯೇ ಇರುವುದರಿಂದ ಮಾನ್ಯ ಸಚಿವರನ್ನು ಹೊಗಳಿ ನಂತರ ಪ್ರಾಮಾಣಿಕವಾದ ಬೇಡಿಕೆಗಳನ್ನು ಇಟ್ಟಿದ್ದಾರೆ. ಒಂದು ಹಂತದಲ್ಲಿ ಬಿಬಿಎಂಪಿಯ ಎ,ಬಿ,ಸಿ ವಲಯ ಎಂದರೆ ಏನು ಎಂಬುದನ್ನು ತಿಳಿಸಬೇಕು. ನಾವು ಭಿತ್ತಿ ಚಿತ್ರಗಳನ್ನು ಅಂಟಿಸುವ ಬಗ್ಗೆ ಕೇಳುತ್ತಿಲ್ಲ, ನಾವು ಫಲದ ಅಂದರೆ ಬ್ಯಾನರ್‌ಗಳನ್ನು ಹಾಕುವ ಬಗ್ಗೆ ಸ್ಥಳಗಳನ್ನು ಕೇಳುತ್ತಿದ್ದೇವೆ. ಈಗ ಹಣ ಜಾಸ್ತಿ ಕೊಡಬೇಕು. ಕೆಲವು ಸರ್ಕಾರದ ಯೋಜನೆಗಳನ್ನು ಪ್ರಚಾರ ಮಾಡಲು ಬಳಸುತ್ತಿದ್ದಾರೆ. ಇದರಿಂದ ನಮಗೆ ಬೇಜಾರು ಇಲ್ಲ. ಆದರೆ ಚಲನಚಿತ್ರಗಳ ಒಂದೆರಡು ಬ್ಯಾನರ್, hoardingsಗಳನ್ನು ಹಾಕಲು ಅವಕಾಶ ಕೊಡಬೇಕು. ನಾನು ಬೇರೆ ಭಾಷೆಯ ಚಲನಚಿತ್ರಗಳ ನಿರ್ಮಾಪಕರಿಂದ ಹೆಚ್ಚು ಹಣ ತೆಗೆದುಕೊಳ್ಳಲಿ ಅಥವಾ ಅವರಿಗೆ ಕೊಡುವುದೇ ಬೇಡ. ಅವರಿಗೆ ಕೊಡದಿದ್ದರೂ ನಮಗೆ ಬೇಜಾರಿಲ್ಲ. ಆದರೆ ಕನ್ನಡ ಚಲನಚಿತ್ರ ನಿರ್ಮಾಪಕರಿಗೆ ಕಡಿಮೆ ಬಾಡಿಗೆಯಲ್ಲಿ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ನಾಗರಾಜ್ ಎಸ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸರ್ಕಾರವು ಕನ್ನಡ ಚಿತ್ರಗಳಿಗೆ ಸಬ್ಸಿಡಿ ಕೊಡುತ್ತಿದ್ದು, ಕನ್ನಡ ಚಿತ್ರ ನಷ್ಟವಾದಾಗ ಭರಿಸಲು ಸಹಾಯ ಮಾಡುತ್ತಿರುವುದಕ್ಕೆ ವಂದನೆಗಳನ್ನು ಹೇಳುತ್ತಿದ್ದೇನೆ. ಅದೇ ರೀತಿ ಒಂದು ಚಿತ್ರ ಬಿಡುಗಡೆಯಾಗುವಾಗ ಪೋಸ್ಟರ್‌ಗೆ ರೂ.15ರಿಂದ 20 ಲಕ್ಷಗಳು ಆಗುತ್ತದೆ. ನಾವು ಬುಧವಾರದ ದಿನ ಅಂಟಿಸಿದರೆ ಗುರುವಾರ ಕಾರ್ಪೊರೇಷನ್‌ನವರು ಕಿತ್ತುಕೊಂಡು ಹೋಗುತ್ತಾರೆ. ಒಂದು ಚಿತ್ರಕ್ಕೆ ಒಂದು ದಿವಸಕ್ಕೆ ರೂ.15ರಿಂದ 20 ಲಕ್ಷಗಳು ನಷ್ಟವಾಗುತ್ತದೆ. ಮಾನ್ಯ ಸದಸ್ಯರುಗಳು ಹೇಳಿದ್ದನ್ನು ನಾನು ಅನುಮೋದಿಸುತ್ತಾ, ಸುಮಾರು 100 ವಾರ್ಡ್‌ಗಳಿದ್ದು, ಪ್ರತಿಯೊಂದು ವಾರ್ಡ್‌ನಲ್ಲಿ ಐದತ್ತು ಕಡೆ ಹಾಕಲು ಮಾಡಬೇಕು. ಅದನ್ನು ಉಚಿತವಾಗಿ ಬೇಡ, ಅವರು ಸಬ್ಸಿಡಿ ಕೊಡುತ್ತಿರುವುದು ಸಾಕು. ಅದನ್ನು ಜಾಸ್ತಿ ಮಾಡುವ ಬಗ್ಗೆ ಹೇಳಿದ್ದು, ರೂ. 10 ಲಕ್ಷ ಕೊಡುತ್ತಿದ್ದಾರೆ. ಅದರಿಂದ ಏನೂ ಉಪಯೋಗ ಇಲ್ಲ. ಆದರೆ ಇಲ್ಲಿ ಒಂದು ಚಿತ್ರಕ್ಕೆ ರೂ.25

unedited copy

ಲಕ್ಷಗಳನ್ನು ಉಳಿಸಬಹುದು. ದಯವಿಟ್ಟು ಇದರ ಬಗ್ಗೆ ಅನುಕೂಲ ಮಾಡಿಕೊಡಬೇಕು. ಮಾನ್ಯ ಸಚಿವರು ಪೊಲೀಸ್ ಇಲಾಖೆ ಬಿಟ್ಟು ಬೆಂಗಳೂರು ಅಭಿವೃದ್ಧಿ ಖಾತೆಗೆ ಬಂದಿದ್ದು, ಅವರು ಮಾಡುತ್ತಾರೆ ಎಂದು ನನಗೆ ಅನಿಸುತ್ತದೆ.

**ಶ್ರೀ ಕೆ. ಜಾರ್ಜ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆ ಕೇಳಿದ್ದು, ನಾನು ಮಂತ್ರಿಯಾದಾಗ ಕಮೀಷನರ್ ಕರೆಸಿ ಹೇಳಿದ್ದೇನೆ. ಕೇವಲ ಚಲನಚಿತ್ರ ಜಾಹಿರಾತು ಮಾತ್ರವಲ್ಲದೇ ಎಲ್ಲಾ ರಾಜಕೀಯ ಪಕ್ಷದವರು ಅಂದರೆ ನನ್ನನ್ನು ಸೇರಿಸಿದಂತೆ ನಮ್ಮ ಬೆಂಬಲಿಗರು ತಂದು ಜಾಹಿರಾತು ಹಾಕುತ್ತಾರೆ, ಅದರಲ್ಲಿಯೂ ಫ್ಲೈಓವರ್, ಮೆಟ್ರೋ ಮೇಲೆ ಭಿತ್ತಿ ಪತ್ರಗಳನ್ನು ಹಾಕುತ್ತಾರೆ, ಅದು ಬಹಳ ಅಸಹ್ಯವಾಗಿ ಕಾಣುತ್ತದೆ. ಈಗ ಚಲನಚಿತ್ರ ಮಂಡಳಿಯವರು ಮುಂದೆ ಬಂದಿದ್ದು, ಸರಿಯಾದ ಜಾಗ ತೋರಿಸಿದರೆ ಹಾಕುವ ಬಗ್ಗೆ ಹೇಳಿದ್ದಾರೆ. ಎ ವಲಯ ಎಂದರೆ ಹೈಕೋರ್ಟ್, ವಿಧಾನ ಸೌಧ ಇರುವ ಜಾಗದಲ್ಲಿ ಜಾಹಿರಾತು ಹಾಕಬಾರದು ಎಂದು ನಿರ್ಬಂಧ ಹಾಕಿದ್ದೇವೆ. ಬೇರೆ ಎಲ್ಲಾ ಕಡೆ ಚಲನಚಿತ್ರ ಮಂಡಳಿಯವರು ಮತ್ತು ನಿರ್ಮಾಪಕರು ಸೇರಿ ಇಷ್ಟು ಜಾಗ ಬೇಕು ಎಂದು ಜಾಗ ಗುರುತಿಸಿ ಕೊಟ್ಟಿದ್ದಾರೆ. ಆದಷ್ಟು ಬೇಗ ಆ ಜಾಗ ಗುರುತಿಸಿ ಅಲ್ಲಿ hoarding, ಜಾಹಿರಾತು ಹಾಕಲು ಅನುಮತಿ ಕೊಡುತ್ತೇವೆ. ಕಮಿಷನರ್ ಜೊತೆ ಮಾತನಾಡಿದ್ದೇನೆ. ಅವರು ಹೇಳಿದಂತೆ ಕನ್ನಡ ಚಲನ ಚಿತ್ರಗಳಿಗೆ ಕಡಿಮೆ ದರದಲ್ಲಿ ಕೊಡುವ ಬಗ್ಗೆ ಸರ್ಕಾರವು ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. ಮಾನ್ಯ ತಾರಾರವರು ಮತ್ತು ಮಾನ್ಯ ಸಂದೇಶ್ ನಾಗರಾಜ್‌ರವರು ಮಾತನಾಡಿದರು. ಎಲ್ಲರೂ ಸೇರಿ ಬೆಂಗಳೂರಿನ ಸೌಂದರ್ಯವನ್ನು ಉಳಿಸಲು ಸಹಕಾರ ಮಾಡಬೇಕೆಂದು ಕೋರುತ್ತೇನೆ.

**ಶ್ರೀಮತಿ ಜಯಮಾಲಾ ರಾಮಚಂದ್ರ:–** ಧನ್ಯವಾದಗಳು, ಮಾನ್ಯ ಸಚಿವರ ಮೂಲಕ ಕೃತಜ್ಞರಾಗಿದ್ದೇವೆ.

unedited copy

ಪ್ರಶ್ನೆ ಸಂಖ್ಯೆ: 201

ಉತ್ತರದ ಪ್ರತಿ ಲಗತ್ತಿಸಿದೆ

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಳೆದ 3 ವರ್ಷಗಳಿಂದ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಆಗಿರುವ ಗುಂಡಿಗಳನ್ನು ಮುಚ್ಚುವ ಬಗ್ಗೆ ವಾರ್ಡ್‌ವಾರು ಮಾಹಿತಿಗಳನ್ನು ಕೇಳಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಕೇಳಿದ್ದೇನೆ. ಉತ್ತರ ನಿಜವಾಗಲೂ ಸಮಂಜಸವಾಗಿದ್ದು, ನನ್ನ ಕಾಳಜಿ ಏನೆಂದರೆ ರಸ್ತೆಗಳನ್ನು ಡಾಂಬರೀಕರಣ ಮಾಡಲು ಬೆಂಗಳೂರು ಮಹಾನಗರ ಪಾಲಿಕೆಯು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದು, ಗುಂಡಿಗಳನ್ನು ಮುಚ್ಚಲು ಸುಮಾರು ರೂ.51 ಕೋಟಿಗಳನ್ನು ಖರ್ಚು ಮಾಡಿದ್ದಾರೆ. ಟಾರ್ ಹಾಕಿ ಒಂದು ವರ್ಷದಲ್ಲಿಯೇ ಗುಂಡಿಗಳು ಬಿದ್ದು ಮತ್ತೆ ಇಷ್ಟೊಂದು ಹಣ ಖರ್ಚು ಮಾಡುವ ಅವಶ್ಯಕತೆ ಬರುತ್ತಿದೆ. ಆದರೆ ಗುತ್ತಿಗೆದಾರರ ವಿರುದ್ಧ ಸರಿಯಾದ ಕ್ರಮ ತೆಗೆದುಕೊಂಡು ಹಣ ಉಳಿಸಬೇಕು ಎಂಬುದು ನನ್ನ ಪ್ರಶ್ನೆ. ಜೊತೆಗೆ ಗುಂಡಿಗಳನ್ನು ಅವೈಜ್ಞಾನಿಕವಾಗಿ ಮುಚ್ಚುತ್ತಿದ್ದಾರೆ. ನೀಡಿರುವ ಉತ್ತರ ಬಹಳ ಚೆನ್ನಾಗಿದೆ. ಮಾನ್ಯ ಸಚಿವರು ಕಾಳಜಿ ವಹಿಸಿ ತಾಂತ್ರಿಕತೆಯ ರೀತಿ ಮಾಡಬೇಕೆಂದು ತರಬೇತಿ ಕೊಟ್ಟಿರುವುದು ಹಾಗೂ ಅಧಿಕಾರಿಗಳು ಯಾವ ರೀತಿ ಮಾಡಬೇಕೆಂದು ತರಬೇತಿ ಕೊಟ್ಟಿರುವುದು ಸಮಂಜಸವಾಗಿದೆ. ಆದರೆ ಪ್ರಾಯೋಗಿಕವಾಗಿ bitumen ನ್ನು ತಂದು ಗುಂಡಿಗಳನ್ನು ಮುಚ್ಚುವಾಗ certain temperature ಇರಬೇಕು. ಆ temperature ಇದ್ದರೆ ಮಾತ್ರ ಮುಚ್ಚಿನ ಗುಂಡಿಗಳು ಸುಮಾರು ದಿನ ಬಾಳಿಕೆ ಬರುತ್ತದೆ. ಆದರೆ ಅವೈಜ್ಞಾನಿಕವಾಗಿ ಮಾಡುತ್ತಿದ್ದು, ಅಲ್ಲಿನ ಅಧಿಕಾರಿಗಳು ಯಾವ ರೀತಿ ಗುಂಡಿ ಮುಚ್ಚುತ್ತಿದ್ದಾರೆ ಎಂದು ಪರೀಕ್ಷೆ ಮಾಡುತ್ತಿಲ್ಲ. ಬರುವ ಕೂಲಿಗಾರರು hot mix ಆದ ಟಾರ್ ಅನ್ನು ಲಾರಿಯಲ್ಲಿ ತುಂಬಿಕೊಂಡು ಒಂದು ಕಡೆ ಸುರಿದು ಹೋಗಿರುತ್ತಾರೆ. ಒಂದು ವಾರ ಅಥವಾ 15 ದಿನ ಆದಮೇಲೆ ಅಥವಾ ಅವರಿಗೆ ಇಷ್ಟ ಬಂದಾಗ ಬಂದು ಗುಂಡಿ ಮುಚ್ಚುತ್ತಾರೆ. ಆ certain heat ಇದ್ದಾಗ ಗುಂಡಿ ಮುಚ್ಚಿ ಅದರ ಮೇಲೆ ರೋಲರ್ ಮಾಡಿದರೆ ಮಾತ್ರ ಸರಿಯಾಗಿ ಹಿಡಿದುಕೊಳ್ಳುತ್ತದೆ. ಆದರೆ ವಾರಗಟ್ಟಲೆ ಅದನ್ನು ಇಡುತ್ತಾರೆ, ಅವರು ಬಿಡುವಾದಾಗ ಗುಂಡಿ ಮುಚ್ಚುತ್ತಾರೆ. ಇಂಜಿನಿಯರ್ಸ್ ಬರುವುದಿಲ್ಲ, ಅಧಿಕಾರಿಗಳು ಬರುವುದಿಲ್ಲ. ಅವರು ಕಾಮಗಾರಿ

unedited copy

ಮಾಡುವುದಕ್ಕೆ ಅಲ್ಲಿ ಹಾಕುತ್ತಾರೆ. ಅದು ಸಣ್ಣ ಸಣ್ಣ ಜಲ್ಲಿಯಾಗಿರುತ್ತದೆ. ರಸ್ತೆ ಮೇಲೆ certain heat ಇದ್ದರೆ ಮಾತ್ರ ಹಿಡಿದುಕೊಳ್ಳುತ್ತದೆ. ಆದರೆ ಅದು ಬಿಸಿ ಇರದೇ ತಣ್ಣಗಾಗಿದ್ದು, ಜಲ್ಲಿಯನ್ನು ಹಾಕಿ ಅದರ ಮೇಲೆ ರೋಲರ್ ಕೂಡ ಮಾಡುವುದಿಲ್ಲ. ಗುಂಡಿಯಲ್ಲಿ ಟಾರ್ ಹಾಕಿದ ನಂತರ ರಸ್ತೆಯಲ್ಲಿ ಓಡಾಡುವ ವಾಹನಗಳೇ ರೋಡ್ ರೋಲರ್ ಆಗಿ ಓಡಾಡಬೇಕಾಗುತ್ತದೆ. ಮಾನ್ಯ ಸಚಿವರಿಗೆ ನನ್ನ ಮನವಿ ಏನೆಂದರೆ, ಅವರು ತಾಂತ್ರಿಕತೆಯಿಂದ ಏನು ಮಾಡಲು ತೀರ್ಮಾನ ತೆಗೆದುಕೊಂಡಿದ್ದಾರೆ,

(ಮುಂದು)

unedited copy

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾರಾಯಣಸ್ವಾಮಿ(ಮುಂದುವರಿದದ್ದು):–**

ಸನ್ಮಾನ್ಯ ಸಭಾಪತಿಯವರೇ, ಸ್ಥಳೀಯ ಇಂಜಿನಿಯರ್‌ಗಳು ಇದರ ಬಗ್ಗೆ ಗಮನಹರಿಸಿ, ತಾಂತ್ರಿಕವಾಗಿ ಈಗ ನಾವು ಬಹಳಷ್ಟು ಮುಂದುವರೆದಿದ್ದೇವೆ. ಆ ಹಿನ್ನಲೆಯಲ್ಲಿ ವಲಯಕ್ಕೆ ಒಂದೊಂದು ಸಣ್ಣ ರೋಡ್ ರೋಲರ್‌ಗಳನ್ನು ತೆಗೆದುಕೊಂಡು ಬಿಟಮಿನ್ ಹಾಕಿ ಗುಂಡಿಗಳನ್ನು ಮುಚ್ಚಿದ ಕೂಡಲೇ ರೋಡ್ ರೋಲರ್‌ಗಳನ್ನು ಹಾಯಿಸಿದರೆ ರಸ್ತೆ ಬಾಳಿಕೆ ಬರುತ್ತದೆ. ಈ ಬಗ್ಗೆ ಕಾಳಜಿ ವಹಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:–** ಸನ್ಮಾನ್ಯ ಸಭಾಪತಿಯವರೇ, ನಾನು ಬೆಂಗಳೂರು ನಗರಾಭಿವೃದ್ಧಿ ಸಚಿವನಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಎರಡು ಪ್ರಮುಖ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಒಂದು ಕಸ ವಿಲೇವಾರಿಯ ಸಮಸ್ಯೆ ಮತ್ತೊಂದು ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳ ಸಮಸ್ಯೆ. ಈ ವರ್ಷ ಮಳೆಗಾಲ ತಡವಾದರೂ ಸಹ ಮಳೆ ಬರುತ್ತಲೇ ಇತ್ತು. ಆ ಸಂದರ್ಭದಲ್ಲಿ ಮಾಧ್ಯಮದವರು ಮತ್ತು ಜನಪ್ರತಿನಿಧಿಗಳು ಈ ಸಮಸ್ಯೆಯ ಬಗ್ಗೆ ಸಾಕಷ್ಟು ಚರ್ಚೆ ಮಾಡಿ ಸರ್ಕಾರದ ಗಮನಸೆಳೆದ ಸಂದರ್ಭದಲ್ಲಿ ಗುಂಡಿಗಳನ್ನು ಮುಚ್ಚುವಂತೆ ನಾವು ಆದೇಶವನ್ನು ನೀಡಿದ್ದೆವು. ಮಳೆಗಾಲದಲ್ಲಿ ತೇವಾಂಶ ಇರುವುದರಿಂದ ರಸ್ತೆಯಲ್ಲಿ ಉಂಟಾಗಿರುವ ಗುಂಡಿಗಳನ್ನು ಎಷ್ಟೇ ಮುಚ್ಚಿದರೂ ಸಹ ಅದು ಎದ್ದು ಬರುತ್ತದೆ. ಮಾನ್ಯ ನಾರಾಯಣಸ್ವಾಮಿಯವರು ಹೇಳಿದಂತೆ ಹೊಸ ರಸ್ತೆಗಳಲ್ಲಿ ಗುಂಡಿ ಬಿದ್ದರೆ ವೈಜ್ಞಾನಿಕವಾಗಿ ಅದನ್ನು ಮುಚ್ಚಲಾಗುತ್ತಿದೆ. ಹಲವಾರು ಕಡೆಗಳಲ್ಲಿ ರಸ್ತೆಗಳೇ ಇಲ್ಲದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದಕಾರಣ ಈಗ ನಾವು ತಾತ್ಕಾಲಿಕವಾಗಿ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅದಕ್ಕಾಗಿ ಸುಮಾರು 1500 ಕೋಟಿ ರೂಪಾಯಿಗಳಷ್ಟು ರಸ್ತೆ ಕಾಮಗಾರಿಗಳಿಗೆ ಚಾಲನೆ ಕೊಡುತ್ತಿದ್ದೇವೆ. ಮುಂದಿನ ಒಂದೆರಡು ತಿಂಗಳುಗಳಲ್ಲಿ ಸಾಕಷ್ಟು ಹೊಸ ರಸ್ತೆಗಳನ್ನು ಮಾಡಲಾಗುತ್ತದೆ. ಹೊಸ ರಸ್ತೆಗಳನ್ನು ಮಾಡಿದ ಗುತ್ತಿಗೆದಾರರು ಸುಮಾರು 3 ಅಥವಾ 5 ವರ್ಷಗಳ ಕಾಲ ನಿರ್ವಹಣೆ ಮಾಡಲೇಬೇಕಾಗುತ್ತದೆ. ಹೊಸ ರಸ್ತೆಗಳಲ್ಲಿ ಏನಾದರೂ ಗುಂಡಿ ಬಿದ್ದರೆ ಅದನ್ನು ಗುತ್ತಿಗೆದಾರರೇ ಮುಚ್ಚುವಂತಹ

unedited copy

ಕೆಲಸವನ್ನು ಮಾಡುತ್ತಾರೆ. ನಮ್ಮ ಬಳಿ Hot Mix Plant ಇಲ್ಲ. ಯಾರೋ ಗುತ್ತಿಗೆದಾರರ ಮೂಲಕ ಅದನ್ನು ಮಾಡಿಸುತ್ತಿದ್ದೆವು. ಈಗ ಬೆಂಗಳೂರಿನ ಹೊರವಲಯದಲ್ಲಿ ನಾಲ್ಕು ಕಡೆಗಳಲ್ಲಿ Hot Mix Plant ಸ್ಥಾಪನೆಗಾಗಿ ಟೆಂಡರ್ ಕರೆಯಲಾಗಿದೆ. ಮಳೆಗಾಲದಲ್ಲಿ Hot Mix ಬೇಡ Wet Mix ಮಾಡುವುದಕ್ಕೆ ಹೇಳಿದ್ದೇವೆ. ರಸ್ತೆ ಗುಂಡಿಗಳನ್ನು ಸರಿಯಾಗಿ ಮುಚ್ಚುವ ಮತ್ತು ಗುಣಮಟ್ಟವನ್ನು ಕಾಪಾಡಿಕೊಳ್ಳುವ ಬಗ್ಗೆ ಪಾಲಿಕೆ ಅಭಿಯಂತರರಿಗೆ ನುರಿತ ತಜ್ಞರಿಂದ ತರಬೇತಿಯನ್ನು ಸಹ ನೀಡಲಾಗುತ್ತಿದೆ. ಈಗ ಸಾಕಷ್ಟು ಕೆಲಸಗಳು ಆಗಿವೆ. ಇನ್ನೂ ಎಲ್ಲಾದರು ಗುಂಡಿ ಬಿದ್ದಿದ್ದರೆ ಅದನ್ನು ಮುಚ್ಚುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ರಸ್ತೆಯಲ್ಲಿ ಗುಂಡಿ ಬೀಳದೇ ಇರುವಂತಹ ಗುಣಮಟ್ಟದ ಕೆಲಸಗಳು ಆಗಬೇಕೆನ್ನುವ ನಿಟ್ಟಿನಲ್ಲಿ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಆಕಸ್ಮಿಕವಾಗಿ ರಸ್ತೆಗಳಲ್ಲಿ ಗುಂಡಿಗಳು ಬಿದ್ದರೆ ಅವುಗಳನ್ನು ವೈಜ್ಞಾನಿಕವಾಗಿ ಮುಚ್ಚಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

unedited copy

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:330**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 'ಎಮ್ಮೆಗೆ ಜ್ವರ ಬಂದರೆ, ಕೋಣಕ್ಕೆ ಬರೆ ಎಳೆಯುವ' ರೀತಿಯಲ್ಲಿ ಅವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರು ಅಧಿಕಾರಿಗಳು ಕೊಟ್ಟಿರುವ ಉತ್ತರವನ್ನು ಸದನಕ್ಕೆ ಕೊಟ್ಟಿದ್ದಾರೆ ಈ ಉತ್ತರದ ಬಗ್ಗೆ ಗಮನಹರಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. 'ಕಳೆದ ಹಲವು ವರ್ಷಗಳಿಂದ ಉಂಟಾದ ಬರಗಾಲದಿಂದಾಗಿ ಬೀದರ್ ನಗರದಲ್ಲಿನ ಬಾವಿಗಳು ಬತ್ತಿ ಹೋಗಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?' ಎನ್ನುವ ನನ್ನ ಪ್ರಶ್ನೆಗೆ 'ಸರ್ಕಾರದ ಗಮನಕ್ಕೆ ಬಂದಿದೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. 'ಸರ್ಕಾರದ ಗಮನಕ್ಕೆ ಬಂದಿದ್ದರೆ ಈ ಸಂಬಂಧ ಸರ್ಕಾರ ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?' ಎನ್ನುವ ಪ್ರಶ್ನೆಗೆ 'ಬೀದರ್ ನಗರದಲ್ಲಿ ಬತ್ತಿ ಹೋಗಿರುವ ಬಾವಿಗಳಲ್ಲಿನ ಹೂಳೆತ್ತುವ ಕಾಮಗಾರಿಯನ್ನು ಈಗಾಗಲೇ ಕಾರಂಜಾ ಯೋಜನೆಯಡಿಯಲ್ಲಿ ರೂ.39 ಲಕ್ಷ ವೆಚ್ಚದಲ್ಲಿ ಕೈಗೊಂಡಿದ್ದು, ಯೋಜನೆ ಪ್ರಗತಿಯಲ್ಲಿದೆ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಕಾರಂಜಾ ಯೋಜನೆ ನೀರಾವರಿ ಇಲಾಖೆಗೆ ಸಂಬಂಧಪಟ್ಟಿರುವುದು. ನಾನು 'ಬೀದರ್ ನಗರದಲ್ಲಿರುವ ಬಾವಿಗಳು ಬತ್ತಿ ಹೋಗಿವೆ ನೀರಿಲ್ಲದೆ ಕುಡಿಯುವ ನೀರಿನ ಸಮಸ್ಯೆಯುಂಟಾಗುತ್ತಿದೆ' ಎಂದು ಕೇಳಿರುವುದಕ್ಕೆ ಅವರು 'ಕಾರಂಜಾ ಯೋಜನೆಯಡಿ ತೆಗೆದುಕೊಳ್ಳಲಾಗಿದೆ' ಎಂದು ಹೇಳಿದ್ದಾರೆ. ಈ ಯೋಜನೆಗೂ ಬೀದರ್ ಬಾವಿಗಳಿಗೂ ಯಾವುದೇ ಸಂಬಂಧವಿಲ್ಲ. ನಾನು 'ಎಮ್ಮೆಗೆ ಜ್ವರ ಬಂದಿದೆ' ಎಂದು ಕೇಳಿದರೆ ಅವರು 'ಕೋಣಕ್ಕೆ ಬರೆ' ಹಾಕುತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ, ಸಮರ್ಪಕವಾಗಿರುವ ಉತ್ತರವನ್ನು ಕೊಡುವುದರ ಜೊತೆಗೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನುವುದನ್ನು ಹೇಳಬೇಕಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

unedited copy

**ಶ್ರೀ ವಿನಯಕುಮಾರ್ ಸೊರಕೆ:–** ಸನ್ಮಾನ್ಯ ಸಭಾಪತಿಯವರೇ, 'ಹಲವು ವರ್ಷಗಳಿಂದ ಉಂಟಾದ ಬರಗಾಲದಿಂದ ಬೀದರ್ ನಗರದಲ್ಲಿನ ಬಾವಿಗಳು ಬತ್ತಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?' ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, ಅದಕ್ಕೆ ಉತ್ತರವಾಗಿ 'ಸರ್ಕಾರದ ಗಮನಕ್ಕೆ ಬಂದಿದೆ' ಎಂದು ಹೇಳಿದ್ದೇವೆ. ಸರ್ಕಾರ ತೆಗೆದುಕೊಂಡಿರುವ ಮತ್ತು ತೆಗೆದುಕೊಳ್ಳಲಿರುವ ಕ್ರಮಗಳೇನು ಎಂದು ಕೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಬತ್ತಿ ಹೋಗಿರುವ ಬಾವಿಗಳ ಹೂಳೆತ್ತುವ ಕಾಮಗಾರಿಯನ್ನು ಈಗಾಗಲೇ ಕಾರಂಜಾ ಯೋಜನೆಯಡಿಯಲ್ಲಿ 39 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿ ಪ್ರಗತಿಯಲ್ಲಿದೆ. ಕೊಳವೆ ಬಾವಿಗಳ ನೀರಿನ ಮಟ್ಟ ಕಡಿಮೆಯಾಗಿದ್ದರೆ ಹೆಚ್ಚುವರಿಯಾಗಿ ಪೈಪ್‌ಲೈನ್ ಅಳವಡಿಸುವುದು, ಆಳ ಹೆಚ್ಚಿಸಲು ಫ್ಲಷಿಂಗ್ ಮಾಡಿಸುವ ಕಾಮಗಾರಿ ಹಾಗೂ ಕಿರು ನೀರಿನ ತೊಟ್ಟಿ ಅಳವಡಿಸಿ ಮತ್ತು ಕೊಳವೆ ಬಾವಿ ಕೊರೆಯುವ ಕಾಮಗಾರಿಗಳನ್ನು ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಯೋಜನೆಯಡಿ ತೆಗೆದುಕೊಳ್ಳಲು ಕ್ರಮವಹಿಸಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು 51.67 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಜನವರಿ 2016ರ ಅಂತ್ಯಕ್ಕೆ ಲಭ್ಯವಿರುವ ಅನುದಾನದಲ್ಲಿ 27.72 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಜಿಲ್ಲಾಧಿಕಾರಿಗಳ ಬಳಿ ಈಗಾಗಲೇ 53.95 ಲಕ್ಷ ರೂಪಾಯಿಗಳು ಲಭ್ಯವಿದೆ. ಪ್ರಸ್ತುತ ಜಲಾಶಯ ಮೂಲದಲ್ಲಿ 5.71 ಎಂ.ಎಲ್.ಡಿ. ಮತ್ತು ಕೊಳವೆ ಬಾವಿ ಹಾಗೂ ತೆರೆದ ಬಾವಿಗಳಿಂದ 11.52 ಎಂ.ಎಲ್.ಡಿ. ಒಟ್ಟು 17.23 ಎಂ.ಎಲ್.ಡಿ. ನೀರನ್ನು ಬೀದರ್ ನಗರಕ್ಕೆ ಈಗಾಗಲೇ ಒದಗಿಸುವ ಕೆಲಸವನ್ನು ಮಾಡಲಾಗಿದೆ. ನಗರದ ಜನಸಂಖ್ಯೆಗೆ ಪ್ರತಿದಿನ 80 ಎಲ್.ಪಿ.ಡಿ. ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಪುರಸ್ಕೃತ 'ಅಮೃತ್' ಯೋಜನೆಯಡಿಯಲ್ಲಿ 40.80 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ. ಅದೇ ರೀತಿಯಲ್ಲಿ ಎ.ಡಿ.ಬಿ.ಸ್ಕೀಂನಲ್ಲಿ Bulk Water Supply ಗೆ 28.03 ಕೋಟಿ ರೂಪಾಯಿಗಳ ವೆಚ್ಚದಲ್ಲಿ

unedited copy

ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಅದೇ ರೀತಿಯಲ್ಲಿ 27.58 ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಿತರಣಾ ಕೊಳವೆ ಅಳವಡಿಸುವ ಕಾಮಗಾರಿ ಸಹ ಮುಕ್ತಾಯವಾಗಿದೆ. ಸುಮಾರು 69.77 ಕೋಟಿ ವೆಚ್ಚದಲ್ಲಿ 24x7 ನಿರಂತರ ನೀರು ಸರಬರಾಜು ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ. ಇದರಲ್ಲಿ ಎರಡು ಅಂಶಗಳಿವೆ. ನಿರ್ಮಾಣ ವೆಚ್ಚ 42.92 ಕೋಟಿ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚ 26.85 ಕೋಟಿ ರೂಪಾಯಿಗಳಲ್ಲಿ ಖಾಸಗಿ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಈ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು 33 ತಿಂಗಳ ಅವಧಿಯನ್ನು ನಿಗದಿಪಡಿಸಲಾಗಿದೆ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸಿವಿಲ್ ಕಾಮಗಾರಿ ಮುಕ್ತಾಯದ ನಂತರ 60 ತಿಂಗಳು ನಿಗದಿಪಡಿಸಲಾಗಿದೆ. ದಿನಾಂಕಃ29.07.2017ಕ್ಕೆ ಈ ಕಾಮಗಾರಿ ಪೂರ್ಣಗೊಳ್ಳುತ್ತದೆ. ಬೀದರ್ ನಗರದಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಇಷ್ಟೆಲ್ಲ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಲು ಬಯಸುತ್ತಿದ್ದೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆಃ–** ಸನ್ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಶಾಶ್ವತ ಕುಡಿಯುವ ನೀರಿನ ಯೋಜನೆಗಳ ಬಗ್ಗೆ ಅವರು ಮಾತನಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಅಮೃತ ಯೋಜನೆಯ ಬಗ್ಗೆ ಅವರು ಹೇಳುತ್ತಿರುವುದನ್ನು ನಾನು ಒಪ್ಪಿಕೊಂಡಿದ್ದೇನೆ. ಬರದ ಪರಿಸ್ಥಿತಿಯಿಂದಾಗಿ ಬೀದರ್ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಜ್ವಲಂತವಾಗಿದೆ. ಅದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದಕ್ಕೆ ಶಾಶ್ವರ ನೀರಿನ ವ್ಯವಸ್ಥೆಗೆ ತೆಗೆದುಕೊಂಡಿರುವ ಕಾಮಗಾರಿಗಳ ಬಗ್ಗೆ ಹೇಳುತ್ತಿದ್ದಾರೆ.

**ಸಭಾಪತಿಯವರುಃ–** ಕುಡಿಯುವ ನೀರಿಗಾಗಿ ತಕ್ಷಣ ತೆಗೆದುಕೊಂಡಿರುವ ಕ್ರಮಗಳೇನು ಎನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ ಅದಕ್ಕೆ ಸರ್ಕರ ಉತ್ತರ ನೀಡಬೇಕು.

**ಶ್ರೀ ವಿನಯಕುಮಾರ್ ಸೊರಕೆಃ–** ಸನ್ಮಾನ್ಯ ಸಭಾಪತಿಯವರೇ, ತಕ್ಷಣದ ಕ್ರಮವಾಗಿ ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ಮತ್ತು ಇರುವಂತಹ ಬೋರ್‌ವೆಲ್‌ಗಳನ್ನು ಫ್ಲಷೀಂಗ್ ಮಾಡುವುದಕ್ಕೆ ಹಾಗೂ ಬಾವಿಯಲ್ಲಿನ ಹೂಳು ಎತ್ತುವುದಕ್ಕೆ ಬೇಕಾಗುವಷ್ಟು ಅನುದಾನವನ್ನು ಈಗಾಗಲೇ ಜೋಡಣೆ ಮಾಡಿಕೊಂಡಿದ್ದೇವೆ. ಜಿಲ್ಲಾಧಿಕಾರಿಗಳ ಬಳಿ ಈ ಸಮಸ್ಯೆಯನ್ನು ನಿವಾರಣೆ ಮಾಡಲು 53.95 ಕೋಟಿ ರೂಪಾಯಿಗಳು ಇವೆ.

unedited copy

**ಸಭಾಪತಿಯವರು:–** ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಕ್ತಾಯಗೊಂಡಿದೆ. ಈಗ ತಡೆಹಿಡಿಯಲಾದ ಪ್ರಶ್ನೆಗಳು.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಸನ್ಮಾನ್ಯ ಸಭಾಪತಿಯವರೇ, ನಾವು ಕೇಳಿರುವ ಪ್ರಶ್ನೆಗಳಿಗೆ ಅವರು ಸಮರ್ಪಕವಾಗಿ ಉತ್ತರವನ್ನು ಕೊಡದಿದ್ದರೆ ನಾವು ಯಾಕೆ ಪ್ರಶ್ನೆಯನ್ನು ಕೇಳಬೇಕು?

(ಮುಂದುವರಿದಿದೆ)

unedited copy

(ಸಭಾಪತಿಯವರ ಉಪಸ್ಥಿತಿ)

# ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ದಿನಾಂಕ: 1ನೇ ಮಾರ್ಚ್ 2016ರ ಸಮೂಹ 2 ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 76 ಪ್ರಶ್ನೆಗಳ ಪೈಕಿ 59 ಪ್ರಶ್ನೆಗಳಿಗೆ

ಮತ್ತು

ದಿನಾಂಕ: 2ನೇ ಮಾರ್ಚ್ 2016ರ ಸಮೂಹ 3ರ ಸದನದಲ್ಲಿ ಒಟ್ಟು 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 85 ಪ್ರಶ್ನೆಗಳ ಪೈಕಿ 57 ಪ್ರಶ್ನೆಗಳಿಗೆ

ಮತ್ತು

ದಿನಾಂಕ: 3ನೇ ಮಾರ್ಚ್ 2016ರ ಸಮೂಹ 3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 99 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

unedited copy

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಶ್ನೆಯನ್ನು ಕೇಳಿದ್ದೇನೆ.

**ಸಭಾಪತಿಯವರು:–** ಅದರ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ತಾವು ಪತ್ರವನ್ನು ಬರೆಯಿರಿ.

**ಶ್ರೀ ಅಮರನಾಥ ಪಾಟೀಲ್:–** ಇದಕ್ಕೆ ತಾವು ದಯಮಾಡಿ ಉತ್ತರವನ್ನು ಕೊಡಿಸಬೇಕು.

**ಸಭಾಪತಿಯವರು:–** ಆಯಿತು, ಅದಕ್ಕೆ ತಾವು ಪತ್ರವನ್ನು ಬರೆಯಿರಿ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಈಗಾಗಲೇ ಬೆಳಿಗ್ಗೆ ಆ ವಿಚಾರವನ್ನು ಚರ್ಚೆ ಮಾಡಿದ್ದೇವೆ. ಪುನಃ ಆ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ಅನಗತ್ಯ. ನಾವೇನು ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಕುಳಿತು ಚರ್ಚೆ ಮಾಡಿದ್ದೇವೆ, ಸದರಿ ವಿಚಾರದ ಬಗ್ಗೆ ಈ ಹಿಂದೆಯೂ ಸಹ ಸದನದಲ್ಲಿ ಪ್ರಸ್ತಾಪ ಮಾಡಿದ್ದೆವು. 5ನೇ ತಾರೀಖಿನಂದು ಕಮಿಶನ್‌ನ ಶಿಫಾರಸ್ಸುಗಳನ್ನು ಮಂಡನೆ ಮಾಡುತ್ತೇವೆ.

unedited copy

# ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

## (1) ವಿಷಯ: ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಮೆಣಸೆ ಗ್ರಾಮದ ಅಕ್ಕಸಾಲುಕೊಡಿಗೆ ಗ್ರಾಮದ ಸ್ವಾತಿ ಅನುಮಾನಾಸ್ಪದವಾಗಿ ಮೃತರಾಗಿರುವ ಕುರಿತು.

-----

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದಿನಾಂಕ: 19-02-2016ರ ಶುಕ್ರವಾರದಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಮತ್ತು ವಿವಿಧ ದಿನ ಪತ್ರಿಕೆಗಳಲ್ಲಿ **"ವಿದ್ಯಾರ್ಥಿನಿ ಅಸಹಜ ಸಾವು ಪ್ರಕರಣ : ತನಿಖೆ ತೀವ್ರ"** ಎಂಬ ಶಿರೋನಾಮೆಯಲ್ಲಿ ವರದಿಯಾಗಿರುವ ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಮೆಣಸೆ ಗ್ರಾಮದ ಅಕ್ಕಸಾಲುಕೊಡಿಗೆ ಗ್ರಾಮದ ಸ್ವಾತಿ (18 ವರ್ಷ) ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ಈ ಕುರಿತು ಈಗಾಗಲೇ ಪೊಲೀಸರು ತೀವ್ರ ವಿಚಾರಣೆ ನಡೆಸಿರುತ್ತಾರೆ.

ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಪ್ರಥಮ ಬಿಕಾಂ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿನಿ ಅವರ ಕುಟುಂಬಕ್ಕೆ ಆಸರೆಯಾಗಿದ್ದಳು. ಕಾರಣ ಸದರಿ ಕುಟುಂಬದವರು ಸ್ವಾತಿಯನ್ನು ಕಳೆದುಕೊಂಡು ತುಂಬಾ ತೊಂದರೆಯಲ್ಲಿರುವುದರಿಂದ ಸರ್ಕಾರ ಅವರ ಕುಟುಂಬಕ್ಕೆ 25 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಬೇಕಾಗಿ ಮತ್ತು ಆರೋಪಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳುವ ಕುರಿತು ತಮ್ಮ ಮೂಲಕ ಈ ವಿಚಾರವನ್ನು ಮಾನ್ಯ ಗೃಹ ಮಂತ್ರಿಗಳಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರ ಮುಖಾಂತರ ನಂತರ ಉತ್ತರವನ್ನು ಒದಗಿಸಲಾಗುವುದು.

unedited copy

**(2) ವಿಷಯ: ಸುಳ್ಯ ತಾಲ್ಲೂಕಿನ ಬೆಳ್ಳಾರೆಯ ವಿದ್ಯುತ್ ಗ್ರಾಹಕ ಶ್ರೀ ಗಿರಿಧರ ಪೈ ಇವರನ್ನು ಬಂಧಿಸಿರುವ ಕುರಿತು.**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ದಿಗ್ಭ್ರಮೆಯ ವರದಿಯೊಂದು ಪ್ರಕಟವಾಗಿದೆ. ಕರಾವಳಿ ಜಿಲ್ಲೆಯ ಸುಳ್ಯ ತಾಲ್ಲೂಕಿನ ಬೆಳ್ಳಾರೆಯ ನಿವಾಸಿ ಗಿರಿಧರ ರೈ ತನ್ನ ಗ್ರಾಮದಲ್ಲಿ ದಿನನಿತ್ಯ 6 ರಿಂದ 8 ಗಂಟೆ ವಿದ್ಯುತ್ ನಿಲುಗಡೆಯಾಗುತ್ತಿದೆ. ಕೃಷಿ, ಕೈಗಾರಿಕೆ, ವ್ಯಾಪಾರಗಳ ಸಹಿತ ಕೌಟುಂಬಿಕ ಜನಜೀವನ ಕಷ್ಟವಾಗಿದೆ ಎಂದು ಮೆಸ್ಕಾಂನಲ್ಲಿ ತಗಾದೆ ತೆಗೆದು ಪೂರ್ಣ ವಿದ್ಯುತ್ ಸರಬರಾಜಿಗೆ ಒತ್ತಾಯಿಸುತ್ತಾರೆ. ವಿದ್ಯುತ್ ಇಲಖೆಯ ನಿರ್ಲಿಪ್ತತೆಯಿಂದ ರೋಸಿ ಹೋಗಿ ದೊರೆತನಕ ಮೊರೆ ಎಂಬಂತೆ ರಾಜ್ಯ ಇಂಧನ ಸಚಿವ ಶ್ರೀ ಡಿ.ಕೆ.ಶಿವಕುಮಾರ್ ಅವರಿಗೆ ದೂರವಾಣಿ ಮಾಡಿ ವಿದ್ಯುತ್ತಿನ ದುಸ್ಥಿತಿ ವಿವರಿಸುತ್ತಾರೆ. ಮಾಧ್ಯಮಗಳ ವರದಿಯಂತೆ ಸಾಮಾನ್ಯ ನಾಗರೀಕ ಗಿರಿಧರ ರೈಯವರಿಗೂ ಇಂದಿನ ಸಚಿವ ಡಿ.ಕೆ.ಶಿವಕುಮಾರ್‌ರವರಿಗೂ ವಾಕ್ಸಮರ ನಡೆಯಿತು.

ಗೌರವಾನ್ವಿತ ಸಭಾಪತಿಯವರೆ, ನಂತರ ನಡೆದ ವಿದ್ಯಮಾನ ಮಾತ್ರ ನಾಗರೀಕ ಸಮಾಜ ತಲೆತಗ್ಗಿಸುವಂತಹುದ್ದು. ವಿದ್ಯುತ್‌ಗಾಗಿ ಸಚಿವರ ಜೊತೆ ದೂರವಾಣಿಯಲ್ಲಿ ವಾಗ್ಯುದ್ಧ ಮಾಡಿದರೆಂಬ ಕಾರಣಕ್ಕೆ ದಿನಾಂಕ: ಫೆ 28ರ ಭಾನುವಾರ ನಡುರಾತ್ರಿ ಸುಳ್ಯ ಪೊಲೀಸ್ ಪಡೆ ವಿದ್ಯುತ್ ಗ್ರಾಹಕ ಗಿರಿಧರ ರೈಯವರ ಮನೆಗೆ ಬಾಗಿಲು ತೆಗೆಯಲು ಆದೇಶಿಸಿತು. ಮನೆಯ ಒಳಗಿರುವ ಗಿರಿಧರ ರೈ, ಪತ್ನಿ, ಮಗಳು ಅರ್ಧರಾತ್ರಿ ಮಹಿಳೆಯರಿರುವ ಮನೆ ಬಾಗಿಲು ತೆಗೆಯುವುದಿಲ್ಲ ಎಂದು ಹೇಳಿದರೂ ಕೇಳದೇ ಸುಳ್ಯ ಪೊಲೀಸರು ಛಾವಣಿಯ ಹೆಂಚು ಕಿತ್ತು ಒಳ ನುಗ್ಗುತ್ತಾ ಸಾಲದ್ದಕ್ಕೆ ಮನೆಯ ಹಿಂದಿನ ಬಾಗಿಲು ಒಡೆದು ಗಿರಿಧರ ರೈಯವರನ್ನು ಎಳೆದೊಯ್ಯುತ್ತಾರೆ.

ಸಭಾಪತಿಗಳೇ, ಗಿರಿಧರ ರೈ ಈ ರಾಜ್ಯದಲ್ಲಿ ಕೊಲೆ ದರೋಡೆ ಸಹಿತ ಯಾವುದೇ ಕ್ರೂರ ಅಪರಾಧವನ್ನು ಮಾಡಿಲ್ಲ. ಬದಲಾಗಿ ಹಣ ಕೊಟ್ಟು ವಿದ್ಯುತ್ ಪಡೆಯುವ ತನಗೆ ಮತ್ತು ತನ್ನೂರಿಗೆ ಸಮರ್ಪಕ ವಿದ್ಯುತ್ ಸರಬರಾಜು ಮಾಡಲು ಇಂಧನ ಮಂತ್ರಿಗೆ ಆದೇಶಿಸಿದ್ದಾರೆ. ಗಿರಿಧರ ರೈ ಮತ್ತು ಅವರ

unedited copy

ಕುಟುಂಬವನ್ನು ಅಮಾನವೀಯವಾಗಿ ಸರ್ಕಾರ ನಡೆಸಿಕೊಂಡಿದೆ. ಸಾಲದ್ದಕ್ಕೆ ವಿದ್ಯುತ್ ಇಲಾಖೆಯ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಬಂದಿದ್ದಾರೆ ಎಂದು ಸುಳ್ಳು ಕೇಸನ್ನು ದಾಖಲು ಮಾಡಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪೌರನೊಬ್ಬನ ಮನೆಗೆ ನಡುರಾತ್ರಿ ಪೊಲೀಸರನ್ನು ನುಗ್ಗಿಸುವ ಅವಕಾಶ, ಅಗತ್ಯವೇನಿತ್ತು? ತನಗೆ ವಿದ್ಯುತ್ ಕೊಡಿ ಎಂದ ಒಂದೇ ಕಾರಣಕ್ಕೆ ಇಂಧನ ಮಂತ್ರಿಯವರ ಅಪ್ಪಣೆಯಂತೆ ಪೌರನೊಬ್ಬನ ಬಾಗಿಲನ್ನು ನಡುರಾತ್ರಿ ಮುರಿದ ಪೊಲೀಸರು ಅವರನ್ನು ಬಂಧಿಸಿ ಹಾಕಿದ ಪ್ರಕರಣವೆಂದರೆ ವಿದ್ಯುತ್ ಇಲಾಖೆಯ ಸಿಬ್ಬಂದಿಗಳ ಕರ್ತವ್ಯಕ್ಕೆ ಅಡ್ಡಿ ಬಂದಿದ್ದಾರೆ ಎಂಬುದು.

ತುರ್ತು ಪರಿಸ್ಥಿತಿಯಲ್ಲಿ ಇಂತಹ ಘಟನೆ ನಡೆದ ನೆನಪಿಲ್ಲ. ಈ ರಾಜ್ಯದಲ್ಲಿ ಅಧಿಕಾರದ ಅತಿರೇಕದ ವರ್ತನೆಯಿಂದ ವ್ಯಕ್ತಿಯೊಬ್ಬರ ಬದುಕುವ ಸ್ವಾತಂತ್ರ್ಯವನ್ನೇ ಪೊಲೀಸ್ ಬಲದಿಂದ ಕಸಿಯುವ ಕೆಟ್ಟ ನಡತೆ ನಾಗರೀಕ ಸಮಾಜಕ್ಕೆ ಸವಾಲಾಗಿದೆ. ತಮ್ಮ ಮೂಲಕ ನಾನು ಮಾನ್ಯ ಗೃಹ ಮಂತ್ರಿಗಳನ್ನು ಆಗ್ರಹಿಸುವುದೇನೆಂದರೆ, ಈ ಪ್ರಕರಣವನ್ನು ತಕ್ಷಣ ನ್ಯಾಯಸಮ್ಮತ ತನಿಖೆ ಮಾಡಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು. ಇದಕ್ಕೆಲ್ಲಾ ಕಾರಣರಾಗಿರುವ ಇಂಧನ ಮಂತ್ರಿಗಳು ನಡೆದ ಘಟನೆಯ ಬಗ್ಗೆ ವಿಷಾಧ ವ್ಯಕ್ತಪಡಿಸಲು ಸೂಚಿಸಬೇಕೆಂದು ಈ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರು ಅಥವಾ ಇಂಧನ ಸಚಿವರು ಸಂಬಂಧಿಸಿದ ಸಚಿವರ ಮುಖಾಂತರ ನಂತರ ಸೂಕ್ತವಾದಂಥ ಉತ್ತರವನ್ನು ಒದಗಿಸಲಾಗುವುದು.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 1ನೇ ಮಾರ್ಚ್ 2016ರಂದು ಬೆಳಿಗ್ಗೆ 9.30 ಗಂಟೆಗೆ ಒಂದು ವಿಷಯವಾಗಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ತಮ್ಮ ಕಚೇರಿಗೆ ಪತ್ರವನ್ನು ನೀಡಿದ್ದೆ. ತಾವು ಅದಕ್ಕೆ ಇನಿಶಿಯಲ್ ಸಹ ಮಾಡಿರುತ್ತೀರಿ. ಆದರೆ ಏಕೋ ಇವತ್ತು ಆ ವಿಚಾರ ಬಂದಿಲ್ಲ.

unedited copy

**ಸಭಾಪತಿಯವರು:–** ಮಾನ್ಯ ಕೊಂಡಯ್ಯನವರೆ, ತಾವು ಹಳೆಯ ಸದಸ್ಯರು, ತಮಗೆ ಗೊತ್ತಿದೆ. ತಾವು ಕೊಟ್ಟ ದಿವಸ ಶೂನ್ಯ ವೇಳೆಯ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗಲಿಲ್ಲ ಅಥವಾ ಸದನ ನಡೆಯಲಿಲ್ಲವೆಂದರೆ that dies. ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ. ಸದಸ್ಯರು ಯಾವತ್ತು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ನೋಟಿಸ್ ಕೊಟ್ಟಿರುತ್ತೀರಿ, ಆವತ್ತು ಸದನ ನಡೆದರೆ ಅದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಕೆಟ್ಟ ಪದವನ್ನು ಉಪಯೋಗಿಸುವುದಾದರೆ, that notice dies ಆಗ ತಾವು ಹೊಸ ನೋಟಿಸ್‌ನ್ನು ಕೊಡಬೇಕು. ನೀವು 3ನೇ ತಾರೀಖನ್ನು ನಮೂದು ಮಾಡಿ ಇವತ್ತು ಇನ್ನೊಂದು ನೋಟಿಸ್‌ನ್ನು ಕೊಟ್ಟಿದ್ದರೆ ಅದನ್ನು ಪರಿಗಣಿಸಬಹುದಾಗಿತ್ತು. ನಾಳೆಯ ದಿವಸ 4ನೇ ತಾರೀಖಿನಂದು ಇನ್ನೊಂದು ನೋಟಿಸ್‌ನ್ನು ಕೊಡಿ, ನಾಳೆಯ ದಿವಸ ಚರ್ಚೆಗೆ ತೆಗೆದುಕೊಳ್ಳಲು ಪ್ರಯತ್ನ ಮಾಡೋಣ.

Sri K.C.KONDAIAH:- Right sir, Thank you.

unedited copy

**(3) ವಿಷಯ: ಚಾಮರಾಜನಗರ ತಾಲ್ಲೂಕು ಉಮ್ಮತ್ತೂರು ಕೆರೆಗೆ ನೀರು ತುಂಬಿಸುವ ಕುರಿತು.**

------

**ಶ್ರೀ ಸಂದೇಶ್ ನಾಗರಾಜು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಚಾಮರಾಜನಗರ ತಾಲ್ಲೂಕು ಉಮ್ಮತ್ತೂರಿನ ಕೆರೆ 300 ಎಕರೆ ವಿಸ್ತೀರ್ಣ ಇದ್ದು ಇಡೀ ಜಿಲ್ಲೆಯಲ್ಲೇ ಬಹಳ ದೊಡ್ಡ ಕೆರೆ. ಈ ಕೆರೆ ಕಳೆದ 25 ವರ್ಷಗಳಿಂದ ತುಂಬಿಲ್ಲ. ಕಬಿನಿ ಮೂಲದಿಂದ ಚಾಮರಾಜನಗರ ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಲ್ಲಿಯೂ ಈ ಕೆರೆಯನ್ನು ಸೇರ್ಪಡೆ ಮಾಡಿಲ್ಲ. ಜಿಲ್ಲೆಯ ಈ ಭಾಗ ಬರಡು ಭೂಮಿ. ಕಳೆದ ಎರಡು ಮೂರು ವರ್ಷದಿಂದ ಸತತ ಬರಗಾಲ. ರೈತರು, ಜನಸಾಮಾನ್ಯರು ನೀರಿಲ್ಲದೆ ತೀವ್ರವಾದ ಸಂಕಷ್ಟಕ್ಕೆ ಈಡಾಗಿದ್ದಾರೆ. ಕುಡಿಯಲು ನೀರಿಲ್ಲದೆ, ಜಾನುವಾರುಗಳಿಗೆ ನೀರು, ಮೇವಿಲ್ಲದೆ, ಹಾಹಾಕಾರ ಉಂಟಾಗಿ, ಜನರು ಕೆಲಸಕ್ಕಾಗಿ ಗುಳೇ ಹೋಗುತ್ತಿದ್ದಾರೆ. ಈ ಬಗ್ಗೆ ನಾನು ಕಳೆದ ಸದನದಲ್ಲೂ ಸರ್ಕಾರದ ಗಮನ ಸೆಳೆದಿದ್ದೆ.

ಉಮ್ಮತ್ತೂರು ಕೆರೆಗೆ ನೀರು ತುಂಬಿಸಬೇಕೆಂದು ಉಮ್ಮತ್ತುರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಸರ್ಕಾರಕ್ಕೆ ಅನೇಕ ಬಾರಿ ಮನವಿ ಸಲ್ಲಿಸಿದ್ದರೂ, ಇದುವರೆಗೂ ಅವರ ಬೇಡಿಕೆ ಈಡೇರಿಲ್ಲ. ಸುತ್ತೂರು ಬಳಿಯ ಕಬಿನಿ ನಾಲೆಯಿಂದ ಉಮ್ಮತ್ತೂರು ಸೇರಿದಂತೆ ಸುತ್ತಮುತ್ತಲ ಹತ್ತು ಕೆರೆಗಳಿಗೆ ನೀರು ತುಂಬಿಸುವ ಕ್ರಿಯಾಯೋಜನೆಗೆ ಸಚಿವ ಸಂಪುಟದ ಅನುಮೋದನೆ ದೊರೆಯಬೇಕಾಗಿದೆ ಎಂದು ತಿಳಿದು ಬಂದಿದೆ. ತಕ್ಷಣ ಈ ಯೋಜನೆಗೆ ಅನುಮೋದನೆ ನೀಡಿ ಇದೇ ಬಜೆಟ್‌ನಲ್ಲಿ ಸೇರ್ಪಡೆ ಮಾಡಿ, ಕಾರ್ಯಾರಂಭ ಮಾಡಬೇಕು. ಉಮ್ಮತ್ತೂರು ಕೆರೆಗೆ ನೀರು ತುಂಬಿಸುವುದರಿಂದ ಕುದೇರು, ದಾಸನೂರು, ಹನುಮನಪುರ, ಮೂಡಲ ಅಗ್ರಹಾರ, ದೇಮಹಳ್ಳಿ, ಲಿಂಗಾಪುರ ಸೇರಿದಂತೆ ಸುತ್ತಮುತ್ತಲ 15 ಹಳ್ಳಿಗಳಿಗೆ ಅನುಕೂಲವಾಗುತ್ತದೆ. ಹತ್ತು ವರ್ಷದಿಂದ ತೀವ್ರವಾಗಿ ಕುಸಿದಿರುವ ಅಂತರ್ಜಲದ ಪ್ರಮಾಣ ಏರುತ್ತದೆ.

ಈಗ ಒಂದು ತಿಂಗಳಿನಿಂದ ಉಮ್ಮತ್ತೂರು ಹಾಗೂ ಸುತ್ತಮುತ್ತಲ ಸಾವಿರಾರು ರೈತರು ಉಮ್ಮತ್ತೂರು ಕೆರೆಯ ಬಳಿ ಹಾಗೂ ಊರಿನಲ್ಲಿ ಧರಣಿ ಮಾಡುತ್ತಿದ್ದಾರೆ. ಉಮ್ಮತ್ತೂರು ಕೆರೆ ಪುನಶ್ಚೇತನ ಸಮಿತಿ ರಚನೆ ಮಾಡಿಕೊಂಡು ಹೋರಾಟ ಮಾಡುತ್ತಿದ್ದಾರೆ. ನಿನ್ನೆಯೂ ಕೂಡಾ ಎಲ್ಲರೂ ಪಕ್ಷಭೇದ ಮರೆತು ಬೈಕ್ ರ್‍ಯಾಲಿ ಮಾಡಿದ್ದಾರೆ. ಬಹುಜನ ಸಮಾಜ ಪಕ್ಷದವರು ಇದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಆದರೆ ಸರ್ಕಾರ ಈ ಧರಣಿಗೆ ಸ್ಪಂದಿಸುತ್ತಿಲ್ಲ. ಈ ಯೋಜನೆಯ ಆರಂಭದ ಬಗ್ಗೆ ಸರ್ಕಾರದಿಂದ ಖಚಿತ ಭರವಸೆ ಸಿಗುವವರೆಗೆ ಹೋರಾಟ ಮುಂದುವರಿಸುವುದಾಗಿ ಉಮ್ಮತ್ತೂರು ಹಾಗೂ ಸುತ್ತಮುತ್ತಲ ಗ್ರಾಮದ ರೈತರು ಮತ್ತು

unedited copy

ಜನಸಾಮಾನ್ಯರು ಹೇಳಿದ್ದಾರೆ. ರೈತರ ಸತ್ಯಾಗ್ರಹ ವಿಕೋಪಕ್ಕೆ ಹೋಗುವ ಮೊದಲು ಸರ್ಕಾರ ತಕ್ಷಣ ಸ್ಪಂದಿಸಿ ರೈತರಿಗೆ ಸೂಕ್ತ ಭರವಸೆ ನೀಡಿ, ಈ ಯೋಜನೆಯನ್ನು ಆರಂಭಿಸಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಜಲಸಂಪನ್ಮೂಲ ಸಚಿವರ ಮುಖಾಂತರ ನಂತರ ಉತ್ತರವನ್ನು ಒದಗಿಸಲಾಗುವುದು.

(ಮುಂದು)

unedited copy

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

ವಿಷಯ: ಮಂಗಳೂರಿನ ಜೈಲಿನಲ್ಲಿ ಅವೈಜ್ಞಾನಿಕವಾಗಿ ಅಳವಡಿಸಿರುವ ಮೊಬೈಲ್ ಜಾಮರ್‌ನಿಂದ ಸುತ್ತಮುತ್ತ ಪೂರ್ತಿ ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಆಗಿರುವ ಬಗ್ಗೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಂಗಳೂರಿನ ಜೈಲಿನಲ್ಲಿ ಅವೈಜ್ಞಾನಿಕವಾಗಿ ಅಳವಡಿಸಿರುವ ಮೊಬೈಲ್ ಜಾಮರ್‌ನಿಂದಾಗಿ ಪರಿಸರ ಪೂರ್ತಿ ಮೊಬೈಲ್ ನೆಟ್‌ವರ್ಕ್ ಕಡಿತದ ಸಮಸ್ಯೆಗೆ ಈಗ ಎರಡು ವಾರಗಳಾಗಿವೆ. ವಿಪರ್ಯಾಸವೆಂದರೆ ಜೈಲಿನ ಆವರಣದಲ್ಲಿ ನೆಟ್‌ವರ್ಕ್ ಲಭ್ಯವಿದೆ. ಆದರೆ ಸುತ್ತಮುತ್ತಲಿನ ಪ್ರದೇಶದಲ್ಲಿ ಸಂಪರ್ಕ ಪೂರ್ಣ ಆತಂಕಿತವಾಗಿದೆ.

ಜೈಲು ಇರುವ ಜೈಲುರೋಡ್‌ನ ವಿವಿಧೆಡೆ, ಎಂ.ಜಿ.ರೋಡ್, ಕೊಡಿಯಾಲಧಿಗುತ್ತು ರಸ್ತೆ, ಪಿಂಟೋಸ್ ಲೇನ್ ಹೀಗೆ ಈ ಪ್ರದೇಶಗಳಲ್ಲಿ ಕಳೆದ 10 ದಿನಗಳಿಂದ ನೆಟ್‌ವರ್ಕ್ ಸಮಸ್ಯೆ ಮೊದಲ 1 ವಾರದಲ್ಲಿ ಪತ್ರಿಕಾ ಕಚೇರಿಗಳ ಸಹಿತ, ವಾಣಿಜ್ಯ ಕೇಂದ್ರಗಳು, ವಿಮಾ ಕಚೇರಿ, ಹೋಟೆಲ್‌ಗಳು, ಶಾಲಾ-ಕಾಲೇಜುಗಳು, ಹಾಸ್ಟೆಲ್‌ಗಳು, ಅಪಾರ್ಟ್‌ಮೆಂಟ್ಸ್, ಪ್ರತಿಷ್ಠಿತ ಬ್ಯಾಂಕುಗಳು ಇತ್ಯಾದಿಗಳಲ್ಲಿ ಬಹುತೇಕ ನೆಟ್‌ವರ್ಕ್ ಸ್ಥಗಿತವಾಗಿತ್ತು. ಸೆಲ್ ಫೋನ್‌ಗಳಿಂದ ಸಂಪರ್ಕವೇ ಅಸಾಧ್ಯವಾಗಿತ್ತು.

ಪರಿಸರದ ಆಸ್ಪತ್ರೆಗಳಲ್ಲಿ ಇನ್ನೂ ಕಠಿಣವಾದ ಸನ್ನಿವೇಶ ಇದ್ದು, ಸಂಪರ್ಕ ಪಡೆಯಲಾಗದೆ ವೈದ್ಯರು, ರೋಗಿಗಳು, ಸಿಬ್ಬಂದಿ ಸಂಬಂಧಿಕರು ಪರದಾಡುವ ಪರಿಸ್ಥಿತಿ ಇದೆ. ಆ್ಯಂಬ್ಯುಲೆನ್ಸ್ ಸಹಿತ ತುರ್ತು ಸೇವೆಗಳಿಗೂ ಈ ಜಾಮರ್ ತಡೆಯನ್ನು ಉಂಟು ಮಾಡಿದೆ. ನೆಟ್‌ವರ್ಕ್ ವ್ಯವಸ್ಥೆಯನ್ನೇ ಅವಲಂಬಿಸಿರುವ ಪರಿಸರದ ಬಿಪಿಒ ಕಂಪೆನಿಗಳಲ್ಲಿ ತೀರಾ ಸಂದಿಗ್ಧ ಸನ್ನಿವೇಶ ಉಂಟಾಗಿದೆ.

ಜಾಮರ್ ಅಳವಡಿಸಿದ ಮೇಲೂ ಜೈಲು ಆವರಣದ ಒಳಗೆ ಧಾರಾಳವಾಗಿ ನೆಟ್‌ವರ್ಕ್ ದೊರೆಯುತ್ತಿದ್ದು, ಜೈಲಿನ ಒಳಗಿಂದ ಸಂಪರ್ಕದ ವ್ಯವಸ್ಥೆ ಎಗ್ಗಿಲ್ಲದೇ ಮುಂದೆ ಸಾಗಿರುವುದು ಸಾರ್ವಜನಿಕರಲ್ಲಿ ಆತಂಕ ಹಾಗೂ ಕುತೂಹಲವನ್ನು ಸೃಷ್ಟಿ ಮಾಡಿದೆ. ಜೈಲಿನೊಳಗೆ ಮೊಬೈಲ್ ಹೇಗೆ ಅಪರಾಧಿಗಳ ಕೈ ಸೇರುತ್ತಿದೆ? ಸಂಬಂಧಪಟ್ಟ ಅಧಿಕಾರಿಗಳು ಈ ಕುರಿತಾಗಿ ಏನು ಮಾಡುತ್ತಿದ್ದಾರೆ? ಜಾಮರ್ ಅಳವಡಿಸಿ ಸಾರ್ವಜನಿಕರಿಗೆ, ಸರ್ಕಾರಿ ಕಚೇರಿಗಳಿಗೆ ಹಾಗೂ ಸಂಘ-ಸಂಸ್ಥೆಗಳಿಗೆ ತೊಂದರೆ

unedited copy

ಮಾಡಿ, ಅಪರಾಧಿಗಳು ನಿರ್ಭೀಡೆಯಿಂದ ಮೊಬೈಲ್ ಬಳಕೆ ಮಾಡುವಂತೆ ಅವಕಾಶ ಕಲ್ಪಿಸುವುದೇ ಜೈಲು ಅಧಿಕಾರಿಗಳ ಉದ್ದೇಶವೇ ಎನ್ನುವ ಪ್ರಶ್ನೆಯು ಸಾರ್ವಜನಿಕರನ್ನು ಕಾಡುತ್ತಿದೆ.

"ಜೈಲಿಗೆ ಜಾಮರ್–ಗ್ರಾಹಕರ ನೆಟ್‌ವರ್ಕ್ ಜಾಮ್" ಎನ್ನುವ ಸಾರ್ವಜನಿಕರ ಆತಂಕವನ್ನು ವರದಿ ಮಾಡಿದ ಉದಯವಾಣಿಯ ಲೇಖನ ಇನ್ನಾದರೂ ಇಲಾಖೆಯ ಕಣ್ತೆರೆಸಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–ಮಾನ್ಯ ಸಭಾಪತಿಗಳೆ, ಮಾನ್ಯ ಗೃಹ ಸಚಿವರಿಂದ ನಂತರದಲ್ಲಿ ಇದಕ್ಕೆ ಉತ್ತರ ಕೊಡಿಸುತ್ತೇನೆ.

unedited copy

ವಿಷಯ: ಗದಗ–ಬೆಟಗೇರಿ ನಗರಗಳಿಗೆ ಕುಡಿಯುವ ನೀರು ಒದಗಿಸಿ ಕೊಡುವ ಬಗ್ಗೆ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರ ಕ್ಷೇತ್ರ):**–ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಗದಗ–ಬೆಟಗೇರಿಯಲ್ಲಿ ಕಳೆದ 35 ದಿನಗಳಿಂದ ತುಂಗಭದ್ರಾ ನದಿಯಿಂದ ವಿತರಣೆಯಾಗಬೇಕಾದ ನೀರು ಸಂಪೂರ್ಣ ಸ್ಥಗಿತಗೊಂಡಿದ್ದು, ಜನರು ಸಾಕಷ್ಟು ತೊಂದರೆಗೆ ಈಡಾಗಿದ್ದಾರೆ. ಮುಂಡರಗಿ ತಾಲ್ಲೂಕು ಹಮ್ಮಗಿ ಗ್ರಾಮದ ಹತ್ತಿರ ನಿರ್ಮಿಸಿದ ಉಸುಕಿನ ಚೀಲದ ಬ್ಯಾರೇಜ್ ಒಡೆದು ಹೋಗಿ ಹೊಳೆಯಲ್ಲಿ ನೀರು ಸಂಪೂರ್ಣ ಖಾಲಿಯಾಗಿರುವುದು ಭದ್ರಾ ನದಿಯಿಂದ ಹಮ್ಮಗಿ ಬ್ಯಾರೇಜ್‌ಗೆ ದಿನಾಂಕ 5.2.2016 ರಿಂದ ನೀರನ್ನು ಬಿಟ್ಟಿದ್ದರೂ ಅದು ಇಂದಿಗೂ ಹಮ್ಮಗಿ ಬ್ಯಾರೇಜ್ ಹಾಗೂ ಕೊರ್ಲಹಳ್ಳಿ ಜಾಕ್‌ವೆಲ್ ಅನ್ನು ತಲುಪಿರುವುದಿಲ್ಲ.

ಈ ಒಂದು ಸ್ಥಿತಿಯಲ್ಲಿ ಹಮ್ಮಗಿ ಬ್ಯಾರೇಜ್‌ನಲ್ಲಿಯ ಡೆಡ್ ವಾಟರ್ (ಮಲೀನಗೊಂಡ ನೀರನ್ನು) ತುರ್ತಾಗಿ ವಿತರಣೆ ಮಾಡಲು ಇದೀಗ ಪ್ರಾರಂಭಿಸಿದ್ದಾರೆ. ಇದರಿಂದ ಗದಗ–ಬೆಟಗೇರಿ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಆಗುವ ಸಂಭವ ಇದೆ.

ಸಾಮಾನ್ಯವಾಗಿ ಗದಗ–ಬೆಟಗೇರಿಯ 35 ವಾರ್ಡ್‌ಗಳಿಗೆ 15 ರಿಂದ 20 ದಿನಕ್ಕೆ ಒಂದು ಬಾರಿ ನೀರು ವಿತರಣೆ ಆಗುವುದು, ಸದ್ಯ ಅದು ತಿಂಗಳಿಗೆ ಒಂದು ಸಲವೂ ನೀರು ಸಿಗದೇ ಇರುವ ಹಾಗೆ ಭೀಕರ ಪರಿಸ್ಥಿತಿ ಉಂಟಾಗಿರುವುದು. ಇದಕ್ಕೆ ಗದಗ–ಬೆಟಗೇರಿ ನಗರ ಸಭೆಯ ಆಡಳಿತ ಹಾಗೂ ಕೆ.ಯು.ಡಬ್ಲ್ಯೂ.ಎಸ್ ಇಲಾಖೆ ಸಿಬ್ಬಂದಿ ಮುಖ್ಯವಾಗಿ ಜಿಲ್ಲಾಡಳಿತ ಸಂಪೂರ್ಣವಾಗಿ ತಮ್ಮ ಕರ್ತವ್ಯದಲ್ಲಿ ವಿಫಲಗೊಂಡಿದ್ದಾರೆ. ಕುಡಿಯುವ ನೀರಿನ ಅಭಾವವಿದ್ದರೂ ಮುನ್ನೆಚ್ಚರಿಕೆಯ ಕ್ರಮವಾಗಿ ಭದ್ರಾ ಹಾಗೂ ತುಂಗಾದಿಂದ ನೀರನ್ನು ಬಿಡಿಸುವಂತೆ ಕಾರ್ಯವನ್ನು ಮಾಡಿರುವುದಿಲ್ಲ.

ಸದ್ಯ ಭದ್ರಾದಿಂದ 6000 ಕ್ಯೂಸೆಕ್ಸ್ ಹೆಚ್ಚಿನ ನೀರನ್ನು ಬಿಟ್ಟರೂ ಅದು ಮೈಲಾರ ಲಿಂಗ ಜಾತ್ರೆಗಾಗಿ ಬಿಟ್ಟಿರುವುದಾಗಿ ಇಲಾಖೆ ಅಧಿಕಾರಿಗಳು ತಿಳಿಸಿರುತ್ತಾರೆ. ಮುಂಬರುವ ಬೇಸಿಗೆ ದಿನಗಳಲ್ಲಿ ಗದಗ–ಬೆಟಗೇರಿ ಜನರಿಗೆ ನೀರಿನ ಸಮಸ್ಯೆ ಇನ್ನೂ ಹೆಚ್ಚು ಉಲ್ಬಣಗೊಳ್ಳಲಿರುವುದು. ಆ ಕಾರಣಕ್ಕಾಗಿ ತಕ್ಷಣ ಭದ್ರಾ ನದಿಯಿಂದ ಹಮ್ಮಗಿ ಬ್ಯಾರೇಜ್‌ನಲ್ಲಿ 506 “ಆರ್‌ಎಲ್ ಲೆವೆಲ್” ನೀರು ಖಾಯಂ ಆಗಿ ಇರುವ ರೀತಿಯಲ್ಲಿ ಸದ್ಯ 2 ಟಿಎಂಸಿ ನೀರನ್ನು ತುಂಗಭದ್ರಾದಿಂದ ಬಿಡುವ ವ್ಯವಸ್ಥೆ ಸರಕಾರ ಮಾಡಬೇಕೆಂದು ಗದಗ–ಬೆಟಗೇರಿ

unedited copy

ನಗರದ ಸಮಸ್ತ ನಾಗರಿಕರ ಪರವಾಗಿ ಒತ್ತಾಯಿಸುತ್ತೇನೆ. ಅದೇ ರೀತಿ ಇದೇ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯಿಸುವುದೇನೆಂದರೆ, ಕಳೆದ 4 ತಿಂಗಳ ಹಿಂದೆ ಗದಗ–ಬೆಟಗೇರಿ ಜನರು ಸಮರ್ಪಕ ನೀರಿನ ವಿತರಣೆಗಾಗಿ ಬೀದಿಗಳಿದು ಕೆ.ಯು.ಡ.ಬ್ಲ್ಯೂ.ಎಸ್ ಗದಗ ಕಚೇರಿಗೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಜನರ ಮೇಲೆ ಮಾಡಿರುವ ಪೊಲೀಸ್ ಕೇಸ್‌ಗಳನ್ನು ದಾಖಲಿಸಿದ್ದನ್ನು ಸದನದಲ್ಲಿ ಪ್ರಸ್ತಾಪಿಸದಾಗ ಗದಗ ಜಿಲ್ಲಾ ಉಸ್ತುವಾರಿ ಸಚಿವರು ಹಿಂಪಡೆಯಲು ಒಪ್ಪಿಕೊಂಡಂತೆ ಮುಂದಿನ ಕ್ರಮ ಜರುಗಿಸಲು ಒತ್ತಾಯಿಸುತ್ತೇನೆ.

ಶ್ರೀ ವಿನಯ್‌ಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು):– ಮಾನ್ಯ ಸಭಾಪತಿಗಳೆ, . . .

(ಲಿಖಿತ ಉತ್ತರವನ್ನು ಲಗತ್ತಿಸಲಾಗಿದೆ)

unedited copy

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಗಳೆ, ಪೊಲೀಸ್ ಕೇಸ್ ಮಾಡಿರುವುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ.

**ಶ್ರೀ ವಿನಯ್‌ಕುಮಾರ್ ಸೊರಕೆ:–** ಸರ್ಕಾರದ ಯಾವುದೇ ಸ್ವತ್ತುಗಳು ನಾಶವಾಗದೇ ಇರುವಂತಹ ಸಂದರ್ಭ ಇದ್ದರೆ ಅಂತಹ ಕೇಸುಗಳನ್ನು ಹಿಂಪಡೆದುಕೊಳ್ಳಲಾಗುತ್ತದೆ.

unedited copy

**ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):**–ಮಾನ್ಯ ಸಭಾಪತಿಗಳೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 2014–15ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಭಾಗ–1 ಮತ್ತು ಭಾಗ–2) ಸಭೆಯ ಮುಂದಿಡುತ್ತೇನೆ.

(ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮೊದಲನೇ ಪಟ್ಟಿ ಮತ್ತು ಎರಡನೇ ಪಟ್ಟಿ ಲಗತ್ತಿಸಲಾಗಿದೆ)

(ಮುಂದುವರೆದಿದೆ)

unedited copy

(ಸಭಾಪತಿಯವರ ಉಪಸ್ಥಿತಿ)

ವಿಷಯ: ಪೊಲೀಸರು ಧರಣಿನಿರತ ರೈತರ ಮೇಲೆ
ಹಲ್ಲೆ ನಡೆಸಿರುವ ಬಗ್ಗೆ.

-----

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಅನೇಕ ರೈತರು ಸಾವಿರಾರು ಸಂಖ್ಯೆಯಲ್ಲಿ ಬಂದು ಧರಣಿ ಮಾಡಲು ವಿಧಾನಸೌಧಕ್ಕೆ ಬರುತ್ತಿರುವಂತಹ ಸಂದರ್ಭದಲ್ಲಿ ಏಕಾಏಕಿ ಪೊಲೀಸ್ ಇಲಾಖೆಯವರು ಅವರ ಮೇಲೆ ಸಾಕಷ್ಟು ಲಾಠಿ ಚಾರ್ಜ್‌ನ್ನು ಮಾಡಿ ಅವರ ಟ್ರ್ಯಾಕ್ಟರ್‌ಗಳು, ಟ್ರೇಲರ್‌ಗಳು ಮತ್ತು ಚಕ್ಕಡಿಗಳೆಲ್ಲಾ ಮುರಿದು ಸಾಕಷ್ಟು ಗಲಾಟೆಗಳಾಗಿವೆ. ಇವು ಏತಕ್ಕಾಗಿ ಆಗಿವೆ, ಸರ್ಕಾರ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ, ಅವರು ಏಕೆ ಧರಣಿ ಮಾಡುತ್ತಿದ್ದಾರೆ, ಇದರ ಬಗ್ಗೆ ಇಡೀ ರಾಜ್ಯದ ಜನಕ್ಕೆ ಸ್ಪಷ್ಟನೆ ನೀಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಗೃಹ ಸಚಿವರು ಸದನದಲ್ಲಿರಬೇಕಾಗಿತ್ತು. ಪ್ರಶ್ನೆಗಳಿಗೆ ಉತ್ತರ ಕೊಡುವಂತಹ ಜವಾಬ್ದಾರಿ ಕೂಡ ಅವರ ಮೇಲಿತ್ತು. ಈ ರೀತಿಯಾದ ಘಟನೆ ನಡೆದ ಸಂದರ್ಭದಲ್ಲಿ ನನ್ನ ಜೊತೆಯಲ್ಲೂ ದೂರವಾಣಿಯಲ್ಲಿ ಮಾತನಾಡಿ ರೈತರ ಸಮಸ್ಯೆಗಳಿರುವುದರಿಂದ ರೈತರು ಈ ಕಡೆ ನುಗ್ಗುತ್ತಿರುವುದರಿಂದ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಬಗ್ಗೆ ಅವಲೋಕನ ಮಾಡುವ ಸಲುವಾಗಿ ನಾನು ಆ ಸ್ಥಳಕ್ಕೆ ಹೋಗಬೇಕಾಗಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಬಹುತೇಕವಾಗಿ ಈ ಸರ್ಕಾರದ ಪರವಾಗಿ ಮಾನ್ಯ ಗೃಹ ಸಚಿವರು ಅಲ್ಲಿಯೇ ಇದ್ದಾರೆ. ಮೊಕ್ಕಾಂ ಹೂಡಿ ಅದರ ಬಗ್ಗೆ ಸೂಕ್ತವಾದ ಕ್ರಮ ಜರುಗಿಸುತ್ತಾರೆ. ಅದೇನಾದರೂ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಆಗಿದ್ದರೆ ಅದರ ಬಗ್ಗೆ ಸರ್ಕಾರ ಸೂಕ್ತವಾದ ಕ್ರಮ ಜರುಗಿಸುತ್ತದೆ.

**ಸಭಾಪತಿಯವರು:-** ಅದರ ಬಗ್ಗೆ ಹೇಳಿಕೆಯನ್ನು ಮಾಡಬೇಕಾಗುತ್ತದೆ.

unedited copy

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವಶ್ಯ ಬಿದ್ದರೆ ಮಾನ್ಯ ಗೃಹ ಸಚಿವರಿಂದ ಹೇಳಿಕೆ ಮಾಡಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇಂತಹ ಘಟನೆ ನಡೆದ ಮೇಲೆ ಸರ್ಕಾರ ಈಗ ಏನಾದರೂ ಹೇಳಬೇಕಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:-** ಗೃಹ ಸಚಿವರು ಅಲ್ಲೇ ಇದ್ದಾರೆ. ರೈತರ ಜೊತೆ ಚರ್ಚೆ ನಡೆದಿದೆ. ನಾಳೆ ಸದನದಲ್ಲಿ ಮಾನ್ಯ ಗೃಹ ಸಚಿವರ ಮುಖಾಂತರ ಹೇಳಿಕೆ ಮಾಡಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಸಭಾನಾಯಕರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಈಗ ಪರಿಸ್ಥಿತಿ ಹೇಗಿದೆ ಎಂಬುದನ್ನು ತಾವು ಹೇಳಬೇಕಲ್ಲವೆ? ನಾಡಿನ ಜನರಿಗೆ ಗೊತ್ತಾಗಬೇಕಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:-** ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಮಾನ್ಯ ಗೃಹ ಸಚಿವರು ಸ್ಥಳದಲ್ಲಿಯೇ ಇದ್ದಾರೆ. ರೈತರ ಜೊತೆ ಚರ್ಚೆ ನಡೆದಿದೆ. ಸೂಕ್ತವಾದ ಕ್ರಮ ಕೈಗೊಳ್ಳಲಾಗಿದೆ. ನಮ್ಮ ಸರ್ಕಾರ ರೈತರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾನಾಯಕರೇ ದಯವಿಟ್ಟು general statement ಮಾಡಬೇಡಿ.

**ಸಭಾಪತಿಯವರು:-** ನಾಳೆ ಮಾಡುತ್ತೇವೆಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈಗ ಸದನ ನಡೆಯುತ್ತಿದೆ. ಸದನ ನಡೆಯುತ್ತಿರುವ ಸಂದರ್ಭದಲ್ಲಿ ಈ ರೀತಿ ಸಾವಿರಾರು ರೈತರ ಮೇಲೆ ಲಾಠಿ ಜಾರ್ಜ್ ಆಗಿ ಸಾಕಷ್ಟು ಜನರ ಕೈಕಾಲು ಮುರಿದಿದೆ. ಎತ್ತಿನಗಾಡಿಯ ಚಕ್ಕಡಿಗಳೆಲ್ಲಾ ಮುರಿದು ಹೋಗಿವೆ.

unedited copy

ಗೃಹ ಸಚಿವರ ಹತ್ತಿರ ಕೇಳಿಕೊಂಡು ಏಕೆ, ಏನು ಎಂದು ರಾಜ್ಯದ ಜನರ ಮುಂದೆ ಹೇಳಬೇಕಲ್ಲವೆ? ಅವರು ಈ ಸದನದ ಸಭಾನಾಯಕರಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಮಾತುಕತೆ ನಡೆಸಿ ಏನಾಗಿದೆ ಎಂಬುದನ್ನು ತಿಳಿಸಬೇಕಲ್ಲವೆ? ಸದನ ನಡೆಯುತ್ತಿರುವಂತಹ ಸಂದರ್ಭದಲ್ಲೂ ಕೂಡ general statement ಕೊಟ್ಟುಬಿಟ್ಟರೆ ನಾವೇನು ಮಾಡೋಣ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೇಳಿಕೆ ಕೊಡುವುದಕ್ಕಿಂತ ಅಲ್ಲಿ ಸೂಕ್ತವಾದ ಕ್ರಮ ಜರುಗಿಸುವುದು ಬಹಳ ಅವಶ್ಯಕತೆ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಹಾಗಾದರೆ ನಮ್ಮನ್ನು ಕತ್ತಲೆಯಲ್ಲಿಡುತ್ತೀರಾ?

**ಶ್ರೀ ಎಸ್.ಆರ್.ಪಾಟೀಲ್:-** ಸ್ವತಃ ಮಾನ್ಯ ಗೃಹ ಸಚಿವರು ಅಲ್ಲೇ ಇದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ,.....

**ಶ್ರೀ ಕೆ.ಎಸ್.ಈಶ್ವರಪ್ಪ:-** ರೇವಣ್ಣನವರೇ, ನೀವು ಕುಳಿತುಕೊಳ್ಳಿ, ಸಭಾನಾಯಕರು ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ಪ್ರತಿಯೊಂದಕ್ಕೂ ಇವರೇಕೆ ಮೇಲೆ ಏಳುತ್ತಾರೆ? ಇವರಿಗೇನಾದರು ಸಭಾನಾಯಕರು Power of Attorney ಕೊಟ್ಟಿದ್ದಾರೆಯೇ?

**ಸಭಾಪತಿಯವರು:-** ಮಾನ್ಯ ರೇವಣ್ಣನವರೇ, ಸರ್ಕಾರದ ಪರವಾಗಿ ಮಾನ್ಯ ಸಭಾನಾಯಕರು ನಿಂತಿದ್ದಾರೆ. ಸರ್ಕಾರದ ಪರವಾಗಿ ಅವರು ಮಾತನಾಡುತ್ತಾರೆ. ದಯಮಾಡಿ ಮಧ್ಯೆ ಮಾತನಾಡಬೇಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ವಿಚಾರವಾಗಿಯೇ ಮಾನ್ಯ ಗೃಹ ಮಂತ್ರಿಗಳು ಈಗ ಸದನದಲ್ಲಿಲ್ಲ. ಸದನದಲ್ಲಿ ಅವರ ಪ್ರಶ್ನೋತ್ತರವಿದ್ದರೂ ಕೂಡ ನನಗೆ

unedited copy

ನೇರವಾಗಿ ಈ ವಿಚಾರವಾಗಿ ರೈತರ ಸಮಸ್ಯೆಗಳು ಉದ್ಭವಿಸಿವೆ, ಅದನ್ನು ಸ್ವತಃ ಪರಿಹಾರ ಮಾಡುವುದಕ್ಕೆ ಅಲ್ಲಿರುವುದು ಬಹಳ ಅವಶ್ಯಕತೆ ಇದೆ, ಕಾನೂನು ಸುವ್ಯವಸ್ಥೆಯ ಪ್ರಶ್ನೆ ಕೂಡ ಉದ್ಭವಿಸಿದೆ. ಆ ದೃಷ್ಟಿಯಿಂದ ತಮ್ಮ ಪರವಾನಗಿಯನ್ನು ಪಡೆಯುವುದಕ್ಕೂ ಕೂಡ ಹೇಳಿದ್ದಾರೆ. ಅವರ ಐದು ಪ್ರಶ್ನೆಗಳಿಗೆ ನಾಳೆ ಉತ್ತರಿಸುತ್ತಾರೆ. ನಾಳೆ ಬೆಳಿಗ್ಗೆಯೇ ಏನಾಗಿದೆ ಎಂಬುದರ ಬಗ್ಗೆ ವಿವರವಾದ ವರದಿಯನ್ನು ಸದನದಲ್ಲಿ ಮಾನ್ಯ ಗೃಹ ಸಚಿವರ ಮುಖಾಂತರ ಒದಗಿಸಿಕೊಡುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸದನ ನಡೆಯುತ್ತಿದೆ. ಸದನ ನಡೆಯುತ್ತಿರುವಾಗ ಈ ರಾಜ್ಯದ ಜನರಿಗೆ ತಿಳಿಸಬೇಕಾಗಿರುವುದು ಸರ್ಕಾರದ ಕರ್ತವ್ಯ. ಯಾರು ಬೇಕಾದ್ದು ಹೇಳಲಿ. ಈಗ ಏನಾಗಿದೆ ಎನ್ನುವುದನ್ನು ಸರ್ಕಾರ ಹೇಳಬೇಕು. ಗೃಹ ಮಂತ್ರಿಗಳೇ ಬಂದು ಹೇಳಬೇಕೆಂದೇನೂ ಇಲ್ಲ.

**Sri S.R. PATIL:-** Still it is going on.

**Sri K.S. ESHWARAPPA:-** Still it is going on ಅಂದರೆ, ಏನಾಗಿದೆ ಎಂಬುದನ್ನಾದರೂ ಹೇಳಿ. ಸಾವಿರಾರು ರೈತರ ಮೇಲೆ ಲಾಠಿ ಚಾರ್ಜ್ ಆಗಿದೆ, ರೈತರ ಮೇಲೆ ಈ ರೀತಿಯಾಗುತ್ತಿರಬೇಕಾದರೆ ಸರ್ಕಾರ ಏನಾದರೂ ಹೇಳಬೇಕಲ್ಲವೆ? ನಡೆಯುತ್ತಿದೆ ಎಂದರೆ ಏನು ನಡೆಯುತ್ತಿದೆ ಏಕೆ ನಡೆಯುತ್ತಿದೆ?

**ಶ್ರೀ ಎಸ್.ಆರ್.ಪಾಟೀಲ್:-** ಪೂರ್ತಿ ವಿವರವಾದಂತಹ ವರದಿಯನ್ನು ನಾಳೆ ಮಾನ್ಯ ಗೃಹ ಸಚಿವರ ಮುಖಾಂತರ ಒದಗಿಸಿಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಗೃಹ ಸಚಿವರು ಇರಲಿ, ನಿಮಗೇನು ಜವಾಬ್ದಾರಿ ಇಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:-** ಅರ್ಥಂಬರ್ಥ ಹೇಳಬೇಕೆ?

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:-** ಏನು ನಡೆದಿದೆ, ಅದನ್ನು ಹೇಳಿ?

**ಶ್ರೀ ಎಸ್.ಆರ್.ಪಾಟೀಲ್:-** ಏನು ನಡೆದಿದೆ ಎಂಬುದನ್ನು ನಾಳೆ ಹೇಳುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾಳೆ ಅಲ್ಲ, ದಯವಿಟ್ಟು ಇವತ್ತು ಹೇಳಬೇಕು. ಸದನ ನಡೆಯುತ್ತಿರುವಂತಹ ಸಂದರ್ಭದಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಾಗುವುದಿಲ್ಲವೇ? ರೈತರ ಮೇಲೆ ಲಾಠಿ ಜಾರ್ಜ್ ನಡೆಯುತ್ತಿದೆ, ಹಾಗಾದರೆ ಹೇಳುವವರು ಕೇಳುವವರು ಯಾರು ಇಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:-** ಗೃಹ ಸಚಿವರು ಸದನವನ್ನು ಬಿಟ್ಟು ಅಲ್ಲಿಗೆ ಹೋಗಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಪೊಲೀಸ್ ಅಧಿಕಾರಿಗಳಿಲ್ಲವೇ? ಅವರಿಗೆ ಕೇಳಿ ನೀವು ಮಾಹಿತಿಯನ್ನು ಕೊಡುವುದಕ್ಕಾಗುವುದಿಲ್ಲವೇ? ನಮ್ಮನ್ನು ಏಕೆ ಕತ್ತಲೆಯಲ್ಲಿಡುತ್ತೀರಿ? ಏನು ನಡೆದಿದೆ ಎಂಬುದನ್ನು ಹೇಳಿ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವರಿಗೆ ಇನ್ನೇನು ಹೇಳಬೇಕು? ಗೃಹ ಸಚಿವರು ಅಲ್ಲಿಗೆ ಹೋಗಿದ್ದಾರೆ. ಅಲ್ಲಿನ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಹೋಗಿದ್ದಾರೆ. ರೈತರ ಪರ ಕಾಳಜಿ ಮಾಡುವುದಕ್ಕೆ ಹೋಗಿದ್ದಾರೆ. ಎಲ್ಲವನ್ನು ಸವಿಸ್ತಾರವಾಗಿ ವಿವರವಾದಂತಹ ವರದಿಯನ್ನು ಗೃಹ ಸಚಿವರ ಮೂಲಕ ನಾವು ಸದನದಲ್ಲಿ ನೀಡುತ್ತೇವೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಸಭಾನಾಯಕರು ಏನು ಹೇಳುತ್ತಿದ್ದಾರೆಂದರೆ, ನೀವು ಎತ್ತಿರುವುದು ಸರಿಯಿದೆ, ನನ್ನ ಹತ್ತಿರ ಪೂರ್ತಿ ಮಾಹಿತಿ ಇಲ್ಲ, ಸದನಕ್ಕೆ ಮಾಹಿತಿ ಅರ್ಧಂಬರ್ಧ ಕೊಡುವುದು ಸರಿಯಲ್ಲ. ನಾಳೆ ಬೆಳಿಗ್ಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. They will make a statement.

unedited copy

**ಶ್ರೀ ಬಸವರಾಜ ಹೊರಟ್ಟಿ:-** ಈಗ ಏನು ಪರಿಸ್ಥಿತಿ ಇದೆ ಅದನ್ನು ಹೇಳಲಿ.

**ಸಭಾಪತಿಯವರು:-** ನಾಳೆ ಹೇಳುತ್ತಾರೆ. ಈಗ ಅವರ ಹತ್ತಿರ ಮಾಹಿತಿ ಇಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾಹಿತಿಯನ್ನು ತರಿಸಿಕೊಳ್ಳುವುದಕ್ಕೆ ಹೇಳಿ? ಅಧಿಕಾರಿಗಳು ಇಲ್ಲವೆ? ಸದನ ನಡೆಯುತ್ತಿರಬೇಕಾದರೆ ನಮ್ಮನ್ನು ಏಕೆ ಕತ್ತಲಲ್ಲಿ ಇಡುತ್ತಿದ್ದಾರೆ?

**ಶ್ರೀ ಎಸ್.ಆರ್.ಪಾಟೀಲ್:-** ನನಗೆ ಬಂದ ಮಾಹಿತಿ ಪ್ರಕಾರ ಗೃಹ ಸಚಿವರು ರೈತರ ಜೊತೆ ಆಪ್ತಲೋಚನೆ ನಡೆಸಿದ್ದಾರೆ, ಚರ್ಚೆ ಮಾಡುತ್ತಿದ್ದಾರೆ. Still it is going on.

**ಶ್ರೀ ಕೆ.ಎಸ್.ಈಶ್ವರಪ್ಪ:-** ಏನು ನಡೆದಿದೆ ಎಂಬುದನ್ನಾದರೂ ಹೇಳಿ?

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈಗ ಸಾವಿರಾರು ರೈತರ ಮೇಲೆ ಲಾಠಿ ಜಾರ್ಜ್ ನಡೆಯುತ್ತಿದೆ. ಆಸ್ಪತ್ರೆಗೆ ಹೋಗುತ್ತಿದ್ದಾರೆ. ಎತ್ತಿನಗಾಡಿಗಳೆಲ್ಲಾ ಪುಡಿ ಪುಡಿಯಾಗಿವೆ. ಏಕೆ ಹೀಗಾಯಿತು? ಇದಕ್ಕೆ ಯಾರು ಜವಾಬ್ದಾರಿ?

**ಶ್ರೀ ಎಸ್.ಆರ್.ಪಾಟೀಲ್:-** ಏನಾಗಿದೆ ಎಂಬುದರ ಬಗ್ಗೆ ನಾಳೆ ವರದಿ ಕೊಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾಳೆಯವರೆಗೂ ನಾವು ಕಾಯುವುದಿಲ್ಲ. ಸದನ ನಡೆಯುತ್ತಿರಬೇಕಾದರೆ ಮಾಹಿತಿಯನ್ನು ತರಿಸಿಕೊಂಡು ಉತ್ತರ ಕೊಡಿ. ಸರ್ಕಾರಕ್ಕೆ machineries ಗಳು ಇಲ್ಲವೆ, ಅಧಿಕಾರಿಗಳು ಇಲ್ಲವೆ? ಇವರಿಗೆ ಕೇಳುವುದಕ್ಕೆ ಶಕ್ತಿ ಇಲ್ಲವೆ ಅಥವಾ ಇವರ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲವೆ? ರಾಜ್ಯದಲ್ಲಿ ಏನು ನಡೆಯುತ್ತಿದೆ

ಎಂಬುದು ಹೇಳುವುದಕ್ಕಾಗುವುದಿಲ್ಲವೆ? ನಮ್ಮನ್ನು ಏಕೆ ಕತ್ತಲೆಯಲ್ಲಿಡುತ್ತೀರಿ? ಏನಾಗಿದೆ ಎಂಬುದನ್ನು ಹೇಳಿ?

**Sri S.R. PATIL:-** Still it is going on. I will get the full report and then will tell.

**ಶ್ರೀ ಕೆ.ಎಸ್.ಈಶ್ವರಪ್ಪ:-** ರೈತರ ಮೇಲೆ ಲಾಠಿ ಜಾರ್ಜ್ ಏಕಾಯಿತು?

**ಶ್ರೀ ಎಸ್.ಆರ್.ಪಾಟೀಲ್:-** ಏನಾಗಿದೆ ಎನ್ನುವುದರ ಬಗ್ಗೆ ಕೇಳುತ್ತೇನೆ. ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸಭಾನಾಯಕರು ಎಂದು ನೀವೇಕೆ ಇದ್ದೀರಿ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೇನೆ. ಅವರು ರೈತರ ಜೊತೆ ಚರ್ಚೆ ಮಾಡುತ್ತಿದ್ದಾರೆ. ಆ ವಿಚಾರವಾಗಿ ಏನೇನು ಸಮಸ್ಯೆಗಳು ಉದ್ಭವಿಸಿವೆ ಅದನ್ನು ಬಗೆಹರಿಸುವುದಕ್ಕೆ ಗೃಹ ಸಚಿವರು ಈ ಸದನದಿಂದ ಹೊರಗಡೆ ಹೋಗಿ ಅವರ ಜೊತೆ ಚರ್ಚೆ ಮಾಡುತ್ತಿದ್ದಾರೆ. ನಾನು ಕೂಡ ಮಾಹಿತಿ ಪಡೆದಿದ್ದೇನೆ. ಸವಿಸ್ತಾರವಾಗಿ ಏನೇನು ನಡೆದಿದೆ, ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವುದರ ಬಗ್ಗೆ ಮಾನ್ಯ ಗೃಹ ಸಚಿವರ ಮುಖಾಂತರ ನಾಳೆ ಸದನದಲ್ಲಿ ಬೆಳಿಗ್ಗೆ ಉತ್ತರ ಕೊಡಿಸಲಾಗುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈಗ ನಿಮ್ಮ ಹತ್ತಿರ ಏನು ಮಾಹಿತಿ ಇದೆ ಅದನ್ನು ಹೇಳಿ.

**ಸಭಾಪತಿಯವರು:-** ಅವರು ಹೇಳುವುದಿಲ್ಲ ಎಂದು ಹೇಳುತ್ತಿದ್ದಾರೆ.

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರೇನೋ ಮಾಹಿತಿ ಇದೆ ಎಂದು ಹೇಳಿದರು.

**ಸಭಾಪತಿಯವರು:-** ಗೃಹ ಸಚಿವರು ಹೋಗಿದ್ದ ಮಾಹಿತಿ ಇದೆ, ನನ್ನ ಹತ್ತಿರ ಬೇರೆ ಮಾಹಿತಿ ಇಲ್ಲ, ಎಲ್ಲ ಮಾಹಿತಿ ನಾಳೆ ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ,......

**ಸಭಾಪತಿಯವರು:-** ಅವರೇನು ಮಾತನಾಡುತ್ತಾರೆ ಮಾತನಾಡಲಿ ಬಿಡಿ. ಅವರು ಹೇಳುವುದೇ ಬೇಡ ಎಂದು ಹೇಗೆ ಹೇಳುವುದು, ಅವರು ಹೇಳಲಿ.

(ಮುಂದು)

unedited copy

(ಸಭಾಪತಿಯವರ ಉಪಸ್ಥಿತಿ) ಶ್ರೀ ಎಚ್.ಕೆ.ಪಾಟೀಲ್(ಮುಂದುವರೆದುದು...

ಇದರ ಜೊತೆಗೆ ಕಾರ್ಮಿಕ ಸಚಿವರಾದ ಮಾನ್ಯ ಪರಮೇಶ್ವರ ನಾಯಕ್ ಅವರ ಜೊತೆಯಲ್ಲಿ ನಾನು ಈಗಾಗಲೇ ಚರ್ಚೆ ಮಾಡಿದ್ದೇನೆ. ಅಂತಿಮ ಆದೇಶವನ್ನು ಮೇ 1ನೇ ತಾರೀಖಿನೊಳಗಾಗಿ ಹೊರಡಿಸಿ ಅನುಕೂಲ ಮಾಡಿ, ಅಂದರೆ ಮೇ 1ನೇ ತಾರೀಖಿಗೆ ಪರಿಷ್ಕರಣೆ ಹೊಂದಿದಂತಹ ಕನಿಷ್ಠ ವೇತನವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದೇವೆ. ಆದಷ್ಟು ಬೇಗ ನಾವು ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:-** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮಂತ್ರಿಗಳು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಮೇಲೆ ನಮಗೆ ಸ್ವಲ್ಪ ಪ್ರೀತಿ ಜಾಸ್ತಿ, ಏಕೆಂದರೆ ಜಗಳ ಮಾಡುವುದಕ್ಕಾದರೂ ಅವರು ಸ್ವಲ್ಪ ನಮ್ಮ ಕೈಗೆ ಸಿಗುತ್ತಾರೆ ಎನ್ನುವ ಕಾರಣಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಹ ಸಲ್ಲಿಸಬೇಕಾಗುತ್ತದೆ. ರಮೇಶ್ ಕುಮಾರ್ ವರದಿಯ ಬಗ್ಗೆ ಜಾರಿಗೆ ತರಬೇಕು ಎಂದು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದಿರುವ 25 ಜನರ ಜೊತೆಗೆ ಇಡೀ ಸದನ ಒತ್ತಾಯ ಮಾಡಿತ್ತು. ಒಂದಿಷ್ಟು ಲೋಪದೋಷಗಳ ನಡುವೆ ಕೂಡ ಅವರು ಅದನ್ನು ತಂದಿದ್ದಾರೆ ಎನ್ನುವ ಕಾರಣಕ್ಕೆ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ.

ಕರ್ನಾಟಕ ರಾಜ್ಯದಲ್ಲಿರುವ 6020 ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ 5 ಹುದ್ದೆಗಳನ್ನು ನಿಯೋಜನೆ ಮಾಡುವುದಕ್ಕೆ 1993ರಲ್ಲಿ ಆದೇಶವಾಗಿದೆ. ಬಿಲ್ ಕಲೆಕ್ಟರ್ ಹುದ್ದೆಗೆ ರೂ. 7632/- ಸಂಬಳ ನಿಗದಿಪಡಿಸಿದ್ದೀರಿ. ತಾವು ಗಮನಿಸಬೇಕು, 15 ವರ್ಷ ಸೇವೆ ಮಾಡಿದವರಿಗೂ ಅಷ್ಟೇ; ಇತ್ತೀಚೆಗೆ ಕೆಲಸಕ್ಕೆ ಸೇರಿದವರಿಗೂ ಅಷ್ಟೇ. ತಾವೀಗ ವೇತನ ಪರಿಷ್ಕರಣೆ ಮಾಡುವುದಾಗಿ ತಿಳಿಸಿದ್ದೀರಿ. ಇದರ ಆಧಾರದ ಮೇಲೆ ಅದನ್ನು ಮಾಡಬಹುದು, ಹೇಗೆ ಮಾಡುತ್ತೀರಿ ಎಂಬುದು ನಮಗೆ ಗೊತ್ತಿಲ್ಲ.

ಕ್ಲರ್ಕ್ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳ ವಿದ್ಯಾರ್ಹತೆ ಎಂದರೆ, ಅವರು ಪದವೀಧರರಾಗಿರಬೇಕು ಮತ್ತು ಕಂಪ್ಯೂಟರ್ ಜ್ಞಾನ ಇರಬೇಕು. ಅವರಿಗೆ ಕೂಡ ರೂ. 7632/- ಸಂಬಳ. ಪಂಪ್ ಆಪರೇಟರ್‌ಗೆ ರೂ. 7411/- ಸಂಬಳವಾದರೆ, ಜವಾನನಿಗೆ ಕೂಡ ರೂ. 7300 ರೂಪಾಯಿ ಸಂಬಳ. ಸ್ವಚ್ಛತಾಗಾರ ಅಂದರೆ ಜಾಡಮಾಲ ಎಂದು ನಾವೇನು ಕರೆಯುತ್ತೇವೆ, ಅವರಿಗೂ ಸಹ ರೂ.

unedited copy

6197/– ರೂಪಾಯಿ. ಇದರಲ್ಲಿ ಹಳೆಯ ಮಂಡಲ ಪಂಚಾಯತಿ ವ್ಯವಸ್ಥೆ ಇದ್ದಾಗಿನಿಂದ ಹಿಡಿದು ಈಗ ಗ್ರಾಮ ಪಂಚಾಯತಿಯಾಗಿ ಪರಿವರ್ತನೆಯಾದರೂ ಕೂಡ ಇರುವವರಿದ್ದಾರೆ. ಅವರಿಗೆ ಕೂಡ ಅಷ್ಟೇ ಸಂಬಳ ಇದೆ.

**ಶ್ರೀ ಅಭಯಚಂದ್ರ:–** ನಾವು ಅಷ್ಟನ್ನಾದರೂ ಮಾಡಿದ್ದೇವೆ. ನೀವು ಅಷ್ಟನ್ನೂ ಮಾಡಿರಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಯಿತು, ಅದಕ್ಕೋಸ್ಕರ ನೀವು ಬಂದಿರುವಿರೆಲ್ಲಾ, ನಮಗೆ ನಿಮ್ಮ ಬಗ್ಗೆ ಏನೂ ಆಸೆ ಉಳಿದಿಲ್ಲ.

**ಶ್ರೀ ಐವನ್ ಡಿ"ಸೋಜಾ:–** ನೀವು ಮಾಡಲೇ ಇಲ್ಲವಲ್ಲ.

**ಶ್ರೀ ಅಭಯಚಂದ್ರ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ ನೀವು ಉತ್ತರ ಕೊಡುತ್ತೀರಾ? ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ ಯುವಜನ ಮತ್ತು ಕ್ರೀಡಾ ಸಚಿವರು ಉತ್ತರ ಕೊಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ, ಆದರೆ ಅವರು ಉತ್ತರ ಕೊಟ್ಟ ಮೇಲೆ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮತ್ತೆ ಅವಕಾಶವಿಲ್ಲ.

**ಶ್ರೀ ಎಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಗೆ ಸಂಬಂಧಪಟ್ಟಂತಹ ವಿಚಾರಕ್ಕೆ ನಾನು ಉತ್ತರ ಕೊಡುತ್ತೇನೆ. ಇನ್ನುಳಿದಂತೆ ಮಾನ್ಯ ಸದಸ್ಯರು ಪ್ರಸ್ತಾಪಿಸುವಂತಹ ವಿಚಾರಗಳಿಗೆ ಮಾನ್ಯ ಯುವಜನ ಮತ್ತು ಕ್ರೀಡಾ ಸಚಿವರು ಉತ್ತರ ಕೊಡುತ್ತಾರೆ.

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಗೊತ್ತಾಯಿತಲ್ಲವೆ? ನೀವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ವಿಚಾರವನ್ನು ಬಿಟ್ಟು ಬೇರೆ ಕೇಳಬೇಡಿ.

unedited copy

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಈ ಎಲ್ಲ ಹುದ್ದೆಗಳನ್ನು ಒಮ್ಮೆ ಖಾಯಂ ಮಾಡಬೇಕೆಂದು ಸರ್ಕಾರ ಜಿಲ್ಲಾ ಪಂಚಾಯತಿಗೆ ಆದೇಶ ಕೊಟ್ಟಿದೆ. ಗುಮಾಸ್ತರು, ಡಾಟಾ ಎಂಟ್ರಿ ಆಪರೇಟರ್‌ಗಳು, ಸ್ವಚ್ಛತಾಗಾರರು, ಪಂಪ್ ಆಪರೇಟರ್ಸ್ ಇಂತಹ ಸರಿಸುಮಾರು 30,000 ಹುದ್ದೆಗಳಿವೆ. ಅವುಗಳಲ್ಲಿ ಸುಮಾರು 16 – 17 ಸಾವಿರ ಜನರನ್ನು ಖಾಯಮಾತಿ ಅಂದರೆ, ಅನುಮೋದನೆ ಮಾಡಿದರು. ಅದನ್ನು ತಾವು ಖಾಯಮಾತಿ ಎನ್ನುತ್ತೀರೋ, ಅನುಮೋದನೆ ಎನ್ನುತ್ತೀರೋ? ನೀವು ಖಾಯಮಾತಿ ಎಂದು ತಿಳಿಸಿದ್ದೀರಿ, ಹಾಗಾಗಿ ನಾವು ಕೂಡ ಅದೇ ಶಬ್ದವನ್ನು ಬಳಕೆ ಮಾಡುತ್ತೇವೆ. ಸರ್ಕಾರ ಅವರನ್ನು ಅನುಮೋದನೆ ಮಾಡಿದ್ದನ್ನು ಬಿಟ್ಟರೆ ಅವರಿಗೆ ಅವರ ಸೇವಾ ಭದ್ರತೆಯಲ್ಲಾಗಲಿ, ವೇತನ ಪರಿಷ್ಕರಣೆಯಲ್ಲಾಗಲಿ, ಅವರಿಗೆ ಸಿಗಬಹುದಾದಂತಹ ಪಿಂಚಣಿಯಲ್ಲಾಗಲಿ, ಆರೋಗ್ಯ ವಿಮೆಯಲ್ಲಾಗಲಿ ಒಂದಿನಿತೂ ಬದಲಾವಣೆಯಾಗಿಲ್ಲ. ನಂತರ ಮತ್ತೆ ನಾವು ನಿಮಗೆ ತಿಳಿಸಿದೆವು, ಇಲ್ಲ ಇವರೆಲ್ಲಾ ಕಡಿಮೆ ವಿದ್ಯಾರ್ಹತೆಯನ್ನು ಹೊಂದಿದ್ದಾರೆ, ಅವರಿಗೆ ಕೂಡ ನೀವು ಏನಾದರೂ ಸಹಾಯ ಮಾಡಬೇಕೆಂದು ಕೇಳಿದಾಗ ಸರ್ಕಾರ ಮತ್ತೊಂದು ಸುತ್ತೋಲೆಯನ್ನು ಹೊರಡಿಸಿತು.

**ಶ್ರೀ ಎಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಶ್ರೀನಿವಾಸ ಪೂಜಾರಿಯವರೇ, ವಿಷಯಗಳಿಗೆ ಅನ್ಯಾಯ ಮಾಡಬೇಡಿರಿ. ನೀವೀಗ ಯಾವ ವಿಷಯಗಳನ್ನು ಪ್ರಸ್ತಾಪಿಸಿದ್ದೀರಿ, ಇದು ತನ್ನದೇ ಆಗಿರುವಂತಹ ಬಹಳ ದೊಡ್ಡದಾಗಿರುವಂತಹ ವಿಷಯ. ಇದೇ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ, 26.000 ಹುದ್ದೆಗಳಲ್ಲಿ ಈಗೇನು ಕೆಲಸ ನಿರ್ವಹಿಸುತ್ತಿದ್ದಾರೆ ಅವರನ್ನು ಖಾಯಂ ಮಾಡುತ್ತೇವೆ, ಅನುಮೋದನೆ ಮಾಡುತ್ತೇವೆ ಎಂದು ಭರವಸೆ ಕೊಟ್ಟೆವು. ಅದರಂತೆಯೇ ನಾವು ಕ್ರಮ ತೆಗೆದುಕೊಂಡೆವು. ಮಾನ್ಯ ವಿಜಯ ಭಾಸ್ಕರ್‌ರವರು ನಮ್ಮ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾಗಿದ್ದರು, ಸುಮಾರು 30,000ಕ್ಕೂ ಹೆಚ್ಚು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ನಾವು ಖಾಯಮಾತಿ ಮಾಡಿದ್ದೇವೆ. ಇಡೀ ರಾಷ್ಟ್ರದಲ್ಲಿಯೇ ಇಷ್ಟು ದೊಡ್ಡ ಗಾತ್ರದಲ್ಲಿ ಸರ್ಕಾರಿ ನೌಕರರನ್ನಾಗಿ ಖಾಯಂ ಮಾಡಿರುವುದು ಯಾವುದೇ ಕೋರ್ಟ್‌ನ ನಿರ್ದೇಶನದಿಂದಲ್ಲ, ಚಳುವಳಿಯ ಒತ್ತಡದಿಂದಲ್ಲ. ಈ ರೀತಿ ಆಗಿರುವಂಥದ್ದು ಇದೇ ಮೊಟ್ಟಮೊದಲನೆಯ ಪ್ರಕರಣ. ಆದ್ದರಿಂದ ಆ ವಿಷಯವನ್ನು ನೀವು ಇದರ ಜೊತೆಗೂಡಿಸಿಕೊಂಡು ನನಗೆ ಉತ್ತರ ನೀಡಬೇಕೆಂದು ಹೇಳಿದರೆ ತಪ್ಪಾಗುತ್ತದೆ. ಅದಕ್ಕಾಗಿಯೇ ವಿಶೇಷವಾಗಿರುವಂತಹ ಒಂದು ವಿಷಯವನ್ನು ಗಮನ ಸೆಳೆಯುವ ಸೂಚನೆಯ ನಿಯಮದ ಅಡಿಯಲ್ಲಿ ತೆಗೆದುಕೊಂಡು ಬನ್ನಿ. ಆ ಸಂದರ್ಭದಲ್ಲಿ ನಾನು ವಿವರವಾದಂತಹ ಉತ್ತರವನ್ನು ಕೊಡುತ್ತೇನೆ.

unedited copy

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯರೇ, ನಾನು ಹೇಳುವುದೇನೆಂದರೆ ಖಾಯಮಾತಿ ಮಾಡಿ ಅನುಮೋದನೆ ಕೊಟ್ಟಿದ್ದೀರಿ, ಹೀಗಿರುವಾಗ ಅವರಿಗೆ ಕೊಡಬೇಕಾದಂತಹ ಸವಲತ್ತುಗಳೇನಿವೆ, ಅವರಿಗೆ ಪಿ.ಎಫ್. ಸೌಲಭ್ಯ, ಇ.ಎಸ್.ಐ. ಸೌಲಭ್ಯ ಸಿಗುತ್ತಿಲ್ಲ, ಅವರಿಗೆ ಪಿಂಚಣಿ ಸೌಲಭ್ಯಗಳು ಸಿಗುತ್ತಿಲ್ಲ ಎಂದು ನಾನು ಹೇಳುವಾಗ ಅದು ಮೊದಲು ಹೇಗಾಗುತ್ತದೆ? ನಾನು ಕೇಳುತ್ತಿರುವುದು ಪಂಚಾಯತಿ ಸಿಬ್ಬಂದಿಗಳ ಸೇವಾ ಭದ್ರತೆ ಮತ್ತು ಇನ್ನಿತರ ಸೌಲಭ್ಯಗಳ ಬಗ್ಗೆ. ಹಾಗಾಗಿ ಅದು ಬೇರೆ ಮತ್ತು ಬದಲಿ ಎನ್ನುವಂತಹ ಪರಿಸ್ಥಿತಿಗಳೇನಿಲ್ಲ ಮತ್ತು ವಿಷಯಕ್ಕೆ ಅನ್ಯಾಯ ಮಾಡುವಂತಹ ಪರಿಸ್ಥಿತಿಯೂ ನಿರ್ಮಾಣವಾಗಿರುವುದಿಲ್ಲ. ಏಕೆಂದರೆ ನಿಮ್ಮ ಮೇಲೆ ನಾನಿನ್ನೂ ಪೂರ್ಣ ವಿಶ್ವಾಸನ್ನು ಕಳೆದುಕೊಂಡಿಲ್ಲ, ನಿಮ್ಮನ್ನಿನ್ನೂ ನಾನು ನಂಬುತ್ತಿದ್ದೇನೆ. ಹಾಗಾಗಿ ನನ್ನ ವಿನಂತಿಯನ್ನು ಕೂಡ ತಾವು ದಯಮಾಡಿ ಕೇಳಬೇಕು. ನಾನು ಎರಡು–ಮೂರು ವಿಷಯಗಳನ್ನಷ್ಟೇ ಕೇಳಬಯಸುತ್ತಿದ್ದೇನೆ. ಬಿಲ್ ಕಲೆಕ್ಟರ್‌ಗಳನ್ನು ಖಾಯಮಾತಿ ಮಾಡಬೇಕೆಂದು ಹೇಳಿ, ಒಂದೊಂದು ಗ್ರಾಮ ಪಂಚಾಯತಿಯಲ್ಲಿ ಒಬ್ಬೊಬ್ಬ ಬಿಲ್ ಕಲೆಕ್ಟರ್ ಇರುತ್ತಾನೆ. ಯಾವುದೋ ಕಾರಣಕ್ಕೆ ಎರಡು–ಮೂರು ಜನ ಬಿಲ್ ಕಲೆಕ್ಟರ್‌ಗಳು ಕೂಡ ಕೆಲವು ಗ್ರಾಮ ಪಂಚಾಯತಿಯಲ್ಲಿದ್ದಾರೆ. ಉದಾಹರಣೆಗೆ ಸೋಮೇಶ್ವರ ಗ್ರಾಮ ಪಂಚಾಯತಿಯಲ್ಲಿ 61 ಜನ ಸದಸ್ಯರು, 20,000ಕ್ಕೂ ಹೆಚ್ಚು ಜನಸಂಖ್ಯೆ ಇದೆ. ನಿಮ್ಮ ಕ್ಷೇತ್ರ ವಿಂಗಡಣೆ ಮಾಡುವವರು ಪಂಚಾಯತಿಯನ್ನು ವಿಂಗಡಣೆ ಮಾಡುವವರು ಅದನ್ನು ಐದು ಅಥವಾ ಆರು ಪಂಚಾಯತಿಯನ್ನಾಗಿ ಮಾಡಬೇಕಾಗಿತ್ತು. ಆದರೆ ಯಾವುದೋ ಕಾರಣಕ್ಕೆ ಇದನ್ನು ಪಟ್ಟಣ ಪಂಚಾಯತಿಯನ್ನಾಗಿಯೂ ಮಾಡಲಿಲ್ಲ, ಪುರಸಭೆಯನ್ನಾಗಿಯೂ ಮಾಡಲಿಲ್ಲ, ಗ್ರಾಮ ಪಂಚಾಯತಿಯಾಗಿಯೇ ಉಳಿಸಿಕೊಂಡಿದ್ದೀರಿ. ಅವರಿಗೆ ಕೂಡ ಒಬ್ಬರಿಗಿಂತ ಹೆಚ್ಚು ಬಿಲ್ ಕಲೆಕ್ಟರ್‌ಗಳಿದ್ದರೆ ಅಲ್ಲಿ ಈ ನಿಯಮದ ಪ್ರಕಾರ ಒಬ್ಬರಿಗೆ ಮಾತ್ರ ಅನುಮೋದನೆಯಾಗುತ್ತದೆ, ಇನ್ನುಳಿದವರಿಗೆ ಅನುಮೋದನೆಯಾಗುವುದಿಲ್ಲ. ದಯವಿಟ್ಟು ಇದು ಹೌದೇ ಎಂಬುದನ್ನು ನೋಡಿ. ನಾನು ಹೇಳಿದ್ದು ತಪ್ಪಾಗಿದ್ದರೆ ನೀವು ಸರಿಮಾಡಿ ಹೇಳಿ. ತಾವು ನನಗಿಂತ ಬಹಳ ಹಿರಿಯರು ಎಂದು ನಾನು ಒಪ್ಪಿಕೊಂಡಾಗಿದೆ.

(ಮುಂದುವರೆದಿದೆ ...

unedited copy

ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಮುಂದು):-**

ಅದೇ ಕಾರಣಕ್ಕೆ ಕ್ಲರ್ಕ್ ಇರುವ ಕಡೆ ಡಾಟಾ ಎಂಟ್ರೀ ಮಾಡುವವರಿಗೆ ಅನುಮೋದನೆ ಸಿಗುತ್ತಿಲ್ಲ. ಅಂದರೆ ಕ್ಲರ್ಕ್ ಅಥವಾ ಡಾಟಾ ಎಂಟ್ರಿ ಮಾಡುವರಲ್ಲಿ ಒಬ್ಬರಿಗೆ ಮಾತ್ರ ಎಂದು ಇದೆ. ಇದರಿಂದಾಗಿ ಕೆಲವರು ತಮ್ಮ ಅವಕಾಶವನ್ನು ಕಳೆದುಕೊಂಡಿದ್ದಾರೆ. ಸ್ವಚ್ಛತಾಗಾರರು, ಜವಾನರು, ವಾಟರ್ ಮೆನ್‌ಗಳು ಅವರುಗಳಿಗೆ ಸಾಮಾನ್ಯವಾಗಿ ತಿಂಗಳಿಗೆ ಸುಮಾರು 7000.00 ರೂಪಾಯಿ ಸಂಬಳವಿದೆ. ಹದಿನೇಳು ವರ್ಷದಿಂದ ಕೆಲಸ ಮಾಡುತ್ತಿರುವವರಿಗೂ ಅದೇ ಸಂಬಳ, ಒಂದು ವರ್ಷದ ಹಿಂದೆ ಕೆಲಸಕ್ಕೆ ಸೇರಿದವರಿಗೂ ಅಷ್ಟೇ ಸಂಬಳವನ್ನು ಕೊಡುತ್ತಿದ್ದಾರೆ. ಗ್ರಾಮಪಂಚಾಯಿತಿಗಳಲ್ಲಿ ಅನುದಾನವಿರುತ್ತದೆ. ಅನುಕೂಲಗಳಿರುತ್ತದೆ. ಅವರ ಹತ್ತಿರ ಆರ್ಥಿಕ ಶಕ್ತಿ ಇದೆ. ಪಂಚಾಯಿತಿಯವರಿಗೆ ಕನಿಷ್ಟಪಕ್ಷ ವಾರ್ಷಿಕವಾಗಿ ವೇತನ ಪರಿಷ್ಕರಣೆ ಮಾಡಿ ಎಂದು ಹೇಳುವಂತಹ ಅಧಿಕಾರ ನಿಮಗೆ ಇದೆ. ಸಿಬ್ಬಂದಿಗಳ ವ್ಯವಸ್ಥೆಗಳಲ್ಲಿ ಒಂದು ನಿಯಮವನ್ನೇ ನೀವು ಇನ್ನೂ ರೂಪಿಸಿಲ್ಲ. ಆದಕಾರಣ ನಿಯಮವನ್ನು ರೂಪಿಸಬೇಕೆಂದು ನನ್ನ ಆಗ್ರಹ. ಸೇವಾ ಜೇಷ್ಠತೆಯ ಆಧಾರದಲ್ಲಿ ನೀವು ಅವರಿಗೆ ಬೇಕಾದಂತಹ ಅನುಕೂಲಗಳನ್ನು ಮಾಡಿ ಕೊಡಬೇಕು.

ಇನ್ನು ನಾನು ಇ.ಎಸ್.ಐ. ಬಗ್ಗೆ ಹೇಳಿದೆ. ಇ.ಎಸ್.ಐ. ಸೌಲಭ್ಯ ಕೊಟ್ಟರೆ ಮಾತ್ರ ಅವರಿಗೇನಾದರು ಅನಾರೋಗ್ಯ ಉಂಟಾದರೆ ಅವರು ಮೆಡಿಕಲ್ ಗ್ರೌಂಡ್ಸ್ ಮೇಲೆ ಚಿಕಿತ್ಸೆ ಪಡೆಯಲು ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಕೆಲವರ ಬಳಿ ಬಿಪಿಎಲ್ ಕಾರ್ಡ್ ಇಲ್ಲದಿರುವ ಕಾರಣ ನಿಮ್ಮ ಆದಾಯ ಜಾಸ್ತಿ ಇದೆ ಎಂದು ಅವರಿಗೆ ನೋಟೀಸ್ ಕೊಟ್ಟು ಸರ್ಕಾರ ಅವರನ್ನು ಕೆಲಸದಿಂದ ತೆಗೆದುಹಾಕಿದ್ದೀರಿ. ಅವರೆಲ್ಲರೂ ಇದೇ ಕಾರಣಕ್ಕೆ ಧರಣಿಯನ್ನು ನಡೆಸಿದರು. ಮನವಿಯನ್ನೂ ಸಹ ಕೊಟ್ಟರು. ಈಗಲೂ ಮನವಿಯನ್ನು ಕೊಡುತ್ತಿದ್ದಾರೆ. ಅದಕ್ಕೆ ಬೇಕಾದಂತಹ ರಿಯಾಯಿತಿಯನ್ನು ಸರ್ಕಾರ ಕೊಟ್ಟಿಲ್ಲ. ಅದರ ಬಗ್ಗೆಯೂ ಸಹ ಸರ್ಕಾರ ಆಹಾರ ಇಲಾಖೆಯವರಿಗೆ ಶಿಫಾರಸ್ಸು ಮಾಡಬೇಕು ಹಾಗೂ ಇಎಸ್‌ಐ ಸೌಲಭ್ಯವನ್ನು ಮತ್ತು ಪಿ.ಎಫ್. ಕೊಡುವಂತಹ ವ್ಯವಸ್ಥೆಯನ್ನು ಕೂಡಲೇ ಅವರಿಗೆ ಒದಗಿಸುವಂಥದ್ದಕ್ಕೆ ವ್ಯವಸ್ಥೆ ಮಾಡಬೇಕು. ಮುಖ್ಯವಾಗಿ ಪಿ.ಎಫ್ ಮತ್ತು ಇಎಸ್‌ಐ ಸೌಲಭ್ಯವನ್ನು ಒದಗಿಸಬೇಕೆಂದೇ ಅವರ ಆಗ್ರಹ ಇರುವುದು. ಅದರ ಬಗ್ಗೆ ಸರ್ಕಾರ ಯಾವ ರೀತಿಯಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತದೆಯೆಂದು ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

unedited copy

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನಗೆ ಉತ್ತರ ಕೊಡುವಾಗ 90 ದಿವಸಗಳಿಗೆ ಮೀರದಂತೆ ಎರಡು ಬಾರಿ ಹೆರಿಗೆ ರಜೆಯನ್ನು ಕೊಡುತ್ತಿದ್ದೇವೆಂದು ಹೇಳಿದರು. ಆದರೆ ಅವರಿಗೆ ಸಂಬಳ ಕೊಡುತ್ತೀರಾ? ನಾನು ಪಂಚಾಯಿತಿಯವರನ್ನು ನೀವು ಹೆರಿಗೆ ರಜೆ ಕೊಡುತ್ತೀರಿ, ಆದರೆ ಅವರಿಗೆ ಸಂಬಳವನ್ನು ಏಕೆ ಕೊಡುವುದಿಲ್ಲವೆಂದು ಕೇಳಿದೆ. ಅದಕ್ಕೆ ಅವರು ನಮ್ಮಲ್ಲಿ ಥಂಬಿಂಗ್ ವ್ಯವಸ್ಥೆ ಇದೆ, ಆದಕಾರಣ ಅವರು ಯಾವ ದಿವಸ ಥಂಬಿಂಗ್ ಮಾಡಿದ್ದಾರೆ ಆ ದಿವಸ ಮಾತ್ರ ಸಂಬಳವನ್ನು ಕೊಡುತ್ತೇವೆ ಅದರಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಹೇಳಿದರು.

**ಸಭಾಪತಿಯವರು:–** ರಜೆಯ ಅರ್ಥವೇ ಸಂಬಳದ ಸಮೇತ ಎಂದು. ತಪ್ಪಾಗಿದೆ ಅವರು ತಿದ್ದಿಕೊಳ್ಳುತ್ತಾರೆ.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಅನುಮೋದನೆ ಆಗಿರುವಂತಹ ಯಾವ ನೌಕರರು ಇದ್ದಾರೆ ಅವರಿಗೆ ಹೆರಿಗೆ ರಜೆಯನ್ನು ಕೊಡುತ್ತೇವೆ ಹಾಗೂ ಆ ಸಮಯದಲ್ಲಿ ಸಂಬಳವನ್ನು ಸಹ ಕೊಡುತ್ತೇವೆ.

**ಸಭಾಪತಿಯವರು:–** ಸಂಬಳ ಸಹಿತ ರಜೆಗೆ ರಜೆ ಎಂದು ಹೆಸರು.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನೀವು ಹೇಳುವುದು ಸರಿ ಇದೆ. ಅಂದರೆ ಯಾರಿಗೆ ಅನುಮೋದನೆ ಕೊಟ್ಟಿದ್ದೀರಿ ಅವರಿಗೆ ಹೆರಿಗೆ ರಜೆ ಮತ್ತು ಅದರ ಜೊತೆಗೆ ಸಂಬಳವನ್ನು ಕೊಡುತ್ತೀರಿ. ಆದರೆ ಈಗ ಬಂದವರಿಗೆ ಎಷ್ಟು ವರ್ಷಕ್ಕೆ ಅನುಮೋದನೆ ಕೊಟ್ಟಿದ್ದೀರಿ?

**ಸಭಾಪತಿಯವರು:–** ತಾತ್ಕಾಲಿಕ ಸೇವೆಗೆ ಸೇರಿದವರಿಗೆ ಇದು ಅನ್ವಯಿಸುವುದಿಲ್ಲ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ತಮ್ಮ ಮಾಹಿತಿಯ ಪ್ರಕಾರ ಎಷ್ಟು ವರ್ಷ ಸೇವೆ ಸಲ್ಲಿಸಿದವರಿಗೆ ಅನುಮೋದನೆ ಕೊಟ್ಟಿದ್ದೀರಿ? ಎಷ್ಟು ವರ್ಷ ಸರ್ವೀಸ್ ಆದವರಿಗೆ ಖಾಯಮಾತಿ ನೀಡಿದ್ದೀರಿ? ನನಗೆ ಬಂದಂತಹ ಮಾಹಿತಿಯ ಪ್ರಕಾರ ಇತ್ತೀಚೆಗೆ ಅಂದರೆ ಐದಾರು ವರ್ಷದಿಂದೀಚೆಗೆ ಸೇವೆಗೆ ಸೇರಿದಂಥವರಿಗೆ ಖಾಯಂ ಮಾಡಿಲ್ಲ ಎಂದು ತಿಳಿದು ಬಂದಿದೆ. ಇದರ ಬಗ್ಗೆಯು ಸಹ ಮಾನ್ಯ ಸಚಿವರು ಕ್ಲಿಯರ್ ಮಾಡಬೇಕೆಂದು ನನ್ನ ವಿನಂತಿ. ಗ್ರಾಮಪಂಚಾಯಿತಿಯ ಸಿಬ್ಬಂದಿಗಳಿಗೆ ತಕ್ಷಣ ಅವರ ಜೇಷ್ಠತೆಯ ಅನುಸಾರವಾಗಿ ವೇತನ ಪರಿಷ್ಕರಣೆ ಮಾಡುವಂತಹ ಒಂದು ಆದೇಶವನ್ನು ನೀವು ಕೊಡಬೇಕು. ಈಗಾಗಲೆ ನೀವು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಹೋಬಳಿ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಒಬ್ಬೊಬ್ಬ

ಅಧಿಕಾರಿಯಂತೆ 200 ಜನರನ್ನು ನೇಮಕ ಮಾಡುತ್ತೇವೆಂದು ಹೇಳಿದದೀರಿ. ಅದನ್ನೂ ಸಹ ನೇಮಕ ಮಾಡದೆ ಇರುವುದರಿಂದ ನಮ್ಮಲ್ಲಿ ಅನೇಕ ಸಿಬ್ಬಂದಿಗಳ ಕೊರತೆ ಇದೆ. ಹಿಂದಿನ ಸರ್ಕಾರ ಇರುವಾಗ ಅಂದರೆ ನಮ್ಮ ಸರ್ಕಾರ ಇರುವಾಗ ಎರಡೂವರೆ ಸಾವಿರ ಪಿಡಿಓ ಗಳನ್ನು ನೇಮಕ ಮಾಡಲಾಯಿತು. ಆನಂತರ ಎರಡು ಸಾವಿರ ಪಿಡಿಓ ಗಳನ್ನು ನೇಮಕ ಮಾಡಬೇಕೆಂಬ ಪ್ರಸ್ತಾಪವಿತ್ತು. ಆದರೆ ನೀವು ಭಾಗಶಃ ತುಂಬಿದ್ದೀರಿ ವಿನಃ ಪೂರ್ಣ ಪ್ರಮಾಣದಲ್ಲಿ ತುಂಬಿಲ್ಲ. ಹಾಗಾಗಿ ಒಟ್ಟು ವ್ಯವಸ್ಥೆಯನ್ನು ಸಬಲೀಕರಣ ಮಾಡುವುದಕ್ಕೆ ನೀವು ಏನು ಉತ್ತರ ಕೊಟ್ಟಿದ್ದೀರಿ ಆ ಉತ್ತರ ತಪ್ಪು ಎಂದು ಹೇಳುತ್ತಿಲ್ಲ, ಅದರಲ್ಲಿ ಮತ್ತಷ್ಟು ಜೋಡಿಸಬೇಕು. ಅಂದರೆ ಅವರಿಗೆ ಪಿ.ಎಫ್. ಕೊಡಬೇಕು, ಇಎಸ್ಐ ಕೊಡಬೇಕು, ಹೆರಿಗೆ ಸಂಬಳವನ್ನು ಖಾಯಂ ಹೊಂದಿಲ್ಲದಂತಹ ಸಿಬ್ಬಂದಿಯವರಿಗೂ ಸಹ ಕೊಡಬೇಕು. ಅಂದರೆ ಎರಡು ಮೂರು ವರ್ಷ ಸೇವೆ ಸಲ್ಲಿಸಿದವರಿಗೂ ಸಹ ಕೊಡಬೇಕು. ಯಾವ ಗ್ರಾಮ ಪಂಚಾಯಿತಿಯಲ್ಲಿ ಸಂಪನ್ಮೂಲವಿದೆ, ಅಲ್ಲಿ ವೇತನ ಪರಿಷ್ಕರಣೆ ಮಾಡಬೇಕು. ಅಂದರೆ ಕನಿಷ್ಠ 15 ಸಾವಿರ ರೂಪಾಯಿ ಮಾಡುವುದಕ್ಕೆ ಅವಕಾಶಗಳನ್ನು ಮಾಡಿಕೊಡಬೇಕು ಎಂಬುದು ನನ್ನ ಆಗ್ರಹ.

**ಸಭಾಪತಿಯವರು:–** ಮಾನ್ಯ ಪ್ರತಾಪಚಂದ್ರ ಶೆಟ್ಟರು ಆಗಿನಿಂದಲೂ ಕೈ ಎತ್ತುತ್ತಿದ್ದಾರೆ. ಸಾಮಾನ್ಯವಾಗಿ ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪ ಮಾಡುವಾಗ ಇತ್ತೀಚೆಗೆ ಒಂದು ಪದ್ಧತಿಯನ್ನು ಮಾಡಿಕೊಂಡಿದ್ದೇವೆ. ಏನೆಂದರೆ, ಬೇರೆಯವರಿಗೆ ಅವಕಾಶ ಕೊಡುತ್ತಿಲ್ಲ. ಆದರೆ ತಾವು ಆಗಿನಿಂದಲೂ ಕೇಳುತ್ತಿರುವುದರಿಂದ ನೇರವಾಗಿ ಅವರಿಗೆ ಪ್ರಶ್ನೆಯನ್ನು ಕೇಳಿ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರಾಗಿರುವಂತಹ ಶ್ರೀ ಕೋಟಾ ಶ್ರೀನಿವಾಸ ಪೂಜಾರಿಯವರು ಹೇಳಿರುವಂತಹ ವಿಚಾರದಲ್ಲಿ ಬಹುಶಃ ಅನುಮೋದನೆ ಪಡೆದಿರುವಂತಹ ಮತ್ತು ಅನುಮೋದನೆ ಪಡೆಯದೆ ಇರುವಂಥದ್ದು. ಅನುಮೋದನೆಯನ್ನು ಪಡೆದಿರುವಂಥದ್ದಕ್ಕೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಅವರಿಗೆ ಸಂಬಳ ಹೆಚ್ಚು ಮಾಡುವುದಕ್ಕೆ ಅವಕಾಶವಿದೆಯೇ ಎಂಬುದು ಒಂದು, ಮತ್ತು ಅನುಮೋದನೆ ಆಗದೆ ಇರುವಂತಹ, ಅಂದರೆ ಯಾರು ಕೆಲಸವನ್ನು ಮಾಡುತ್ತಿದ್ದಾರೆ ಅವರದೇನು ತಪ್ಪಿಲ್ಲ. ಪಂಚಾಯಿತಿಯ ನಿರ್ಣಯದ ಮುಖಾಂತರ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತಿದೆ, ಕಾರ್ಯದರ್ಶಿಯವರು ಅಥವಾ ಪಿಡಿಓ ಅಧಿಕಾರಿಗಳು ಆ ಅಧಿಕಾರವನ್ನು ಹೊಂದಿರುತ್ತಾರೆ. ನಂತರ ನಿರ್ಣಯದ ಪ್ರಕಾರ ಇಂಥಿಂಥವರನ್ನು ಇಂಥಿಂಥ ಈ ಕೆಲಸಕ್ಕಾಗಿ ಇವರನ್ನು ಕೆಲಸಕ್ಕಾಗಿ ತೆಗೆದುಕೊಂಡಿದೇವೆಂದು ಕಾರ್ಯಕಾರಿ ಅಧಿಕಾರಿಗೆ ದಾಖಲಾತಿಯನ್ನು ಕಳುಹಿಸಿಕೊಡುತ್ತಾರೆ.

ಆದಕಾರಣ ಈಗ ಎರಡು option ಇದೆ. ಒಂದು ಅವರನ್ನು ಕೆಲಸದಲ್ಲಿ ಮುಂದುವರೆಸುವಂಥದ್ದು ಅಥವಾ ಅವರನ್ನು ಕೆಲಸದಿಂದ ತೆಗೆಯುವಂಥದ್ದು. ಬಹುಶಃ ಸುಮಾರು ಹತ್ತರಿಂದ ಹನ್ನೆರಡು ವರ್ಷ ಕೆಲಸ ಮಾಡಿಸಿಕೊಂಡು ಇವತ್ತು ಕನಿಷ್ಠ ವೇತನವನ್ನು ಕೊಡುವಂತಹ ಹಿನ್ನಲೆಯಲ್ಲಿ ಇವತ್ತಿನ ದಿವಸ 30 ಸಾವಿರ ಜನರನ್ನು ತೆಗೆದುಕೊಂಡಿರುವುದನ್ನು ಸ್ವಾಗತ ಮಾಡೋಣ, ಆದರೆ ಇವತ್ತೂ ಸಹ ಅವರು ಉದ್ಯೋಗದ ಅನಿಶ್ಚಿತತೆಯನ್ನು ಹೊಂದಿದ್ದಾರೆ. ಅಂದರೆ ಸುಮಾರು 15 ರಿಂದ 20 ವರ್ಷ ಕೆಲಸ ಮಾಡಿದಂಥವರಿಗೆ ಈ ಪ್ರಾಯದಲ್ಲಿ ಉದ್ಯೋಗದ ಅನಿಶ್ಚಿತತೆ ಇದೆ, ಮತ್ತು ಕನಿಷ್ಟ ವೇತನ ಮತ್ತು ಸಿಗತಕ್ಕಂತಹ ರಜೆಯ ಸೌಲಭ್ಯಗಳು ಯಾವುದೂ ಸಿಗದೆ ಇರುವಂತಹ ಹಿನ್ನಲೆಯಲ್ಲಿ ಅವರಿಗೆ ಅದನ್ನು ಮಾನವೀಯತೆಯ ನೆಲೆಯಲ್ಲಿ ಯಾವುದಾದರೂ ಒಂದು ಪರಿಹಾರವನ್ನು ಕಂಡುಕೊಳ್ಳಲೇ ಬೇಕಾಗುತ್ತದೆ. ಇಲ್ಲದಿದ್ದರೆ ಎಲ್ಲೋ ಒಂದು ಕಡೆ ಮಾಡಿರುವಂತಹ ತಪ್ಪಿಗೆ ಈ ಒಂದು ಶಿಕ್ಷೆಯನ್ನು ಅವರು ಅನುಭವಿಸಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಹಲವಾರು ಸಲಹೆಗಳನ್ನು ಕೊಟ್ಟರು, ಕೆಲವು ವಿಚಾರಗಳಲ್ಲಿ ಸರ್ಕಾರ ನೌಕರರ ಹಿತದೃಷ್ಟಿಯಿಂದ ಅವರ ಖಾಯಂಮಾತಿಗೆ ಒತ್ತಾಯ ಮಾಡಿದ್ದಾರೆ. ಸನ್ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟರು ಈಗೇನು ಅನುಮೋದನೆ ಆಗದೆ ಅವರ ನೌಕರಿ ಖಾಯಮಾತಿ ಆಗಿಲ್ಲ, ಕೆಲಸದ insecurity ಇದೆ. ಅಭದ್ರತೆ ಇದೆ ಅದನ್ನು ನಿವಾರಣೆ ಮಾಡಬೇಕೆಂದು ಹೇಳಿ ಒತ್ತಾಯ ಮಾಡಿದ್ದಾರೆ. ಇದೇ ಮಾತನ್ನು ನಮ್ಮ ಸಿಎಲ್‌ಪಿ ಮೀಟಿಂಗ್‌ನಲ್ಲಿ ಸೇರಿದಾಗಲೂ ಸಹ ನಮಗೆ ಹೇಳುತ್ತಿದ್ದರು. ನಾನು ಈ ಸಂದರ್ಭದಲ್ಲಿ ಹೇಳಬಯಸುವುದೇನೆಂದರೆ, ಪಂಚಾಯಿತಿಯ ತನ್ನ ಶಾಸನಾತ್ಮಕ ಅನುದಾನ ಹಾಗೂ its own generated fund ಅದರ 40ರ ಮಿತಿ ಏನಿದೆ, ಅದು ದಾಟದ ಹಾಗೆ ಇನ್ನು ಎಷ್ಟು ಹೆಚ್ಚುವರಿಯಾಗಿ ನಾವು ಖಾಯಮಾತಿ ಮಾಡಬಹುದು ಎನ್ನುವುದರ ಬಗ್ಗೆ ಈಗಾಗಲೇ ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ಸನ್ಮಾನ್ಯ ಮಾರುತಿ ಮಾನ್ಪಡೆಯವರು ಮತ್ತು ಆ ಸಂಘಟನೆಗೆ ಸಂಬಂಧಪಟ್ಟಿರುವಂತಹ ಕುಲಕರ್ಣಿಯವರ ಜೊತೆಯಲ್ಲಿಯೂ ಸಹ ನಾವು ಒಂದೆರಡು ಸುತ್ತು ಮಾತುಕತೆಯನ್ನು ಮಾಡಿದ್ದೇವೆ. ನಮ್ಮ ಶಾಸಕ ಸ್ನೇಹಿತರ ಜೊತೆ ಮಾತುಕತೆ ಮಾಡಿದ್ದೇವೆ. ಯಾರಿಗೆ ನಾವು ನೇಮಕಾತಿಯನ್ನು ಖಾಯಂ ಮಾಡಿದ್ದೇವೆ

ಎಂದರೆ, ಯಾರು 10 ವರ್ಷ ಸೇವೆಯನ್ನು ಸಲ್ಲಿಸಿದ್ದರೋ ಅವರಿಗೆ ನಾವು ನೇಮಕಾತಿಯನ್ನು ಖಾಯಂ ಮಾಡಿದ್ದೇವೆ. ಯಾರು qualification comply ಮಾಡಿದ್ದಾರೋ ಅವರ ನೇಮಕಾತಿಯನ್ನು ಖಾಯಂ ಮಾಡಿದ್ದೇವೆ. ಖಾಯಂ ಆಗದೆ ಇರುವಂತಹ ನೌಕರರು ಯಾರು ಉಳಿದಿದ್ದಾರೆ ಅಂದರೆ ಸ್ವಚ್ಛತಾಗಾರರಿಗೆ ಅವರಿಗೆ ಎಸ್.ಎಸ್.ಎಲ್.ಸಿ. ಆಗಬೇಕು ಎಂಬ ಒಂದು ನಿಯಮವಿತ್ತು. ಆ ನಿಯಮವನ್ನು ಸಡಿಲ ಮಾಡಿ ಅದನ್ನು ಬದಲಾವಣೆ ಮಾಡಿ ಅವರು ಅಕ್ಷರಸ್ಥರು ಇರಲಿಲ್ಲವೆಂದರೆ ಅವರಿಗೆ ಮೂರು ವರ್ಷಗಳ ಕಾಲಾವಕಾಶ ನೀಡಿ ಅವರು ಅಕ್ಷರಸ್ಥರಾಗಬೇಕು ಎಂಬ ಕರಾರಿನ ಮೇಲೆ ನೇಮಕಾತಿಯನ್ನು ಖಾಯಂಗೊಳಿಸುವುದಕ್ಕೆ ಮಾಡಿದ್ದೇವೆ. ಇನ್ನು ಉಳಿದಿದೆ, ಅದು ಸುಮಾರು 15 ರಿಂದ 20 ಸಾವಿರದಷ್ಟು ನೌಕರರು ಆಗುತ್ತಾರೆ. ಅವರೆಲ್ಲರೂ ಅನವಶ್ಯಕ ಎಂದು ನಾನೂ ಹೇಳುವುದಿಲ್ಲ. ಬಹಳ ಜನ ಅವಶ್ಯಕತೆ ಇದ್ದಾರೆ, ಕೆಲವು ಪಂಚಾಯಿತಿಗಳಲ್ಲಿ ತಮ್ಮ ಮನಸ್ಸಿಗೆ ಬಂದಂತೆ ಮಾಡಿದ್ದಾರೆ ಅಲ್ಲಿ ಸ್ವಲ್ಪ ಕೆಲವರಿಗೆ ತೊಂದರೆಯಾಗಬಹುದು. ಆದರೆ ಯಾರು ಅರ್ಹರಿದ್ದಾರೆ, ಯಾರು ಈಗಾಗಲೇ 10 ವರ್ಷಕ್ಕಿಂತ ಕಡಿಮೆ ಇದ್ದಾರೆ ಎಷ್ಟು ವರ್ಷಕ್ಕೆ ಮಾಡಬೇಕು ಎಂಬ ಚಿಂತನೆ ಮಾಡುತ್ತಿದ್ದೇವೆ. ಯಾರ್‍ಯಾರು ಅನುಮೋದನೆ ಆಗದೆ ಇರುವಂಥವರು ಇದ್ದಾರೆ ಅವರನ್ನು ಆದಷ್ಟು ಬೇಗ ಖಾಯಂಗೊಳಿಸುವುದಕ್ಕೆ ಸರ್ಕಾರ ಚಿಂತನೆ ಮಾಡುತ್ತಿದೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವುದು ಸರಿ ಇದೆ. ನೀವು 2008ರಲ್ಲಿಯೇ ಭವಿಷ್ಯನಿಧಿ ಕೊಡುವುದಕ್ಕೆ ಯೋಚನೆ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ ಅಲ್ಲಿ ಅನುಷ್ಠಾನವಾಗುತ್ತಿಲ್ಲ. ಯಾವ ಗ್ರಾಮ ಪಂಚಾಯಿತಿಯಲ್ಲಿಯೂ ಸಹ ಅನುಷ್ಠಾನವಾಗುತ್ತಿಲ್ಲ.

**ಶ್ರೀ ಹೆಚ್.ಕೆ.ಪಾಟೀಲ್:-** 2008ರಲ್ಲಿ ಭವಿಷ್ಯನಿಧಿ ಕೊಡಬೇಕೆಂದು ಮಾಡಿದಿರಿ, ಆದರೆ ಯಾರು ಖಾಯಂ ಆಗಿರುತ್ತಾರೆ ಅದನ್ನು ಅವರಿಗೆ ಕೊಡಬೇಕಾಗುತ್ತದೆ. ಆದುದರಿಂದ ಯಾರನ್ನು ಖಾಯಂ ಮಾಡಿದ್ದೇವೆ ಅವರಿಗೆ ಭವಿಷ್ಯನಿಧಿಯನ್ನು ಕೊಡುತ್ತೇವೆಂದು ಉತ್ತರದಲ್ಲಿ ಕೊಟ್ಟಿದ್ದೇವೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:-** ಖಾಯಂ ಆಗಿರುವಂತಹ ನೌಕರರಿಗೆ ಭವಿಷ್ಯನಿಧಿ ಕೊಡುತ್ತೀರಾ?

**ಶ್ರೀ ಹೆಚ್.ಕೆ.ಪಾಟೀಲ್:-** ಅಂಥವರಿಗೆ ಕೊಡಲೇ ಬೇಕಾಗುತ್ತದೆ ಅಲ್ಲವೆ.

unedited copy

**ಸಭಾಪತಿಯವರು:–** ಧನ್ಯವಾದಗಳು. ಈಗ ನಿಯಮ 330ರ ಅಡಿಯಲ್ಲಿ ಪ್ರಸ್ತಾಪ ಮಾಡಬೇಕಾಗಿರುವಂತಹ ಎರಡು ವಿಷಯಗಳಿವೆ. ಆದರೆ ಇಬ್ಬರೂ ಗೌರವಾನ್ವಿತ ಸಚಿವರುಗಳು ಬೇರೆ ಕೆಲಸದ ನಿಮಿತ್ತ ಹೊರಗಡೆ ಹೋಗಿರುವ ಕಾರಣ ಆ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೇನೆ.

**ಈಗ ಸದನವು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವುದು.**

**(ಸದನವು ಸಂಜೆ 7 ಗಂಟೆ 49 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 4ನೇ ಮಾರ್ಚ್ 2016ರ ಶುಕ್ರವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)**

unedited copy